
ಬಿಸಿಲ ಆಗಸ್ಟ್ 1999 ರೂ. 10

ಬದುಕು




ಲಂಕೇಶ್ ಪತ್ರಿಕೆ - 20



ಲ್ಯಾಡೆನ್‌ಗಾಗಿ ಹುಡುಕಾಟ



ಸ್ಟೆಫಿ ನಿರ್ಗಮನ



ನಾಷ್ಟಾ ಮಾಡಿ ನಾಶವಾದ ಪಟೇಲ್

-ರಾಮು

ರಾಮಕೃಷ್ಣ ಹೆಗಡೆ ನಿಮಗೆಷ್ಟು ಗೊತ್ತು?

-ಸುಹಾಸ

'ಪತ್ರಿಕೆ' ಹಿಂದಾಗಿ 'ಲಂಕೇಶ್' ಮುಂದಾಗಿ!

-ಚಂದ್ರಶೇಖರ ಪಾಟೀಲ

ಅಷ್ಟಕ್ಕೂ ಹೆಸರಿನಲ್ಲೇನಿದೆ ಮಹಾ!

-ಕಾಗಿನೆಲೆ ಗುರುಪ್ರಸಾದ್

ಗಾಂಧಿ : ಎರಡು ತಲೆಮಾರಿನ ನೋಟ

-ಕೆ. ಎಸ್. ನಾರಾಯಣಸ್ವಾಮಿ

ಇಂದಿನ ಟಿ.ವಿ. ನಾಳಿನ ಕಂಪ್ಯೂಟರ್!

-ವಸುಧೇಂದ್ರ

ಯೋಧನ ಪುನರಾಗಮನ


-ಎ.ಎನ್. ಮೂರ್ತಿರಾವ್

ಕಥೆ, ಲಲಿತ ಪ್ರಬಂಧ, ವಿಜ್ಞಾನ
ಆರೋಗ್ಯ, ಕ್ರೀಡೆ, ಸಾಹಿತ್ಯ
ಸಂಗೀತ ಲೇಖನಗಳು

ಬದುಕು
ದೀಪಾವಳಿ ಸ್ಪರ್ಧೆ
ರೂ. 15000
ಬಹುಮಾನ

ಜಿಲ್ಲಾ ಪ್ರತಿನಿಧಿಗಳ ತರಬೇತಿ ಶಿಬಿರ


1


2



3



4


5


6


7


8


9

'ಬದುಕು', 'ದಾರಿ', 'ಮನೆ' ಪತ್ರಿಕೆಗಳ ಜಿಲ್ಲಾ ವರದಿಗಾರರು ಹಾಗೂ ವಾಣಿಜ್ಯ ಪ್ರತಿನಿಧಿಗಳಿಗಾಗಿ ಇತ್ತೀಚೆಗೆ ಹೊಸಪೇಟೆಯ ಮಲ್ಲಿಗಿ ಟೂರಿಸ್ಟ್ ಹೋಂನಲ್ಲಿ ಏರ್ಪಡಿಸಿದ್ದ ತರಬೇತಿ ಶಿಬಿರದ ನೆನಪಿನ ಚಿತ್ರಗಳು. ಚಿತ್ರ 1 -ಸ್ಪೇಸ್ ಮಾರ್ಕೆಟಿಂಗ್ ಬಗ್ಗೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೇಲ್ಸ್‌ನ ಮಾಲತೇಶ್ ಭಟ್ ಅವರಿಂದ ಉಪನ್ಯಾಸ. **ಚಿತ್ರ 2** - ವ್ಯಕ್ತಿತ್ವ ವಿಕಾಸ ಕುರಿತು ರೋಟರಿ ಕ್ಲಬ್ ಅಧ್ಯಕ್ಷ ಕೆ.ಬಿ.ಸಂಜೀವಪ್ರಸಾದರಿಂದ ಉಪನ್ಯಾಸ. **ಚಿತ್ರ 3** -ಸುದ್ದಿಸಂಗ್ರಹ ಮತ್ತು ಪತ್ರಿಕೆ ಮಾರಾಟ ಕುರಿತು ಮಾತನಾಡಿದ ಲೋಟಸ್ ಲ್ಯಾಬೋರೆಟರೀಸ್‌ನ ಬಿ.ಎನ್. ಸ್ವಾಮಿ ಹಾಗೂ ಪತ್ರಕರ್ತರ ಹೊಣೆಗಾರಿಕೆ ಬಗ್ಗೆ ಮಾತನಾಡಿದ ಅಸಿಸ್ಟೆಂಟ್ ಕಮೀಷನರ್ ಜಿ.ಎನ್. ಶಿವಮೂರ್ತಿ. **ಚಿತ್ರ 4** -ತರಬೇತಿಯ ನಡುವೆ ಬಿಡುವು. **ಚಿತ್ರ 5** - ತರಬೇತಿಯಲ್ಲಿ ತಲ್ಲೀನರಾದ ಪ್ರತಿನಿಧಿಗಳು. **ಚಿತ್ರ 6** -

ಚಿತ್ರ 7, 8, 9 - ಹಾವೇರಿ ಪ್ರತಿನಿಧಿ ರಾಜಣ್ಣ ಆನೂರ, ಕಾರವಾರ ಪ್ರತಿನಿಧಿ ಬಿ. ಸೋಮಶೇಖರ್, ಬಾಗಲಕೋಟೆ ಪ್ರತಿನಿಧಿ ಪ್ರಕಾಶ್ ಬಾಳಕ್ಕನವರ.

ಬಿಸಿಲ ಬದುಕು

ಆಗಸ್ಟ್ 1999 ಸಂಪುಟ 3 ಸಂಚಿಕೆ 2

- ಜಗತ್ತೇ ನಿಬ್ಬೆರಗಾಗಿಸುವ ಪ್ರತಿಭೆ ಎಲ್ಲರಲ್ಲೂ ಇರಬೇಕು ಎಂದೇನಿಲ್ಲ. ಸಾಮಾನ್ಯ ವಿವೇಚನೆ, ಒಂದಿಷ್ಟು ಪ್ರೀತಿ ಇದ್ದರೆ ಸಾಕು.
- ಜೋಕು ಮತ್ತು ಸತ್ಯದ ನಡುವೆ ಅಂಥ ವ್ಯತ್ಯಾಸ ಏನಿಲ್ಲ. ಅತ್ಯುತ್ತಮ ಜೋಕುಗಳು ಸತ್ಯ ವಾಗಿರುತ್ತವೆ. ಹಾಗೇ ಸತ್ಯವಾದದ್ದೂ ಅತ್ಯುತ್ತಮ ಜೋಕ್ ಆಗಿರುತ್ತದೆ.
- 'ನಾನು' ಎಂಬುದೇ ತುಂಬಿಕೊಂಡ ಮನುಷ್ಯ ನಷ್ಟು ಖಾಲಿ ಇನ್ಯಾವುದೂ ಇರಲಾರದು.
- ನೀವು ಒಂದು ತಪ್ಪೂ ಮಾಡಲಾರಿರಿ ಎಂದಾದರೆ ನೀವು ಏನೂ ಮಾಡುವುದು ಸಾಧ್ಯವಿಲ್ಲ.

ಆರು ಆಧುನಿಕ ನಿಯಮಗಳು

- ಸಹಜ ಆಹಾರ ಸೇವಿಸುವವರು ಸಹಜ ಸಾವು ಪಡೆಯುತ್ತಾರೆ.
- ರಾಜಕಾರಣಿ ನಿಮ್ಮಲ್ಲಿಗೆ ಬಂದೇ ಬರುವುದು ಆತನಿಗೇ ನೀವು ಬೇಕಾದಾಗ ಮಾತ್ರ.
- ಎಲ್ಲರೂ ವ್ಯಾಕ್ಸಿನೇಷನ್ ಪಡೆದಿದ್ದರೆ ನೀವು ವ್ಯಾಕ್ಸಿನೇಷನ್ ಪಡೆಯುವ ಅಗತ್ಯವಿಲ್ಲ.
- ಉಪಕರಣದ ನಿರ್ವಹಣೆಯ ಮಾಹಿತಿಯೇ ನಿಮಗೆ ಕಗ್ಗಂಟಾಗಿ ತೋರುವುದಾದರೆ ಉಪಕರಣ ಖರೀದಿಸಬೇಕಾದ ಅಗತ್ಯ ಇಲ್ಲ.
- ಅನುಭವದಿಂದ ವಿವೇಚನೆ ಬರುತ್ತದೆ ಹಾಗೂ ಅನುಭವ ಬರುವುದು ಕೆಟ್ಟ ವಿವೇಚನೆಯಿಂದ.
- ನಿಮ್ಮ ಖರ್ಚು ವೆಚ್ಚ ಲೆಕ್ಕ ಹಾಕಿ ನೀವ್ಯಾರೂ ಊಹಿಸಿರದಂಥ ನಿರ್ಧಾರಕ್ಕೆ ಬರುವವನೇ ಅಕೌಂಟೆಂಟ್.

[ರೀಡರ್ಸ್ ಡೈಜೆಸ್ಟ್‌ನಿಂದ]

ಸಂಪಾದಕ
ಚಂದ್ರಕಾಂತ ವಡ್ಡು
ಕಾರ್ಯ ನಿರ್ವಾಹಕ ಸಂಪಾದಕ
ಎಂ.ಎಲ್. ದೇಶೀಕರ್
ಸಹಕಾರ
ಲಿಂಗರಾಜು
ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ: 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ: 3307810

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3307810 Pager : 9622 738638 Editor : Chandrakanta Vaddu

ಅಮೂಲ್ಯ ನಿಧಿ

ಹೀಗಾದರೆ !

ಒಂದು ಬ್ಯಾಂಕ್. ನಿಮ್ಮ ಖಾತೇಲಿ ನಿತ್ಯ 86,400ರೂಪಾಯಿ ಜಮಾ ಮಾಡುತ್ತದೆ. ದಿನ ಮುಗಿಯುವಾಗ ನೀವು ಬಳಸದ, ನಿಮ್ಮ ಖಾತೆಯಲ್ಲಿ ಉಳಿದ ಹಣ ವಜಾ ಮಾಡುತ್ತದೆ. ಮತ್ತೆ ಮರುದಿನ ಅದೇ 86,400 ರೂಪಾಯಿ ಜಮಾ. ಇಂಥ ಒಂದು ವ್ಯವಸ್ಥೆ ಇದ್ದರೆ ನೀವೇನು ಮಾಡುತ್ತಿದ್ದಿರಿ. ಪ್ರತಿನಿತ್ಯ ಖಾತೆಯ ಅಷ್ಟೂ ಹಣ ಸ್ವಂತಕ್ಕೆ ತೆಗೆದುಕೊಳ್ಳುತ್ತಿದ್ದಿರಿ ಅಲ್ಲವೆ!

ವಿಚಿತ್ರ ಗೊತ್ತೆ! ನಿಜಕ್ಕೂ ಅಂಥ ದೊಡ್ಡ ಬ್ಯಾಂಕ್ ಇದೆ. ಅದರ ಹೆಸರು ಕಾಲ. ನಿತ್ಯ ಬೆಳಿಗ್ಗೆ ನಿಮ್ಮ ಖಾತೆಗೆ 86,400 ಸೆಕೆಂಡ್ ಜಮೆ ಆಗುತ್ತದೆ. ಆ ದಿನ ನೀವು ಉಪಯುಕ್ತವಾಗಿ ಬಳಸಿಕೊಳ್ಳದ ಕಾಲ ಅಳಿಸಿ ಹೋಗುತ್ತದೆ. ಮರುದಿನ ಮುಂಜಾನೆ ಮತ್ತೆ ಹೊಸ ಜಮಾವಣೆ.

ಇಲ್ಲಿ ಓವರ್‌ಡ್ರಾಫ್ಟ್ ಇಲ್ಲ. ಇವತ್ತು ಜಮೆಯಾದದ್ದು ನಾಳೆಗೆ ಬಳಸುತ್ತೇನೆ ಅನ್ನುವ ಹಾಗಿಲ್ಲ. ಪ್ರತಿ ನಿತ್ಯ ಅದೊಂದು ಹೊಸ ಖಾತೆ. ಅವತ್ತು ಜಮೆಯಾದದ್ದು ಅವತ್ತೆ ನೀವು ಬಳಸದೇ ಇದ್ದರೆ ನಷ್ಟ ಆಗುವುದು ನಿಮಗೇ. ಇದರಲ್ಲಿ ರಾಜಿಯೇ ಇಲ್ಲ. ನಾಳೆಯ ಲೆಕ್ಕದ್ದು ಇವತ್ತು ಬಳಸುವಂತಿಲ್ಲ. ಏನಿದ್ದರೂ ಇವತ್ತಿನದು ಮಾತ್ರ ಇವತ್ತಿಗೆ. ಅವತ್ತು ಜಮೆಯಾದ ಮೊತ್ತ ಬಳಸಿ ನಿಮ್ಮ ಸುಖ, ಸಂತೋಷ, ಆರೋಗ್ಯ ಉತ್ತಮವಾಗುವಂತೆ ಇದನ್ನು ತೊಡಗಿಸಬೇಕು. ಕಾಲ ಓಡುತ್ತಾ ಇರುತ್ತದೆ. ಆದಷ್ಟು ಬೇಗ ಬಳಸಿಕೊಳ್ಳಿ,

ಒಂದು ವರ್ಷದ ಬೆಲೆ ಏನೆಂದು ತಿಳಿಯಬೇಕಾದರೆ ಫೇಲಾದ ಹುಡುಗನ್ನ ಕೇಳಿ.

ತಿಂಗಳ ಮೌಲ್ಯ ಏನೆಂದು ಅರಿಯಬೇಕಾದರೆ ಅವಧಿಗೆ ಮುಂಚೆಯೇ ತಾಯಾದ ಹೆಣ್ಣನ್ನು ಕೇಳಿ.

ವಾರದ ಮಹತ್ವ ಏನೆಂದು ಗೊತ್ತಾಗಬೇಕೇ! ವಾರಪತ್ರಿಕೆಯ ಸಂಪಾದಕ ನೊಬ್ಬನನ್ನು ವಿಚಾರಿಸಿ.

ಒಂದು ಗಂಟೆಯ ಬೆಲೆ ಏನೆಂದು ತಿಳಿಯಬೇಕೇ! ಪ್ರಿಯನ ಭೇಟಿಗಾಗಿ ತವಕಿಸುತ್ತಾ ಇರುವ ಹುಡುಗಿಯನ್ನು ಕೇಳಿ.

ಒಂದು ನಿಮಿಷ. ಅದೇನು ಮಹಾ ಅನ್ನುತ್ತೀರ! ನಿಮಿಷದ ಬೆಲೆ ಏನಂತ ತಿಳಿಯಬೇಕಾದರೆ ಟ್ರೈನು ತಪ್ಪಿಸಿಕೊಂಡ ವ್ಯಕ್ತಿಯನ್ನು ವಿಚಾರಿಸಿ.

ಒಂದು ಸೆಕೆಂಡ್, ಏನೇನೂ ಅಲ್ಲ ಅನ್ನುತ್ತೀರಾ!

ಅಪಘಾತದಿಂದ ಅದೃಷ್ಟವಶಾತ್ ಪಾರಾಗಿ ಬಂದ ಯಾರನ್ನಾದರೂ ಕಂಡು ಮಾತಾಡಿ. ಒಂದು ಸೆಕೆಂಡ್ ಎಷ್ಟು ಅಮೂಲ್ಯ ಅನ್ನುವುದು ತಿಳಿದೀತು.

ಒಂದು ಮಿಲಿ ಸೆಕೆಂಡ್... ಇರಿ ನಗಬೇಡಿ.

ಒಲಿಂಪಿಕ್ಸ್ ಓಟದ ಸ್ಪರ್ಧೆಯಲ್ಲಿ ಬೆಳ್ಳಿಪದಕ ಪಡೆದ ವ್ಯಕ್ತಿಯನ್ನು ಹೋಗಿ ನೋಡಿ.


ನೆನಪಿರಲಿ, ಕಾಲ ಯಾರಿಗೂ ಕಾಯುವುದಿಲ್ಲ
ನಿನ್ನೆ ಇತಿಹಾಸ
ನಾಳೆ ನಿಗೂಢ
ಇಂದು ಅಮೂಲ್ಯ.

■ ಪದ್ಮಾವತಿ ಹರಿ

ಗ್ರೀಸಿನಾ ಕಬ್ಬಗಳನೋದುವರು ದೆಹಲಿಯಲಿ ।
ಕಾಶಿಯಾ ಶಾಸ್ತ್ರಗಳನಾಕ್ಸ್‌ಫರ್ಡಿನವರು ॥
ದೇಶಕಾಲವಿಭಾಗ ಮನದ ರಾಜ್ಯದೊಳಿರದು ।
ಶ್ವಾಸವದು ಬೊಮ್ಮನದು

■ ಡಿ.ವಿ.ಜಿ.

ಟಪಾಲು



ಸರಳ ಕಾನೂನು ಬರಲಿ

ಭ್ರಷ್ಟಾಚಾರದ ಬಗ್ಗೆ ನಿಮ್ಮ ಪ್ರಸ್ತಾವನೆ ಅದರ ಮೂಲಬೇರು ಗುರುತಿಸುವಲ್ಲಿ ಸಫಲವಾಗಿದೆ. ಎ.ಕೆ. ಸುಬ್ಬಯ್ಯನವರು ಭ್ರಷ್ಟಾಚಾರದ ಮೇಲಿನ ಅಂತಸ್ತುಗಳನ್ನು ಮಾತ್ರ ನೋಡುತ್ತಾರೆ. ಅದರ ನಿಜವಾದ ನೋವು ಇರುವುದು ಕೆಳ ಹಂತದಲ್ಲಿ. ಕೋ.ಚೆ. ಯವರ ವಿಶ್ಲೇಷಣೆ, ಈ ಜನರ, ದೇಶದ ಬಗ್ಗೆ ನಿರಾಸೆ ಮತ್ತು ಸೋಲಿನ ಭಾವನೆಗಳನ್ನು ಹುಟ್ಟಿಸುತ್ತದೆ - ಒಂದು ರೀತಿಯಲ್ಲಿ ವಾಸ್ತವಿಕವೂ ಆಗಿದೆ.

ಅತಿಯಾದ ಕಾನೂನು ತೊಡಕುಗಳು ಪ್ರಾಮಾಣಿಕ ಅಧಿಕಾರಿಗಳೂ ಚುರುಕಾಗಿ ಕೆಲಸ ಮಾಡದಂತೆ ಮಾಡಿವೆ. ಸರ್ಕಾರಿ ಕೆಲಸದಲ್ಲಿ ಆಗುವ ವಿಳಂಬ - ತೊಡಕುಗಳೇ ಭ್ರಷ್ಟಾಚಾರದ ಬೇರುಗಳು. ಮಾಹಿತಿ ಹಕ್ಕು ಮತ್ತು ಸ್ವಾತಂತ್ರ್ಯ - ಇದನ್ನು ತಹಬಂದಿಗೆ ತರಬಲ್ಲದು. ಆಡಳಿತ ವ್ಯವಸ್ಥೆಯನ್ನು ಎಲ್ಲಾ ಹಂತಗಳಲ್ಲಿ ಕಂಪ್ಯೂಟರೀಕರಣ ಮಾಡುವುದು, ಸರಳ ಕಾನೂನುಗಳು ಈ ಬೇರುಗಳನ್ನು ಕತ್ತರಿಸಬಹುದು.

ಇಂದಿನ ಜೀವನಕ್ರಮ ದುಬಾರಿಯಾಗುತ್ತಿದ್ದು, ಹೆಚ್ಚು ಹೆಚ್ಚಿನ ಸೌಲಭ್ಯಗಳನ್ನು ಬಯಸುತ್ತದೆ. ''ಸರಳಜೀವನ ಎತ್ತರದ ಚಿಂತನ'' ಇದು ಕೇವಲ ಆದರ್ಶದ ಮಾತು. ವೈಭವದ ಜೀವನದ ಹಸಿವು ಎಲ್ಲರನ್ನೂ ಭ್ರಷ್ಟರನ್ನಾಗಿ ಮಾಡಿಸುತ್ತದೆ.

- ಬಿ.ಎಸ್. ಚಂದ್ರಶೇಖರ, ಸಾಗರ.

ಪ್ರತಿಜ್ಞೆ ಮಾಡಲಿ

ಜುಲೈ ತಿಂಗಳಿನ ''ಬಿಸಿಲ ಬದುಕು'' ಪತ್ರಿಕೆಯಲ್ಲಿ ಭ್ರಷ್ಟಾಚಾರ ಕುರಿತು ತುಂಬಾ ಮಾರ್ಮಿಕವಾಗಿ ತಿಳಿಸಿದ್ದಾರೆ. ಇಂದು ಇಡೀ ಜಗತ್ತಿನ ಮೂಲೆ ಮೂಲೆಯಲ್ಲೂ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ತಡೆಗಟ್ಟಲು ಕೇವಲ ಕಾನೂನು ಕಟ್ಟಲೆಗಳಿಂದ ಸಾಧ್ಯವಿಲ್ಲ. ಲಂಚ ತೆಗೆದುಕೊಳ್ಳುವವರು ತೆಗೆದುಕೊಳ್ಳುವುದಿಲ್ಲ ಎಂಬ ವಚನವನ್ನೂ, ಲಂಚ ಕೊಡುವವರು ಕೊಡುವುದಿಲ್ಲ ಎಂಬ ವಚನವನ್ನೂ ಕಟ್ಟುನಿಟ್ಟಾಗಿ ಪಾಲಿಸಿದಾಗ ಮಾತ್ರ ಭ್ರಷ್ಟಾಚಾರ ತೊಲಗಲು ಸಾಧ್ಯ.

- ಶ್ರೀಶೈಲ ಮಲ್ಲಪ್ಪ, ಮುದ್ದೇಬಿಹಾಳ.

ಗುಂಡಿಕ್ಕಿ ಕೊಲ್ಲಬೇಕು

ಯಾರು ಲಂಚ ಮತ್ತು ಇನ್ನಿತರ ಅಸಹ್ಯ ಕಾರ್ಯಗಳನ್ನು ಮಾಡುತ್ತಾರೋ ಅವರಿಗೆ ಗುಂಡಿಕ್ಕಿ ಕೊಲ್ಲಬೇಕು. ಅಂದರೆ ಮಾತ್ರ ಭ್ರಷ್ಟಾಚಾರ ಕೊನೆಗೊಳ್ಳುತ್ತದೆ.

ಎಂದು ಈ ನಿಯಮ ಕಾರ್ಯರೂಪಕ್ಕೆ ಬರುತ್ತದೆಯೋ ಅಂದೇ ಭ್ರಷ್ಟಾಚಾರದ ಸರ್ವನಾಶವಾಗುತ್ತದೆ.

- ಪ್ರವೀಣ ಕುಮಾರ ಬಿ.

ಆಕರ್ಷಕ

ಜುಲೈ 1999ರ 'ಬಿಸಿಲ ಬದುಕು' ಮುಖಪುಟ ಆಕರ್ಷಕವಾಗಿತ್ತು. ಪ್ರತಿಯೊಂದು ಅಂಕಣಗಳು ಮೆಚ್ಚಿಗೆಯಾದವು.

- ಮಲ್ಲಪ್ಪ ಬಿ ಗೊನವಾರ
ಶರಣಪ್ಪ ಚ ಮುಳ್ಳೂರ, ಸಿಂಧನೂರು.

ಸಂತೋಷವಾಯಿತು!

''ಬದುಕು'' ಮುಂದಿನ ಸಂಚಿಕೆ ಹೊಚ್ಚ ಹೊಸತನದಿಂದ ಬರುವ ಸುದ್ದಿ ಓದಿ ಸಂತೋಷವಾಯಿತು. ಕಥೆ, ಸ್ನೇಹಸೇತು ಪ್ರಾರಂಭಿಸಿದರೆ ಚೆನ್ನಾಗಿರುತ್ತದೆ.

- ಸುರೇಶ ಅಂಗಡಿ,
ಹೂವಿನ ಹಡಗಲಿ.

ಸಮಯದ ಸದುಪಯೋಗ

ಜುಲೈ ತಿಂಗಳ ಈ ಅಂಕಣ ಅತಿ ಚೆನ್ನಾಗಿ ಮೂಡಿ ಬಂದಿದೆ ಮತ್ತು ಅನಾವಶ್ಯಕವಾಗಿ ಕಾಲಹರಣ ಮಾಡುವ ನಿರುದ್ಯೋಗಿಗಳಿಗೂ ಮತ್ತು ಎಲ್ಲರಿಗೂ ಒಂದು ಎಚ್ಚರಿಕೆ ಕೊಟ್ಟಂತಾಗಿದೆ.

ಉತ್ತನೂರು ಫ್ಯಾನ್ಸ್ ಅವರಿಗೂ ಮತ್ತು ಬಿಸಿಲ ಬದುಕು ಮಾಸ ಪತ್ರಿಕೆಯ ಬಳಗಕ್ಕೂ ನಮ್ಮ ವಂದನೆಗಳು.

- ರಾಘವೇಂದ್ರ ಡಿ.
ಸಂಗನಗೌಡ್ರ, ಸುರೇಬಾನ.

ಮೆಚ್ಚುವ ಸಾಧನೆ

ಅಂಧ ಬಾಲಕರ ಬಾಳಿಗೆ ಬೆಳಕಾಗಿ ಅವರಲ್ಲಿ ಆತ್ಮ ವಿಶ್ವಾಸ ವೃದ್ಧಿಸುವತ್ತ ತಮ್ಮ ಪರಿಶ್ರಮವನ್ನು ಧಾರೆಯೆರೆಯುತ್ತಿರುವ ಶ್ರೀರಾಮುಲು ಅವರ ಸಾಧನೆ ಮೆಚ್ಚುವಂಥದು.

- ಲಕ್ಷ್ಮೀಕಾಂತ ಕೊಂಪಲ್, ಲಿಂಗಸುಗೂರು.

ಹುಡುಕಾಟ

ಜುಲೈ ತಿಂಗಳ ಬದುಕು ಪತ್ರಿಕೆ ಪಡೆಯುವುದು ಬೇಸಿಗೆಯಲ್ಲಿ ನೀರನ್ನು ಹುಡುಕಾಡಿದ ಹಾಗೆ ಆಯಿತು. ಅದು ದೊರೆತಾಗ ಅದರಲ್ಲಿ 'ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿ' ಬರಹಕ್ಕೆ ಬಹಳಷ್ಟು ಹುಡುಕಿ ನಿರಾಶೆಯಾಯಿತು.

- ಯಲ್ಲಪ್ಪಾ ಎನ್ ಉಪ್ಪಾರಹಟ್ಟಿ
(ಗೋಕಾಕ).

ಬಾವಿಗೆ ಮೆಟ್ಟಿಲಿಲ್ಲ

ಬಿಸಿಲ ಬದುಕು ಮಾಸಪತ್ರಿಕೆಯು ತುಂಬಾ ಅತ್ಯುತ್ತಮ ಹಾಗೂ ಅತ್ಯವಶ್ಯಕ ಎನಿಸುತ್ತಿದೆ. ಜುಲೈ ತಿಂಗಳ ಮಾಸ ಪತ್ರಿಕೆ ನೋಡಿ ಸ್ವಲ್ಪ ಮನಸ್ಸಿಗೆ ವ್ಯಥೆ ಉಂಟಾಗಿದೆ. ಕಾರಣ ಅತ್ಯವಶ್ಯವಾದ ''ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗಿ'' ಎಂಬ ವಿದ್ಯೆ ಉದ್ಯೋಗದ ಭಾಗವೇ ಕಾಣಿಸಲಿಲ್ಲ. ಆದ್ದರಿಂದ ಸ್ವಲ್ಪ ಬೇಸರವಾಯಿತು.

ನೀರಿಗಾಗಿ ಹೋಗುವ ಬಾವಿಯಲ್ಲಿ ನೀರು ಇತ್ತು. ಆದರೆ, ಬಾವಿ ಇಳಿದು ನೀರು ತುಂಬಿಕೊಳಲು ಮೆಟ್ಟಿಲುಗಳೇ ಇಲ್ಲ ಎಂಬಂತೆ ಭಾಸವಾಗಬಹುದಲ್ಲವೆ?

- ಶ್ರೀನಾಥ.

ಬದುಕು ದೀಪಾವಳಿ ವಿಶೇಷಾಂಕ

ಪ್ರಕಟಣೆಯ 3ನೇ ವರ್ಷದಲ್ಲಿ ಕಾಲಿರಿಸಿದ '**ಬಿಸಿಲ ಬದುಕು**' ಮಾಸಪತ್ರಿಕೆ ವಿನೂತನ '**ದೀಪಾವಳಿ ವಿಶೇಷಾಂಕ**' ರೂಪಿಸುತ್ತಿದೆ. ಅರ್ಥಪೂರ್ಣ ಸಂಪಾದಕೀಯ ಸತ್ವ ಹಾಗೂ ಅತ್ಯಾಧುನಿಕ ವರ್ಣ ಮುದ್ರಣ ಈ ವಿಶೇಷಾಂಕದ ವೈಶಿಷ್ಟ್ಯ.

ಚೆನ್ನವೀರ ಕಣವಿ, ಚಂದ್ರಶೇಖರ ಕಂಬಾರ, ಶಾಂತರಸ, ಎಚ್.ಎಸ್. ಶಿವಪ್ರಕಾಶ್, ಎಂ.ಎನ್. ವ್ಯಾಸರಾವ್, ನಾ. ಡಿಸೋಜ, ಬಿದರಹಳ್ಳಿ ನರಸಿಂಹಮೂರ್ತಿ, ಗೀತಾ ನಾಗಭೂಷಣ, ಎಸ್. ದಿವಾಕರ, ರಾಘವೇಂದ್ರ ಪಾಟೀಲ, ಮುದೇನೂರ ಸಂಗಣ್ಣ, ಎಂ.ಎಸ್. ಮೂರ್ತಿ, ಸುಭದ್ರಮ್ಮ ಮನ್ಸೂರ್.... ಮೊದಲಾದ ಗಣ್ಯರು ಈ ಸಂಚಿಕೆಯನ್ನು ಸಮೃದ್ಧಗೊಳಿಸಲಿದ್ದಾರೆ.

ರೂ. 15000 ಬಹುಮಾನಗಳು

ಪ್ರಬಂಧ ಸ್ಪರ್ಧೆ

* ಮೊದಲ ಬಹುಮಾನ: ರೂ. 2000
* ಎರಡನೇ ಬಹುಮಾನ: ರೂ. 1000
* ತಲಾ 500 ರೂಪಾಯಿಗಳ ನಾಲ್ಕು ಸಮಾಧಾನಕರ ಬಹುಮಾನಗಳು

ಕಥಾ ಸ್ಪರ್ಧೆ

* ಮೊದಲ ಬಹುಮಾನ: ರೂ. 2000
* ಎರಡನೇ ಬಹುಮಾನ: ರೂ. 1000
* ತಲಾ 500 ರೂಪಾಯಿಗಳ ನಾಲ್ಕು ಸಮಾಧಾನಕರ ಬಹುಮಾನಗಳು.

- ಕಥೆ, ಪ್ರಬಂಧ ಸ್ವತಂತ್ರವಾಗಿರಬೇಕು. ಭಾಷಾಂತರವಾಗಲಿ, ಅನುಕರಣೆಯಾಗಲಿ ಆಗಿರಕೂಡದು. ಹಸ್ತಪ್ರತಿ ಫುಲ್‌ಸ್ಕೇಪ್ 8 ಪುಟ ಮೀರಿರಬಾರದು.
- ಬೇರೆಡೆ ಪ್ರಕಟವಾಗಿರಬಾರದು ಅಥವಾ ಆಕಾಶವಾಣಿ, ದೂರದರ್ಶನದಲ್ಲಿ ಪ್ರಸಾರವಾಗಿರಬಾರದು.
- ಕಾಗದದ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಿರಬೇಕು.
- ಅರ್ಹವೆನಿಸಿದ ಪ್ರವೇಶಗಳು ಬಾರದಿದ್ದಲ್ಲಿ ಬಹುಮಾನಗಳನ್ನು ಸೂಕ್ತ ರೀತಿಯಲ್ಲಿ ವಿತರಣೆ ಮಾಡುವ ಅಧಿಕಾರ ಸಂಪಾದಕರಿಗೆ ಸೇರಿದ್ದು.
- ಸ್ಪರ್ಧೆಗೆ ಪ್ರವೇಶ ಧನ ಇಲ್ಲ. ಕಥೆ, ಪ್ರಬಂಧಗಳನ್ನು ವಾಪಸ್ ಮಾಡುವುದಿಲ್ಲ.

ಛಾಯಾಚಿತ್ರ ಸ್ಪರ್ಧೆ

ಈ ಸ್ಪರ್ಧೆಯಲ್ಲಿ ಭಾವಚಿತ್ರ, ಪ್ರಕೃತಿ ಹಾಗೂ ಇತರೆ ಛಾಯಾಚಿತ್ರಗಳು - ಹೀಗೆ ಮೂರು ವಿಭಾಗಗಳಿವೆ. ಮೂರೂ ವಿಭಾಗದ ಒಂದೊಂದು ಅತ್ಯುತ್ತಮ ಛಾಯಾಚಿತ್ರಕ್ಕೆ ರೂ. 1000 ಪ್ರಥಮ ಬಹುಮಾನ. ಜೊತೆಗೆ ತಲಾ 250 ರೂಪಾಯಿಯ ಎಂಟು ಸಮಾಧಾನಕರ ಬಹುಮಾನಗಳು.

- 8 X 10 ಸೈಜಿನ ವರ್ಣಚಿತ್ರ ಅಥವಾ ವರ್ಣಪಾರದರ್ಶಿಕೆಯನ್ನು ಕಳಿಸಿ.
- ಒಬ್ಬರು ಎಷ್ಟಾದರೂ ಛಾಯಾಚಿತ್ರಗಳನ್ನು ಕಳಿಸಬಹುದು.
- ಆಯ್ಕೆಯಾದ ಛಾಯಾಚಿತ್ರಗಳ ಹಕ್ಕು ಪ್ರಕಾಶಕರಿಗೆ ಸೇರುತ್ತದೆ.
- ಆಯ್ಕೆಯಾಗದ ಛಾಯಾಚಿತ್ರ ಹಿಂದಿರುಗಿ ಪಡೆಯಲು ಸಾಕಷ್ಟು ಅಂಚೆ ಚೀಟಿ ಹಚ್ಚಿದ ಸ್ವವಿಳಾಸದ ಲಕೋಟೆ ಕಳಿಸಿ.

ಓದುಗರ ಅಂಕಣಗಳು :

- **ಶತಮಾನದ ವ್ಯಕ್ತಿ** : ನೀವು ಆರಿಸುವ ಈ ಶತಮಾನದ ವ್ಯಕ್ತಿ ಯಾರು? ನಿಮ್ಮ ಆಯ್ಕೆಗೆ ಈ ವ್ಯಕ್ತಿಯಲ್ಲಿ ನೀವು ಕಂಡ ವಿಶೇಷತೆಗಳಾವುವು?
- **ನನ್ನ ಕಲ್ಪನೆಯಲ್ಲಿ ಸೌಂದರ್ಯ** : ನಿಮ್ಮ ಮನೋಬಿತ್ತಿಯಲ್ಲಿ ಮೂಡುವ ಸೌಂದರ್ಯದ ಕಲ್ಪನೆ ಎಂತಹದು? ಒಳಗಣ್ಣ ನೋಟದ ಈ ಸೌಂದರ್ಯಕ್ಕೆ ಲಿಖಿತ ರೂಪ ನೀಡಿರಿ.
- **ನನ್ನ ದಾಂಪತ್ಯ ಜೀವನ** : ದಾಂಪತ್ಯ ಜೀವನದ ಸರಸ-ವಿರಸಗಳ ರಸಾನುಭವಗಳಿಗೆ ಅಭಿವ್ಯಕ್ತಿ ನೀಡಿ. ಈ ಬಗ್ಗೆ ಗಂಡ-ಹೆಂಡತಿ ಇಬ್ಬರೂ ಬರೆಯಬಹುದು.

ಸೂಚನೆಗಳು :

* ಓದುಗರ ಅಂಕಣದ ಬರಹಗಳು ಫುಲ್‌ಸ್ಕೇಪ್ ಹಾಳೆಯ ಅರ್ಧಪುಟ ಮೀರಬಾರದು.
* ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಿರಬೇಕು.
* ಪತ್ರ ವ್ಯವಹಾರಕ್ಕೆ ಅವಕಾಶವಿಲ್ಲ.
* ಬರಹದೊಂದಿಗೆ ನಿಮ್ಮದೊಂದು ಭಾವಚಿತ್ರ ಕಳಿಸಿ.

ವಿಳಾಸ

ಬದುಕು ದೀಪಾವಳಿ ಸ್ಪರ್ಧೆ, ಅಂಕುರ ಪ್ರಕಾಶನ, 473, 1ನೇ ಬ್ಲಾಕ್, 3ನೇ ಸ್ಟೇಜ್,
ವಾಟರ್ ಟ್ಯಾಂಕ್ ಬಸ್‌ಸ್ಟಾಪ್ ಬಳಿ, ಬಸವೇಶ್ವರನಗರ, ಬೆಂಗಳೂರು - 560 079 ✆ 3307810

ಒಳ ನೋಟ

ಮುಂದಿನ ಸಂಚಿಕೆಯಲ್ಲಿ

ರಜನೀಶ್ ಕತೆಗಳು

ರಾಮಕೃಷ್ಣ ಹೆಗಡೆ

ನಿಮಗೆಷ್ಟು ಗೊತ್ತು?

ಹವ್ಯಕ ಜನಾಂಗದ ಇವರ ನಂಟು ಸರ್ವವ್ಯಾಪಿ. ಅವರ ಮನೆಯಲ್ಲಿ ಸೂತಕವಾದರೆ, ರಾಜ್ಯದ ಪ್ರತಿ ಹವ್ಯಕ ಕುಟುಂಬಕ್ಕೂ ಅದು ಅನ್ವಯಿಸುತ್ತದೆ. ಹೆಗಡೆಯವರ ಕುಟುಂಬದ ಸಂಬಂಧ ಅಷ್ಟು ಹಿರಿದು ಹಾಗೂ ಆಪ್ತವಾದದ್ದು.

ರಾಮಕೃಷ್ಣ ಹೆಗಡೆ ಅವರ ಮನೆಗೆ ಫೋನು ಮಾಡಿದ ಆತ್ಮೀಯರು, ಅವರು ಮನೆಯಲ್ಲಿ ಇರಲಿಲ್ಲ ಎಂದರೆ ಹತಾಶರಾಗಬೇಕಿಲ್ಲ. ಇಂಥವರು ಫೋನ್ ಮಾಡಿದ್ದರು ಎಂಬ ಸುದ್ದಿ ಬಿಟ್ಟರೆ ಸಾಕು. ಹೆಗಡೆಯವರು ಮನೆಗೆ ಹಿಂತಿರುಗಿದ ನಂತರ, ತೀರಾ ತಡವಾಗಿದ್ದರೆ ಮರುದಿನದ ಬೆಳಿಗ್ಗೆ ನಿಮಗೆ ವಾಪಸು ಫೋನ್ ಮಾಡುತ್ತಾರೆ. ಇದು ಯಾವತ್ತಿನದೋ! ಸಂಗತಿಯಲ್ಲ. ಇವತ್ತಿಗೂ ಅವರು ಪಾಲಿಸಿಕೊಂಡು ಬಂದ ನಿಯಮ.

ಮತ್ತೊಂದು ವಿಚಾರ. ಈ 'ಆತ್ಮೀಯರು' ಎಂಬ ಪಟ್ಟಿಯಲ್ಲಿ ನಾವು ಇಲ್ಲ ಎಂದು ಬಹಳಷ್ಟು ಜನ ಭಾವಿಸಬಹುದು. ಆದರೆ ಹೆಗಡೆಯವರ ಆತ್ಮೀಯರ ಬಳಗ ತೀರಾ ದೊಡ್ಡದು. ಅದರಲ್ಲಿ ನಾನು, ನೀವು ಇಲ್ಲ ಎಂದು ಹೇಗೆ ಹೇಳುವುದು!

ರಾಮಕೃಷ್ಣ ಹೆಗಡೆ ಪಾಲಿಸಿಕೊಂಡು ಬಂದ ನಿಯಮಗಳಲ್ಲಿ ಯಾವತ್ತಿಗೂ, ಎಂಥ ಕಾರಣಕ್ಕೂ ಬದಲಾವಣೆ ಇಲ್ಲ. ಸಜ್ಜನಿಕೆಯ ವಿಚಾರದಲ್ಲಿ ಅವರದ್ದು ಯಾವತ್ತೂ ರಾಜೀ ಇಲ್ಲ. ಹಾಗಾಗಿ ರಾಜಕಾರಣಿಗಳಲ್ಲಿ ಸಜ್ಜನ ಎಂದು ಗುರುತಿಸಬಹುದಾದ ವ್ಯಕ್ತಿಗಳಲ್ಲಿ ವಾಜಪೇಯಿ ನಂತರದ ಹೆಸರು ರಾಮಕೃಷ್ಣ ಹೆಗಡೆ ಅವರಿಗೆ ಇವತ್ತು ಸಲ್ಲುತ್ತದೆ.

ಬಹುಶಃ ಅವರ ಈ ಶಿಷ್ಟಾಚಾರದ ಮೊದಲ ಪಾಠವನ್ನು ತಮ್ಮ ರಾಜಕೀಯದ ಗುರು ಎಸ್. ನಿಜಲಿಂಗಪ್ಪ ಅವರಿಂದ ಕಲಿತಿರಬೇಕು. ಎಸ್ಸೆನ್‌ಗೆ ಯಾರೇ, ಯಾವ ವಿಚಾರಕ್ಕೇ ಕಾಗದ ಬರೆಯಲಿ, ಅವರೊಂದು ಪೋಸ್ಟ್ ಕಾರ್ಡಿನಲ್ಲಿ ತಾವೇ ಉತ್ತರ ಬರೆದು ಹಾಕುತ್ತಿದ್ದರು. ಅದನ್ನವರು, ತೀರಾ ಇತ್ತೀಚೆಗೆ ಹಾಸಿಗೆ ಹಿಡಿಯುವವರೆಗೆ ಪಾಲಿಸಿಕೊಂಡೇ ಬಂದವರು.

ಎಸ್ಸೆನ್ ಅನಾರೋಗ್ಯದ ಕಾರಣ ಇಂಥದೊಂದು ಶಿಷ್ಟತೆ ಕೈಬಿಟ್ಟರು. ಹಾಗೆ ರಾಮಕೃಷ್ಣ ಹೆಗಡೆ ಕೈಬಿಟ್ಟ ಸಣ್ಣದೊಂದು ನಿಯಮ ಇದೆ. ಅವರು ಎಲ್ಲೇ ಹೊರಗೆ ಹೊರಡಲಿ, ಅವರ ತಾಯಿಯ ಕಾಲು ಮುಟ್ಟಿ ನಮಸ್ಕಾರ ಮಾಡಿಯೇ ಮನೆಯಿಂದ ಹೊರಬೀಳುತ್ತಾ ಇದ್ದುದು. ಇಂದು ಅವರ ತಾಯಿಯವರಿಲ್ಲ.....

ವಿನೋಬಾ ಭಾವೆ ಅವರ ನಿಕಟ ಸಂಪರ್ಕದಲ್ಲಿ ಬೆಳೆದ ರಾಮಕೃಷ್ಣ ಹೆಗಡೆ ಪ್ರತಿ ಭಾನುವಾರ ಮೌನ ಆಚರಿಸುತ್ತಾರೆ. ಅಂದು ಅವರು ಮಾತಾಡುವುದಿಲ್ಲ. ದೇಶದ ದೊಡ್ಡ ರಾಜಕಾರಣಿಯೊಬ್ಬ ಮಾತಿಲ್ಲದೇ ಇರಬಹುದಾದ ಕಷ್ಟ, ಅದೂ ಇಡೀ ದಿನ.... ಅಂಥ ನಿಯಮ ಕೂಡ ಇತ್ತೀಚೆಗೆ ಅವರು ಸಡಿಲಿಸಬೇಕಾಯಿತು. ಇದು ರಾಜಕೀಯದ ಮಹತ್ವವೋ ಅಥವಾ ಹೆಗಡೆ ದುರ್ಬಲರಾಗುತ್ತಿರುವ ಲಕ್ಷಣವೋ! ತಿಳಿಯದು.

ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ಸಮೀಪದ ದೊಡ್ಡಮನೆಯವರಾದ ಹೆಗಡೆಯ ಹವ್ಯಕ ಕುಟುಂಬದ ವ್ಯಾಪ್ತಿ ಎಷ್ಟು ದೊಡ್ಡದೆಂದರೆ, ಇವರ ಮನೆಯಲ್ಲಿ ಸೂತಕವಾದರೆ, ಇಡೀ ರಾಜ್ಯದ ಪ್ರತಿ ಹವ್ಯಕ ಕುಟುಂಬಕ್ಕೂ ಸೂತಕದ ಸೋಂಕು ತಗಲುತ್ತದೆ. ಅಷ್ಟೊಂದು ದೊಡ್ಡ ವ್ಯಾಪ್ತಿಯ ಕುಟುಂಬ ಇವರದು.

ದೊಡ್ಡ ಮನೆಯ ಎಲ್ಲರೂ ಸ್ವಾತಂತ್ರ್ಯಕ್ಕೆ ಹೋರಾಡಿದವರು. ಹೆಗಡೆ ಮತ್ತು ಅವರ ಅಕ್ಕ ಮಹಾದೇವಿ ತಾಯಿ ವಿನೋಬಾ ಭಾವೆ ಅವರ ವಾರ್ಧಾದ ಆಶ್ರಮದಲ್ಲಿ ಇದ್ದವರು. ವಿನೋಬಾ ಅವರಿಗೆ ಕನ್ನಡ ಕಲಿಸಿದ್ದರಲ್ಲಿ ಹೆಗಡೆ ಅವರದ್ದೂ ಪಾಲುಂಟು.

ಇಂಥ ಹೆಗಡೆ ಬಗ್ಗೆ ಜನ ಏನು ಹೇಳುತ್ತಾರೋ ತಿಳಿಯದು. ಪತ್ರಿಕೆಗಳು



ಏನು ಹೇಳುತ್ತವೆ? ಅದರ ಸಮಗ್ರ ಪರಿಚಯ ಆಗಬೇಕಾದರೆ, ರಾಮಕೃಷ್ಣ ಹೆಗಡೆ ಅವರನ್ನೇ ಕೇಳಬೇಕು. ಅವರಲ್ಲಿ, ಅವರ ಬಗ್ಗೆ ಬಂದ ಪತ್ರಿಕಾ ವರದಿಗಳ ಪೇಪರ್ ಕಟಿಂಗ್‌ನ ಬಹುದೊಡ್ಡ ಸಂಗ್ರಹವೇ ಇದೆ. ಹೊಗಳಿರಲಿ, ಬೈದಿರಲಿ, ಪತ್ರಿಕೆಯಲ್ಲಿ ತಮ್ಮ ಬಗ್ಗೆ ಪ್ರಕಟವಾದ ಎಲ್ಲ ಪತ್ರಿಕಾ ಬರಹಗಳ ಕಟಿಂಗ್ ಸಂಗ್ರಹಿಸಿ ಇಡುತ್ತಾರೆ ಅವರು.

ಬೆಳಗಿನ ವಾಕಿಂಗ್‌ನಿಂದ ಸಂಜೆಗತ್ತಲಾಗುತ್ತಿದ್ದಂತೆ ಚಾಚಿಕೊಳ್ಳುವ ರಸಿಕ ಗೋಷ್ಠಿಗಳಲ್ಲಿ ಬಿಚ್ಚಿಕೊಳ್ಳುವ ಮಾತುಗಳು ಹೆಗಡೆ ಅವರ ಚಿಂತನೆಯ ದಿಕ್ಕು ರೂಪಿಸಿವೆ. ಒಂದು ಕಾಲಕ್ಕೆ ಗೋವಾದ ಬೀಚುಗಳಲ್ಲಿ, ಸಿಗರೇಟಿನಲ್ಲಿ ತುಂಬಿಕೊಂಡು ಸೇದುತ್ತಿದ್ದ ಗಾಂಜಾದಲ್ಲಿ ರಸಿಕತೆಯನ್ನು ಕಾಣುತ್ತಿದ್ದ ರಾಮಕೃಷ್ಣ ಹೆಗಡೆ ಅವರ ರಸಿಕತೆಯ ಅರ್ಥ ಬದಲಾಗಿದೆ. ಅದಕ್ಕೆ ವಯಸ್ಸು ಕಾರಣವೋ, ಅನುಭವ ಕಲಿಸಿದ ಪಾಠ ಕಾರಣವೋ ಎಂದು ಹೇಳುವುದು ಕಷ್ಟ.

ರಾಜಕಾರಣ ಮೀರಿದ ಕಾಳಜಿಗಳನ್ನು ಅವರು ಹಲವು ಸಲ ಪ್ರದರ್ಶಿಸಿದ್ದಾರೆ. ನಜೀರ್ ಸಾಬ್, ಜೀವರಾಜ ಆಳ್ವ ಅವರಂಥವರ ಆಯ್ಕೆಯ ಹಾಗೆಯೇ, ಸ್ವಂತ ಸಂತಾನದ ನಾಯಕರನ್ನು ಬೆಳೆಸುವ ಬದಲಿಗೆ, ರಾಜಕೀಯ ರಂಗದಲ್ಲಾದರೂ ಅವರು ಹಲವು ವ್ಯಕ್ತಿಗಳನ್ನು ಗುರುತಿಸಿ, ತಮಗೆ ಸಾಧ್ಯವಾದಾಗ ಅವಕಾಶ ನೀಡಿದ್ದಾರೆ. ತಾವು ಕೇವಲ ಸೀಮಿತ ಗುಂಪಿನ ನಾಯಕ ಅಲ್ಲ, ಹೊಸದೊಂದು ಪೀಳಿಗೆಯ ಮುಂದುವರಿಕೆಗೂ ಬಾಧ್ಯ ಎಂಬುದನ್ನು ತೋರಿಸಿದ್ದಾರೆ. ಆದರೂ ಹೆಗಡೆ ಮನುಷ್ಯರು.

ಅವರು ದ್ವೇಷಿಸುವುದು ದೇವೇಗೌಡರನ್ನು ಹಾಗೂ ದೇವೇಗೌಡರನ್ನು ಮಾತ್ರ.

ಪ್ರೀತಿಸುವುದು....

ಆ ಪಟ್ಟಿ ದೊಡ್ಡದಿದೆ.

ಸ್ವಾತಂತ್ರ್ಯ ಹೋರಾಟದ ಮನೆತನಕ್ಕೆ ಸೇರಿದ ಕುರುಹಾಗಿ ಈಗಲೂ ಅವರ ಮೈ ಮುಚ್ಚಿಸಿದೆ ಖಾದಿಯ ದಿರಿಸು.

ನಿತ್ಯ ಮುಂಜಾನೆ ನಿಂಬೇರಸಕ್ಕೆ ಜೇನು ಬೆರೆಸಿ ಕುಡಿಯುವ ಹೆಗಡೆಗೆ ದೇಹಾರೋಗ್ಯದ ಬಗ್ಗೆ ಸಾಕಷ್ಟು ಕಾಳಜಿ. ಆದರೂ ಅವರನ್ನು ಬೆಂಬಿಡದೆ ಕಾಡುವ ಗಂಟಲು ನೋವು ಮತ್ತು ಬೆನ್ನು ನೋವು ಕೆಲವೊಮ್ಮೆ ಕಟ್ಟಿಹಾಕಿದ್ದೂ ಉಂಟು.

■ ಸುಹಾಸ



ನಾಷ್ಟಾ ಮಾಡಿ ನಾಶವಾದ ಪಟೇಲ್

ನಮ್ಮ ಪಟೇಲರನ್ನು ಡಿನ್ನರ್ ಪಾರ್ಟಿಗಳಿಗೇ ಆಹ್ವಾನಿಸುವುದು ಒಳಿತು. ತಮಗಿಷ್ಟವಾದ ಸ್ಕಾಚ್ ಇದ್ದಲ್ಲಿ ಪಟೇಲರ ಬುದ್ಧಿಯೂ ನೆಟ್ಟಗಿರುತ್ತೆ, ಆತ್ಮ ಸ್ಥೈರ್ಯವೂ ಇರುತ್ತೆ ಯಾರಿಗೂ ಮರುಳಾಗಬೇಕಿಲ್ಲ. ಅದ್ಯಾವ ಗಳಿಗೇಲಿ ಹೆಗಡೆಯವರ ಮನೆಗೆ ನಾಷ್ಟಾ ಮಾಡಲು ಹೋದರೋ, ಅಲ್ಲೇನು ತಿನ್ನಲು ಕೊಟ್ಟರೋ ಗೊತ್ತಿಲ್ಲ. ಆದರೆ ಹೀರೋ ಆಗಿ ಒಳಹೋದ ಪಟೇಲ್ ಝೀರೋ ಆಗಿ ಹೊರಬಂದರು. ಕೆಲವೇ ಗಂಟೆಯಲ್ಲಿ ರಾಜಕೀಯ ಧುರೀಣರಾಗಿದ್ದ ಪಟೇಲ್ ಕೇವಲ ಲಿಂಗಾಯಿತ ಮುಖಂಡನ ಮಟ್ಟಕ್ಕೆ ಇಳಿದಿದ್ದರು. ಸಕ್ಕರೆ ಕಾಯಿಲೆ ಇರುವ ಪಟೇಲರು ಹೆಚ್ಚು ತಿನ್ನುವುದಿಲ್ಲ. ಕಾಯಿಲೆ ಇಲ್ಲದಿದ್ದಾಗಲೂ ಊಟ ತಿಂಡಿಯ ಚಪಲ ಕಡಿಮೆ. ಹಾಗಾಗಿಯೇ ಇನ್ನೂ ನೆಟ್ಟಗೆ ಓಡಾಡುತ್ತಿರುವುದು.

ಹೆಗಡೆಯೂ ಖಂಡಿತ ನಾಷ್ಟಾ ಜತೆ ಬೇರೇನೂ ಕುಡಿಯಲು ಕೊಟ್ಟಿಲ್ಲ. ಆದರೆ ವಿಧಿವಿಲಾಸ! ಯಾವಾಗ ಮಂಕು ಬಡಿಯುತ್ತೆ ಮನಸ್ಸಿಗೆ ಹೇಳಲು ಬರುವುದಿಲ್ಲ.

ಪಟೇಲರಿಗೆ ಇದ್ದ ಒತ್ತಡ ಅವರ ಜಾತಿ ನಾಯಕರಿಂದ, ದೇವೇಗೌಡರ ಸಹವಾಸ ಸಾಕು ಎಂದು ನಿರ್ಧರಿಸಿದ್ದ ಒಕ್ಕಲಿಗ ಮಂತ್ರಿಗಳಿಂದ. ದಳ ದಳದಳವಾಗಿ ಹೋಗುವ ಮುನ್ನ ತಾವೇ ಹೊರಬಂದು ಲೋಕಶಕ್ತಿಯೊಡನೆ ಸೇರದಿದ್ದಲ್ಲಿ, ಗೌಡರು ಅದೇ ಕೆಲಸ ಮಾಡಿ ನಮ್ಮನ್ನೆಲ್ಲ ಮೂಲೆಗುಂಪನ್ನಾಗಿ ಮಾಡಿ ಕಾಂಗ್ರೆಸ್ ತೆಕ್ಕೆಗೆ ಸೇರುವುದು ಖಂಡಿತ ಎಂದು ಪಟೇಲರ ಕಿವಿ ಕಚ್ಚುತ್ತಿದ್ದರು. ಇದನ್ನೇ ಸಮಾನಮನಸ್ಕ ಮಂತ್ರಿಗಳ ಸಭೆ ಎಂದು ಕರೆದುಕೊಂಡು ಪತ್ರಿಕೆಗಳಿಗೆ ಬೇರೆಬೇರೆ ಪದಗಳ ಸಮುಚ್ಚಯ ಬಳಕೆ ಮೂಲಕ ಚಿಟ್ಟು ಹಿಡಿಸಿದ್ದರು.


ಪಟೇಲರಿಗೆ ಇದು ಎಷ್ಟು ರೋಸಿ ಹೋಗಿತ್ತೆಂದರೆ ಮಧ್ಯೆ ಒಮ್ಮೆ ''ದಿನ ನಿತ್ಯ ಅಲ್ಲಿ ಇಲ್ಲಿ 'ಸಮಾನ ಮನಸ್ಕರ ಸಭೆ' ಎಂದು ಅವರಿವರ ಮನೆಯಲ್ಲಿ ಕೂಡುವುದಕ್ಕಿಂತ, ಪರ್ಮನೆಂಟಾಗಿ ಒಂದೆರಡು ಛತ್ರ ಬುಕ್ ಮಾಡಿ ಬಿಡಿ'' ಎಂದು ಛೇಡಿಸಿದ್ದರು.

ಆದರೆ ಬಿಟ್ಟೇನೆಂದರೆ ಬಿಡದೀ ಮಾಯೆ ಎಂಬಂತೆ ಮತ್ತೆ ಮತ್ತೆ ಬರುವ ತಲೆನೋವಿನಂತೆ ಈ ಸಚಿವರ ಒತ್ತಡ ಬರಲಾರಂಭಿಸಿತು. ಪಟೇಲರು ಮರ್ಯಾದೆಯಾಗಿ ಚುನಾವಣೆಯನ್ನು ಯಾರ ಸಹಾಯವಿಲ್ಲದೆ ಎದುರಿಸೋಣ, ಸೋತರೆ ಮರ್ಯಾದೆಯಾಗಿ ವಿರೋಧ ಪಕ್ಷದ ಬೆಂಚಿನಲ್ಲಿ ಕೂರೋಣ, ಪರಿಸ್ಥಿತಿ ಅಷ್ಟೇನು ಕೆಟ್ಟದಾಗಿಲ್ಲ ಎಂದು ಎಷ್ಟು ಹೇಳಿದರೂ ಇವೆಲ್ಲವೂ ಎಲ್ಲ ರೀತಿಯ ರಾಜಕೀಯ ಸುಖ ಉಂಡು ನಿವೃತ್ತಿ ಹಂತದಲ್ಲಿರುವ

ನಾಯಕನ ಮಾತಿನಂತಿತ್ತು, ಈ ಸಮಾನ ಮನಸ್ಕ ಸಚಿವರುಗೆ ದಳದಲ್ಲೇ ಉಳಿದರೆ ಸರ್ವನಾಶ, ಬೇರೆ ಕಡೆ ಸೇರಿಕೊಂಡರೆ ಸ್ವಲ್ಪವಾದರೂ ಉಸಿರಾಡುವ ಸಂಭವ ಎಂಬಷ್ಟು ಆತುರದಲ್ಲಿದ್ದರು.

ಒಂದು ಹಂತದಲ್ಲಿ ಈ ನಾಯಕರು ಕಚ್ಚೆ ಪಂಚೆ ಎತ್ತಿಕೊಂಡು ಹೆಗಡೆ ಅವರ ಮನೆ ಕಡೆ ಓಡುವಂತಿದ್ದರು. ಪಟೇಲರು ವಿಧಾನಸಭೆ ಸೆಶನ್ ಮುಗಿಯುವ ವರೆಗಾದರೂ ತಾಳ್ಮೆಯಿಂದಿರಿ ಎಂದು ಕೇಳಿಕೊಂಡರೂ ರೋಷನ್ ಬೇಗ್ ಅಂತಹವರು ಗುಲಾಬ್ ನಬಿ ಅಜಾಜ್ ಅಂತಹವರಿಗೆ ಅಪಾರವಾದ ಹಣ ಕೊಟ್ಟು ಕಾಂಗ್ರೆಸ್ ಸೇರಿದರು.

ಹಿಂಬಾಲಕರಿಲ್ಲದೆ ನಾಯಕನಿಲ್ಲ ಎಂಬಂತೆ ಪಟೇಲ್ ವಿಧಾನಸಭೆಯನ್ನು ಇನ್ನು ಹತ್ತು ದಿನವಾದರೂ ಮುಂದೂಡಲು ಪ್ರಯತ್ನಿಸಿ ಒಂದು ದಿನ ಮಟ್ಟಿಗೆ ಸಫಲರಾದರೂ ಇನ್ನೂ ಸ್ಪಷ್ಟವಾಗಿಲ್ಲದ ಕಾರಣಗಳಿಗೆ ಎಂ.ಎಸ್. ಪಾಟೀಲ ರಂಥವರನ್ನು ವಿದೇಶಕ್ಕೆ ಸಾಗಹಾಕಿದರು.



ತಿಪ್ಪರಲಾಗ ಹಾಕಿದರೂ ಹೆಗಡೆ, ಫರ್ನಾಂಡಿಸ್ ಶನಿಗಳಂತೆ ವಕ್ರಿಸಿದರು. ತಮ್ಮ ಮಾತಿಗೆ ಪೂರಕವೆಂಬಂತೆ ವಾಜಪೇಯಿ ಕಛೇರಿಯಿಂದ, ದೂರವಾಣಿ ಕರೆ ಬರುವಂತೆ ವ್ಯವಸ್ಥೆ ಮಾಡಿದರು.

ಬಿಜೆಪಿ ಸಹವಾಸ ಬೇಡ ಎಂದ ಪಟೇಲರಿಗೆ, ಹೆಗಡೆ ತಮ್ಮದೇ ಆದ ಮಂಕುಬೂದಿ ಎರಚಿದರು. ''ದೆಹಲಿಯ ಸರ್ಕಾರವನ್ನು ಬಿಜೆಪಿ ಸರ್ಕಾರ ಎನ್ನುವುದು ತಪ್ಪು, ಮುರ್ಖತನ. ಅಲ್ಲಿರುವುದು ಹದಿಮೂರು ಪಾರ್ಟಿಗಳ ಸಮ್ಮಿಶ್ರ ಸರ್ಕಾರ. ನಾನು, ಫರ್ನಾಂಡಿಸ್, ಮಮತಾ ಬ್ಯಾನರ್ಜಿ, ಕರುಣಾನಿಧಿ, ಚಂದ್ರಬಾಬು ನಾಯ್ಡು ಬಿಜೆಪಿಯೆ? ಯಾವ ರೀತಿಯ ಕಾಂಪ್ರೊಮೈಸ್‌ಗೂ ಒಪ್ಪದೇ ನಮ್ಮ ನಮ್ಮ ಪಕ್ಷಗಳ ಹಿತರಕ್ಷಣೆ ಮಾಡಿಕೊಳ್ಳುತ್ತಿಲ್ಲವೇ? ಹಾಗೆಯೇ ಜದಳ ಏಕಿರಬಾರದು'' ಎಂದರು. ಪಟೇಲರ ಮನಸ್ಸು - ಹಿಂದಿನ ದಿನ ಕಾರ್ಯಕಾರಿ ಸಮಿತಿಯಲ್ಲಿ ಯಾವ ಪಕ್ಷದೊಂದಿಗೂ ಸೇರುವುದು ಬೇಡ, ಬಿಜೆಪಿ ಕ್ಯಾನ್ಸರ್, ಕಾಂಗ್ರೆಸ್ ಒಂದು ಶಾಪ ಎಂದು ಘಂಟಾಘೋಷರಾಗಿ ಹೇಳಿದ್ದರೂ ಈ ಹೆಗಡೆಯವರ ತರ್ಕದಿಂದ ಸ್ವಲ್ಪ ಮಂಕಾದರೆಂದು ತಿಳಿದು ಬಂದಿದೆ. ಹೆಗಡೆಯವರ ಮನೆಯಿಂದ ಬಂದವರೆ ವಾಜಪೇಯಿ ನೇತೃತ್ವದಲ್ಲಿ ಹೊರಬರುವ ನ್ಯಾಷನಲ್ ಡೆಮೋಕ್ರಾಟಿಕ್ ಅಲಯನ್ಸ್ ಜದಳ ಸೇರುವುದೆಂದರು. ಆದರೆ ದೆಹಲಿಯ ಪತ್ರಿಕೆ, ದೂರದರ್ಶನ ಚಾನೆಲ್‌ಗಳು ಎನ್‌ಡಿಎ ಕೈ ಬಿಟ್ಟರು, ಪಟೇಲರು ಬಿಜೆಪಿ ಪಕ್ಷದೊಂದಿಗೆ ಕೈ ಜೋಡಿಸಿದರೆಂದೇ ಬಿತ್ತರಿಸಿದರು. ಈ ರೀತಿಯ ಬೆಳವಣಿಗೆ ದಳದ ಪಿಎಸಿ ಸದಸ್ಯರನ್ನು ದಂಗು ಬಡಿಸಿತು. ಒಂದೆರಡು ದಿನ ಪಟೇಲರ ರಾಜಕೀಯ ಗುರು ಎಂದೆನಿಸಿಕೊಂಡ ಬೊಮ್ಮಾಯಿ ಕೂಡ ತನ್ನ ಶಿಷ್ಯನ ನಿರ್ಧಾರದಿಂದ ವಿಚಲಿತರಾಗಿ ದೇವೇಗೌಡರ ಮನೆಯಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಹೆಗಡೆಯವರ ರೂಂಮೇಟಾಗಿದ್ದ ಬಾಪು ಕಲ್ದಾತೆಯವರೂ ಕೂಡ ಹೆಗಡೆ ಪಟೇಲ್ ವಾದವನ್ನು ತಿರಸ್ಕರಿಸುವಂತಹ ಪರಿಸ್ಥಿತಿ ಉಂಟಾಯಿತು. ಒಟ್ಟಿನಲ್ಲಿ ಪಟೇಲ್-ಹೆಗಡೆ, ಜಾರ್ಜ್ ಅಂತಹವರಿಗೆ ದಕ್ಕುವುದು ಬಿಜೆಪಿಯೇತರ ಒಂದು ವೇದಿಕೆ ಅಷ್ಟೆ.

ಕಾಂಗ್ರೆಸ್ ಜತೆ ಸೇರಿ ಬಿಜೆಪಿ ಸರ್ಕಾರ ಬೀಳಿಸಿದ್ದ ದೇವೇಗೌಡರಿಗೆ, ಇದಕ್ಕೂ ಮೊದಲು ಸೋನಿಯಾ ಅವರೊಂದಿಗೆ ಕೆಲವೊಂದು ಒಪ್ಪಂದ ವಾಗಿದ್ದವು. ತಮ್ಮಲ್ಲಿರುವ ಅಪಾರವಾದ ಹಣದ ಮೂಲಕ, ಉತ್ತರ ಭಾರತದ ನಾಲ್ಕು ರಾಜ್ಯಗಳ ಚುನಾವಣೆಯಲ್ಲಿ ಪಾರ್ಟಿಫಂಡ್ ಎಂದು ದೇಣಿಗೆ ಜತೆಗೆ ಬೋಫೋರ್ಸ್ ಸಂಬಂಧಪಟ್ಟ ಕೆಲವೊಂದು ದಾಖಲೆಗಳ ನಕಲು ಹಾಗೂ ಮೂಲ ದಾಖಲೆಯ ನಿರ್ನಾಮದ ಮೂಲಕ ಸೋನಿಯಾರನ್ನು ತಮ್ಮ ಮುಲಾಜಿನಲ್ಲಿಟ್ಟಿದ್ದರು. ಮುಂದೆ ಎಂದಾದರೂ ಅವಶ್ಯಕತೆ ಬಿದ್ದಾಗ ತಮ್ಮ ಋಣವನ್ನು ತೀರಿಸುವುದಾಗಿ ಸೋನಿಯಾ ಆಶ್ವಾಸನೆ ನೀಡಿದ್ದರೂ ಅದರ ಉಪಯೋಗ ಆಗಿರಲಿಲ್ಲ. ರಾಜ್ಯದಲ್ಲಿ ಒಕ್ಕಲಿಗರ ಹಿತಾಸಕ್ತಿಗೋಸ್ಕರ ಪಕ್ಷಾತೀತವಾಗಿ ಯೋಚಿಸುವ ಗೌಡರು ಸೋನಿಯಾ ಮೂಲಕ ಕೃಷ್ಣ ಅವರನ್ನು, ರಾಜಶೇಖರಮೂರ್ತಿಯೇ ಖಚಿತವಾಗಿ ಹೋಗಿದ್ದ ಕಾಲದಲ್ಲೂ, ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಿದ್ದು ಸೋನಿಯಾ ಹಿಂತಿರುಗಿಸಿದ ಋಣದ ಒಂದು ಸಣ್ಣ ಕಂತಷ್ಟೆ.

ಪಟೇಲರ ಹಿಂದೆ ಅವರ ಹಿಂಬಾಲಕರೆಲ್ಲ ದೌಡಾಯಿಸಿದಾಗ, ಕೃಷ್ಣ ಅವರು ದೇವೇಗೌಡರನ್ನಾಗಲೀ, ದಳದ ಇನ್ನಾರನ್ನೇ ಆಗಲಿ ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವುದಿಲ್ಲ ಎಂದಾಗ ದೇವೇಗೌಡರು ವಿಚಲಿತರಾಗಲಿಲ್ಲ. ಕೈಕೇಯಿ ತನ್ನ ಬಳಿ ಇದ್ದ ವರಗಳಂತೆ ಸೋನಿಯಾ ಅವರನ್ನು ಭೇಟಿಮಾಡಿ ತಮ್ಮ ಋಣತೀರಿಸುವ ಸಮಯ ಬಂದಿದೆ ಎಂದು ಹೇಳಿದರು. ಇದರ ಫಲವೇ ಸೋನಿಯಾ ಅವರು ತಮ್ಮ ನಿಷ್ಠರಲ್ಲಿ ಒಬ್ಬರಾದ ಆಸ್ಕರ ಫರ್ನಾಂಡಿಸ್ ಅವರನ್ನ ಬೆಂಗಳೂರಿಗೆ ತತ್‌ಕ್ಷಣ ಕಳಿಸಿ ಕೃಷ್ಣ, ಖರ್ಗೆ, ಪಾಟೀಲರನ್ನ ಕಂಡು ದೆಹಲಿಯ ಹೊಸ ನಿರ್ಧಾರ ತಿಳಿಸಿದರು. ಪಟೇಲರ ಬಣ ಹೊರ ಹೋಗಿರುವುದರಿಂದ ಇನ್ನೊಂದು ಬಣಕ್ಕೆ ಕಾಂಗ್ರೆಸ್ ಬೆಂಬಲ ನೀಡಲೇ ಬೇಕು. ಜಿಲ್ಲೆಗಳಲ್ಲಿ ಇದರ ಪರಿಣಾಮ ಎಷ್ಟೇ ಆಗಲೀ, ಏನೇ ಆಗಲಿ, ಇದನ್ನು ವಿರೋಧಿಸುವಂತಿಲ್ಲ, ಇದು ಹೈಕಮಾಂಡಿನ ಆದೇಶ ಎಂದು ಅಸಹಾಯಕತೆ ತೋಡಿಕೊಂಡರು. ತಕ್ಷಣವೇ ಕೃಷ್ಣ, ಖರ್ಗೆ, ಎಚ್.ಕೆ. ಪಾಟೀಲರು ದೆಹಲಿಗೆ ದೌಡಾಯಿಸಿದರು.


ಹೀಗಾಗಿ ನಮ್ಮ ರಾಜ್ಯದಲ್ಲಿ ಈಗ ಕಾಂಗ್ರೆಸ್ - ಬಿಜೇಪಿಯೊಂದಿಗೆ ನೇರ ಪೈಪೋಟಿಯ ಪರಿಸ್ಥಿತಿ ಬಂದಿದೆ. ಮಿಕ್ಕ ಎಲ್ಲ ಪಕ್ಷಗಳೂ, ಅದಲ್ಲಿರುವ ಒಳ ಬಣಗಳೆಲ್ಲವೂ ಈ ಎರಡು ಮುಖ್ಯ ಪಕ್ಷಗಳ ಪರ ಅಥವಾ ವಿರೋಧ ಸ್ಥಾನದಲ್ಲಿವೆ.

ಒಟ್ಟಿನಲ್ಲಿ ಕಾರ್ಗಿಲ್ ಸಹಾಯದಿಂದ ಬಿಜೆಪಿ ಲೋಕಸಭೆ ಚುನಾವಣೆ ಗೆಲ್ಲಬಹುದು. ಆದರೆ ಅದರ ಕಾವು ರಾಜ್ಯಕ್ಕೆ ತಟ್ಟದಿರುವುದರಿಂದ ಕರ್ನಾಟಕದಲ್ಲಿ ಆ ಬೆಂಬಲವಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಒಂದು ಹೆಜ್ಜೆ ಮುಂದಿದೆ - ಪಕ್ಷದಲ್ಲಿ ಅಸಹಾಯಕತೆ, ಕೋಪ, ರೋಷಗಳಿದ್ದರೂ.

ಕೊನೆ ಗುಟುಕು

ದೇವೇಗೌಡರು ಮಾಡಬೇಕು ಅಂದುಕೊಂಡಿದ್ದು ಪಟೇಲರು ಮಾಡಿ ಮುಗಿಸಿದ್ದಾರೆ. ಬಂಡಿ ಉರುಳಿಸಿ, ಅಲ್ಲಿದ್ದವರನ್ನು ಕೆಡವಿ, ತಾವು ಬಂಡಿ ಕೊಂಡಯ್ಯಬೇಕು ಅಂದುಕೊಂಡಿದ್ದರು. ಪಟೇಲರು ಚಕ್ರ ಕಿತ್ತು ಹಾಕಿದರು. ಬಾವುಟ ತಮ್ಮದಾಗಿಸಿಕೊಂಡರು. ಅಷ್ಟೇ ಏಕೆ ಜನತಾ ದಳದಿಂದಲೇ ದೇವೇಗೌಡರನ್ನು ಹೊರಗೆ ಹಾಕಿಸಿ ಸೇಡು ತೀರಿಸಿಕೊಂಡರು. ಹೆಗಡೆ ಉಚ್ಚಾಟನೆ, ಇಷ್ಟು ದಿನ ಗೌಡರು ನೀಡಿದ ಕಿರುಕುಳಕ್ಕೆ ಸರಿಯಾಗಿಯೇ ಮುಯ್ಯಿ ತೀರಿಸಿಕೊಂಡಾಯಿತು. ಆನೇನೇ ಹೋದ ಮೇಲೆ ಅದರ ಬಾಲಕ್ಕೆ ಗುದ್ದಾಡುತ್ತಿದ್ದಂತೆ ದೇವೇಗೌಡರು ಜನತಾದಳದ ಕಚೇರಿ ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದಾರೆ.

ಪ್ರಧಾನಿ ಪಟ್ಟದಿಂದ ಕೆಳಗಿಳಿಯುವ ಮುನ್ನ 'ನಾನು ಧೂಳಿನಿಂದ ಎದ್ದು ಬರುತ್ತೇನೆ' ಎಂದು ಗುಡುಗಿದ್ದವರು ಇಂದು 'ವಂಚಿಸಿದವರನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಗುರುಗುಡುತ್ತಾ ಇದ್ದಾರೆ. ಅವರು ಧೂಳಿನಿಂದ ಎದ್ದು ಬರುವುದು ಇರಲಿ, ಅದೇ ಧೂಳಲ್ಲಿಯೇ ಇನ್ನೂ ಹೊರಳಾಡುತ್ತಿದ್ದಾರೆ. ಇನ್ನವರು 'ಸುಮ್ಮ'ನೆ ಬಿಡುವುದಿಲ್ಲ, ಎಂದಿರುವ ಮಾತು ಕೂಡ ಸಧ್ಯಕ್ಕೆ ದಾಖಲೆಯ ಮಾತಾಗಿ ಮಾತ್ರ ಉಳಿಯುತ್ತದೆ. ದಳದ ಒಡಕಿನಿಂದ ಗೌಡರಿಗಿಂತ ಕಂಗೆಟ್ಟಿರುವವರು ಯಡಿಯೂರಪ್ಪ ಮುಖ್ಯಮಂತ್ರಿ ಕನಸು ಕಾಣುತ್ತಾ ಹೊಸ ಅಂಗಿ ಹೊಲಿಸಿಕೊಂಡಿದ್ದಅವರಿಗೆ, ಈಗಾಗಲೇ ಯಾರೋ ಅಂಗಿ ಲಪಟಾಯಿಸಿ ಬಟ್ಟಿದ್ದಾರೆ ಅನ್ನಿಸತೊಡಗಿದೆ. ■ ರಾಮು



ಕನ್ನಡ ಡೈಜೆಸ್ಟ್ ರೂಪಿಸಿದ

ಪಾವೆಂ ಸಾನ್ನಿಧ್ಯದಲ್ಲಿ

1967ರ ಮಧ್ಯದಲ್ಲೇ ಇರಬೇಕು, 'ಕಸ್ತೂರಿ'ಯ ಕೆ.ಪಿ. ಭಟ್ಟರು ಆಗತಾನೆ ಪ್ರಾರಂಭವಾಗಲಿದ್ದ ಕನ್ನಡಪ್ರಭವನ್ನು ಸೇರಲಿರುವ ಸುದ್ದಿ ಕಿವಿಗೆ ಬಿತ್ತು. ಮನೆತನದ ಪರಿಸ್ಥಿತಿಯಿಂದಾಗಿ ಹುಬ್ಬಳ್ಳಿಯಲ್ಲೆ ನನಗೊಂದು ನೌಕರಿ ಬೇಕಿತ್ತು. ಸರಿ ನೋಡುವಾ ಎಂದು ಅರ್ಜಿ ಗುಜರಾಯಿಸಿದೆ. ಇಂಟರ್‌ವ್ಯೂಗೆ ಹಾಜರಾಗಲು ಒಂದು ವಾರದಲ್ಲೆ ಪಾವೆಂ ಅವರಿಂದ ಬುಲಾವಣೆ ಬಂತು.

'ಈಗ ಏನು ಮಾಡುತ್ತಿದ್ದೀರಿ?' ಆಚಾರ್ಯರ ಮೊದಲ ಪ್ರಶ್ನೆ.

'ಮೊದಲು ಪತ್ರಾವಳಿ ಕಂಪನಿಯಲ್ಲಿದ್ದುಕೊಂಡು ಪುಣೆಯ ಹತ್ತಿರ ಲೋಣಿ ಕಾಳಭೋರದ ಸಮೀಪ ರೈಲ್ವೆ ಬ್ರಿಡ್ಜುಗಳನ್ನು ಕಟ್ಟಿಸುತ್ತಾ ಇದ್ದೆ. ಅಲ್ಲಿನ ಕೆಲಸ ಮುಗಿದಿದ್ದರಿಂದ ಭರೂಚಾ ಆ್ಯಂಡ್ ಕಂಪನಿಯಲ್ಲೀಗ ಚೀನೀಯರು ಕೆಡವಿದ್ದ ಬ್ರಿಡ್ಜುಗಳನ್ನು ಕಟ್ಟಿಸುತ್ತಾ ಇದ್ದೇನೆ' ಅಂದೆ.

'ಅಲ್ಲಿ ಏನಂತ ಕೆಲಸ?'

'ಎಕ್ಸಿಕ್ಯೂಟಿವ್ ಇಂಜಿನಿಯರನೆಂದು'

'ಅಲ್ಲಿ ಎಷ್ಟು ಕೊಡುತ್ತಾರೆ?'

ಹೇಳಿದೆ.

'ಅಷ್ಟು ಸಂಬಳವನ್ನು ನನಗೇ ಈ ಮ್ಯಾನೇಜ್‌ಮೆಂಟಿನವರು ಕೊಡುವುದಿಲ್ಲ. ನಿಮ್ಮನ್ನು ಇಲ್ಲಿ ನೌಕರಿಗೆ ತೆಗೆದುಕೊಂಡರೆ ಅದರ ಕಾಲುಭಾಗದಷ್ಟು ಮಾತ್ರ ಕೊಡಬಹುದು. ಅಂದಹಾಗೆ ನೀವು ಓದಿದ ಪುಸ್ತಕಗಳ ಪೈಕಿ ಕೆಲವನ್ನು ಹೇಳುತ್ತೀರಾ?' ಎಂದು ಕೇಳಿದರು ಪಾವೆಂ ಆಚಾರ್ಯರು.

ಕೆಲವು ಪುಸ್ತಕಗಳ ಹೆಸರುಗಳನ್ನು ಹೇಳಿದೆ.

'ಅಯ್ಯಯ್ಯೋ ಮರಾಯ್ರೆ ಇಂಥಾ ಪುಸ್ತಕಗಳನ್ನು ಓದುವ ನೀವು ಇಂಜಿನಿಯರಿಂಗ್ ಕಾಲೇಜಿಗಾದರೂ ಏಕೆ ಹೋದಿರೋ!' ಎಂದರು ಆಚಾರ್ಯರು.

'ಆರ್ಟ್ಸ್ ಕಾಲೇಜಿಗೆ ಹೋದರೆ ನೌಕರಿ ಸಿಗುತ್ತಿರಲಿಲ್ಲ. ಮೇಲಾಗಿ ಓದಲು ಸ್ಕಾಲರ್‌ಶಿಪ್ಪೂ ಸಿಗುತ್ತಿರಲಿಲ್ಲ. ಸ್ಕಾಲರ್‌ಷಿಪ್ ಫ್ರೀಷಿಪ್‌ಗಳಿರದೆ ಓದುವುದು ನನಗೆ ಸಾಧ್ಯವಿರಲಿಲ್ಲ. ಹೀಗಾಗಿ ಇಂಜಿನಿಯರಿಂಗ್ ಕಾಲೇಜಿಗೆ ಹೋಗದೆ ನನಗೆ ಬೇರೆ ದಾರಿಯೆ ಇರಲಿಲ್ಲ' ಅಂದೆ.

''ಹಿಂದೆ 'ಆತ ಸಮುದ್ರದ ನೀರಿನಿಂದ ವಿಮಾನ ಸೃಷ್ಟಿಸಿದ' ಲೇಖನವನ್ನು ಬರೆದವರು ನೀವೇ ಅಲ್ಲವೆ?'' ಎಂದು ಕೇಳಿದರು ಪಾವೆಂ.

'ಹೌದು. ಆದರೆ ಅದು ಪ್ರಕಟವಾಗಿಲ್ಲ'

'ತೀರಾ ಕ್ಲಿಷ್ಟವಾಗಿದ್ದರಿಂದ ಪ್ರಕಟಿಸಲಿಲ್ಲ. ಜನಸಾಮಾನ್ಯರಿಗೆ ತಿಳಿಯುವ ಹಾಗೆ ಬರೆಯಬೇಕು. ನಮ್ಮಲ್ಲಿ ವಿಜ್ಞಾನ ವಿಷಯಗಳ ಮೇಲೆ ಬರೆಯುವವರು ಇಲ್ಲ. ಬರುತ್ತೀರಾ?' ಎಂದು ಕೇಳಿದರು ಆಚಾರ್ಯರು.

ಒಪ್ಪಿದೆ. ಮರುದಿನವೆ ಅಪಾಯಿಂಟ್‌ಮೆಂಟ್ ಆರ್ಡರ್ ನಮ್ಮ ಮನೆಗೆ ಬಂತು. ಪಾವೆಂ ಅವರ ಒಡನಾಟ ಶುರುವಾಗಿದ್ದು ಹೀಗೆ.

ಪಾವೆಂ, ಜಿ.ಜಿ. ಹೆಗಡೆ ಹಾಗೂ ನಾನು ಹೀಗೆ ಆಗ 'ಕಸ್ತೂರಿ'ಯಲ್ಲಿ ನಾವು ಮೂರು ಜನ. ಮುಂದೆ ಕೆಲ ದಿನಗಳಲ್ಲಿ ಈಗ ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶದಲ್ಲಿರುವ ಜಿ.ಎನ್.ಭಟ್ಟರು ನಮ್ಮೊಂದಿಗೆ ಸೇರಿಕೊಂಡು ಸುಮಾರು ಎರಡು ವರ್ಷ ಕಾಲ ಕೆಲಸ ನಿರ್ವಹಿಸಿದರು. ಜಿ.ಜಿ. ಹೆಗಡೆ ನನಗೆ ಅಣ್ಣನಂತಿದ್ದರೆ ಪಾವೆಂ ತಂದೆಯಂತೆ. ಆದರೆ ಅವರಿಬ್ಬರೂ ನನ್ನನ್ನು ಸ್ನೇಹಿತನೆಂದೇ ಭಾವಿಸಿದರು.

ನಿವೃತ್ತರಾಗುವ ಸಮಯ ಹತ್ತಿರ ಬಂದಾಗಲೊಂದು ದಿನ ಜಿ.ಜಿ. ಹೆಗಡೆಯವರಿಗೆ ಆಫೀಸಿನಲ್ಲೆ ಪಾರ್ಶ್ವಾಘಾತವಾಯಿತು. ಆಗ ಪಾವೆಂ ಅವರು ಒಳಗೊಂಡಂತೆ ನಾವೆಲ್ಲ ಸೇರಿ ಅವರನ್ನು ಆಸ್ಪತ್ರೆಗೆ ಸೇರಿಸಿದೆವು. ಗುಣಮುಖರಾಗಿ ಬಂದರೂ ಹೆಗಡೆಯವರಿಗೆ ಮೊದಲಿನ ಹಾಗೆ ನಡೆಯಲು ಬರುತ್ತಿರಲಿಲ್ಲ. ಆಧಾರಕ್ಕಾಗಿ ಕೈಯಲ್ಲಿ ಒಂದು ಕೊಡೆಯನ್ನು ಹಿಡಿಯಬೇಕಿತ್ತು. ಸಾಯಂಕಾಲ ಆರೂವರೆಗೆ ಆಫೀಸು ಮುಗಿದ ನಂತರ ನಾನು ಜಿ.ಜಿ. ಹೆಗಡೆಯವರನ್ನು ಕರೆದುಕೊಂಡು ಹೋಗಿ ಬಸ್ಸಿನಲ್ಲಿ ಕೂಡಿಸುತ್ತಿದ್ದೆ. ಆಚಾರ್ಯರು ಆಫೀಸಿನಲ್ಲೆ ಕೆಲಸ ಮಾಡುತ್ತಾ ಕುಳಿತಿರುತ್ತಿದ್ದರು.

ಒಂದು ದಿನ ಸಾಯಂಕಾಲ ಹೆಗಡೆಯವರನ್ನು ಕರೆದುಕೊಂಡು ಹೋದಾಗ ಅವರು ಆಯತಪ್ಪಿ ಬಿದ್ದುಬಿಟ್ಟರು. ಎಷ್ಟು ಪ್ರಯತ್ನಿಸಿದರೂ ಅವರು ಬೀಳುವುದನ್ನು ತಡೆಯಲು ನನಗಾಗಲಿಲ್ಲ. ಇದನ್ನು ತಿಳಿದ ಆಚಾರ್ಯರು, 'ಇನ್ನು ಮುಂದೆ ನೀವೊಬ್ಬರೇ ಅವರನ್ನು ಕರೆದುಕೊಂಡು ಹೋಗುವುದು ಬೇಡ, ನಿಮ್ಮೊಂದಿಗೆ ನಾನು ಬರುತ್ತೇನೆ. ಆಫೀಸಿನಲ್ಲಿ ಕೆಲಸ ಮಾಡುವ ಬದಲು ಮನೆಯಲ್ಲೇ ಮಾಡುತ್ತೇನೆ' ಎಂದರು. ಜಿ.ಜಿ. ಹೆಗಡೆ ನಿವೃತ್ತರಾಗುವವರೆಗೂ ಪಾವೆಂ ಅವರನ್ನು ಕೈ ಹಿಡಿದು ಕರೆದುಕೊಂಡು ಹೋಗುತ್ತಿದ್ದರು.

ಸಂಬಳ ಸವಲತ್ತುಗಳ ವಿಷಯದಲ್ಲಿ ಅಂದಿನ ಆಡಳಿತವರ್ಗ ಜಿ.ಜಿ. ಹೆಗಡೆಯವರನ್ನು ಕಡೆಗಣಿಸಿ ಕರ್ಮವೀರದ ಕಿರಿಯರೊಬ್ಬರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಿದಾಗ ಹೆಗಡೆಯವರಿಗೂ ಅವುಗಳನ್ನು ನೀಡಬೇಕೆಂದು ಪಟ್ಟುಹಿಡಿದರು ಪಾವೆಂ. ಆದರೆ ಆಡಳಿತವರ್ಗ ಅವರ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಹಾಗಾದರೆ ಅವರಿಗಾದ ಅನ್ಯಾಯವನ್ನು ಸರಿಪಡಿಸುವವರೆಗೆ ನನಗೆ ನಿಮ್ಮ ಸಂಬಳವೂ ಬೇಡ ಎಂದ ಆಚಾರ್ಯರು ಮುಂದೆ ಎರಡು ತಿಂಗಳ ಕಾಲ ಹೆಗಡೆಯವರಿಗಾದ ಅನ್ಯಾಯದ ಪರಿಮಾರ್ಜನೆಯಾಗುವವರೆಗೂ ಸಂಬಳ ಸ್ವೀಕರಿಸಲಿಲ್ಲ. ಮನೆತನದ ಜವಾಬ್ದಾರಿ ಹೊತ್ತ ಪಾವೆಂ ಆ ಎರಡು ತಿಂಗಳ ಕಾಲ ಪಟ್ಟ ಬವಣೆ ಆ ದೇವರಿಗೆ ಗೊತ್ತು. ಆದರೆ ತಮಗಾದ ಕಷ್ಟವನ್ನು ಕುರಿತು ಮಾನಧನರಾದ ಆಚಾರ್ಯರು ಒಂದು ಮಾತನ್ನೂ ಆಡಲಿಲ್ಲ.

ಜಿ.ಜಿ. ಹೆಗಡೆ ಒಂದು ರೀತಿಯಲ್ಲಿ ಬರೆಯುವ ಯಂತ್ರದಂತೆಯೇ ಇದ್ದರು. ಒಂದೇ ದಿನದಲ್ಲಿ ಅವರು ನಾಲ್ಕು ನಾಲ್ಕು ಲೇಖನಗಳನ್ನು ರೂಪಾಂತರಿಸಿದ್ದೂ ಇದೆ. ಮೊಹರೆಯವರು ಪಾವೆಂ ಅವರಿಗೆ ಕಸ್ತೂರಿಯ ಹೊಣೆಯನ್ನು ವಹಿಸಿಕೊಡುವುದಾಗಿ ಹೇಳಿದಾಗ, 'ಜಿ.ಜಿ. ಹೆಗಡೆಯವರನ್ನು ಕೊಟ್ಟರೆ ಮಾತ್ರ ಕಸ್ತೂರಿಯ ಹೊಣೆ ಹೊರುತ್ತೇನೆ' ಎಂದು ಹೇಳಿದ್ದರಂತೆ ಆಚಾರ್ಯರು. ಆದರೆ ಕಪ್ಪೆಚಿಪ್ಪಿನ ಸ್ವಭಾವದ ಹೆಗಡೆಯವರ ಹೆಸರು ಮುಂದೆ ಬರಲಿಲ್ಲ. ಆ ಕೊರಗು ಆಚಾರ್ಯರಿಗೆ ಕೊನೆಯವರೆಗೂ ಇತ್ತು.

ಲೇಖನಗಳನ್ನು ಬರೆಯುವಾಗ ಜಿ.ಜಿ. ಹೆಗಡೆಯವರು ಉಪಯೋಗಿಸುತ್ತಿದ್ದ ಅನೇಕ ಹೆಸರುಗಳ ಪೈಕಿ ಅವರ ಹೆಸರಾದ ಗಂಗಾಧರ ಕೂಡಾ ಒಂದು. ಅವರು ನಿವೃತ್ತರಾದ ನಂತರ ಹೆಗಡೆಯವರ ಹೆಸರಾದರೂ ಬೆಳೆಯಲಿ ಎಂದು ನಾನು 'ಲಾಚ್‌ನೆಸ್ ರಾಕ್ಷಸನ ಶೋಧನದಲ್ಲಿ' ಎಂಬ ಲೇಖನವನ್ನು ಅವರ

ಹೆಸರಿನಲ್ಲಿ ಬರೆದೆ. ಕೊನೆಯ ಪ್ರೂಫು ಆಚಾರ್ಯರ ಕೈಲಿ ಬಂದಾಗ, ''ಯಾರ್ರೀ ಇವರು ಗಂಗಾಧರಭಟ್ಟರು?'' ಎಂದು ಕೇಳಿದರು. ನಾನು ವಿವರಿಸಿದೆ. ಸರಿ ಆ ಕೆಲಸವನ್ನು ಇನ್ನುಮುಂದೆ ನಾನೇ ಮಾಡುತ್ತೇನೆ. ಬೇಕಿದ್ದರೆ ನಾನು ನಿವೃತ್ತನಾದ ಮೇಲೆ ಅದನ್ನು ಮುಂದುವರೆಸಿಕೊಂಡು ಹೋಗಿ ಎಂದರು ಆಚಾರ್ಯರು. ತಾವು ಹೇಳಿದ ಹಾಗೆಯೇ ನಡೆದುಕೊಂಡರು.

ಪಾವೆಂ ಅವರು ಆಗಾಗ ಹಳೆಗಾಲದ ನೆನಪುಗಳನ್ನು ಮೆಲುಕು ಹಾಕುತ್ತಾ ಇರುತ್ತಿದ್ದರು. ಆರೋ ಏಳೋ ವರುಷಗಳಿರುವಾಗ ಪುಸ್ತಕವನ್ನು ಕೊಳ್ಳದ್ದಕ್ಕಾಗಿ ಅವರನ್ನು ಶಾಲೆಯಿಂದ ಹೊರಹಾಕಲಾಯಿತಂತೆ. ತಂದೆಯನ್ನು ಆಗಲೆ ಕಳೆದುಕೊಂಡ ಆಚಾರ್ಯರಿಗೆ ಅಂದಿನ ಪರಿಸ್ಥಿತಿಯಲ್ಲಿ ಪುಸ್ತಕಗಳನ್ನು ಕೊಡಿಸೆಂದು ಮನೆಯಲ್ಲಿ ಕೇಳುವ ಧೈರ್ಯವೂ ಇರಲಿಲ್ಲ. ಬಡತನವನ್ನು ನೆನೆದು ಅಳುತ್ತಾ ಮನೆಗೆ ಬರುತ್ತಿರುವಾಗ ದಾರಿಯಲ್ಲಿ ಹೊರಟ ವಿಧವೆಯೊಬ್ಬಳು ಅವರನ್ನು ತಡೆದು, ಕಾರಣ ಕೇಳಿ, ಮರುಕಪಟ್ಟು ಎಂಟು ಆಣೆಯಷ್ಟು ವೆಚ್ಚಮಾಡಿ ಅವರ ಅಗತ್ಯವನ್ನು ಪೂರೈಸಿದಳಂತೆ. ಸ್ವಾಭಾವಿಕವಾಗಿಯೆ ಅವಳ ಹೆಸರೇನೆಂಬುದು ಪಾವೆಂ ಅವರಿಗೆ ಗೊತ್ತಿರಲಿಲ್ಲ. ತಮಗೆ ಜೀವದಾನ ಮಾಡಿದ ಅವಳನ್ನವರು ಯಾವಾಗಲೂ ನೆನೆಸಿಕೊಳ್ಳುತ್ತಿದ್ದರು.

ಪಾವೆಂ ನಿವೃತ್ತರಾದ ಎಷ್ಟೋ ವರ್ಷಗಳ ನಂತರ ಒಮ್ಮೆ ನಾನೂ ಅವರೂ ಹುಬ್ಬಳ್ಳಿಯ ಟ್ರಾಫಿಕ್ ಪಾಯಿಂಟ್ ಬಳಿ ಹೋಗುತ್ತಿದ್ದಾಗ ವಯಸ್ಸಾದ ವಿಧವೆಯೊಬ್ಬಳು ಅಡ್ಡಗಟ್ಟಿ 'ಹಸಿವೆಯಾಗಿದೆ, ಏನಾದರೂ ತಿನ್ನಲು ಕೊಡಿಸುತ್ತೀರಾ?' ಎಂದು ಕೇಳಿದಳು. ಚಿಕ್ಕವರಿದ್ದಾಗ ತಮಗೆ ಸಹಾಯ ಮಾಡಿದ ಆ ವಿಧವೆಯನ್ನೇ ಅವಳಲ್ಲಿ ಕಂಡಿರಬೇಕು ಆಚಾರ್ಯರು. ಹತ್ತಿರದ ತಿಂಡಿಯ ಅಂಗಡಿಯಲ್ಲಿ ಅವಳಿಗೆ ಪುಷ್ಕಳವಾಗಿ ತಿನಿಸುಗಳನ್ನು ಕೊಡಿಸಿದ್ದಲ್ಲದೆ ತಮ್ಮಲ್ಲಿದ್ದ ಎಲ್ಲ ಹಣವನ್ನೂ ಅವಳಿಗೆ ಕೊಟ್ಟರು. ಅನಂತರ ನನ್ನೆಡೆ ತಿರುಗಿ, ''ನೀವಿನ್ನು ಹೊರಡಿ ನನಗೆ ಸ್ವಲ್ಪ ಕೆಲಸ ಇದೆ. ಅದನ್ನು ಮುಗಿಸಿಕೊಂಡು ಮನೆಗೆ ಹೋಗುತ್ತೇನೆ'' ಅಂದರು.

ಮನೆಯೋ ಐದಾರು ಕಿಲೋಮೀಟರ್ ದೂರ. ಎಲ್ಲ ದುಡ್ಡನ್ನೂ ಅವಳಿಗೆ ಕೊಟ್ಟಿದ್ದಾರೆ. ಬಸ್ಸಿನಲ್ಲಿ ಕೊಡಲಿಕ್ಕೂ ಹಣವಿಲ್ಲ. ಇಂಥದರಲ್ಲಿ ಹೇಗೆ ಹೋಗುತ್ತಾರೆ ಇವರು? ಅಂದುಕೊಂಡು ಅವರಿಗೆ ಗೊತ್ತಾಗದ ಹಾಗೆ ಹಿಂಬಾಲಿಸಿದೆ. ಅಂಥ ಇಳಿವಯಸ್ಸಲ್ಲೂ ನಡೆದುಕೊಂಡೇ ಮನೆಗೆ ಹೊರಟಿದ್ದರು. ನಾನು ಒಂದು ಆಟೋ ಗೊತ್ತು ಮಾಡಿ, ಚಾಲಕನಿಗೆ ಹಣಕೊಟ್ಟು ಅವರನ್ನು ಹತ್ತಿಸಿದೆ. ಮರುದಿನವೇ ಪಾವೆಂ ಆಫೀಸಿಗೆ ಬಂದು ಇಪ್ಪತ್ತು ರೂಪಾಯಿಗಳನ್ನು ಕೊಟ್ಟರು. ನಾನು ಎಷ್ಟು ನಿರಾಕರಿಸಿದರೂ ಕೇಳಲಿಲ್ಲ. ಅಂದು ಆಟೋದವನಿಗೆ ನಾನು ಕೊಟ್ಟಿದ್ದು ಹದಿನೈದು ರೂಪಾಯಿಗಳನ್ನು. ಹೀಗಾಗಿ ನಾನು ಆಚಾರ್ಯರಿಗೆ ಐದು ರೂಪಾಯಿಗಳನ್ನು ಕೊಡಬೇಕಿತ್ತು. ಆದರೆ ಅವರು ತೆಗೆದುಕೊಳ್ಳಲಿಲ್ಲ. ಹದಿನೈದು ರೂಪಾಯಿಗಳಿಗೆ ಒಂದು ದಿನಕ್ಕೆ ಐದು ರೂಪಾಯಿಗಳಷ್ಟು ಬಡ್ಡಿಯನ್ನವರು ನನಗೆ ಕೊಟ್ಟಿದ್ದರು.

ಉಳಿದವರ ಹಾಗೆ ತಮಗೆ ಕಾಲೇಜಿನಲ್ಲಿ ಕಲಿಯಲಾಗಲಿಲ್ಲವೆಂಬ ಕೊರಗು ಪಾವೆಂ ಅವರಿಗೆ ಇದ್ದೇ ಇತ್ತು. ಮೆಟ್ರಿಕ್‌ನಲ್ಲಿ ಬಹಳ ಅಂಕಗಳು ಬಂದಿದ್ದನ್ನು ನೋಡಿದ ಫರ್ನಾಂಡೀಸ್ ಎಂಬ ಉಪಾಧ್ಯಾಯರು - ಬಹುಶಃ ಅವರು ಆಸ್ಕರ್ ಫರ್ನಾಂಡೀಸರ ತಂದೆಯವರು ಎಂದು ಕಾಣುತ್ತದೆ - ಸೇಂಟ್ ಅಲೋಷಿಯಸ್ ಕಾಲೇಜಿಗೆ ಸೇರಿಸಿ ಫ್ರೀಷಿಪ್ ಕೊಡಿಸುವುದಾಗಿ ಹೇಳಿದ್ದರಂತೆ. ಹಾಗಾದರೆ ಊಟಕ್ಕೇನು ಮಾಡುವುದು? ಎಂದು ವಾರಾನ್ನಕ್ಕೆ ಪ್ರಯತ್ನಿಸಿದಾಗ ಏಳು ಮನೆಗಳೂ ದೊರೆಯಲಿಲ್ಲವಾಗಿ ಅವರಿಗೆ ಕಾಲೇಜಿಗೆ ಹೋಗಲು ಸಾಧ್ಯವಾಗಲಿಲ್ಲವಂತೆ.

ಕೆಲಸವನ್ನು ಮಾಡಿದರೆ ಸರಿಯಾಗಿಯೇ ಮಾಡಬೇಕು ಎಂಬ ಬಗ್ಗೆ ಅವರೊಂದು ಅನುಭವ ಹೇಳುತ್ತಿದ್ದರು. ಕಷ್ಟದ ದಿನಗಳಲ್ಲಿ ಅವರಿಗೆ ಉಡುಪಿಯ ಬಟ್ಟೆಯ ಅಂಗಡಿಯೊಂದರಲ್ಲಿ ಕೆಲಸ ಮಾಡುವ ಪ್ರಸಂಗ ಬಂದಿತ್ತು. ಅಂಗಡಿಯ ಕಾರಕೂನರೂ ಅವರೆ, ಸೇಲ್ಸ್‌ಮನ್ನರೂ ಅವರೆ, ಅಷ್ಟೇ ಅಲ್ಲ, ಸೇವಕರೂ ಅವರೆ. ತಾವು ಕುಳಿತುಕೊಳ್ಳುವ ಮೇಜನ್ನು ಸ್ವಚ್ಛಗೊಳಿಸಿ ಕೆಲಸ ಪ್ರಾರಂಭಿಸಬೇಕು. ಬಟ್ಟೆಯಿಂದ ಹೊಡೆದು ಮೇಜನ್ನು ಸ್ವಚ್ಛಗೊಳಿಸುವಾಗ ಒಂದು ದಿನ ಅಂಗಡಿಯ ಮಾಲಿಕ ಹಾಗೆ ಮಾಡಿದರೆ ಮೇಲೆಯೇ ಏರಿದ ದೂಳಿನ ಕಣಗಳು ಮತ್ತೆ ಬಂದು ಮೇಜಿನ ಮೇಲೆಯೇ ಕುಳಿತುಕೊಳ್ಳುತ್ತವೆ. ಅದರ ಬದಲು ಬಟ್ಟೆಯಿಂದ ಮೇಲ್ಭಾಗವನ್ನು ಒರೆಸಿದರೆ ಮೇಜು ಸ್ವಚ್ಛವಾಗುತ್ತದೆ ಎಂದು ಹೇಳಿದನಂತೆ. ಅಂದು ಕಲಿತ ಪಾಠವನ್ನು ಆಚಾರ್ಯರು ಎಂದೂ ಮರೆಯಲಿಲ್ಲ. ಆ ಒಪ್ಪ ಓರಣವನ್ನು ತಮ್ಮ ಬರವಣಿಗೆಯಲ್ಲಿ ಮುಂದುವರೆಸಿಕೊಂಡು ಬಂದರು.

ಮೊದಲಿನಿಂದಲೂ ಅವರಿಗೆ ವಿಪರೀತವಾಗಿ ಓದುವ ಗೀಳು. ರವೀಂದ್ರನಾಥ ಠಾಕೂರರಿಗೆ ನೋಬೆಲ್ ಪಾರಿತೋಷಕ ಬಂದಾಗ ಅದರಿಂದ ಪ್ರೋತ್ಸಾಹಿತರಾದ ಅವರು ಸ್ವಾಧ್ಯಾಯದಿಂದಲೆ ಬಂಗಾಲಿಯನ್ನು ಕಲಿತರು.

ದಶಕಗಳ ಹಿಂದೆ ಕೆಲ ಕಾಲ ಅವರಿಗೆ ಮಣಿಪಾಲದ ಪ್ರೆಸ್ಸಿನಲ್ಲಿಯೂ ಕೆಲಸ ಮಾಡುವ ಸಂದರ್ಭ ಬಂದಿತ್ತು. ಅಂದು ಆ ಪ್ರೆಸ್ಸು ನಡೆಯುತ್ತಿದ್ದ ರೀತಿಯನ್ನು ಅವರು ತಮ್ಮ ಇಳಿಗಾಲದಲ್ಲಿಯೂ ನೆನೆಸಿಕೊಳ್ಳುತ್ತಿದ್ದರು. ಜಪಾನೀ ಯಂತ್ರಗಳು ನಯನಾಜೂಕಾಗಿದ್ದೂ ತಾಳುವಂಥವಲ್ಲ. ಅಂತಹುದರಲ್ಲಿ ಜಪಾನೀ ಯಂತ್ರವೊಂದನ್ನು ಆ ಪ್ರೆಸ್ಸಿನವರು ಅಹರ್ನಿಶಿಯಾಗಿ ಹತ್ತು ವರ್ಷ ನಡೆಸಿದ್ದನ್ನು ಅವರು ಹೇಳುತ್ತಿದ್ದರು. ಪೈ ಕುಟುಂಬದ ಕಾರ್ಯದಕ್ಷತೆಯ ಬಗೆಗೆ ಅವರಿಗೆ ತುಂಬಾ ಅಭಿಮಾನ.

ಕೆಲ ಕಾಲ ಪಾವೆಂ 'ಅಂತರಂಗ'ದಲ್ಲಿಯೂ ಕೆಲಸ ಮಾಡಿದ್ದರು. ಕಾರಣಾಂತರದಿಂದ ಅದು ನಿಂತುಹೋದಾಗ great depression ಎಂದು ಅರ್ಥಶಾಸ್ತ್ರಜ್ಞರು ಕರೆಯುವ ಆ ದಿನಗಳಲ್ಲಿ ಅವರು ಉದ್ಯೋಗವನ್ನರಸಿಕೊಂಡು ಮದ್ರಾಸಿಗೆ ಹೋಗಿ ದಾಸ್‌ಪ್ರಕಾಶ ಹೋಟೆಲನ್ನು ಸೇರಿದರು. ಅಲ್ಲಿ ಅವರಿಗೆ ಬಿಲ್ ರೈಟರನ ಕೆಲಸ. ಎಲ್ಲಿಯ ಸಂಪಾದಕನ ಹುದ್ದೆ! ಎಲ್ಲಿಯ ಬಿಲ್ ರೈಟರ ಕೆಲಸ! ಎರಡನೇ ಮಹಾಯುದ್ಧದ ಸಮಯದಲ್ಲಿ ಜಪಾನೀಯರಿಂದ ಮದ್ರಾಸಿನ ಮೇಲೆ ಬಾಂಬುಗಳು ಬಿದ್ದಾಗ ಎಲ್ಲೆಲ್ಲೂ ಹಾಹಾಕಾರ. ಆ ಸಮಯದಲ್ಲಿ ಅವರ ನೆಂಟರೇ ಆದ ಧಾರವಾಡ ರೆಸ್ಟೋರೆಂಟಿನ ಕದಿಯೂರ ಬಂಧುಗಳು ಅವರನ್ನು ಧಾರವಾಡಕ್ಕೆ ಕರೆಸಿಕೊಂಡರು.

ಆಗ ಪಾವೆಂ ಅವರಿಗೆ ಸ್ವಾತಂತ್ರ್ಯಯೋಧರೂ ಪತ್ರಕರ್ತರೂ ಆದ ಹೊಸಕೇರಿ ನಾರಾಯಣಾಚಾರ್ಯರ ಪರಿಚಯವಾಯಿತು. ನಾರಾಯಣಾಚಾರ್ಯರಿಗೂ ಮೊಹರೆಯವರಿಗೂ ಸಖ್ಯ ಬಹಳ. ಅವರು ಆಚಾರ್ಯರ ಬಗ್ಗೆ ಪ್ರಸ್ತಾಪಿಸಿದಾಗ ಮೊಹರೆಯವರು ಪಾವೆಂ ಅವರನ್ನು ಸಂಯುಕ್ತ ಕರ್ನಾಟಕದ ಮುದ್ರಣ ವಿಭಾಗದಲ್ಲಿ ಕೆಲಸಕ್ಕೆ ತೆಗೆದುಕೊಂಡರು. ಗುಣಗ್ರಾಹಿಗಳಾದ ಮೊಹರೆಯವರು ಒಂದೇ ತಿಂಗಳಿನಲ್ಲಿ ಪಾವೆಂ ಅವರನ್ನು ಕರ್ಮವೀರದ ಸಂಪಾದಕೀಯ ವಿಭಾಗಕ್ಕೆ ಉಪಸಂಪಾದಕರನ್ನಾಗಿ ವರ್ಗಾಯಿಸಿದರು. ಮುಂದೆ ನಡೆದದ್ದು ಸುಮಾರಾಗಿ ಎಲ್ಲರಿಗೂ ಗೊತ್ತೇ ಇದೆ.

ಪಾವೆಂ ಅವರ ಸಂಪರ್ಕ ನನಗೆ ಕೊನೆಯವರೆಗೂ ಇತ್ತು. ಅವರು ನಿವೃತ್ತರಾದ ನಂತರ ಪ್ರತಿವಾರವೂ ನಾನು ಅವರ ಮನೆಗೆ ಹೋಗುತ್ತಿದ್ದೆ. ಅವರೂ ತಿಂಗಳಿನಲ್ಲಿ ಎರಡು ಮೂರು ಸಲವಾದರೂ ಆಫೀಸಿಗೆ ಬರುತ್ತಿದ್ದರು. ನಾವಿಬ್ಬರೂ ತಂದೆ ಮಕ್ಕಳೆಂದು ಜನ ಭಾವಿಸುವ ಮಟ್ಟಿಗೆ ನಮ್ಮ ಸಂಬಂಧ ಘನಿಷ್ಠವಾಗಿತ್ತು.

ಕೊನೆಗಾಲದಲ್ಲಿ ಅವರ ಆರೋಗ್ಯ ಅಷ್ಟಾಗಿ ಸರಿಯಿರುತ್ತಿರಲಿಲ್ಲ. ಆಗಾಗ ಆಸ್ಪತ್ರೆ ಸೇರಬೇಕಾಗುತ್ತಿತ್ತು. ಆದರೆ ಪ್ರತಿ ಸಲ ಆಸ್ಪತ್ರೆಗೆ ಸೇರಿದಾಗಲೂ ಅವರು ಯಾರ ಬಳಿಯಾದರೂ ಹೇಳಿ ಕಳಿಸುತ್ತಿದ್ದರು. ನಾನು ಭೇಟಿಯಾದಾಗ ಅವರಿಗೆ ಹೆಚ್ಚು ನೆಮ್ಮದಿಯೆನಿಸುತ್ತಿತ್ತು.

ಪಾವೆಂ ತೀರಿಕೊಂಡ ಸುದ್ದಿ ಬಂದ ಕೂಡಲೆ ನಾನು ಅವರ ಮನೆಗೆ ಧಾವಿಸಿದೆ. ಅಂತ್ಯ ಸಂಸ್ಕಾರದಲ್ಲಿ ಪಾಲುಗೊಂಡೆ. ಅವರ ಮಕ್ಕಳೊಂದಿಗೆ ನಾನೂ ಅವರ ಚಿತೆಗೆ ಬೆಂಕಿಯಿಟ್ಟೆ. ಅಲ್ಲಿಗೆ ನನ್ನ ಜೀವನದ ಮಹತ್ವದ ಅಧ್ಯಾಯ ಕೊನೆಗೊಂಡಂತಾಯಿತು.

ಪಾವೆಂ ಯಾರಿಗೂ ಗುರುವಾಗ ಬಯಸಲಿಲ್ಲ. ತಮ್ಮನ್ನು ಎಂದಿಗೂ ದೊಡ್ಡವನೆಂದು ಭಾವಿಸಲಿಲ್ಲ. ಯಾರಾದರೂ ಹಿರಿಯರೆಂದು ನಮಸ್ಕರಿಸಿದಾಗ ಸಂಕೋಚದಿಂದ ಮುದ್ದೆಯಾಗುತ್ತಿದ್ದರು. ಅವರು ನನಗೆಂದೂ ಪಾಠ ಹೇಳಲಿಲ್ಲ. ಆದರೆ ನಾನೇ ಅವರಿಂದ ಸಾಕಷ್ಟು ಪಾಠಗಳನ್ನು ಕಲಿತೆ. ಅಷ್ಟೆ ಅಲ್ಲ ಅವರು ತೀರಿಕೊಂಡ ಇಷ್ಟು ವರ್ಷಗಳ ನಂತರವೂ ಕಲಿಯುತ್ತಲೇ ಇದ್ದೇನೆ.

[ಚಿತ್ರಕೃಪೆ: ಕನ್ನಡ ಸಾಹಿತ್ಯ ಪರಿಷತ್]


■ ಶ್ರೀಕಾಂತ ಮಳಗಿ

‘ಪತ್ರಿಕೆ’ ಹಿಂದಾಗಿ ‘ಲಂಕೇಶ್’ ಮುಂದಾಗಿ

ಲಂಕೇಶ್ ಪತ್ರಿಕೆಯ ಮೊಟ್ಟಮೊದಲ ಸಂಚಿಕೆಯಿಂದಲೇ ನಾನು ನನ್ನ ಕಾಲಂ ಬರೆಯತೊಡಗಿದ್ದೆ. ನನ್ನಂಥ ಅನೇಕರಿಗೆ ಆಗ ಆ ಪತ್ರಿಕೆ ನಮ್ಮೆಲ್ಲರ ಕನಸಿನ ಮುಂದುವರಿಕೆಯಾಗಿತ್ತು; ನಾವು ನಂಬಿದ ಮೌಲ್ಯಗಳ ಶಂಖವಾಗಿತ್ತು. ಮುಂದೆ ಎಂಬತ್ತರ ದಶಕದ ಪ್ರಾರಂಭದ ಗೋಕಾಕ ಚಳವಳಿ ಮತ್ತು ರೈತ ಚಳವಳಿಗಳು ಪತ್ರಿಕೆಗೆ ಹೊಸ ರಾಜಕೀಯ-ಸಾಂಸ್ಕೃತಿಕ ವ್ಯಕ್ತಿತ್ವ ತಂದುಕೊಟ್ಟವು. ಪತ್ರಿಕಾ ರಂಗದ ಭಾಷೆಗೆ, ಲಯಕ್ಕೆ, ವಿನ್ಯಾಸಕ್ಕೆ, ಅಂತರಾಳದ ಸತ್ವಕ್ಕೆ ಹೊಸ ಆಯಾಮ ಮೂಡಿಸಿದ್ದು ಲಂಕೇಶ್ ಪತ್ರಿಕೆಯ ಹಿರಿಮೆ, ಗರಿಮೆ.

ಆದರೆ 1983ರ ರಾಜಕೀಯ ಪಲ್ಲಟದ ನಂತರ ಗುಂಡೂರಾವ್ ಸರಕಾರ ಹೋಗಿ ಹೆಗಡೆ ಸರಕಾರ ಬಂದಾಗ ‘ಲಂಕೇಶ್ ಪತ್ರಿಕೆ’ಯ ‘ಪತ್ರಿಕೆ’ ಹಿಂದಾಗಿ, ‘ಲಂಕೇಶ್’ ಎಂಬ ವ್ಯಕ್ತಿ ಮುಂದಾಯಿತು. ಎಲ್ಲ ಬದಲಾವಣೆಗೂ ತಾನೇ ಕಾರಣ ಎಂಬ ಭ್ರಮೆಯ ಗುಂಗೀಹುಳ ಸಂಪಾದಕರ ತಲೆ ಹೊಕ್ಕಿತು. ತನ್ನ ಹುಟ್ಟುಹಬ್ಬದ ದಿನ ರಾಜಕೀಯ ನಾಯಕರ ಶುಭಾಶಯದ ಕಾರ್ಡುಗಳನ್ನು ನೋಡಿ ರೋಮಾಂಚಿತರಾಗತೊಡಗಿದ ಲಂಕೇಶರ ಅಧಃಪತನ ಸುರುವಾದದ್ದೆ ಆ ಕ್ಷಣದಿಂದ.


ಒಂದು ಒಳ್ಳೆಯ ಪತ್ರಿಕೆ ಯಾವುದೇ ರಾಜಕೀಯ ಕೇಂದ್ರದಿಂದ ದೂರ ಇರಬೇಕೆಂದು ವಾದಿಸುತ್ತಿದ್ದ ನಾನು ‘ಪತ್ರಿಕೆ’ಗೆ ಬರೆಯುವುದು ನಿಲ್ಲಿಸಿದ್ದು ಇದೇ ಕಾರಣದಿಂದ.



ಅಲ್ಲಿಂದ ನೋಡುತ್ತಲೇ ಬಂದಿರುವೆ ‘ಪತ್ರಿಕೆ’ಯನ್ನು - ಒಬ್ಬ ಓದುಗನಾಗಿ. ಒಡೆದು ಕಾಣುವ ಒಂದು ದೊಡ್ಡ ಬದಲಾವಣೆ ಅಂದರೆ, ಪತ್ರಿಕೆ ತನ್ನ ಕ್ರೆಡಿಬಿಲಿಟಿ (ಪತ್ತು) ಕಳೆದು ಕೊಂಡದ್ದು. ರಾಜ್ಯಮಟ್ಟದಲ್ಲಿ ಸ್ವತಃ ಸಂಪಾದಕರೇ ಯಾರ ಬಗ್ಗೆ ಏನೇ ಬರೆದರೂ ಯಾರೂ ಸೀರಿಯಸ್ಸಾಗಿ ತೆಗೆದುಕೊಳ್ಳುವುದಿಲ್ಲ. ಜಿಲ್ಲಾ ಮಟ್ಟದ ವರದಿಗಾರರಂತೂ ಮರಿ-ಲಂಕೇಶರೇ ಆಗಿ ಆ ಮಟ್ಟದಲ್ಲೂ ಪತ್ರಿಕೆಯನ್ನು ಅಧೋಗತಿಗೆ ಇಳಿಸಿದ್ದಾರೆ. ಒಂದು ಕಾಲದಲ್ಲಿ ಎಲ್ಲ ಪಕ್ಷಗಳಿಗೂ ಹೆದರಿಕೆ ಹುಟ್ಟಿಸುತ್ತಿದ್ದ ಪತ್ರಿಕೆ, ಇಂದು ಒಂದು ಪಕ್ಷದ ಪರವಾಗಿ ವಕಾಲತ್ತು ವಹಿಸುವ ಹಂತ ತಲುಪಿದೆ. ಸ್ವತಃ ಒಂದು ರಾಜಕೀಯ ಶಕ್ತಿಯಾಗುವ ಸಾಧ್ಯತೆ ಹೊಂದಿದ್ದ ಪತ್ರಿಕೆ, ಲಂಕೇಶರ ಅಪ್ರಬುದ್ಧತೆ ಹಾಗೂ ಫ್ಯಾಸಿಸ್ಟ್ ನಿಲುವುಗಳಿಂದಾಗಿ ‘ಕರ್ನಾಟಕ ಪ್ರಗತಿರಂಗ’ ಎಂಬ ಲೆಟರ್‌ಹೆಡ್ ಪಾರ್ಟಿಯ ಗರ್ಭಪಾತ ಸಂಭವಿಸುವಂತೆ ಮಾಡಿದ್ದು ನಾವು ಕಣ್ಣಾರೆ ಕಂಡ ಒಂದು ಹಾಸ್ಯ ಪ್ರಸಂಗ.

ಆದರೆ ಈಗಲೂ ಪತ್ರಿಕೆ ಅಂದರೆ ಕನ್ನಡಿಗರಿಗೆ ಒಂದು ಬಗೆಯ ಮೋಹ -ಒಂದು ಕಾಲದ ಹರೆಯದ ಪ್ರೇಮ ಆಗೀಗ ನೆನಪಾಗಿ ಮರುಕಳಿಸುವಂತೆ. ಏಕೆಂದರೆ, ಉಳಿದ ಈ ನಮೂನೆಯ ಪತ್ರಿಕೆಗಳಿಗೆ ಹೋಲಿಸಿದಾಗ ಲಂಕೇಶ್ ಪತ್ರಿಕೆ ತನ್ನ ಸಾಹಿತ್ಯಿಕ, ಸಾಂಸ್ಕೃತಿಕ ಕಾಳಜಿಗಳನ್ನು ಈಗಲೂ ಉಳಿಸಿಕೊಂಡಿದೆ. ಜಾತಿವಾದ, ಕೋಮುವಾದ, ಮೂಢನಂಬಿಕೆ ಇತ್ಯಾದಿಗಳ ಬಗ್ಗೆ ಯಾವುದೇ ರಾಜಿಯೂ ಸಾಧ್ಯವಿಲ್ಲ. ಇದು ಪತ್ರಿಕೆ ಪ್ರಾರಂಭದಿಂದಲೂ ಸಹಜವಾಗಿ ಉಳಿಸಿಕೊಂಡು, ಮೈಗೂಡಿಸಿಕೊಂಡು ಬಂದಿರುವ ಲಯ.

ಸಾಹಿತಿಗೆ ವಯಸ್ಸಾಗತೊಡಗಿದಂತೆ ಅವನ ಮುಪ್ಪೇ ಒಂದು ಅನುಕಂಪದ ವಸ್ತುವಾಗುತ್ತದೆ. ತೊಂಬತ್ತು ಆದರೂ ದಿನಾಲು ನಾಲ್ಕು ಕಿಲೋಮೀಟರು ವಾಕಿಂಗ್ ಮಾಡುತ್ತಾರಲ್ಲ! ಎಂಬುದೇ ರೋಮಾಂಚನದ ವಿಷಯ. ಹಾಗೆಯೇ ಅನಾರೋಗ್ಯ ಕೂಡ. ಲಂಕೇಶರಿಗೆ ಈಗ ಅನಾರೋಗ್ಯ ಯೋಗ. ಅವರು ಸಂಪಾದಕೀಯಗಳಲ್ಲಿ ತಮ್ಮ ಎಲ್ಲಾ ನಮೂನೆಯ ರೋಗಗಳನ್ನು



ಲಂಕೇಶ್ ಪತ್ರಿಕೆ - 20

‘ಲಂಕೇಶ್ ಪತ್ರಿಕೆ’ ಕಳೆದ ತಿಂಗಳು ಇಪ್ಪತ್ತು ವರ್ಷ ಪೂರೈಸಿತು. ಕನ್ನಡ ಪತ್ರಿಕಾ ರಂಗದಲ್ಲಿ ಇದು ಗಮನಾರ್ಹ ಸಾಧನೆ. ಶೈಲಿಯೊಂದೇ ಅಲ್ಲ ಪತ್ರಿಕೆಗೆ ಏನೆಲ್ಲ, ಹೇಗೆಲ್ಲ ವಸ್ತು ಆಗಿರಬಹುದೆಂಬ ಪ್ರಯೋಗ ನಡೆಸಿದ್ದು ಇಲ್ಲಿ ಬಹು ಮುಖ್ಯ. ಇಪ್ಪತ್ತು ವರ್ಷದ ಹಾದಿಯಲ್ಲಿ ಈ ಪತ್ರಿಕೆ ತನ್ನದೇ ಓದುಗರು, ಅಭಿಮಾನಿಗಳ ವರ್ಗವನ್ನು ಬೆಳೆಸಿಕೊಂಡಿದೆ. ತನ್ನ ಛಾಪಿನಿಂದಾಗಿ ವರ್ಚಸ್ಸು ಮೂಡಿಸಿಕೊಂಡಿದೆ. ಇಂಥದೊಂದು ಪತ್ರಿಕೆಯ ಆಗುಹೋಗು ಜನರ ಬದುಕಿಗೂ ಸಂಬಂಧಿಸಿದ್ದು. ‘ಲಂಕೇಶ್ ಪತ್ರಿಕೆ’ಯ ಒಡನಾಟದಲ್ಲಿ ಇರುವವರು, ಇದ್ದು ದೂರ ನಿಂತು ನೋಡುತ್ತ ಇರುವವರು ಪತ್ರಿಕೆ ಮಾಡಿದ್ದೇನು? ಮಾಡದ್ದೇನು? ಎಂಬ ವಿಚಾರ ಇಲ್ಲಿ ನಮ್ಮ ಓದುಗರ ಮುಂದಿರಿಸಿದ್ದಾರೆ.

ವಾಚಕರೊಂದಿಗೆ ಹಂಚಿಕೊಳ್ಳುತ್ತ ಆ ಕಾರಣದಿಂದಾಗಿಯೇ ಆತ್ಮೀಯರಾಗಿ ಉಳಿದಿರುವುದು. ನೀಲು-ನಿಮ್ಮಿಗಳ ಮೂಲಕ ಲಂಕೇಶರು ಶಬ್ದಮೈಥುನದ ಮೂಲಕವಾದರೂ ಬದುಕಲು ಪ್ರಯತ್ನಿಸುತ್ತಿರುವುದು ಕುತೂಹಲಕಾರಿಯಾಗಿದೆ.

ಸ್ವಭಾವದಿಂದ ಲಂಕೇಶ್ ಒಬ್ಬ ವ್ಯಕ್ತಿವಾದಿ. ಗಾಂಧೀ-ಲೋಹಿಯಾ ಇತ್ಯಾದಿ ಬರೀ ಪೋಜುಗಳು ಮಾತ್ರ. ಅವರಿಗೆ 'ಭಿನ್ನಮತ' ಇದ್ದವರನ್ನು ಕಂಡರೆ ಸಿಟ್ಟು; 'ಸಹಮತ' ಇದ್ದವರನ್ನು ಕಂಡರೆ ತಾತ್ಸಾರ. ಇದೇ ಫ್ಯಾಶಿಸ್ಟ್ ಮನೋಧರ್ಮ. ಇದರಿಂದ ಒಬ್ಬ 'ವ್ಯಕ್ತಿ'ಯಾಗಿ, ಸಾಹಿತಿಯಾಗಿ ಅವರು ಅನನ್ಯರಾಗಿ ಇತಿಹಾಸದಲ್ಲಿ ಉಳಿದರೂ, ಅವರ ಹೆಸರಿನ 'ಪತ್ರಿಕೆ' ಮಾತ್ರ ಹತ್ತರ ಕೂಡ ಹನ್ನೊಂದಾಗಿ ಉಳಿಯುತ್ತದೆ, ಅಷ್ಟೆ.

ಲಂಕೇಶ್ ಪತ್ರಿಕೆಯ 'ಕೀರ್ತಿ' (ರೆಪ್ಯುಟೇಶನ್) ಎಲ್ಲಿಗೆ ಬಂದಿದೆ ಎಂಬುದಕ್ಕೆ ಒಂದು ಉದಾಹರಣೆ :


ಬೆಳಗಾವಿಯಲ್ಲಿ ಒಂದು ಪತ್ರಿಕೆ - ಲಂಕೇಶ್ ಸೈಜಿನದು. ಅದರ ಹೆಸರು 'ಬ್ಲ್ಯಾಕ್ ಮೇಲ್'. ಅಧಿಕೃತ ಹೆಸರು. ಸಂಪಾದಕನ ಪ್ರಾಮಾಣಿಕತೆ ಕಂಡು ನನಗೆ ಆಶ್ಚರ್ಯ ಮತ್ತು ಸಂತೋಷ. ಒಂದೆರಡು ಪುಟ ತಿರುವಿದಾಗ ಸಂಪಾದಕನ ಟಿಪ್ಪಣಿ ಕಣ್ಣಿಗೆ ಬಿತ್ತು.

ಅವನ 'ಆದರ್ಶ' ಪುರುಷರೆಂದರೆ : ಬೆಂಗಳೂರಿನ ಇಬ್ಬರು ಸಂಪಾದಕರು. ಅದರಲ್ಲಿ ಒಬ್ಬರು ನಮ್ಮ ಪಿ. ಲಂಕೇಶ್!

ಇನ್ನೊಬ್ಬರ ಹೆಸರು ಹೇಳುವ ಅಗತ್ಯವಿಲ್ಲ!!

■ ಚಂದ್ರಶೇಖರ ಪಾಟೀಲ

ಸಾಂಸ್ಕೃತಿಕ ಲೋಕದ ರೋಗ!



ಇಪ್ಪತ್ತು ವರ್ಷಗಳ ವಯಸ್ಸಿನಷ್ಟೊತ್ತಿಗೆ ಬಾಲ್ಯಕಾಲದ ಮುಗ್ಧತೆ ಅಳಿದು ವ್ಯಾವಹಾರಿಕತೆ ಮತ್ತು ಸ್ವಹಿತಾಸಕ್ತಿಗಳ ಭಾವನೆಗಳು ಪ್ರಬಲಗೊಳ್ಳತೊಡಗುತ್ತವೆ. ಮನುಷ್ಯನ ಜೀವನದಲ್ಲಿ ನಡೆಯುವ ಇಂಥ ಪರಿವರ್ತನೆ ಇಪ್ಪತ್ತು ತುಂಬಿದ ಲಂಕೇಶ್ ಪತ್ರಿಕೆಗೂ ಸಂಭವಿಸಿದೆ. ಆರಂಭದ ಮುಗ್ಧತೆ, ಸಾತ್ವಿಕತೆ ಮತ್ತು ಅವುಗಳಿಗೆ ವಿರುದ್ಧವಾದುದನ್ನು ಕಂಡಾಗ ಅಮರಿಕೊಳ್ಳುತ್ತಿದ್ದ ಸಿಟ್ಟುಗಳೆಲ್ಲ ಹೊರಟು ಹೋಗಿ ಪತ್ರಿಕೆಯು ಈಗ ಒಂದು ಪ್ರಿಜುಡಿಸ್‌ನ ಮೊತ್ತದ ಸ್ಟ್ರಾಟಜಿಯಂತೆ ನಡೆಯುತ್ತಿದೆ. ಅಂತಲೇ ಅದು ತನ್ನ ವರದಿಗಳ ಸುಳ್ಳನ್ನು ತೋರಿಸುವ ಪ್ರತಿಕ್ರಿಯೆಗಳನ್ನು ಎಂದಿಗೂ ಪ್ರಕಟಿಸುವುದಿಲ್ಲ.


ಕನ್ನಡದ ಒಬ್ಬ ಉತ್ತಮ ಲೇಖಕರಾಗಿರುವ ಲಂಕೇಶರಿಗೆ ಸಾಹಿತ್ಯ ಕುರಿತ ಪ್ರಿಜುಡಿಸ್‌ಗಳು ಅತ್ಯಂತ ಪ್ರಬಲವಾಗಿವೆ. ಲಂಕೇಶರು ತಮ್ಮ ವೈಯಕ್ತಿಕ ದರ್ಬಾರಿನಲ್ಲಿ ತಮಗಾಗದ ಬೇರೆ ಸಾಹಿತಿಗಳ ಹೆಸರುಗಳನ್ನು ಹೇಳಿ 'ಅವನನ್ನು ಮುಗಿಸ್ತೇನೆ. ಇವನನ್ನ ಡೆಸ್ಟ್ರಾಯ್ ಮಾಡಿಬಿಡ್ತೇನೆ' ಎಂದು ಘೋಷಿಸುವುದನ್ನು ಅವುಗಳಲ್ಲಿ ಪಾಲುಗೊಂಡ ಕೆಲವು ಜೀವಿಗಳು ಹೇಳಿಕೊಳ್ಳುತ್ತವೆ. ತಮ್ಮ ಸಾಹಿತ್ಯದ ಪ್ರಿಜುಡಿಸ್‌ಗೆ ಅನುಸಾರವಾದ ಸ್ಟ್ರಾಟೆಜಿಯೊಂದನ್ನು ಅವರು ಪುಸ್ತಕ ವಿಮರ್ಶೆ - ಭೇ ಭೇ ಮುಂತಾದ ಕಾಲಮ್ಮುಗಳ ಮೂಲಕ ಸಾಧಿಸಲು ಪ್ರಯತ್ನಿಸುತ್ತಾರೆ. ಭೇ ಭೇ ಮೂಲಕ ಸಾಹಿತಿಗಳನ್ನು ಲೇವಡಿಗೆ ಈಡು ಮಾಡುತ್ತ ಅವರ ಸಾಹಿತ್ಯದ ಬಗೆಗೆ ಸಾರ್ವಜನಿಕರಲ್ಲಿ ಉಡಾಫೆಯ ಭಾವನೆಯನ್ನು ಸೃಷ್ಟಿಸುವುದು ಲಂಕೇಶರ ಪ್ರಯತ್ನವಾಗಿದೆ. ಇನ್ನು ಸಾಹಿತ್ಯ ವಿಮರ್ಶೆಯ ಅಂಕಣವಂತೂ ಪೂರ್ವಾಗ್ರಹಗಳ ಕೈತೋಟವಾಗಿದೆ. 'ಜೋಗಪ್ಪ'ನಂಥವರು ಈ ಕೈ ತೋಟದ ಮಾಲಿಗಳು. ಕೃತಿಯನ್ನು ಪೂರ್ಣವಾಗಿ ಓದದೇ ಮುಕ್ತ ಮನಸ್ಸಿನಿಂದ ಗ್ರಹಿಸದೇ ವಿಮರ್ಶೆ ಮಾಡುವ ಇವರು ರೂಪಕಗಳ ಸರ್ವಜ್ಞನೆಂದು ಭಾವಿಸಿಕೊಳ್ಳುತ್ತಾರೆ. ಮಾರ್ಕ್ವೆಜ್ ಸಾಹಿತ್ಯದ ತಜ್ಞರೆಂದು ಪೋಸ್ ಕೊಡುವ ಇವರಿಗೆ ಒಂದು ಕಥೆಯಲ್ಲಿನ ಕನಸಿನಂತೆ ಬರುವ ಭಾಗ ಅರ್ಥವಾಗುವುದಿಲ್ಲ ಎಂದರೆ ವಿಮರ್ಶೆಯ ಗೊಡವೆ ಯಾಕೆ ಬೇಕು? ಮಾಯಿಯ ಮುಖಗಳು ಎನ್ನುವ ಒಂದು ಕಥೆಯ ಬಗ್ಗೆ 'ಕಥೆಯಲ್ಲಿ ಬರುವ 'ತುಂಗಾ' ಸೂರ್ಯನ ಸಂಪರ್ಕದಿಂದ ಮಗುವನ್ನು ಹೆರುತ್ತಾಳೆ - ಇದು ಇಪ್ಪತ್ತನೆಯ ಶತಮಾನದಲ್ಲಿ ಈ ಲೇಖಕರ ಕಥೆಗಳಲ್ಲಿ ಮಾತ್ರ ಸಾಧ್ಯವಾಗುತ್ತದೆ' ಎಂದು ಬರೆಯುತ್ತಾರೆ. ಆದರೆ ಆ ಕಥೆಯಲ್ಲಿ ಈ ವಿಮರ್ಶಕರು ಹೇಳುವಂಥದು ಇಲ್ಲವೇ ಇಲ್ಲ! ಇಲ್ಲದ್ದನ್ನು ಕಂಡು ಬಯ್ಯುವುದು ದುರುದ್ದೇಶಕ್ಕೆ ಸಾಕ್ಷಿ.

ಲಂಕೇಶ್‌ರವರು ಕಟ್ಟಿಕೊಂಡ ಇಂಥ ಸಹವರ್ತಿಗಳ ದುಷ್ಟತನವು ನಮ್ಮ ಸಾಂಸ್ಕೃತಿಕ ವಲಯದಲ್ಲಿ ವಿಸ್ತರಿಸಿಕೊಳ್ಳುತ್ತಿರುವುದು ಅತ್ಯಂತ ದುರದೃಷ್ಟಕರ. ಲಂಕೇಶರೂ ಈ ಅಂಕಣದಲ್ಲಿ ಸಾಹಿತಿಯೊಂದಿಗಿನ ತಮ್ಮ ಸಂಬಂಧದ ನೆಲೆಯಲ್ಲಿಯೇ ಪ್ರತಿಕ್ರಿಯಿಸುವಂತೆ ತೋರುತ್ತದೆ. ಚಂಪಾರವರ 'ಬೇಂದ್ರೆ : ನಾನು ಕಂಡಂತೆ ನನಗೆ ಕಂಡಷ್ಟು' ಪುಸ್ತಕದ ವಿಮರ್ಶೆ ಚಂಪಾರವರ ವೈಯಕ್ತಿಕ ನಿಂದನೆಯಾಗಿದ್ದಿತು. ನಾಗೇಶ್ ಹೆಗಡೆಯವರ 'ನಮ್ಮೊಳಗಿನ ಬ್ರಹ್ಮಾಂಡ' ಬ್ರಾಹ್ಮಣರ ಹುನ್ನಾರವಾಗಿ ಕಾಣಿಸಿತು. ಲಂಕೇಶ್ ತಮ್ಮ ವಿಮರ್ಶೆಯ ಮೂಲಕ ಫತ್ವಾ ಹೊರಡಿಸುವಂತೆ ಕಾಣುತ್ತಾರೆ. ಕೃತಿಯೊಂದಿಗಿನ ಅನುಸಂಧಾನದ ಮಾರ್ಗವನ್ನು ಮುಚ್ಚಿಬಿಡುವವರಂತೆ ವರ್ತಿಸುತ್ತಾರೆ. ಈ ಬಗೆಗಿನ ಚರ್ಚೆಯಲ್ಲಿ ಇನ್ನೊಂದು ಅಭಿಪ್ರಾಯವಿರಬಹುದೆನ್ನುವ ಅನುಮಾನವೇ ಅವರಲ್ಲಿರುವುದಿಲ್ಲ. ಈ ಬಗೆಗಿನ ಪತ್ರಿಕೆಯೊಂದರಲ್ಲಿ ಬರುವ ರಿವ್ಯೂಗಳು ವೈಯಕ್ತಿಕ ಅಭಿಪ್ರಾಯಗಳೇ ಹೊರತು ವಿಮರ್ಶೆಗಳಲ್ಲವೆನ್ನುವುದು ನನ್ನ ನಂಬಿಕೆ. ಕೃತಿಯೊಂದರಲ್ಲಿ ಇಲ್ಲದ್ದನ್ನು ಇದೆ ಎಂದು ಹೇಳಿ ಬರೆದ ಇಂಥ ರಿವ್ಯೂಗಳಂತೂ ಕೇವಲ ದೌಷ್ಟ್ಯದ ಕ್ರಿಯೆಗಳು.

ಲಂಕೇಶ್ ಪತ್ರಿಕೆಯ ಆರಂಭದ ಸಂದರ್ಭದಲ್ಲಿ ಅದರಿಂದ ಪುಳಕಿತರಾದವರಲ್ಲಿ ನಾನೂ ಒಬ್ಬ. ಅದರ ರಾಜಕೀಯ ಅಂಗವಾಗಿ ರೂಪುಗೊಂಡ ಪ್ರಗತಿರಂಗದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದೆ. ಕೊಂಡಜ್ಜಿಯ ಕಾರ್ಯಾಗಾರದಲ್ಲಿ, ಹೊಳಲ್ಕೆರೆಯ ಸುತ್ತಮುತ್ತಲಿನ ಪ್ರಗತಿರಂಗದ ಸಭೆಗಳಲ್ಲಿ ಭಾಗಿಯಾಗಿದ್ದ ನಾನು ಚನ್ನಗಿರಿಯ ಪ್ರಗತಿರಂಗದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದ್ದೆ. ಆದರೆ ಅಂದಿನ ಮುಗ್ಧತೆಯ, ಸಾತ್ವಿಕತೆಯನ್ನು ಸ್ಥಾಪಿಸಬೇಕೆನ್ನುವ ಕನಸುಗಳ ಕಾಲ ಗತಿಸಿಹೋಗಿದೆ. ಇಂದು ಏನಿದ್ದರೂ ಲಂಕೇಶ್ ಮತ್ತವರ ಜೊತೆಗಾರರ ಸ್ವಹಿತಾಸಕ್ತಿಗಳ ಲೀಲಾಜಾಲ! ಕನ್ನಡದ ಇಂದಿನ ಸಾಂಸ್ಕೃತಿಕ ರೋಗ ಬೇಗನೇ ವಾಸಿಯಾದಷ್ಟು ಒಳ್ಳೆಯದು.

■ ರಾಘವೇಂದ್ರ ಪಾಟೀಲ

ವ್ಯವಸ್ಥೆಗೆ ಮಣಿಯದ ಗುಣ




ಲಂಕೇಶ್ ಪತ್ರಿಕೆ ಪ್ರಾರಂಭವಾದಾಗ ನಾನು ಕಾಲೇಜ್ ವಿದ್ಯಾರ್ಥಿ. ಆಗ ನಾನು ಧಾರವಾಡದಲ್ಲಿದ್ದೆ. ಚುರುಕು ಬರಹ ಮತ್ತು ನಿರ್ಭೀತಿಗಳಿಂದಾಗಿ ಅದು ಬಹುಬೇಗ ಯುವಕರ ಅಚ್ಚುಮೆಚ್ಚಿನ ಪತ್ರಿಕೆಯಾಯಿತು. 'ಗುಂ', 'ಬಂ', 'ಉಟ್ಟು ಓರಾಟಗಾರರು' ಇಂಥ ಪದಪ್ರಯೋಗಗಳ ನಾವಿನ್ಯತೆಯಿಂದ, ಅಧಿಕಾರದ ತುಟ್ಟತುದಿಯಲ್ಲಿರುವವರನ್ನೂ ಕೆಣಕಬಲ್ಲ ತನ್ನ ಛಾತಿಯಿಂದ ಪತ್ರಿಕೆ ಮತ್ತು ಪತ್ರಿಕೆಯ ಸಂಪಾದಕ ಲಂಕೇಶ್ ದೂರದ ಊರುಗಳಲ್ಲಿ ದಂತಕಥೆಯಾಗಿಬಿಟ್ಟರು. ಇಂಥ ದಂತಕಥೆಗಳ ಪ್ರಭಾವ ಎಂಥದೆಂದರೆ ಬೆಂಗಳೂರಿಗೆ ಬಂದು ವರ್ಷಗಳೇ ಕಳೆದರೂ ನಾನು ಅವರನ್ನು ಕಾಣಲು ಹೆದರಿದ್ದೆ.

ಲಂಕೇಶ್ ಪತ್ರಿಕೆ ಯಾವತ್ತೂ ವ್ಯವಸ್ಥೆಯನ್ನು ಅನುಮಾನದಿಂದ ಕಾಣುತ್ತ ಬಂದಿದೆ. ಇಷ್ಟು ದೀರ್ಘಕಾಲದ ಪ್ರಯಾಣದಲ್ಲಿ ಸಾಕಷ್ಟು ಸಲ ಪತ್ರಿಕೆಯ ಗ್ರಹಿಕೆಗಳು ತಪ್ಪಾಗಿರಲು ಸಾಧ್ಯ. ಅದರಲ್ಲಿ, ಅಚ್ಚರಿಯಾಗಲೀ, ವಿಷಾದ ಪಡುವಂಥದಾಗಲೀ ಏನೂ ಇಲ್ಲ. ವ್ಯವಸ್ಥೆಯೊಡನೆ ಅದು ಕಾದುಕೊಂಡಿರುವ ದೂರವೇ ನನ್ನಂಥವನ ಪಾಲಿಗೆ ದೊಡ್ಡ ಸಮಾಧಾನದ ಮತ್ತು ನಿಜಕ್ಕೂ ಆಶ್ಚರ್ಯದ ಸಂಗತಿಯಾಗಿ ಉಳಿದಿದೆ. ಇಪ್ಪತ್ತು ವರ್ಷಗಳೆಂದರೆ ಸಾಕಷ್ಟು ದೀರ್ಘಕಾಲ. ವೈಯಕ್ತಿಕ ಜೀವನದಲ್ಲಿ ಕೂಡ ಇಷ್ಟು ಅವಧಿಯಲ್ಲಿ ಬಹುತೇಕ ಜನ ಹೋರಾಡಿ, ಮಣಿದು ವ್ಯವಸ್ಥೆಗೆ ಶರಣಾಗಿರುವುದನ್ನು ಕಾಣುತ್ತೇವೆ. ಹೀಗಿರುವಾಗ ಪತ್ರಿಕೆಯೊಂದು ಜಡವಾಗದಿರಲು, ಶರಣಾಗದಿರಲು ಮಾಡುತ್ತಿರುವ ಪ್ರಯತ್ನ ನಮ್ಮ ಬಗೆಗೇ ನಮಗೆ ಭರವಸೆ ಹುಟ್ಟಿಸುವ ಸಂಗತಿಯಾಗಿ ಕಾಣುತ್ತದೆ.

ಹಾಗಾದರೆ ಪತ್ರಿಕೆ ಕುರಿತು ನನ್ನ ತಕರಾರು ಏನೂ ಇಲ್ಲವೆ? ಇದ್ದೇ ಇದೆ. ತಾನು ಗ್ರಹಿಸಿದ ಸಂಗತಿಗಳ ಕುರಿತು ಪತ್ರಿಕೆಯ ಬಿಗಿಪಟ್ಟು - ಆ ಗ್ರಹಿಕೆಗಳು ವಿವಾದಾಸ್ಪದವಾದಾಗ - ವಿಚಿತ್ರ ಸಮಸ್ಯೆಯನ್ನುಂಟು ಮಾಡುತ್ತದೆ. ಸಾಹಿತ್ಯ ಕೃತಿಗಳ ಕುರಿತು ಇಂಥ ಸಮಸ್ಯೆಗಳು ಉಂಟಾದಾಗಲಂತೂ ಸಾಹಿತ್ಯ ಲೋಕದಲ್ಲಿ ಸಣ್ಣ ಭೂಕಂಪವೇ ಆಗುತ್ತದೆ. ಇದೂ ಕೂಡ ಒಂದು 'ಅತಿ'ಯಿಂದ ಹೊರಟು ಸತ್ಯವನ್ನು ತಿಳಿಯುವ ಯತ್ನವೇ ಎಂದು ನಾನು ಯೋಚಿಸಿದ್ದಿದೆ. ಹಾಗಿದ್ದರೆ ಆಗ ಚರ್ಚೆ ಸಾಧ್ಯವಾಗಬೇಕು. ಅಂಥ ಚರ್ಚೆಗಳು ಪತ್ರಿಕೆಯ ಪುಟಗಳಲ್ಲಿ ಅಷ್ಟಾಗಿ ಆದಂತಿಲ್ಲ. ಪತ್ರಿಕೆಯ ಹೊಳೆವ ಬೆಳಕಲ್ಲಿ ಕೆಲವು ಸಲ ಸಾಧಾರಣ ಲೇಖಕರು ಪ್ರಮುಖರಂತೆ ಮಿಂಚಿದ್ದಿದೆ. ತೇಜಸ್ವಿಯವರಂಥ ಲೇಖಕರು ಪತ್ರಿಕೆಯಿಂದ ದೂರವಾಗಿದ್ದಾರೆ. ಇಂದು ಪತ್ರಿಕೆಗೊಂದು ವ್ಯಕ್ತಿತ್ವ ಕೊಡಲು ಸಾಧ್ಯವಾಗಿರುವುದು ಲಂಕೇಶ್ ಅವರಿಗೆ ಮಾತ್ರ...... ಈ ಮಾತುಗಳನ್ನು ಆಡುವಾಗಲೂ ಪತ್ರಿಕೆ ಎರಡು ದಶಕಗಳ ಕಾಲ ತನ್ನ ಹೊಸ ಹೊಸ ಬೈಗಳಿಂದ ಕನ್ನಡ ಜಾಣ - ಜಾಣೆಯರ ಪಂಚೇಂದ್ರಿಯಗಳನ್ನು ಚುರುಕಾಗಿಡಲು ಮಾಡುತ್ತಲೇ ಇರುವ ಪ್ರಯತ್ನಗಳು ನೆನಪಾಗುತ್ತವೆ. ಅಂಕುಡೊಂಕು ಅಕ್ಷರಗಳಲ್ಲಿ ಥಟ್ಟನೆ ಗಮನ ಸೆಳೆವ 'ನೀಲು' ಪದ್ಯಗಳ ಸೊಗಸು ಮನಸನ್ನಾವರಿಸುತ್ತಿದೆ.

■ ಚಿಂತಾಮಣಿ ಕೊಡ್ಲೆಕೆರೆ

ವಿಮರ್ಶೆ ಶಿಕ್ಷೆಯ ತೀರ್ಪಿನಂತೆ



ಈ ಪ್ರತಿಕ್ರಿಯೆ ಲಂಕೇಶ್ ಪತ್ರಿಕೆಯ ವಿಮರ್ಶೆ ಕಾಲಂಗೆ ಮಾತ್ರ ಸೀಮಿತವಾಗಿದೆ. ಕನ್ನಡದಲ್ಲಿ ಇವತ್ತು ರಿವ್ಯೂಗಳು ಮತ್ತು ಸೆಮಿನಾರ್‌ಗಳಲ್ಲಿ ಓದಿದ ಪ್ರಬಂಧಗಳೇ ವಿಮರ್ಶೆ ಎಂದು ಚಲಾವಣೆಯಲ್ಲಿವೆ. ಯಾವುದಾದರೂ ಒಂದು ವಿಷಯವನ್ನೋ, ಲೇಖನವನ್ನೋ ಆರಿಸಿಕೊಂಡು ಅಧ್ಯಯನ ಶೀಲವಾಗಿ ಬರೆದ ಪುಸ್ತಕಗಳು ಇಲ್ಲವೇ ಇಲ್ಲ ಅನ್ನುವಷ್ಟು ಅಪರೂಪ. ಸಮಕಾಲೀನ ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಗಳೆರಡೂ ಕುಬ್ಜವಾಗುತ್ತ, ದುರ್ಬಲವಾಗುತ್ತ ನಡೆದಿವೆ.


ಲಂಕೇಶ್ ಪತ್ರಿಕೆಯ ಯಾವುದೋ ಒಂದು ಸಂಚಿಕೆಯಲ್ಲಿ ಸಂಪಾದಕರು ವಿಮರ್ಶೆಯ ಕಾಲಂ ನಿಷ್ಠುರವಾಗಿರಬೇಕು, ಪುಸ್ತಕ ತನಗೆ ಕೊಟ್ಟ ಸಂತೋಷವನ್ನು ಮುಕ್ತವಾಗಿ ಹೇಳಿಕೊಳ್ಳಬೇಕು, ಅಭಿಪ್ರಾಯ ನಿರ್ದುಷ್ಟವಾಗಿ ವ್ಯಕ್ತವಾಗಬೇಕು ಎಂಬ ಅಪೇಕ್ಷೆಗಳನ್ನು ಸೂಚಿಸಿದ್ದ ನೆನಪು ಇದೆ. ಸ್ವತಃ ಲಂಕೇಶ್ ಬರೆದ ರಿವ್ಯೂಗಳು ಮತ್ತು ಇತರರರು ಬರೆದ ರಿವ್ಯೂಗಳು ಗುಣ ಮತ್ತು ಧೋರಣೆಗಳಲ್ಲಿ ತೀರ ಭಿನ್ನವಾಗಿರುತ್ತವೆ. ಲಂಕೇಶ್ ಬರವಣಿಗೆ ಅವರ ಸೃಜನಶೀಲ ವ್ಯಕ್ತಿತ್ವದ ಒಂದು ವಿಸ್ತರಣೆಯಂತೆ ಕಂಡರೆ, ಇತರ ಅನೇಕರು ಬರೆದ ರಿವ್ಯೂಗಳು ಲಂಕೇಶರ ಧೋರಣೆ, ತೀರ್ಮಾನಗಳನ್ನು ಆವಾಹಿಸಿಕೊಂಡು ಅನುಕರಿಸಿ ಬರೆದಂತೆ ಇರುತ್ತವೆ.

ಈ ಕಾಲಂನ ರಿವ್ಯೂಗಳಿಗೆ ಇನ್ನೊಂದು ಮುಖ್ಯ ಲಕ್ಷಣ ಇದೆ. ಅದೇನೆಂದರೆ ಓದುಗರನ್ನು ವಿಚಾರಶೀಲರನ್ನಾಗಿಸುವುದಕ್ಕಿಂತ, ಪುಸ್ತಕದ ವಿಷಯ ಸೂಚಿಸುವ ಸಂಗತಿಯ ಬಗ್ಗೆ ಯೋಚನೆಗೆ ತೊಡಗುವಂತೆ ಪ್ರೇರೇಪಿಸುವುದಕ್ಕಿಂತ ರಿವ್ಯೂ ಮಾಡುವವರ ''ತೀರ್ಮಾನ''ವನ್ನು ಗಟ್ಟಿಯಾಗಿ ಹೇಳುವುದೇ ಮುಖ್ಯವಾಗಿರುತ್ತದೆ. ರಿವ್ಯೂ ನ್ಯಾಯಾಧೀಶನೊಬ್ಬ ಬರೆವ ಶಿಕ್ಷೆಯ ತೀರ್ಪಿನ ಧಾಟಿಯಲ್ಲಿರುತ್ತದೆ. ನೂರಕ್ಕೆ ತೊಂಬತ್ತು ಭಾಗ ರಿವ್ಯೂಗಳು ತಾವು ಪರಿಶೀಲಿಸುವ ಕೃತಿಯ ದೌರ್ಬಲ್ಯ ಮತ್ತು ಕೊರತೆಗಳನ್ನು ಎತ್ತಿ ತೋರಿಸುವುದಕ್ಕೆ ಕೊಡುವ ಪ್ರಾಮುಖ್ಯ ಅನಗತ್ಯವಾಗಿ ಹೆಚ್ಚಿರುತ್ತದೆ. ಇಷ್ಟು ಹೇಳಿದರೂ ಕನ್ನಡದ ಇತರ ಪತ್ರಿಕೆಗಳಲ್ಲಿ ಬರುವ ರಿವ್ಯೂಗಳಿಗಿಂತ 'ಪತ್ರಿಕೆ'ಯ ರಿವ್ಯೂ ಬಹುಶಃ ಹೆಚ್ಚು ಜೀವಂತ. ರಿವ್ಯೂ ಹೀಗಲ್ಲ ಇರಬೇಕಾದದ್ದು ಅನ್ನುವ ಭಿನ್ನಾಭಿಪ್ರಾಯವನ್ನಾದರೂ ಪ್ರಚೋದಿಸುತ್ತದೆ. ಉಳಿದವು ಅಷ್ಟೂ ಮಾಡಲಾರವು.

ರಿವ್ಯೂ ಮಾಡುವ ವ್ಯಕ್ತಿಯ ಗ್ರಹಿಕೆ, ಮೌಲ್ಯ ಪ್ರಜ್ಞೆ ಹೇಗೆ ಇರುತ್ತದೋ ಹಾಗೆಯೇ ಬೇರೆಯವರೂ ಕೃತಿ ಬರೆಯಲು ಸಾಧ್ಯವಿಲ್ಲವಷ್ಟೆ! ಇಂಥ ಪುಸ್ತಕದಲ್ಲಿ ಇಂಥದ್ದು ಇಲ್ಲ, ಇಂಥದ್ದು ಹೀಗೆ ಇರಬೇಕಾಗಿತ್ತು ಎಂಬ ಎರಡೂ ಧೋರಣೆ ನಿಷ್ಫಲ. ತನಗೆ ಕಂಡದ್ದು ಕಂಡ ಹಾಗೆ, ತನಗೆ ಇರುವ ಭಾಷೆಯಲ್ಲಿ ಬರೆಯುವಾತ ಬರೆದಿರುತ್ತಾನೆ. 'ಹೀಗಿರಬೇಕಿತ್ತು' ಅಂದರೆ ಹಾಗೆನ್ನುವವರೇ ಬರೆಯಬೇಕು. 'ಹೀಗಿಲ್ಲ' ಅಂದರೆ ಬರೆವಾತ ನನಗೆ ಸಾಧ್ಯವಿರುವಷ್ಟು ಮಾತ್ರ ಬರೆಯಬಲ್ಲ ಅಲ್ಲವೆ?

'ವಸ್ತುನಿಷ್ಠ' ರಿವ್ಯೂ ನಿಜವಾಗಿ ವಸ್ತುನಿಷ್ಠವಲ್ಲ, ವೈಯಕ್ತಿಕ ಪೂರ್ವಾಗ್ರಹಗಳ ಮಂಡನೆ ಅಷ್ಟೆ. ಆದರೆ ಅದನ್ನು ವಸ್ತುನಿಷ್ಠ ಪಾರಿಭಾಷಿಕಗಳ ಭಾಷೆಯಲ್ಲಿ ಪ್ಯಾಕೇಜು ಮಾಡಲಾಗಿರುತ್ತದೆ.

■ ಓ.ಎಲ್. ನಾಗಭೂಷಣಸ್ವಾಮಿ


ಸ್ವಾತಂತ್ರ್ಯ
ಬಿ. ವಿಲ್ಸನ್
'ಸ್ವಾತಂತ್ರ್ಯ' ದ ಬಗ್ಗೆ ಅವರಿಗೇನು ಕೇಳ್ತಿರಾ....
ಅವರಿಗೆ ಕುತಂತ್ರ ಬಿಟ್ಟರೆ ಬೇರೇನು ಗೊತ್ತಿಲ್ಲ....
TV
ನನಗೇನು ಗೊತ್ತಜ್ಜಿ......
ನಾನುಹುಟ್ಟಿದ ಮೇಲಂತೂ
ನಮ್ಮ ದೇಶಕ್ಕೆ ಒಮ್ಮೆಯೂ
ಸ್ವಾತಂತ್ರ್ಯ ಸಿಕ್ಕಿಲ್ಲ...
ಬೆಲೆ ಏರಿಕೆಗೆಲ್ಲಾ ರಾಜಕಾರಣಿಗಳಿಗಿದ್ದ ಸ್ವಾತಂತ್ರ್ಯವೇ
ಕಾರಣ ಅಂತ ಹೇಗೆ ಹೇಳ್ತಿರಾ....?
PRESS



ಆನಿಮೇಷನ್
ಹಾಗೆಂದರೇನು?

ನಿರ್ಜೀವ ಹಾಳೆಯ ಮೇಲಿನ ಚಿತ್ರಗಳು ಜೀವ ತಳೆದು ನಿಲ್ಲುವಂತೆ ಮಾಡುತ್ತದೆ ಈ ಕಲೆ. ಕಲೆ ಮತ್ತು ತಂತ್ರಜ್ಞಾನ ಮೇಳವಿಸಿ ಮನುಷ್ಯ ಅತ್ಯುತ್ತಮ ರಂಜನೆಯ ಸಾಮಗ್ರಿ ಸೃಷ್ಟಿಸಿಕೊಂಡಿದ್ದಾನೆ. ಇಲ್ಲಿ ಕಷ್ಟವಿದೆ, ಸವಾಲೂ ಇದೆ.

ಟಿವಿ ಚಾನೆಲ್ ಪ್ರಿಯರಿಗೆ, ಅದರಲ್ಲೂ ಎಳೆಯರಿಗೆ 'ಟಾಂ ಅಂಡ್ ಜೆರ್ರಿ' ಕಾರ್ಟೂನ್ ಸರಣಿ ಎಂದರೆ ಪ್ರಾಣ. ಇಂಥ ಹತ್ತು ಹಲವು ಸರಣಿಗಳು ಎಲ್ಲಾ ಚಾನೆಲ್‌ಗಳಲ್ಲೂ ಬಿತ್ತರವಾಗುತ್ತಿವೆ. ಜಂಗಲ್ ಬುಕ್, ಅರೇಬಿಯನ್ ನೈಟ್ಸ್ ಮುಂತಾದ ಕಥಾ ಚಿತ್ರಗಳು ಹೆಚ್ಚು ಹೆಚ್ಚಾಗಿ ಇದೇ ಕಾರ್ಟೂನ್ ಶೈಲಿಯಲ್ಲಿಯೇ ರೂಪ ತಳೆದು ಜನರನ್ನು ಎಲ್ಲೆಡೆ ರಂಜಿಸುತ್ತಾ ಇವೆ.

ವಾಲ್ಟ್ ಡಿಸ್ನಿ ತೀರಾ ಹಿಂದೆ ರೂಪಿಸಿದ ಈ ತಂತ್ರಕ್ಕೆ ಆನಿಮೇಷನ್ ಎಂದು ಹೆಸರು. ಡಿಸ್ನಿ ಗುಂಪಿನ ಡೋನಾಲ್ಡ್ ಡಕ್, ಮಿಕ್ಕಿ ಮೌಸ್ ಜನಪ್ರಿಯವಾಗಿದ್ದು ಇದೇ ಕಾರ್ಟೂನ್ ಶೈಲಿಯ ಚಿತ್ರಗಳಿಂದ. ಈ ಹೊತ್ತು ಟಿವಿ ಮತ್ತು ಸಿನಿಮಾ ತಯಾರಿಕೆಯಲ್ಲಿ ಇದೊಂದು ಅತ್ಯಂತ ಜನಪ್ರಿಯ ತಂತ್ರಜ್ಞಾನ ಆಗಿ ಬೆಳೆಯುತ್ತಿದೆ. ಆದ್ದರಿಂದಲೇ ಹೆಚ್ಚು ಹೆಚ್ಚು ಜನರೂ ಇದರೆಡೆಗೆ ಆಕರ್ಷಿತರಾಗುತ್ತಿದ್ದಾರೆ.

ಇಂಥ ಕಾರ್ಟೂನ್ ಚಿತ್ರಗಳಿಗೆ ಸಾಮಗ್ರಿ ಒದಗಿಸಿ, ನಿರ್ಜೀವ ಚಿತ್ರಗಳು ಜೀವ ಪಡೆಯುವಂತೆ ಮಾಡುವುದೇ ಆನಿಮೇಷನ್ ತಂತ್ರ. ಇಂಥ ಚಿತ್ರಗಳಿಗೆ ಮೂಲ ಆಧಾರವಾದ ಚಿತ್ರಗಳನ್ನು ರಚಿಸುವ ಕಲಾವಿದರು ಈಗೀಗ ಕೈ ತುಂಬ ಹಣ ಮಾಡುತ್ತಾ ಇದ್ದಾರೆ. ಎಷ್ಟೋ ಜನ ಇವತ್ತಿನ ಬಹು ಬೇಡಿಕೆಯ ಸಾಫ್ಟ್‌ವೇರ್ ಎಂಜಿನಿಯರುಗಳಷ್ಟೇ ಹಣ ಸಂಪಾದಿಸುತ್ತಾರೆ.

ಮೊದಲಾದರೆ, ನಿರ್ದಿಷ್ಟ ಹಿನ್ನೆಲೆಯ ಚಿತ್ರದ ಮೇಲೆ ಸೆಲೋಫೇನ್ ಪೇಪರಿನ ಮೇಲೆ ಬರೆದ ಘಟನೆಯ ಇತರ ವ್ಯಕ್ತಿ ಅಥವಾ ಪ್ರಾಣಿಗಳ ಚಿತ್ರವನ್ನು ಇಟ್ಟು ಕ್ಯಾಮರಾ ಮೂಲಕ ಚಿತ್ರೀಕರಣ ಮಾಡಲಾಗುತ್ತಿತ್ತು. ಈಗ ಕಂಪ್ಯೂಟರ್‌ಗಳ ಬಳಕೆಯಿಂದಾಗಿ ಎರಡು ಅಥವಾ ಮೂರು ಬೇರೆ ಬೇರೆ ಚಿತ್ರಗಳನ್ನು ಒಂದಕ್ಕೊಂದು ಪೂರಕವಾಗುವಂತೆ ಹೊಂದಿಸುವ ಕಂಪ್ಯೂಟರ್

ಇಮೇಜಿಂಗ್ ಸಾಧ್ಯವಾಗಿದೆ. ಅದರಿಂದ ಕೆಲಸ ಸುಲಭ. ಆದರೆ ಮೂಲ ಸಾಮಾಗ್ರಿಯಾದ ಚಿತ್ರಗಳ ರಚನೆಯಂತೂ ಕಲಾವಿದನ ಕೈಚಳಕದಿಂದಲೇ ಆಗಬೇಕು. ಅದಕ್ಕಾಗಿಯೇ ಕಲಾವಿದನಿಗೆ ಇಲ್ಲಿ ಮಹತ್ವ. ಒಂದು ಪ್ರಸಂಗ ಇದೆ ಅಂದುಕೊಳ್ಳಿ, ಅಲ್ಲಿ ಬರುವ ಪಾತ್ರ ಕೈಯನ್ನೋ ಕಾಲನ್ನೋ ಚಲಿಸುವಂತೆ ಮಾಡಲು, ಆ ಪಾತ್ರದ ಚಲನೆಯ ಪ್ರತಿ ಹಂತವನ್ನೂ ಕಲಾವಿದ ದಾಖಲಿಸಬೇಕಾಗುತ್ತದೆ. ಅದನ್ನು ಒಂದಾದ ಮೇಲೆ ಒಂದರಂತೆ ಕ್ಯಾಮರಾದಲ್ಲಿ ಸಂಗ್ರಹಿಸಿ, ಸಂಕಲಿಸಿ, ಅದಕ್ಕೆ ನಿರ್ದಿಷ್ಟ ರೂಪ ಒದಗಿಸಬೇಕಾಗುತ್ತದೆ.

ಇದು ತೀರಾ ಸುಲಭ ಎಂದು ಮೇಲು ನೋಟಕ್ಕೆ ಕಾಣಿಸಬಹುದು. ತೆರೆಯ ಮೇಲೆ ಟಾಂ, ಜೆರ್ರಿಯನ್ನು ಒಂದು ನಿಮಿಷ ಬೆನ್ನಟ್ಟಿ ಓಡುವುದಾದರೆ ಅದನ್ನು ಪರಿಣಾಮಕಾರಿಯಾಗಿ ಮೂಡಿಸಲು 1440 ಚಿತ್ರಗಳು ಬೇಕಾಗುತ್ತವೆ ಎಂದರೆ, ಅಲ್ಲಿ ತೊಡಗಿದ ಕಲಾವಿದ ನಿರ್ವಹಿಸಬೇಕಾದ ಕೆಲಸದ ಹೊರೆ ಎಷ್ಟು ಎಂಬುದರ ಅರಿವಾಗುತ್ತದೆ.

ಜಂಗಲ್‌ಬುಕ್‌ನಲ್ಲಿ ಬರುವ ಮೋಗ್ಲಿಂಗ್ ಹಣ್ಣು ತಿನ್ನುತ್ತಾನೆ ಎಂದಿಟ್ಟುಕೊಳ್ಳಿ, ಕೈಯಲ್ಲಿ ಹಣ್ಣು ಹಿಡಿದ ಹಾಗೂ ಕೊನೆಯ ಹಂತದಲ್ಲಿ ಬಾಯಲ್ಲಿ ಇರಿಸಿಕೊಂಡ ಚಿತ್ರ ಮಾತ್ರ ಆನಿಮೇಟರ್ ಒದಗಿಸುತ್ತಾನೆ. ಆತ ಕೈ ಎತ್ತಿ ಬಾಯಿಗೆ ಇರಿಸಿಕೊಳ್ಳುವ ಕ್ರಿಯೆ ನಿರೂಪಿಸುವ ಚಿತ್ರಗಳನ್ನು ಉಳಿದವರು ಮಾಡಿಕೊಡಬೇಕು.

ಹೀಗೆ ಮುಖ್ಯ ಘಟ್ಟಗಳನ್ನು ಸೂಚಿಸುವ ಪಟ್ಟಿಗಳಿಗೆ ಬಾರ್ ಎಂದು ಕರೆಯುತ್ತಾರೆ. ಒಂದು ಪಟ್ಟಿಯಿಂದ ಇನ್ನೊಂದು ಪಟ್ಟಿಯವರೆಗೆ ಬರುವ ಮಾತು, ಹಾಡು, ಹಿನ್ನೆಲೆಯ ಸದ್ದು, ತುಟಿ ಚಲನೆ ಎಲ್ಲವನ್ನೂ ಸಿನಿಮಾದ ಮುಖ್ಯ ತಂತ್ರಜ್ಞ 'ಬಾರ್'ನಲ್ಲಿ ಸೂಚಿಸಿರುತ್ತಾನೆ. ಅದನ್ನು ಗಮನದಲ್ಲಿ ಇಟ್ಟುಕೊಂಡು ನಡುವಿನ ಚಿತ್ರಗಳು, ಅವುಗಳ ಚಲನೆ, ತುಟಿಗಳ ಚಲನೆ ಮುಂತಾದುದೆಲ್ಲ ನಿಖರವಾಗಿ, ಹಂತ ಹಂತವಾಗಿ ಕಲಾವಿದ ಒದಗಿಸಬೇಕಾಗುತ್ತದೆ. ಇಂಥ ಚಲನೆ ರೂಪಿಸುವಾಗ, ಜೀವಂತ ವ್ಯಕ್ತಿಗಳು ಆಯಾ ಚಲನೆಗೆ ಎಷ್ಟು ಸಮಯ ತೆಗೆದುಕೊಳ್ಳುತ್ತಾರೋ ಅಷ್ಟೇ ಸಮಯ ಈ ನಿರ್ಜೀವ ಪಾತ್ರಗಳು ತೆಗೆದುಕೊಳ್ಳುವಂತೆಯೇ ಚಿತ್ರ ಬಿಡಿಸಬೇಕಾಗುತ್ತದೆ. ಹೀಗೆ ಇದೊಂದು ಅತ್ಯಂತ ಸಂಕೀರ್ಣ ಆದರೆ ಇಡೀ ತಂಡವೇ ಒಂದಿಷ್ಟೂ ಕೊರತೆ ಇಲ್ಲದಂತೆ ನಿರೂಪಿಸಬೇಕಾದ ಕೆಲಸ. ಕತೆಗಾರ, ಸಂಗೀತಗಾರ, ನಿರ್ದೇಶಕ, ಸಂಕಲನಕಾರ, ಈ ಎಲ್ಲ ಹಂತದ ಕೆಲಸಗಳನ್ನು ಉಸ್ತುವಾರಿ ವಹಿಸಿಕೊಳ್ಳುತ್ತಾರೆ. ಆನಿಮೇಟರ್‌ಗಳ ಕೆಲಸ ಎಂದರೆ ಒಂದೊಂದು ಪಟ್ಟಿಯಲ್ಲಿ ಬರುವ ಚಿತ್ರಗಳನ್ನು ಒದಗಿಸುವುದು. ಇಲ್ಲಿ ಚಿತ್ರರಚನೆಯ ಕೆಲಸ ಕೂಡ ಹಂಚಿಕೆ ಆಗಬಹುದು. ಜೆರ್ರಿಯನ್ನು ಟಾಂ ಅಟ್ಟಿಸಿಕೊಂಡು ಹೋಗುವಾಗ ಜೆರ್ರಿಯ ಪ್ರತಿಯೊಂದು ಚೌಕಟ್ಟಿನ ಚಲನೆಯನ್ನು ಒಬ್ಬ, ಟಾಂನ ಚಲನೆಯನ್ನು ಇನ್ನೊಬ್ಬ ಹಾಗೂ ಹಿನ್ನೆಲೆಯ ಕಾಡು, ಗುಡ್ಡ, ಮನೆ ಇವೆಲ್ಲವನ್ನೂ ಮತ್ತೊಬ್ಬ ರಚಿಸುತ್ತಾ ಹೋಗಬಹುದು. ಅಂತಿಮವಾಗಿ ಮೂರು ಜನರ ತಂಡ ರಚಿಸಿದ ಚಿತ್ರಗಳನ್ನು ಕಂಪ್ಯೂಟರ್ ಇಮೇಜಿಂಗ್‌ನಿಂದ ಒಂದೆಡೆ ತಂದು ಅದಕ್ಕೊಂದು ನಿರ್ದಿಷ್ಟ ಸ್ವರೂಪ ನೀಡಲಾಗುತ್ತದೆ.

ಬಹಳಷ್ಟು ಸಂದರ್ಭಗಳಲ್ಲಿ ಒಂದು ಪಟ್ಟಿಯ ಚಿತ್ರ ರಚನೆ ಮಾಡುವ ತಂಡದ ಮೂವರು, ಬೇರೊಂದು ರೀತಿಯಲ್ಲಿ ಕೆಲಸ ಹಂಚಿಕೊಳ್ಳುತ್ತಾರೆ. ಮೊದಲನೆಯಾತ ಒಂದನೇ ಚಿತ್ರ ಬರೆದರೆ, ಮುಂದುವರಿಯುವ ಎರಡನೇ ಚಿತ್ರ ಎರಡನೆಯವನು, ಮೂರನೆಯವನು ಮೂರನೆಯ ಚಿತ್ರ ರಚಿಸುತ್ತಾನೆ.

ಈ ಕೆಲಸ ಸುಲಭವಾಗಲೆಂದು ಬಾರ್‌ಗಳಲ್ಲಿ ಸೂಚಿಸಲಾಗುವ ಪ್ರಸಂಗದ ಆರಂಭದ ಚಿತ್ರವನ್ನು ಸ್ಟ್ಯಾಂಡ್‌ಗ್ಲಾಸ್‌ನ ಮೇಲೆ ಪ್ರೊಜೆಕ್ಟ್ ಮಾಡಿರುತ್ತಾರೆ. ಅದರ ಮೇಲೆ ತನ್ನ ಹಾಳೆಯನ್ನು ಇರಿಸಿಕೊಂಡ ಚಿತ್ರಕಾರ ಎರಡನೇ ಚಿತ್ರ ಬರೆಯಬೇಕು. ಹಾಗೇ ಮೂರು, ನಾಲ್ಕನೇ ಚಿತ್ರಗಳ ರಚನೆ. ಇವು ಸರಿಯಾಗಿ ಬಂದಿವೆಯೇ ಎಂದು ಅಲ್ಲಿಂದಲ್ಲಿಯೇ ಪರೀಕ್ಷೆ ಕೂಡ ಮಾಡುತ್ತಾ ಹೋಗಬಹುದು.

ಇದನ್ನು ಸುಲಭಗೊಳಿಸಬಹುದಾದ ಲೈನ್ ಟೆಸ್ಟ್ ಎಂಬ ತಂತ್ರ ಈಗ ಜಾರಿಗೆ ಬಂದಿದೆ. ಚಿತ್ರಕಾರ ರಚಿಸುತ್ತಾ ಹೋಗುವ ಚಿತ್ರಗಳ ವಿಡಿಯೋ ಚಿತ್ರಣ ಆಗುತ್ತಾ ಹೋಗುತ್ತದೆ. ಅದನ್ನು ಪ್ರೊಜೆಕ್ಟ್ ಮಾಡಿ ನೋಡಿದಾಗ ಘಟನೆಗೆ ಸೂಕ್ತವಾದ ಚಲನೆ ಚಿತ್ರಗಳಲ್ಲಿ ಮೂಡಿ ಬಂದಿದೆಯೋ ಇಲ್ಲವೋ ಎಂಬುದು ತಿಳಿಯುತ್ತದೆ. ಎಲ್ಲ ಸರಿಯಾಗಿದ್ದರೆ, ಮಾತ್ರ ನೇರವಾಗಿ ಚಿತ್ರಗಳು ಸಂಕಲನಕ್ಕೆ ಹೋಗುತ್ತವೆ. ತಪ್ಪಿದ್ದಲ್ಲಿ ಅದನ್ನು ತಿದ್ದಿ, ಆನಂತರ ಮತ್ತೊಮ್ಮೆ ಲೈನ್‌ಟೆಸ್ಟ್‌ಗೆ ಒಳಪಡಿಸಿ, ಸರಿಯಾಗಿದ್ದಲ್ಲಿ ಮಾತ್ರ ಬಳಕೆಗೆ ಯೋಗ್ಯ ಎಂದು ನಿರ್ಧರಿಸಲಾಗುತ್ತದೆ. ಚಿತ್ರ ರಚನೆಯ ಹಾಗೆ ಇಂಥ ಅತಿ ಅಗತ್ಯದ ತಿದ್ದುಪಡಿಗಳನ್ನು ಕಲಾವಿದ ಮಾಡುತ್ತಾ ಹೋಗಬೇಕಾಗುತ್ತದೆ.

ಒಂದು ಬಾರ್‌ನ ಆರಂಭಿಕ ಚಿತ್ರವನ್ನು ಗಾಜಿನ ಪರದೆಯ ಮೇಲೆ ಹಿಂದಿನಿಂದ ಪ್ರೊಜೆಕ್ಟ್ ಮಾಡಿದಾಗ, ಆ ಪಾತ್ರದ ವಿಶೇಷತೆ, ನಡವಳಿಕೆ ಎಲ್ಲ ಅರ್ಥಮಾಡಿಕೊಂಡು ಅತ್ಯಂತ ಚುರುಕಾಗಿ ಪ್ರತಿ ಹಂತದ ಚಿತ್ರಗಳನ್ನು ರಚಿಸುತ್ತಾ ಹೋಗಬಲ್ಲ ಕಲಾವಿದನೇ ಯಶಸ್ವಿ ಅನಿಸಿಕೊಳ್ಳುತ್ತಾನೆ.

ಮುಖ್ಯ ಆನಿಮೇಟರ್, ಚಿತ್ರಕಾರ ಕಲಾವಿದರಲ್ಲದೆ ಇನ್ನೊಂದು ತಂಡವೂ ಇಲ್ಲಿ ಕಾರ್ಯ ನಿರ್ವಹಿಸುತ್ತದೆ. ಇವರ ಕೆಲಸ ಎಂದರೆ ರಚನೆಯಾದ ಚಿತ್ರಗಳಿಗೆ ಪರಿಪೂರ್ಣತೆ ಒದಗಿಸುವುದು. ಬೇಗ ಬೇಗ ಚಿತ್ರಗಳನ್ನು ಹಂತ ಹಂತವಾಗಿ ರಚಿಸುತ್ತಾ ಹೋಗುವುದರಿಂದ ಅಲ್ಲಿ ಕೆಲವು ಓರೆ ಕೋರೆಗಳು ಕಾಣಿಸಬಹುದು. ಕೆಲವು ವಿವರಗಳೇ ಕೈಬಿಟ್ಟು ಹೋಗಿರಬಹುದು. ಅಂಥ ದೋಷಗಳನ್ನು ಗುರುತಿಸಿ ಚಿತ್ರಗಳನ್ನು ಸರಿಪಡಿಸಿ ಅಂತಿಮವಾಗಿ ಸಿದ್ಧಗೊಳಿಸುವುದೇ ಈ ತಂಡದ ಕೆಲಸ.

ಮೊದಲೆಲ್ಲ ಹಿನ್ನೆಲೆಯ ಚಿತ್ರವನ್ನು ಇಟ್ಟುಕೊಂಡು ಅದರ ಮೇಲೆ ಪಾತ್ರಗಳನ್ನು ಸೆಲೋಫೇನ್ ಪೇಪರ್ ಮೇಲೆ ರಚಿಸಿ, ಅವುಗಳನ್ನು ಒಂದೊಂದನ್ನು ಕ್ಯಾಮರಾದಲ್ಲಿ ಸೆರೆಹಿಡಿದು, ಆನಂತರ ಎಡಿಟ್ ಮಾಡಿ ಸಂಗೀತ ಸಂಯೋಜನೆ ಮಾಡಬೇಕಿತ್ತು. ಈಗ ಕಾಲ ಬದಲಾಗಿದೆ. ಕಂಪ್ಯೂಟರ್‌ನ ಆನಿಮೋ ಎಂಬ ಸಾಫ್ಟ್‌ವೇರ್‌ನಿಂದಾಗಿ ಕೆಲಸ ಸುಲಭ ಹಾಗೂ ಅಗ್ಗವಾಗಿದೆ. ದುಬಾರಿ ಸೆಲೋಫೇನ್ ಪೇಪರ್ ಮೇಲೆ ಚಿತ್ರ ಬಿಡಿಸಬೇಕಾದ ಅಗತ್ಯ ಇಲ್ಲ. ಮಾಮೂಲು ಬಿಳಿ ಹಾಳೆಯ ಮೇಲೆ ಚಿತ್ರ ಬಿಡಿಸಿದರೆ ಸಾಕು. ಅದನ್ನು ಎತ್ತಿಕೊಂಡು ಸೂಕ್ತ ಹಿನ್ನೆಲೆಯಲ್ಲಿ ಇಡುವ ಕೆಲಸ ಈ ಕಂಪ್ಯೂಟರ್ ಮಾಡುತ್ತದೆ.

ಇತ್ತೀಚೆಗೆ ಡಿಜಿಟಲ್ ಕಂಪ್ಯೂಟಿಂಗ್ ಮತ್ತು ಎಡಿಟಿಂಗ್ ವ್ಯವಸ್ಥೆ ಬಳಕೆಗೆ ಬಂದ ಮೇಲೆ ಇಂಥ ಆನಿಮೇಷನ್ ತಂತ್ರದ ಬಳಕೆ ಇನ್ನಷ್ಟು ಸುಗಮ ಹಾಗೂ ಕರಾರುವಾಕ್ಕಾಗಿದೆ. **[ವಿವಿಧ ಮೂಲಗಳಿಂದ]**

■ ರಮೇಶ್ ಪ್ರಸಾದ್

ವೇಳೆಯ ಸದುಪಯೋಗ

■ ಆ ದಿನ ಏನು ಮಾಡಲು ಬಯಸುತ್ತೀರಿ ಎಂಬ ಸ್ಪಷ್ಟ ಅರಿವಿರಲಿ. ಅದರಂತೆ ಕಾರ್ಯಕ್ರಮವನ್ನು ರೂಪಿಸಿ. ಬಿಡುವಿನ ವೇಳೆ ಏನು ಮಾಡಬಯಸುತ್ತೀರಿ ಎಂಬುದು ತಿಳಿಯಿರಿ. ನಿರ್ದಿಷ್ಟ ಅಭ್ಯಾಸ ಮತ್ತು ಆಸಕ್ತಿ ಬೆಳೆಸಿರಿ. ನಿಮ್ಮ ಕಾರ್ಯ ಪ್ರಾರಂಭಕ್ಕೆ ಮುಂಚೆ ಸರಿಯಾಗಿ ರೂಪಿಸಿ. ಪ್ರತಿ ಹಂತದಲ್ಲೂ ನೀವು ಸ್ಪಷ್ಟತೆಯನ್ನು ಪಡೆಯಿರಿ. ಇದರಿಂದ ಅನವಶ್ಯಕವಾದ್ದನ್ನು ತೆಗೆದುಹಾಕಬಹುದಾಗಿದೆ. ಪ್ರತಿ ಕಾರ್ಯಕ್ಕೂ ಕಾಲ ನಿಗದಿಪಡಿಸಿ. ಆ ವೇಳೆಯಲ್ಲೇ ಕಾರ್ಯ ಪೂರ್ತಿಗೊಳಿಸಲು ಶ್ರದ್ಧೆಯಿಂದ ಯತ್ನಿಸಿ.


■ ಉತ್ತಮ ಮಾರ್ಗದಲ್ಲಿ ಶ್ರದ್ಧೆ, ಪ್ರಾಮಾಣಿಕತೆ, ಚುರುಕತನದಿಂದ ಕಾರ್ಯ ನಿರ್ವಹಿಸಲು ಕಲಿಯಿರಿ. ಇತರರಿಂದ ಕಲಿಯಲು ಎಂದಿಗೂ ಅಂಜದಿರಿ. ಯಾರು ಹೇಗೆ ಎಂಬುದನ್ನು ಕಾದು ತಿಳಿಯಿರಿ. ಅವಶ್ಯವಿದ್ದಲ್ಲಿ ಪಾಠ ಕಲಿಯಿರಿ. ಅನವಶ್ಯಕ ಚಟುವಟಿಕೆಗಳನ್ನು ವರ್ಜಿಸಿ. ಬಿಡುವಿನ ವೇಳೆಯ ಸದುಪಯೋಗ ಪಡಿಸಲು ಪ್ರಯತ್ನಿಸಿ. ಉದಾಹರಣೆಗೆ ಬಸ್ಸುಗಳು ಅಥವಾ ರೈಲುಗಳಿಗಾಗಿ ಕಾಯುವ ವೇಳೆಯಲ್ಲಿ ನೀವು ಮುಂದಿನ ಕೆಲಸವನ್ನು ಯೋಚಿಸಿ, ನಿಮ್ಮ ಜ್ಞಾಪಕ ಶಕ್ತಿಯನ್ನು ಪರೀಕ್ಷೆಗೆ ಒಳಪಡಿಸಿ.

■ ಸೂಕ್ತ ವೇಳೆಯಲ್ಲಿ ಮಲಗಿ. ಇದರಿಂದ ನೀವು ಹೆಚ್ಚು ಸಮಯ ನಿದ್ರಿಸಲಾರಿರಿ. ಅಥವಾ ಬೆಳಿಗ್ಗೆ ಹೆಚ್ಚು ಹೊತ್ತು ಮಲಗಲಾರಿರಿ. ನಿಗದಿತ ಕಾರ್ಯಕ್ರಮಗಳಿಗೆ ಬದ್ಧರಾಗಿರಿ. ಇದಕ್ಕೆ ನೀವು ತಡಮಾಡಿದಲ್ಲಿ ಬಹಳ ಹೊತ್ತು ಕಾಯಬೇಕಾದೀತು ಮತ್ತು ನಿಮ್ಮ ಅಮೂಲ್ಯ ಸಮಯ ವ್ಯರ್ಥಗೊಳಿಸಬೇಕಾದೀತು.

ಗಾಂಧೀಜಿ ಚಿತಾಭಸ್ಮದ ಸ್ಮಾರಕ ರಾಜ್ಯದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯಲ್ಲಿದೆ.

ಸ್ಥಳೀಯರ ಪ್ರಯತ್ನ, ಶ್ರಮಗಳಿಂದಾಗಿ ಅಸ್ತಿತ್ವಕ್ಕೆ ಬಂದ ಇದು ಈಗ ಹಾಳಾಗುತ್ತಿದೆ.

ಸ್ವಾತಂತ್ರ್ಯೋತ್ಸವ ಆಚರಣೆಯ ಈ ಸಂದರ್ಭದಲ್ಲಿ ಇಂಥ ಅಪರೂಪದ ಸ್ಮಾರಕಗಳತ್ತ, ಜನ ಹಾಗೂ ಸರ್ಕಾರ ಗಮನ ನೀಡುವುದು ಅಗತ್ಯ.



ದೇಶವಿದೇಶಗಳಿಂದ ದೆಹಲಿಗೆ ಆಗಮಿಸುವ ಯಾತ್ರಿಕರು ಸುತ್ತಲಿನ ಐತಿಹಾಸಿಕ ಸ್ಥಳಗಳನ್ನು ವೀಕ್ಷಿಸುವುದರೊಂದಿಗೆ ರಾಜಘಾಟ್‌ನಲ್ಲಿ ರಾಷ್ಟ್ರಪಿತ ಗಾಂಧೀಜಿ ಸಮಾಧಿಯನ್ನು ಸಂದರ್ಶಿಸದೆ ಇರುವುದಿಲ್ಲ.

ಇಂತಹ ಮತ್ತೊಂದು ಸ್ಮಾರಕ ದಕ್ಷಿಣ ಭಾರತದ ಗ್ರಾಮವೊಂದರಲ್ಲಿಯೂ ಇದೆಯೆಂದರೆ ಸೋಜಿಗ ಅನ್ನಿಸೀತು. ದೆಹಲಿಯ ಸ್ಮಾರಕದಂತೆ ಇದು ಪ್ರಸಿದ್ಧಿ ಪಡೆಯದೆ ಹೋದರೂ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯಲ್ಲಿ ನಿರ್ಮಿಸಲಾದ ಬಾಪೂಜಿ ಸ್ಮಾರಕ ಇತಿಹಾಸದ ಒಂದು ಭಾಗವೇ ಆಗಿದೆ.

ಹಳ್ಳಿಗಳನ್ನು ಬಹಳವಾಗಿ ಪ್ರೀತಿಸಿದ ಬಾಪೂಜಿಯವರ ಸ್ಮರಣಾರ್ಥ ಹಾಗೂ ಅವರ ಗ್ರಾಮರಾಜ್ಯದ ಕನಸನ್ನು ನನಸಾಗಿಸುವ ಯತ್ನವಾಗಿ ಈ ಸ್ಮಾರಕವನ್ನು ಇಲ್ಲಿ ನಿರ್ಮಿಸಲಾಗಿದೆ.

ಇಂದಿರಾಗಾಂಧಿ, ರಂಗನಾಥ ದಿವಾಕರ್, ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ, ದೇವರಾಜ ಅರಸು, ಬಂಗಾರಪ್ಪ, ರಾಮಕೃಷ್ಣ ಹೆಗಡೆ, ವೀರಪ್ಪ ಮೊಯ್ಲಿ, ಜನರಲ್ ಕಾರಿಯಪ್ಪ, ಐ.ಎನ್. ಎ.ರಾಮರಾವ್ ಮೊದಲಾದವರು ಇಲ್ಲಿವರೆಗೆ ಬಂದು ಗೌರವ ಸಮರ್ಪಿಸಿದ್ದಾರೆ.

ಶಿಕ್ಷಕನ ಪಾತ್ರ

ಈ ಅಪೂರ್ವ ಸ್ಮಾರಕಕ್ಕೆ ಒಬ್ಬ ಸಾಮಾನ್ಯ ಶಿಕ್ಷಕ ನಿಮಿತ್ತವಾಗಿರುವುದು ಒಂದು ವಿಶೇಷ! ಎಲೆ ಮರೆಯ ಕಾಯಿಯಂತೆ ಕಾರ್ಯ ನಿರ್ವಹಿಸಿದ ಈ ಶಿಕ್ಷಕ, ಬಿಂದು ಮಾಧವಾಚಾರ್ಯ.

ಪರಕೀಯರ ದಾಸ್ಯದಿಂದ ರಾಷ್ಟ್ರವನ್ನು ವಿಮೋಚನೆಗೊಳಿಸಲು ಗಾಂಧೀಜಿಯ 'ಮಾಡು ಇಲ್ಲವೆ ಮಡಿ' ಕರೆಗೆ ಓಗೊಟ್ಟು ದೇಶ ಸೇವೆಗೆ ತಮ್ಮನ್ನು ತೊಡಗಿಸಿಕೊಂಡು ತುರಂಗವಾಸ ಕಂಡವರು ಅವರು.

ಅನೇಕರ ಬಲಿದಾನದಿಂದ ದೇಶಕ್ಕೇನೋ ಸ್ವಾತಂತ್ರ್ಯ ಲಭಿಸಿತು. ಆದರೆ ಸಡಗರ ಸ್ವಾತಂತ್ರ್ಯೋತ್ಸವದ ಬೆನ್ನ ಹಿಂದೆಯೇ 1948ರ ಜನವರಿ 30 ರಂದು ಮಹಾತ್ಮಾಜಿ ಹಂತಕನ ಗುಂಡಿಗೆ ಬಲಿಯಾದರು. ಇಡೀ ರಾಷ್ಟ್ರ ಶೋಕಸಾಗರದಲ್ಲಿ ಮುಳುಗಿತು.

ಗಾಂಧೀಜಿ ಹತ್ಯೆಯಿಂದ ಗೊಂದಲಗೊಂಡ ಬಿಂದು ಮಾಧವರು ಅವರ ಅಂತ್ಯದೊಳಗೆ ಅವರ ತತ್ವಗಳೂ ಅಂತ್ಯಗೊಳ್ಳಬಾರದೆಂದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯಲ್ಲಿ ಬಾಪೂಜಿಯ ಸ್ಮಾರಕ ನಿರ್ಮಾಣಕ್ಕೆ ಮುಂದಾದರು.

ಈ ದಿಶೆಯಲ್ಲಿ ಕೂಡ್ಲಿಗಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಸ್ಥಾಪನೆಗೆ ಅವರು ಪ್ರೇರಕ ಶಕ್ತಿಯಾದರು. ಅವರ ಮಾರ್ಗದರ್ಶನದಲ್ಲಿ ಮುನ್ನಡೆದ ವಿದ್ಯಾರ್ಥಿ ಕಾಂಗ್ರೆಸ್ ಸಲ್ಲಿಸಿದ ಸೇವೆ ಮೆಚ್ಚುವಂಥದು.

ವಿದ್ಯಾರ್ಥಿ ಕಾಂಗ್ರೆಸ್ ಗಾಂಧೀಜಿಯ ಪವಿತ್ರ ಚಿತಾಭಸ್ಮವನ್ನು ಪಡೆಯಲು ನಡೆಸಿದ ಪತ್ರ ವ್ಯವಹಾರದ ಕಟ್ಟನ್ನೂ, ಒಂದು ಲೋಹದ ಬಿಂದಿಗೆಯಲ್ಲಿಟ್ಟು ಮೊಹರು ಮಾಡಲಾಗಿದೆ.

ಸ್ಥಾಪನೆ

ಮದ್ರಾಸಿನಿಂದ (ಚೆನ್ನೈ) ತರಲಾದ ಗಾಂಧೀ ಚಿತಾಭಸ್ಮವನ್ನು ಕೆಲಕಾಲ ಬಳ್ಳಾರಿಯ ಮಲ್ಲಸಜ್ಜನ ವ್ಯಾಯಾಮ ಶಾಲೆಯಲ್ಲಿ ಸಾರ್ವಜನಿಕ ಪ್ರದರ್ಶನಕ್ಕೆ ಇಟ್ಟು, ನಂತರ ಅಂದಿನ ಲೋಕಸಭಾ ಸದಸ್ಯ ದಿವಗಂತ ಟೇಕೂರ್ ಸುಬ್ರಮಣ್ಯಂರವರ ನೇತೃತ್ವದಲ್ಲಿ ಕೂಡ್ಲಿಗಿ ಗ್ರಾಮಕ್ಕೆ ತರಲಾಯಿತು.

ಮೊದಲಿಗೆ ವಿದ್ಯಾರ್ಥಿ ಸಮುದಾಯವೇ ತಾತ್ಕಾಲಿಕವಾಗಿ ನಿರ್ಮಿಸಿದ ಕಟ್ಟೆಯ ಮೇಲೆ ಗಂಧದ ಕರಂಡಕದಲ್ಲಿ ಚಿತಾಭಸ್ಮವನ್ನು ಇಡಲಾಯಿತು. 1950ರ ಹುತಾತ್ಮರ ದಿನಾಚರಣೆ (ಜನವರಿ 30) ಸಂದರ್ಭದಲ್ಲಿ ಅಂದಿನ ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ರಮಾನಂದ ತೀರ್ಥರು ಈ ಕರಂಡಕ ಪ್ರತಿಷ್ಠಾಪಿಸಿದರು.

ನಿಷ್ಠಾವಂತ ಗಾಂಧೀವಾದಿ ವಿರುಪಾಕ್ಷ ರಾಮರವರು ಸತತ ಒಂದು ವರ್ಷಕಾಲ ಚರಕದಿಂದ ನೂಲಿನ ಹಾರವನ್ನು ತಯಾರಿಸಿ ಗಾಂಧಿ ಸ್ಮಾರಕಕ್ಕೆ ಹಾಕಿ ತಮಗಿದ್ದ ನಿಷ್ಠೆಯನ್ನು ತೋರಿಸಿದರು.

ಪುನರ್ ಪ್ರತಿಷ್ಠಾಪನೆ

1957ರಲ್ಲಿ ಆಗಿನ ಮೈಸೂರು ರಾಜ್ಯದ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಅಚಾನಕ್ ಕೂಡ್ಲಿಗಿ ಗ್ರಾಮಕ್ಕೆ ಭೇಟಿ ಇತ್ತ ಸಂದರ್ಭದಲ್ಲಿ ಒದಗಿಸಿದ ಆರ್ಥಿಕ ನೆರವಿನಿಂದ ನಿರ್ಮಿಸಲಾದ ಅಮೃತ ಶಿಲೆಯ ಸುಂದರ ಬೃಂದಾವನದಲ್ಲಿ ಭಸ್ಮದ ಕರಂಡಕವನ್ನಿಟ್ಟು ದಿನಾಂಕ 6. 4. 1957 ರಂದು ಅಖಿಲ ಭಾರತದ ಗಾಂಧೀ ಸ್ಮಾರಕ ಸಮಿತಿಯ ಅಧ್ಯಕ್ಷರಾಗಿದ್ದ ರಂಗನಾಥ ದಿವಾಕರರವರು ಸ್ಮಾರಕವನ್ನು ವಿಧಿವತ್ತಾಗಿ ಪುನರ್ ಪ್ರತಿಷ್ಠಾಪಿಸಿದರು.

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರಾಗಿದ್ದ ಹುಕ್ಕೇರಿಕರ್ ಅವರು ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ತದನಂತರ ಕರ್ನಾಟಕದ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಉದಾರ ಧನ ಸಹಾಯದಿಂದ ಸ್ಮಾರಕ ಸಂಪೂರ್ಣಗೊಂಡಿತು.

ಸ್ಮಾರಕದ ಉಸ್ತುವಾರಿಯನ್ನು ನೋಡಿಕೊಳ್ಳಲು ಜಿ.ಕೆ. ವೆಂಕೋಬರಾವ್ ಅವರ ಅಧ್ಯಕ್ಷತೆಯಲ್ಲಿ ಗಾಂಧೀ ಸ್ಮಾರಕ ಸಮಿತಿಯನ್ನು ರಚಿಸಲಾಗಿದೆ.

ಪ್ರಸ್ತುತ ತತ್ವಗಳು

ಗಾಂಧೀಯುಗದ ಕೊಂಡಿಗಳು ಇಂದು ಒಂದೊಂದಾಗಿ ಕಳಚುತ್ತಿವೆ. ರಾಷ್ಟ್ರದಲ್ಲಿ ಇಂದು ಹೆಚ್ಚುತ್ತಿರುವ ಕೋಮು ಗಲಭೆ, ಭ್ರಷ್ಟಾಚಾರ, ನಿರುದ್ಯೋಗ, ಆರ್ಥಿಕ ಅಸಮತೋಲನಗಳ ಪರಿಹಾರಕ್ಕಾಗಿ ಗಾಂಧೀ ಮೌಲ್ಯಗಳು ಇಂದು ಪುನರುತ್ಥಾನ ಆಗಬೇಕಿದೆ. ಗಾಂಧೀಜಿಯ ಸ್ವರಾಜ್ಯದ ಕನಸು ಇನ್ನೂ ನನಸಾಗಬೇಕಿದೆ. ಸತ್ಯ ಅಹಿಂಸೆಗಳ ಪ್ರವಾದಿಯಾಗಿದ್ದ ಗಾಂಧೀಜಿಯ ನಾಡಿನಲ್ಲಿ ಇಂದು ಹಿಂಸೆ ತಲೆಯೆತ್ತಿ ಸತ್ಯ ನೆಲಕಚ್ಚಿದೆ.

ಸ್ಮಾರಕದ ಸ್ಥಿತಿ

ಬಾಪೂಜಿ ಸ್ಮಾರಕ ನಮ್ಮರಾಜ್ಯದಲ್ಲಿರುವುದು, ಅದರಲ್ಲೂ ಬಳ್ಳಾರಿ ಜಿಲ್ಲೆಯಲ್ಲಿರುವುದು ಇಲ್ಲಿನ ಜನರ ಅದೃಷ್ಟ. ಆದರೆ ಈಗ ಸ್ಮಾರಕದ ಸ್ಥಿತಿ ಕ್ಷೀಣಿಸುತ್ತಿದ್ದು ಕಟ್ಟಡದ ಆರ್.ಸಿ.ಸಿ. ಹಕ್ಕಳೆ ಹಕ್ಕಳೆಯಾಗಿ ಉದುರಿದೆ. ಇಂತಹದೊಂದು ಸ್ಮಾರಕವನ್ನು ಕಾಪಾಡುವುದು ಸರ್ಕಾರದ ಕರ್ತವ್ಯ.

1990-95 ರವರಗೆ ಮಂಡಲ್ ಪಂಚಾಯ್ತಿಯ ಪ್ರಧಾನರಾಗಿದ್ದ ಮುದ್ದಪ್ಪನವರ ಆಡಳಿತಾವಧಿಯಲ್ಲಿ ಸ್ಮಾರಕಕ್ಕೆ ಸುತ್ತಲೂ ಪಂಚಾಯ್ತಿ ವತಿಯಿಂದ ಗಿಲಾವು ಹಾಕಿಸಿದ್ದು ಬಿಟ್ಟರೆ ಇದುವರೆಗೂ ಯಾವುದೇ ರೀತಿಯ ಸವಲತ್ತು ಕಂಡಿಲ್ಲ.

ಇನ್ನು ಮುಂದೆಯಾದರೂ ಇದಕ್ಕೆ ಸಂಬಂಧ ಪಟ್ಟವರು ಇತ್ತ ಕಡೆ ಗಮನ ಹರಿಸುತ್ತಾರೆಯೇ? ಕಾದು ನೋಡಬೇಕು.


■ಕೆ. ಉಮೇಶ್

ನಾನು ಮತ್ತು ಗಾಂಧಿ

ಎರಡು ತಲೆಮಾರುಗಳ ಗಾಂಧೀಜಿ ಕುರಿತ ಅಭಿಪ್ರಾಯ ಇಲ್ಲಿದೆ. ಹಿರಿಯ ಗಾಂಧಿವಾದಿ ಕೆ.ಎಸ್. ನಾರಾಯಣ ಸ್ವಾಮಿ ಗಾಂಧೀಜಿ ಅವರನ್ನು ಹತ್ತಿರದಿಂದ ಬಲ್ಲವರು. ಅವರೊಡನೆ ಒಡನಾಡಿದವರು, ಅವರ ವಿಚಾರಗಳಿಗೆ ಮನಸೋತು, ಬೆಳೆಸಲು ಜೀವನ ಮುಡಿಪಾಗಿರಿಸಿದವರು. ಅವರ ಮಗ ಅರುಣ್ ಗಾಂಧೀಜಿ ಕಂಡವನಲ್ಲ, ಅವನು ಕಂಡಿದ್ದು ಸಿನಿಮಾದ ಗಾಂಧಿಯನ್ನು ಮಾತ್ರ. ಉದ್ಯಮಿಯಾದ ಆತನಿಗೆ ಏನನ್ನಿಸುತ್ತದೆ. ಹೀಗೆ ಎರಡು ತಲೆ ಮಾರು ಗಾಂಧಿ ಕುರಿತಾಗಿ ತಮಗನಿಸಿದ್ದು ಓದುಗರ ಮುಂದೆ ಇರಿಸಿದ್ದಾರೆ.

ಈ ಶತಮಾನದ ಮೂವತ್ತನೆಯ ದಶಕದಲ್ಲಿ ಭಾರತ ಒಂದು ಅಸಾಧಾರಣ ಜಾಗೃತಿಯ ಮಡಿಲಲ್ಲಿ ಸಾಗಿ ಹೋಗುತ್ತಿತ್ತು. ರಾಜಕೀಯ ಮತ್ತು ಸಾಂಸ್ಕೃತಿಕ ಅವನತಿಯ ಅರಿವು ಜನಮನದ ಅಂತರಾಳದಿಂದ ಆಸ್ಫೋಟಗೊಂಡು ಎದ್ದು ನಿಲ್ಲುತ್ತಿತ್ತು. ದೇಶ ಆರ್ಥಿಕ ದಾಸ್ಯದಿಂದ ಕ್ಷೀಣ ಧ್ವನಿಯಲ್ಲಿ ನರಳುತ್ತಿತ್ತು. ಕೋಟ್ಯಂತರ ಹೃದಯಗಳಲ್ಲಿ ಗಾಂಧಿ ಚಳುವಳಿ ಪ್ರತಿಸ್ಪಂದಿಸಿ ದೇಶಾಭಿಮಾನ ಉಕ್ಕಿ ಹರಿಯಲು ಪ್ರಾರಂಭಿಸಿತ್ತು. ಅವುಗಳ ಪ್ರಚಂಡ ಪರಿಣಾಮವೇ ವಿಶ್ವ ವಿಖ್ಯಾತ ದಾಂಡಿಯಾತ್ರೆ ಅಥವ ಉಪ್ಪಿನ ಸತ್ಯಾಗ್ರಹ.

ಬ್ರಿಟಿಷ್ ಚಕ್ರಾಧಿಪತ್ಯ ಆ ದಿನಗಳ ಸತ್ವಪೂರ್ಣ ಸತ್ಯಾಗ್ರಹಗಳ ಸಂಕಟ ಪ್ರವಾಹದಲ್ಲಿ ತತ್ತರಿಸಿ ಬುಡ ಮೇಲಾಗುವ ಸ್ಪಷ್ಟ ಚಿಹ್ನೆಗಳು ದಿನದಿನವೂ ವ್ಯಾಪಕವಾಗಿ ಹರಡುತ್ತಿತ್ತು. ರಾಷ್ಟ್ರಶಕ್ತಿ ಯಾವುದೋ ಅಲೌಕಿಕ ಅವ್ಯಾಹತ ಅಹಿಂಸಕ ಆಂದೋಲನದಲ್ಲಿ ಪ್ರಜ್ವಲಿತವಾದಂತೆ ಯುವಜನರ ದೇಶಪ್ರೇಮವನ್ನು ಉಜ್ವಲಗೊಳಿಸುತ್ತಿತ್ತು. ಗುಜರಾತಿನ ಸಬರ್ಮತಿ ಆಶ್ರಮದಿಂದ ಅರೆ ನಗ್ನ ಫಕೀರನೆನಿಸಿದ್ದ ಗಾಂಧೀಜಿ ಸ್ವಾತಂತ್ರ್ಯ ದಂಡಧಾರಿಯಾಗಿ ಆತ್ಮಶಕ್ತಿಯ ಸೂರ್ಯ ಪ್ರಕಾಶದಂತೆ ಬೆಳಗಿ ರಾಷ್ಟ್ರಸಂಕಲ್ಪದ ಪ್ರತೀಕವಾಗಿ ಏಪ್ರಿಲ್ 1930ರಲ್ಲಿ ಹೊರಟು ಪಾದಯಾತ್ರೆಯಲ್ಲಿ ಸಾಗುತ್ತ ಸಮುದ್ರ ತೀರದ ದಾಂಡಿ ಎಂಬ ಸ್ಥಳದಲ್ಲಿ ಸವಿನಯ ಶಾಸನಭಂಗ ಚಳುವಳಿಯನ್ನು ಉದ್ಘಾಟಿಸಿ ಬಿಟ್ಟರು. ಅದ್ಭುತ ಮೋಡಿಯಂತೆ ಈ ಘಟನೆ ಭಾರತೀಯರನ್ನೆಲ್ಲ ಒಗ್ಗೂಡಿಸಿ ಧೀಶಕ್ತಿ ತುಂಬಿ ಸ್ವಾತಂತ್ರ್ಯ ಸಮರದ ತ್ಯಾಗ ಬಲಿದಾನಗಳಿಗೆ ಸಿದ್ಧ ಮಾಡಿಬಿಟ್ಟಿತು. ಪ್ರಸಾರ ಮಾಧ್ಯಮಗಳೇ ಇಲ್ಲದಿದ್ದಾಗ ಈ ಪವಾಡ ಹೇಗಾಯಿತು ಎಂಬ ಮಾತು ಈಗಲೂ ಒಂದು ನಿಗೂಢ. ಆದರೆ ಐತಿಹಾಸಿಕವಾಗಿ ವಾಸ್ತವವಾದ ಒಂದು ಅತ್ಯದ್ಭುತ ಘಟನೆ.



ಆಗ ನಾನು ಮಧುಗಿರಿಯ ಪ್ರೌಢಶಾಲೆಯ ವಿದ್ಯಾರ್ಥಿ. ಆಗಿನ ಮಹಾರಾಜರ ಮೈಸೂರು ಸಂಸ್ಥಾನದಲ್ಲಿ ನನ್ನ ತಂದೆ ಸರಕಾರಿ ಆಸ್ಪತ್ರೆಯ ವೈದ್ಯರು. ತಾಲ್ಲೂಕಿಗೊಂದು ಪ್ರೌಢಶಾಲೆಯೂ ಇರಲಿಲ್ಲ. ಇಡೀ ರಾಜ್ಯದಲ್ಲಿ ಸುಮಾರು 20-25 ಪ್ರೌಢಶಾಲೆಗಳಿದ್ದವು. ಬೆಂಗಳೂರು, ಮೈಸೂರು ನಗರಗಳಲ್ಲಿ ಇಂಟರ್‌ಮೀಡಿಯೆಟ್ ಕಾಲೇಜುಗಳು. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಆಗ ಒಟ್ಟು ಎರಡು ಮೂರು ಸಾವಿರ ವಿದ್ಯಾರ್ಥಿಗಳಷ್ಟೇ ಕುಳಿತುಕೊಳ್ಳುತ್ತಿದ್ದರು. ದೊಡ್ಡ ಊರುಗಳಿಗೆ ಮಾತ್ರ ನಾಲ್ಕಾರು ವೃತ್ತ ಪತ್ರಿಕೆಗಳು ಬಂದರೆ ಹೆಚ್ಚು. ಅದೂ ನಾಲ್ಕು ದಿನಗಳ ಹಿಂದೆ ನಡೆದ ಸುದ್ದಿಯ ಸಾರಾಂಶಗಳನ್ನಷ್ಟೇ ಕೊಡುತ್ತಿದ್ದ ಕಾಲ. ಬಹುತೇಕ ವಿದ್ಯಾವಂತರೆಲ್ಲ ಸರ್ಕಾರಿ ನೌಕರಿಯನ್ನಷ್ಟೇ ಎದುರು ನೋಡುತ್ತಿದ್ದರು. ಅಲ್ಲದೆ ಮಹಾರಾಜರಲ್ಲಿಟ್ಟಿದ್ದ ಸ್ವಾಮಿಭಕ್ತಿ, ಪರಂಪರಾಗತ ದಾಸ್ಯ ಸಂಸ್ಕೃತಿ

ಬ್ರಿಟಿಷ್ ಆಡಳಿತದ ಬಗ್ಗೆ ಒಂದು ವಿಚಿತ್ರ ಆಕರ್ಷಣೆ ಎದ್ದು ಕಾಣುತ್ತಿತ್ತು. ಅದರಲ್ಲೂ ಮಧ್ಯಮ ವರ್ಗದ ಬ್ರಾಹ್ಮಣ ಕುಲದವರೇ ಹೆಚ್ಚಾಗಿ ಶಾಲಾ ಕಾಲೇಜುಗಳಿಗೆ ಮಕ್ಕಳನ್ನು ಕಳುಹಿಸಿ ಇಂಗ್ಲಿಷ್ ಶಿಕ್ಷಣ ಕೊಡಿಸುತ್ತಿದ್ದುದರಿಂದ ಒಬ್ಬ ಸಾಮಾನ್ಯ ಕಾರಕೂನನಿಂದ ಹಿಡಿದು ಉನ್ನತಾಧಿಕಾರಿಯ ಹುದ್ದೆಯವರೆಗೂ ಅದೇ ಮಧ್ಯಮ ವರ್ಗದ ಬ್ರಾಹ್ಮಣ ಕುಲದವರು ಕಾಣುತ್ತಿದ್ದರು. ಪಾಪಭೀರುತನ ಅವರಲ್ಲಿನ ಎಲ್ಲ ಸಾಹಸ ಪ್ರವೃತ್ತಿಗಳನ್ನು ಹಿಂದೆ ತಳ್ಳಿ ಅಧಿಕಾರಕ್ಕೆ ಸ್ವಾಮಿಭಕ್ತಿಯಿಂದ ನಡೆದುಕೊಳ್ಳುವುದೇ ಪ್ರಧಾನ ಗುಣವಾಗಿಬಿಟ್ಟಿತ್ತು. ಆಗಿನ ಶಿಕ್ಷಕ ವರ್ಗದವರೆಲ್ಲ ಸರ್ಕಾರಿ ನೌಕರರೇ. ಆದರೆ ಸ್ವಲ್ಪ ಸ್ವತಂತ್ರ ಚಿಂತನೆಗೆ ಅವಕಾಶವಿದ್ದ ಈ ವೃತ್ತಿಯಲ್ಲಿ ಅನೇಕ ಉತ್ತಮ ಸಿದ್ಧಿ ಪಡೆದ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ, ಸ್ವಾತಂತ್ರ್ಯ, ಸಾಂಸ್ಕೃತಿಕ ಉನ್ನತಿ, ನಮ್ಮ ಪ್ರಾಚೀನ ಜೀವನ ಮೌಲ್ಯಗಳನ್ನೆಲ್ಲ ಕುರಿತು ಕುತೂಹಲವನ್ನು ಕೆರಳಿಸುವಂತೆ ಬೋಧಿಸುತ್ತಿದ್ದರು. ಅಂಥ ಕೆಲವು ಉಪಾಧ್ಯಾಯರು ನಮ್ಮ ಶಾಲೆಯಲ್ಲೂ ಇದ್ದರು.

ವಿಜ್ಞಾನ ಶಿಕ್ಷಕರಾಗಿದ್ದ ವೆಂಕಟಾಚಲ ಐಯ್ಯಂಗಾರ್ಯರು, ಹಿಂದಿ ಮತ್ತು ವ್ಯಾಯಾಮ ಶಿಕ್ಷಕರಾಗಿದ್ದ ನಾರಾಯಣಾಚಾರ್ಯರು, ಶುದ್ಧ ಖಾದಿಧಾರಿಗಳು. ಗಾಂಧೀಜಿಯ ಬಗ್ಗೆ ಅಪಾರ ಗೌರವ. ತರಗತಿಗಳಲ್ಲಿ ಸತ್ಯಾಗ್ರಹ ಚಳುವಳಿಗಳ ಬಗ್ಗೆ ವಿವರಿಸಿ ಸ್ಫೂರ್ತಿ ತುಂಬುತ್ತಿದ್ದರು. ನಾರಾಯಣಾಚಾರ್ಯರು 1924ರ ಬೆಳಗಾವಿ ಕಾಂಗ್ರೆಸ್ಸಿಗೆ ಸೇವಾದಳ ಸ್ವಯಂ ಸೇವಕರಾಗಿ ಹೋಗಿ ಬಂದಿದ್ದರು. ಗಾಂಧೀಜಿಯೇ ಅಲ್ಲಿ ಅಧ್ಯಕ್ಷರಾಗಿದ್ದರು. ಈ ವಿವರಣೆಗಳನ್ನು ಕೇಳುವುದೇ ನಮಗೆ ರೋಮಾಂಚನ ಉಂಟು ಮಾಡುತ್ತಿತ್ತು. ಅದೇ ವೇಳೆಗೆ ರಾಷ್ಟ್ರನಾಯಕರಲ್ಲಿ ಅಗ್ರಗಣ್ಯರೆನಿಸಿದ್ದ ಮೋತಿಲಾಲ ನೆಹರು ನಿಧನರಾದರು. ಮೊದಲ ವಿದ್ಯಾರ್ಥಿ ಮುಷ್ಕರ. ಊರಲ್ಲೆಲ್ಲ ಉತ್ಸಾಹ. ಸ್ಥಳೀಯ ಕಾಂಗ್ರೆಸ್ ನಾಯಕರೆಲ್ಲಾ ಮೆರವಣಿಗೆ ಹೊರಟಿದ್ದರು. ತ್ರಿವರ್ಣಧ್ವಜ ನಮಗೆ ಅತ್ಯಂತ ಪವಿತ್ರ ಲಾಂಛನವಾಗಿಬಿಟ್ಟಿತು. ದೇಶ, ಗಾಂಧಿ, ತ್ರಿವರ್ಣಧ್ವಜ, ವಂದೇಮಾತರಂ, ಏಕಕಾಲಕ್ಕೆ ಕಿರಿಯರ ಹೃದಯವನ್ನಾಕ್ರಮಿಸಿ ನಿಂತ ಜ್ವಲಂತ ಧೀಶಕ್ತಿಯ ಪ್ರಕಾರಗಳಾಗಿ ಬಾಳಿನಲ್ಲಿ ಶಾಶ್ವತವಾಗಿ ನಿಂತುಬಿಟ್ಟಿತು.

ಮಧುಗಿರಿಯಲ್ಲಿ ನನ್ನ ಮುಂಜಿಗೆ ಅಧ್ವರ್ಯುಗಳಾಗಿ ಬಂದಿದ್ದ ಬಾಣಾವರದ ಶ್ರೀಕಂಠ ಜೋಯಿಸರು ಸ್ವತಃ ಸ್ವಾತಂತ್ರ್ಯ ಯೋಧರಾಗಿದ್ದರು. ಪ್ರಖಾಂಡ ಸಂಸ್ಕೃತ ಪಂಡಿತರು. ಮುಂಜಿಯ ಸಮಾರಂಭದಲ್ಲಿ ಭಾರತದ ಪ್ರಾಚೀನ ಜ್ಞಾನ ಭಂಡಾರ, ಮಹೋನ್ನತ ಸಂಸ್ಕೃತಿ, ಸುಜಲಾಮ್, ಸುಫಲಾಮ್ ಸಸ್ಯಶ್ಯಾಮಲೆ ಭರತ ಖಂಡದ ಮಹಾಮಹಿಮೆ, ಅದರ ವಿಮೋಚನೆಗೆ ನಾವು ದೀಕ್ಷೆ ತೊಡಬೇಕಾದ ಅವಶ್ಯಕತೆ ಕುರಿತು ಅಮೋಘ ಭಾಷಣ ಮಾಡಿದರು. ಅದೇ ಸಮಾರಂಭದಲ್ಲಿ ನನ್ನ ಬಂಧುವೊಬ್ಬರು ಆಗ ತಾನೆ ಪ್ರಕಟವಾಗಿದ್ದ ಗಾಂಧೀಜಿಯ ಆತ್ಮಕಥೆ - ಸತ್ಯಶೋಧನೆಯ ಕನ್ನಡ ಅನುವಾದದ ಐದು ಸಂಪುಟಗಳನ್ನು ಉಡುಗೊರೆಯಾಗಿ ಕೊಟ್ಟರು. ನಿಟ್ಟೂರ್ ಶ್ರೀನಿವಾಸರಾಯರೂ ಅವರ ಪತ್ನಿಯವರೂ ಕನ್ನಡಿಸಿದ್ದರು. ಐದು ಸಂಪುಟಕ್ಕೂ ಆಗ ಐದು ರೂಪಾಯಿ ಮಾತ್ರ. ಖಾದಿ ಹೊದಿಕೆ ಇರುತ್ತಿತ್ತು. ಅದೊಂದು ಅಮೂಲ್ಯ ಕೊಡುಗೆಯಾಯಿತು. ಓದುತ್ತ ಓದುತ್ತ ನನ್ನ ಮನಸ್ಸು ಹೃದಯಗಳಲ್ಲಿ ಗಾಂಧೀಜಿ ವ್ಯಕ್ತಿತ್ವದ ಗೊಮ್ಮಟ ಸ್ವರೂಪ ಕಡೆದು ನಿಂತು ಬಿಟ್ಟಿತು. ದೇಶಕ್ಕಾಗಿ ನಮ್ಮ ಕಿಂಚಿತ್ ಹವಿಸ್ಸನ್ನು ಧಾರೆಯೆರೆಯುವುದೆ ಜೀವನದ ಪರಮಗುರಿ ಎಂಬ ಗಾಯತ್ರಿ ನನ್ನ ಬ್ರಹ್ಮೋಪದೇಶದ ದಿನದಿಂದಲೇ ಗುಣಗುಣಿಸಹತ್ತಿತ್ತು. 'ಈ

ದಿಸೆಯಲ್ಲಿ ನಡಿ' ಎಂದು ನಿರ್ದೇಶಿಸುವ ಧ್ವನಿಯೂ ಆಯಿತು. ಶಾಲೆ ಕಾಲೇಜುಗಳಲ್ಲಿನ ಶಿಕ್ಷಣ ಕ್ರಮೇಣ ನೀರಸವೆನಿಸಿ ಸ್ವಾತಂತ್ರ್ಯ ಸಂಗ್ರಾಮದ ಕಡೆಗೇ ಮನಸ್ಸು ಸೆಳೆದೊಯ್ಯುತ್ತಿತ್ತು.

ಈ ವೇಳೆಗಾಗಲೇ ನನಗೆ ಗಾಂಧೀಜಿಯ ಪ್ರಥಮ ದರ್ಶನವಾಗಿತ್ತು. ನನಗಾಗ ಹತ್ತು ವರ್ಷ. ನನ್ನ ತಂದೆಯವರಿದ್ದ ಸಣ್ಣ ಊರಿನಲ್ಲಿ ಮಾಧ್ಯಮ ಶಾಲೆಯ ಎರಡನೆ ತರಗತಿ ಮಾತ್ರ ಇತ್ತು. ಮೂರನೆಯ ತರಗತಿಗಾಗಿ ಬೆಂಗಳೂರಿನಲ್ಲಿದ್ದ ನನ್ನ ಸೋದರ ಮಾವನ ಮನೆಗೆ ಬಂದೆ. ಅವರು ಕೋಟೆ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯರು. ಅವರ ಮಕ್ಕಳು ನನಗಿಂತ ದೊಡ್ಡವರು. ಆಗಿನ ಬೆಂಗಳೂರಿನ ಸುಪ್ರಸಿದ್ಧ ನ್ಯಾಷನಲ್ ಪ್ರೌಢ ಶಾಲೆಯಲ್ಲಿ ಓದುತ್ತಿದ್ದರು. ಗಾಂಧೀಜಿ ಆರೋಗ್ಯ ಸುಧಾರಣೆಗಾಗಿ 1927ರಲ್ಲಿ ನಂದಿ ಬೆಟ್ಟಕ್ಕೆ ಬಂದು ಕೆಲವು ಕಾಲ ಬೆಂಗಳೂರಿನಲ್ಲಿ ತಂಗಿದ್ದರು. ನ್ಯಾಷನಲ್ ಪ್ರೌಢಶಾಲೆ ವಿದ್ಯಾರ್ಥಿಗಳೆಲ್ಲ ಅವರ ಬಿಡಾರದಲ್ಲಿ ಸ್ವಯಂ ಸೇವಕರು. ಸಂಜೆಯ ಪ್ರಾರ್ಥನಾ ಸಭೆಗೆ ನನ್ನ ಸೋದರರೊಡನೆ ನಾನೂ ಹೋಗಿ ಬರುತ್ತಿದ್ದೆ. ಆಗ ನನ್ನ ಮನಸ್ಸಿನ ಮೇಲೆ ನ್ಯಾಷನಲ್ ಪ್ರೌಢಶಾಲೆಯ ವಿದ್ಯಾರ್ಥಿಗಳೂ, ಅಧ್ಯಾಪಕರೂ ಪ್ರಭಾವ ಮಾಡಿದರು. ಅವರ ಹಾಗೆ ದೇಶಸೇವೆಯಲ್ಲಿ ತೊಡಗಬೇಕು ಎನ್ನಿಸಿತು. ಮುಂದೆ ಮಧುಗಿರಿ ಪ್ರೌಢಶಾಲೆಯಲ್ಲಿ ಈ ಭಾವನೆ ಬೆಳೆದು ನಿಂತಿತು.



ಪೊಲೀಸ್ ರಹಸ್ಯ ವರದಿಯಲ್ಲಿಯ ಒಂದು ರೇಖಾಚಿತ್ರ

ಗಾಂಧೀಜಿಯ ಚಿತ್ರ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿತ್ತು. ಯಾವುದೋ ದೇವಲೋಕದಿಂದ ಬಂದಿಳಿದ ಅವತಾರ ಪುರುಷನಂತೆ ದೂರದಿಂದ ನಮ್ಮೆಲ್ಲರನ್ನು ತನ್ನ ಮೋಡಿಯ ಕಕ್ಷೆಯಲ್ಲಿ ಕೃಪಾಕಟಾಕ್ಷದಿಂದ ನೋಡಿ ಅನುಗ್ರಹಿಸುವ ಮಹಾತ್ಮ ಎನ್ನಿಸುವ ಅವರ ದರ್ಶನವೇ ಒಂದು ಪುಣ್ಯ. ಅವರೊಡನೆ ರಾಮಧ್ಯಾನ ಭಜನೆಯಲ್ಲಿ ಸೇರಿಕೊಂಡು ಧ್ವನಿಗೂಡಿಸುವುದೇ ಆನಂದ. ಎಂದಷ್ಟೇ ಮನಸ್ಸಿನಲ್ಲಿ ಉಳಿಯಿತು.

1932ರಲ್ಲಿ ಮೈಸೂರು ಇಂಟರ್ ಮೀಡಿಯಟ್ ತರಗತಿಗೆ ಸೇರಿದಾಗ ಮತ್ತೆ ಗಾಂಧೀಜಿಯ ದರ್ಶನ. ಹರಿಜನಸೇವೆಯ ದಕ್ಷಿಣ ಭಾರತ ಪ್ರವಾಸದಲ್ಲಿ ಮೈಸೂರಿಗೆ ಬಂದು ಮೂರು ದಿನ ತಂಗಿದ್ದರು. ಆ ವೇಳೆಗೆ ದಾಂಡಿಯಾತ್ರೆಯ ಪ್ರಚಂಡ ವಿಜಯ ಮೊಳಗಿತ್ತು. ಕಾಲೇಜು ಅಧ್ಯಾಪಕರಲ್ಲಿ ಕುವೆಂಪು ನಮಗೆ ಒಬ್ಬ ಆದರ್ಶ ಜೀವಿ. 'ಸಭ್ಯತಾದೇವತೆ' ಎಂದವರು ಬರೆದ ಕವನ ಗಾಂಧೀಜಿಯನ್ನು ಕುರಿತದ್ದು. ಆ ಸಾಲುಗಳಲ್ಲಿ ಮಿಂಚಿದ ವಿದ್ಯುತ್ ಪ್ರವಾಹ ಅಸ್ವಾದ್ಯಶವಾಯಿತು. ಕನ್ನಡ ಸಾಹಿತಿಗಳಲ್ಲಿ ನಮ್ಮ ಮನಸ್ಸನ್ನು ತುಂಬಿದ್ದ ಬೇಂದ್ರೆ, ಕಾರಂತ, ಸಿದ್ದವನಹಳ್ಳಿ ಕೃಷ್ಣಶರ್ಮ, ರಾಜರತ್ನಂ, ಅ.ನ.ಕೃಷ್ಣರಾಯರು, ಡಿ.ವಿ.ಜಿ. ಮುಂತಾದವರೆಲ್ಲ ಮಹಾತ್ಮರ ಮೂರ್ತಿಯನ್ನು ಅವರ ವಿವಿಧ ಗುಣಗಳ ವರ್ಣನೆಯಲ್ಲಿ ಯುವಕರ ಮನೋಕ್ಷಿತಿಜದ ಮೇಲೆ ಸ್ಫುಟವಾಗಿ ಕಡೆದು ನಿಲ್ಲಿಸಿ ಬಿಟ್ಟಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು ಮೊದಲು ಸ್ವದೇಶೀ ದೀಕ್ಷೆ ಕೊಟ್ಟು ರಾಷ್ಟ್ರ ನಿರ್ಮಾಣದಲ್ಲಿ ಗಾಂಧೀಜಿ ಹಾಕಿಕೊಟ್ಟ ಹದಿನೆಂಟು ನಿರ್ಮಾಣ ಕಾರ್ಯದಲ್ಲಿ ನಿಷ್ಠೆಯಿಂದ ತೊಡಗುವುದೇ ಪ್ರಧಾನವಾಗಿತ್ತು. ಒಂದು ಸತ್ಯಾಗ್ರಹದಿಂದ ಮತ್ತೊಂದಕ್ಕೆ ಸುಮಾರು ಹತ್ತು ವರ್ಷಗಳ ಅಂತರವಿರುತ್ತಿತ್ತು. 1922, 1932 ಮತ್ತು 1942, ಸಂಗ್ರಾಮದ ಮೈಲಿಗಲ್ಲುಗಳು. ಮೈಸೂರಿನಲ್ಲಿ ಸುಪ್ರಸಿದ್ಧ ದೇಶ ಸೇವಕರೆನಿಸಿದ್ದ ತಗಡೂರು ರಾಮಚಂದ್ರರಾಯರು, ಅಗರಂ ರಂಗಯ್ಯನವರು ಎಂ.ಎನ್. ಜೋಯಿಸರು, ಮುಂತಾದವರ ನಿಕಟ ಸಂಪರ್ಕ ದೊರೆಯಿತು. ಆಗ ದೇಶೀಯ ಸಂಸ್ಥಾನಗಳಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಚಳುವಳಿಗಳು ನೇರವಾಗಿ ನಡೆಯುತ್ತಿರಲಿಲ್ಲ. ಆದರೆ ಪ್ರತಿಯೊಂದು ಘಟ್ಟದಲ್ಲೂ ಅದರ ಪ್ರತಿಧ್ವನಿ ಯುವಕ ವೃಂದವನ್ನು ಹೊಡೆದೆಬ್ಬಿಸಿ ಅನೇಕ ಅಸಹಕಾರ ಆಂದೋಲನಗಳಲ್ಲಿ ಭಾಗವಹಿಸುವಂತೆ ಮಾಡಿತ್ತು. ವಿದ್ಯಾರ್ಥಿ ಮುಷ್ಕರಗಳೇ ಪ್ರಧಾನವಾಗಿದ್ದವು. ರಾಜಭಕ್ತ ನಿಷ್ಠರಾಗಿದ್ದ ಅನೇಕ ಪ್ರತಿಷ್ಠಿತ ಜನ ಮೈಸೂರಿನ ಗಣ್ಯ ಪಂಕ್ತಿಯಲ್ಲಿರುತ್ತಿದ್ದರು. ನಾಲ್ವಡಿ ಕೃಷ್ಣರಾಜವೊಡೆಯರ ಬಗ್ಗೆ, ದಿವಾನ್ ಮಿರ್ಜಾ ಸಾಹೇಬರ ಬಗ್ಗೆ ಗಾಂಧೀಜಿ ಮೆಚ್ಚುಗೆಯ ನುಡಿಯನ್ನಾಡಿದ್ದುದು ಅವರಿಗೂ ಸಂತೋಷವಾಗಿತ್ತು. ಆದರೆ ಜವಹರರು, ನಾಯಕರಾಗಿ ಮೈಸೂರಿಗೆ ಬಂದಾಗ ಸಾರ್ವಜನಿಕವಾಗಿ ರಾಜಮಹಾರಾಜರುಗಳು ಬ್ರಿಟಿಷರ ಗುಲಾಮರು ಇಲ್ಲಿಯ ಜನ ಎರಡು ಪಟ್ಟು ಹೆಚ್ಚಿನ ಗುಲಾಮರಾಗಿದ್ದೀರಿ (ಡಬಲ್ ಸ್ಲೇವ್ಸ್) ಎಂದಾಗ ಈ ಜನರು ರೊಚ್ಚಿಗೆದ್ದರು. ವಿದ್ಯಾರ್ಥಿ ಮುಷ್ಕರಗಳನ್ನು ನಿರ್ದಯವಾಗಿ ಸದೆಬಡಿದು ಅದಕ್ಕೆ ಸಹಾನುಭೂತಿ ತೋರಿದ ಪ್ರಾಧ್ಯಾಪಕರುಗಳನ್ನು ದಂಡಿಸುವುದು ಸರ್ಕಾರದ ನೀತಿಯಾಗಿತ್ತು. ನಾನು ಕಾಲೇಜು ಮುಗಿಸುವ ವೇಳೆಗೆ ಕ್ವಿಟ್ ಇಂಡಿಯಾ ಚಳುವಳಿ ಸಂಭವಿಸಿತು. ರುಚಿಯಿಲ್ಲದಿದ್ದ ಕಾಲೇಜು ತರಗತಿಗಳಿಗೆ ವಿದಾಯ ಹೇಳಿ ಬಿಟ್ಟೆ.

ಕ್ವಿಟ್ ಇಂಡಿಯಾ ಚಳುವಳಿ ಪ್ರಧಾನವಾಗಿ ವಿದ್ಯಾರ್ಥಿ ಚಳುವಳಿ. ರಾಷ್ಟ್ರೀಯ ಕಾಂಗ್ರೆಸ್ ಗಾಂಧೀಜಿಯ ಸಂಪೂರ್ಣ ನಿಯಂತ್ರಣಕ್ಕೆ ಒಪ್ಪಿ ಎರಡನೇ ಮಹಾಯುದ್ಧದ ಮಧ್ಯೆಯೇ ಸತ್ಯಾಗ್ರಹ ಸಮರವನ್ನು ಘೋಷಿಸಿ ಬಿಟ್ಟಿತು. ಆ ಕೂಡಲೇ ದೇಶದ ಮೂಲೆ ಮೂಲೆಗಳಿಂದ ಬೊಂಬಾಯಿಗೆ ಬಂದಿದ್ದ ಮುಖಂಡರನ್ನೆಲ್ಲ ಸೈನಿಕ ಶಾಸನದ ರಾಷ್ಟ್ರರಕ್ಷಣಾ ವಿಧಿಗಳನ್ನು ಅನ್ವಯಿಸಿ ಸೆರಮನೆಗೆ ಸೇರಿಸಿ ಬಿಟ್ಟರು. ಗಾಂಧೀಜಿ ಪೂನಾದ ಆಗಾಖಾನ್ ಅರಮನೆಯಲ್ಲಿ ಬಂಧಿತರಾದರು. ಪ್ರತಿಯೊಂದು ಊರಿನಲ್ಲೂ ಮುಖಂಡರ ದಸ್ತಗಿರಿಯಾಯಿತು. ಪ್ರಜೆಗಳ ಎಲ್ಲ ಸ್ವಾತಂತ್ರ್ಯಗಳನ್ನು ಕಸಿದುಕೊಳ್ಳಲಾಯಿತು. ಪ್ರಚಂಡವಾಗಿ ಮೇಲೆದ್ದ ಯುವಜನರ - ವಿದ್ಯಾರ್ಥಿಗಳ ಆಕ್ರೋಶ ಮೇರೆ ಮೀರಿ ಆಸ್ಫೋಟಗೊಂಡಿತು. ನಾಯಕರಿಲ್ಲದ ಜನಜಂಗುಳಿಗೆ ವಿದ್ಯಾರ್ಥಿ ಮುಖಂಡರೇ ಮುಂದೆ ನಿಂತು ಚಳುವಳಿ ನಡೆಸಿದರು. ಹೆಜ್ಜೆ ಹೆಜ್ಜೆಗೂ ಸಮರ ಉಗ್ರವಾಗತೊಡಗಿತು. ಬ್ರಿಟಿಷ್ ಪ್ರಭುತ್ವಕ್ಕೆ ಸೇರಿದ ಅಂಚೆ ಕಛೇರಿಗಳು, ರೈಲ್ವೆ ನಿಲ್ದಾಣಗಳು, ಕೇಂದ್ರ ಸರ್ಕಾರ ಕಛೇರಿಗಳು, ನ್ಯಾಯಾಲಯಗಳು, ಶಾಲಾ ಕಾಲೇಜುಗಳು, ಮುಷ್ಕರಕಾರರ ನೇರ ದಾಳಿಗೆ ತುತ್ತಾದವು. ಸೈನ್ಯ ಶಾಸನದ ಕರಾಳ ದಬ್ಬಾಳಿಕೆಯಿಂದ ಸಾವಿರಾರು ವಿದ್ಯಾರ್ಥಿಗಳು ಭೂಗತರಾಗಿ ಒಂದು ರೀತಿಯ ಗೆರಿಲ್ಲಾ ಯುದ್ಧದಂತೆ ಸತ್ಯಾಗ್ರಹ ನಡೆಯುತ್ತಿತ್ತು. ರಾಮಮನೋಹರ, ಲೋಹಿಯಾ, ಜಯಪ್ರಕಾಶ ನಾರಾಯಣ, ಅರುಣ ಅಸಫಾಲಿ ಆರ್.ಆರ್. ದಿವಾಕರ್ ಮುಂತಾದವರು ಜೈಲಿನಿಂದ ತಪ್ಪಿಸಿಕೊಂಡು ವೇಷ ಮರೆಸಿಕೊಂಡು ದೇಶದಲ್ಲೆಲ್ಲಾ ಪಾದರಸದಂತೆ ಓಡಾಡಿ ಜನರಲ್ಲಿ ಸಮರದ ಹುಮ್ಮಸ್ಸನ್ನು ತುಂಬುತ್ತಿದ್ದರು. ಈ ಸಾಹಸಪೂರ್ಣ ಮಹಾ ಚಳುವಳಿಗಳಲ್ಲಿ ಅಮಾಯಕ

ವಿದ್ಯಾರ್ಥಿವೃಂದ ಗಾಂಧೀ ಸಂದೇಶವನ್ನು ಮರೆತು ಹಿಂಸೆ - ಅಹಿಂಸೆಗಳ ತುಮುಲದಲ್ಲಿ ತನ್ನ ವಿವೇಚನೆಯನ್ನೇ ನಂಬಿ ನಡೆದುಬಿಟ್ಟಿತು. ಮೈಸೂರು ನಗರದಲ್ಲಿ ವಿದ್ಯಾರ್ಥಿವೃಂದ ಮಹಿಳಾ ಸಂಘಟನೆಗಳು, ಸೇವಾ ಸಂಸ್ಥೆಗಳು, ದೇಶ ಸೇವಕ ಗುಂಪುಗಳು ಅಗಾಧ ಪ್ರಮಾಣದಲ್ಲಿ ಮುಂದೆ ಬಂದು ಖಾದಿ, ಅಸ್ಪೃಶ್ಯತಾ ನಿವಾರಣೆ, ಮತೀಯ ಸೌಹಾರ್ದ, ರಾಷ್ಟ್ರೀಯ ಶಿಕ್ಷಣ ಶಾಲೆಗಳು, ಮದ್ಯ ನಿರೋಧ, ಗಾಂಧೀ ವಿಚಾರ ಗೋಷ್ಠಿಗಳು, ರಾಷ್ಟ್ರಧ್ವಜ ಮೆರವಣಿಗೆಗಳು ಮುಂತಾದ ಬೃಹದ್ ಪ್ರಮಾಣದ ಚಳುವಳಿಗಳಲ್ಲಿ ತೊಡಗಿ ಬಿಟ್ಟವು. ಈ ವಿಶಿಷ್ಟ ಸಮರದಲ್ಲಿ ಎಲ್ಲ ಮನೆಗಳಲ್ಲೂ ಹಿರಿಯರ ರಾಜಭಕ್ತಿಗೂ, ಕಿರಿಯರ ರಾಷ್ಟ್ರಭಕ್ತಿಗೂ ಅಗಾಧ ಅಂತರ ಉಂಟಾಗಿ ಸ್ವಾತಂತ್ರ್ಯ ಸಮರ ಎಂದರೆ 'ಗಾಂಧೀ ಗಲಾಟೆ' ಎಂದು ಪ್ರತಿಷ್ಠಿತರು ಹಣೆಪಟ್ಟಿ ಕಟ್ಟಿದರು. 'ಮಹಾರಾಜರಿಗೆ ನಾವಿಲ್ಲಿ ದ್ರೋಹ ಬಗೆಯುತ್ತಿದ್ದೇವೆ' ಎಂದೇ ಹಿರಿಯರು ಭಾವಿಸಿದ್ದರು. ಎಲ್ಲ ತ್ಯಾಗಕ್ಕೂ ಸಿದ್ಧರಾಗಿ ಎಲ್ಲ ರೀತಿಯ ದಬ್ಬಾಳಿಕೆಯನ್ನು ಎದುರಿಸಿ ಸೆರೆಮನೆಯ ಭಯವನ್ನು ತ್ಯಜಿಸಿ ಮುಂದಾಳುಗಳಾದ ಅಂದಿನ ವಿದ್ಯಾರ್ಥಿಗಳಿಗೆ, ಯುವಜನರಿಗೆ ಗಾಂಧೀಜಿ ಒಂದು ಜ್ವಲಂತ ಸಂಕೇತವಾಗಿ ನಿಂತರು. ಅವರ ಕನಸಿನ ಸ್ವರಾಜ್ಯ ಕಲ್ಪನೆ ಹೃದಯ ಹೃದಯಗಳಲ್ಲಿ ಪ್ರತಿಸ್ಪಂದಿಸಿ ನಿಂತಿತು. ಅವರ ಆದರ್ಶಗಳಾದ ಸರಳ ಜೀವನ, ನಿರ್ಮಲ ಶೀಲ, ಐಚ್ಛಿಕ ಬಡತನ, ಗ್ರಾಮಜೀವನದಲ್ಲಿ ಅಭಿರುಚಿ, ದಾಸ್ಯದ ವೃತ್ತಿಗಳ ನಿರಾಕರಣೆ, ಸ್ವಾಭಿಮಾನ ಪೂರ್ಣ ಸ್ವಾತಂತ್ರ್ಯ ವೃತ್ತಿಗಳ ಅನುಸರಣೆ ಅನೇಕ ಯುವಜನರಲ್ಲಿ ಮನೆ ಮಾಡಿದಂತೆ ನನ್ನಲ್ಲೂ ಶಾಶ್ವತ ಆದರ್ಶವಾಗಿ ನಿಂತು ಬಿಟ್ಟಿತು. ಅಲ್ಲಿಂದಾಚೆ ಈ ಆದರ್ಶಗಳನ್ನು ಪೋಷಿಸುವ ದಾರಿಯಲ್ಲೇ ನನ್ನ ಬಾಳು ನಡೆದಿದೆ, ನಾಳಿನ ಜಗತ್ತಿಗೂ ಈ ಆದರ್ಶಗಳೇ ದಾರಿದೀಪ ಎಂದು ಗಾಂಧೀ ಮಾರ್ಗದ ಪ್ರಕಾರ ಚಟುವಟಿಕೆಗಳಲ್ಲೇ ತೊಡಗಿ ನಿಂತಿದ್ದೇನೆ.

■ಕೆ.ಎಸ್.ನಾರಾಯಣಸ್ವಾಮಿ

ಎಲ್ಲ ಕಾಲಕ್ಕೂ ಪ್ರಸ್ತುತ

If one man can become a Buddha, it is a proof that every man can become a Buddha. One seed makes the whole earth green.

ಬುದ್ಧನ ಹಾಗೆ ಗಾಂಧೀ ಕೂಡ ಎಲ್ಲ ಕಾಲಕ್ಕೆ ರಿಲವೆಂಟ್. ಒಬ್ಬ ಸಾಮಾನ್ಯನಿಗೂ ಮಹತ್ತರವಾದದ್ದನ್ನು ಸಾಧಿಸೋದು ಸಾಧ್ಯ ಅಂತ ತೋರಿಸಿದ್ದು ಗಾಂಧಿ.

ಗಾಂಧಿ ಸತ್ತ ಮೇಲೆ ನಾವು ಹುಟ್ಟಿದ್ದು. ಗಾಂಧೀಮಯವಾಗಿದ್ದ ಪರಿಸರದಲ್ಲಿ ನಾ ಬೆಳೆದದ್ದು. ನಮ್ಮ ತಂದೆ ಗಾಂಧೀ ಶೈಲಿಯ ಜೀವನ ಕ್ರಮವನ್ನು ಅಳವಡಿಸಿಕೊಂಡಿದ್ರು. ಖಾದಿ ಬಟ್ಟೆ, ಸಾರ್ವಜನಿಕ ಬದುಕು. ಸೆಮಿನಾರ್‌ಗಳು ಭಾಷಣಗಳು, ಬರವಣಿಗೆ, ದೊಡ್ಡ ದೊಡ್ಡ ಜನ ಮನೆಗೆ ಬರೋರು. ಗಂಭೀರ ಚರ್ಚೆಗಳು ನಡೆಯೋದು. ಮನೇಲಿ ಗಾಂಧಿ ಸಾಹಿತ್ಯದ ದೊಡ್ಡ library ಇತ್ತು. ಆದ್ರೆ ಒಂದು ಪುಸ್ತಕಾನೂ ಎಂದೂ ನಾ ಓದಲಿಲ್ಲ.

ನಾನು Schoolಗೆ ಖಾದಿ ಬಟ್ಟೆ ಹಾಕ್ಕೊಂಡು ಹೋಗಬೇಕಾಗಿತ್ತು ಎಲ್ಲಾ 'ಗಾಂಧಿ' ಅಂತ ರೇಗಿಸೋರು. ಆಗೆಲ್ಲ ತುಂಬ ಅವಮಾನ, ಕಿರಿಕಿರಿ ಆಗೋದು. ಗಾಂಧಿಯ ಮೇಲೆ, ನಮ್ಮಪ್ಪನ ಮೇಲೆ ಕೋಪ ಬರೋದು. ಆದ್ರೆ ನಮ್ಮಪ್ಪನ ಎದುರು ನಿಂತು ಬೇರೆ ಬಟ್ಟೆ ಕೇಳೊ ಧೈರ್ಯ ಇರಲಿಲ್ಲ.

ನಮ್ಮಜ್ಜ ಬ್ರಿಟಿಷ್ ಕಾಲದ ಡಾಕ್ಟರ್. ಸೊಗಸುಗಾರ್ರು. ಸೂಟು, ಪೇಟ, ಶೂಸ್, ಯಾವಾಗ್ಲೂ ಸಿಗರೇಟು. ಅವರ ಬಗ್ಗೇನೆ ನನಗೆ ಹೆಚ್ಚು ಆಕರ್ಷಣೆ. ಅವರ ಜೊತೇನೆ ನನಗೆ ತುಂಬ ಸಲುಗೆ. ಆಗ ನಂಗೆ ರಾಜಕುಮಾರ್ ಚಿತ್ರಗಳನ್ನ ನೋಡೋ ಹುಚ್ಚು. ನಮ್ಮ ಮೋಜಿಗೆಲ್ಲ ಅಜ್ಜ ಗುಟ್ಟಾಗಿ ಹಣ ಒದಗಿಸ್ತಿದ್ರು. ಅಪ್ಪ ಹೇಳಿದ್ದನ್ನ ವಿರೋಧಿಸುವ, ಅವರನ್ನ ಎಂಬರಾಸ್ ಮಾಡೋ ಅಂತ ಏನನ್ನಾದ್ರು ಮಾಡೋ ಆಸೆ ಎಲ್ಲ ಮಕ್ಕಳಿಗೂ ಇರುತ್ತೇನೋ!. ಗಾಂಧಿ ಮಗ ಹರಿಲಾಲ್ ಕೂಡ ಹೀಗೆ ಇದ್ದನಲ್ಲ! ನಮ್ಮಪ್ಪನಿಗೆ ಮುಜುಗರ ಆಗೋ ಅಂತ ಕೆಲಸಗಳನ್ನೇನೂ ನಾ ಮಾಡದಿದ್ರು, ಗಾಂಧಿಯ ಬಗ್ಗೆ ನನಗೆ ಒಲವು ಬೆಳೀಲಿಲ್ಲ.

ಕಾಲೇಜಿಗೆ ಬಂದ ಮೇಲೆ ನಾನು ವಿದ್ಯಾರ್ಥಿ ಪರಿಷತ್ ಸೇರಿಕೊಂಡೆ. ಆರೆಸ್ಸೆಸ್ ಶಾಖೆಗೆ ಹೋಗ್ತಿದ್ದೆ. ಅಜ್ಜನ woolen pantಗಳನ್ನೆಲ್ಲ alter ಮಾಡಿಸ್ಕೊಂಡಿದ್ದೆ. ನಮ್ಮಪ್ಪ ನಮಗೆಲ್ಲ ತುಂಬ ಸ್ವಾತಂತ್ರ್ಯ ಕೊಟ್ಟಿದ್ರು. ಗಾಂಧೀನ ಎಂದೂ ನಮ್ಮ ಮೇಲೆ ಹೇರಲಿಲ್ಲ.

ಗಾಂಧೀ ಬಗ್ಗೆ ನನಗೆ ಕುತೂಹಲ ಮೂಡಿದ್ದು 'ಗಾಂಧಿ' ಚಿತ್ರ ನೋಡಿದ ಮೇಲೆ. ಅಲ್ಲಿನ ಕೆಲವು ದೃಶ್ಯಗಳು ನನ್ನ ಮೇಲೆ ತುಂಬ ಗಾಢವಾಗಿ ಪರಿಣಾಮ ಬೀರಿದ್ದವು

ಆಮೇಲೆ ನಾನು ಮನೇಲಿದ್ದ ಗಾಂಧಿಯ ಎಲ್ಲ ಪುಸ್ತಕಗಳನ್ನು ಓದಿದೆ. ಈ ಮನುಷ್ಯ ಎಲ್ಲವನ್ನು ತಮ್ಮ ಮೇಲೆ ಪ್ರಯೋಗ ಮಾಡಿಕೊಳ್ಳೋದು. ತಾವು ಅಳವಡಿಸಿಕೊಂಡು ಇವು ಸಾಧ್ಯ ಅಂತ ತೋರಿಸಿ ಮತ್ತೊಬ್ಬರಿಗೆ ಹೇಳೋದು. ಮತ್ತೆ What liked in him is his sheer honesty. ದಕ್ಷಿಣ ಆಫ್ರಿಕಾದಿಂದ ಬಂದ ತಕ್ಷಣ ಇಲ್ಲಿ ಒಂದು ಸತ್ಯಾಗ್ರಹಕ್ಕೆ ಗಾಂಧಿ ಪ್ರಯತ್ನಿಸುತ್ತಾರೆ. ಅದಕ್ಕೆ ಸರಿಯಾದ ಬೆಂಬಲ ಸಿಗದೆ ಅವ್ರು ಸೋತಾಗ 'I think is was too early' ಅಂತ ತುಂಬ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ. It really touched me.

ಸೂಟು ಬೂಟು ತೊಟ್ಟು ಬ್ಯಾರಿಸ್ಟರ್ ಆದ ಮೋಹನ್ ದಾಸ್, ಭಾರತದ ಸ್ಥಿತಿ ಮತ್ತು ಸಾಧ್ಯತೆಗಳ ಪ್ರತೀಕವಾಗಿ ಗಾಂಧೀ ಆಗುವ process ಇದೆಯಲ್ಲ it is really fascinating.

ನಮ್ಮ ತಂದೆಯ ಆಯ್ಕೆ ಸುಲಭವಾಗಿತ್ತು. ಅವರ ಹೋರಾಟ ದೇಶಕ್ಕೆ ಸ್ವಾತಂತ್ರ ತರಬೇಕು ಅನ್ನೋ ಸ್ಪಷ್ಟ ಗುರಿ ಇತ್ತು. ಇದಕ್ಕಿಂತ ಹೆಚ್ಚಾಗಿ ನಂಬಬಹುದಾದ, ಯಾವ ಭಯಗಳು ಇಲ್ಲದೆ ಹಿಂಬಾಲಿಸಬಹುದಾದ ಒಬ್ಬ ನಾಯಕ ಇದ್ದ. ಇವತ್ತು ನಾವು ಗೊಂದಲದಲಿದ್ದೇವೆ. ಯಾವುದರ ವಿರುದ್ಧ ಹೋರಾಡಬೇಕು ತಿಳೀದು. ಮಾರ್ಗದರ್ಶನ ಮಾಡಿ ಮುನ್ನಡೆಸಬಲ್ಲ ಯಾವ ನಾಯಕ ಈಗ ಉಳಿದಿದಾನೆ ಹೇಳಿ!

'ನಾವೇ ವಿಶ್ವ, ನಾವು ಬದಲಾಗದೇ ಮತ್ತೇನೂ ಬದಲಾಗದು' ಅನ್ನುವ ಜೆ.ಕೆ.ಮಾತನ್ನ ನಾ ನಂಬ್ತೀನಿ. ಗಾಂಧಿಯ ಬಗ್ಗೆ ಕುತೂಹಲದಿಂದ ಓದತಾ ಹೋದ ಹಾಗೆ ಗಾಂಧಿ ಹೇಗೆ ಬದುಕಿದ್ರು ಅನ್ನಿಸ್ತು.

ಇವತ್ತು ನಾವು ಬದುಕನ್ನ ವಿಂಗಡಿಸ್ಕೊಂಡಿದ್ದೀವಿ. ನಮ್ಮ ನಾಯಕರ ಖಾಸಗಿ ಬದುಕು ಮುಖ್ಯ ಅಲ್ಲ. ಅಲ್ಲಿ ಅವರು ಏನು ಬೇಕಾದ್ರು ಮಾಡುವ ಸ್ವಾತಂತ್ರ್ಯ ಇದೆ ಅಂತ ವಾದಿಸ್ತೇವೆ.

'My life is my message' ಅಂತ ಹೇಳುವ ಧೈರ್ಯ ಗಾಂಧಿಗೆ ಮಾತ್ರ ಇದ್ದದ್ದು. ಶುದ್ಧ ಖಾಸಗಿ ಬದುಕಿರದೆ, ಸಮೃದ್ಧ ಅಂತರಂಗದ ಅನುಭವ ಇರದ ಮನುಷ್ಯ ಎಂದೂ ಜನರಲ್ಲಿ ಪ್ರೀತಿ, ವಿಶ್ವಾಸ, ಹುಟ್ಟಿಸುವ ನಾಯಕ ಆಗಲಾರ. ಸಾರ್ವಜನಿಕ ಇಮೇಜ್‌ಗಾಗಿ ಮೌಲ್ಯಗಳನ್ನ ಬೆಳಸಿಕೊಳ್ಳೋ ಮನುಷ್ಯ ಹಿಪೋಕ್ರೇಟ್ ಆಗ್ತಾನೆ. He is trying to be what he is not. ಗಾಂಧಿ ಕವಿ, ಸಂತ, ಜೀವನ ಪ್ರೇಮಿ. ಬದುಕನ್ನ ಸಮಗ್ರವಾಗಿ ನೋಡುವುದು ಅವರಿಗಿಷ್ಟ. ಆರೋಗ್ಯ, ಶಿಕ್ಷಣವಿಲ್ಲದವರ ಬಗ್ಗೆ ಅವರಿಗೊಂದು ಸ್ಪಷ್ಟ ನಿಲುವಿತ್ತು. ತಮ್ಮ ನಿಲುವಿನ ಬಗ್ಗೆ strong conviction ಇತ್ತು. ಜನಪ್ರಿಯತೆಗಾಗಿ ಆತ ಎಂದೂ ಯಾವ ಕ್ರಿಯೆಯನ್ನೂ ಮಾಡಲಿಲ್ಲ.


ಸಾರ್ವಜನಿಕವಾಗಿ ನಾವು ಮೌಲ್ಯಗಳ ಬೆಳಸಲಿಕ್ಕೆ ಪ್ರಯತ್ನಿಸ್ತೀವಿ. ಇದು ತುಂಬ ಮೇಲ್ಪದರದ್ದು ಮತ್ತು temporary. ಕಾನೂನುಗಳನ್ನು ಮಾಡಬಹುದು. ಹಣವನ್ನ ತರಬಹುದು ಆದ್ರೆ ಅದನ್ನೆಲ್ಲ implement ಮಾಡುವ ಜನ ಬದಲಾಗದಿದ್ರೆ ಯಾವ ರೀತಿಯ ಅಭಿವೃದ್ಧೀನೂ ಅಸಾಧ್ಯ.

ಒಬ್ಬನ ಖಾಸಗೀ ಬದುಕು ತುಂಬ ಮುಖ್ಯ. ನನ್ನ ವಿಶ್ವವನ್ನು ನಾನು ಬದಲಾಯಿಸಿಕೊಳ್ಳದೆ, ಸುತ್ತಲಿನ ಸಂಗತಿಗಳು, ಜನಗಳು ಬದಲಾಗ್ಲಿ ಅಂತ ಕಾಯ್ತ ಎಲ್ಲದರ ಬಗ್ಗೆ ಸಿನಿಕರಾಗ್ತ ಜೀವನ ಮುಗಿಯುತ್ತೆ. South Africaದಲ್ಲಿ ತನಗಾದ ಅವಮಾನವನ್ನ ಸಾರ್ವಜನಿಕ ಹೋರಾಟವಾಗಿ ಪರಿವರ್ತಿಸಿದ ಗಾಂಧಿ, ಈ ಬದುಕಿನ ದುಃಖಕ್ಕೆ ಕಾರಣ ಹುಡುಕಿ ಹೊರಟ ಎಲ್ಲ ವರ್ಗದ ಜನರಿಗೂ ದನಿಕೊಡಲು ಪ್ರಯತ್ನಿಸಿದ ಬುದ್ಧ, ಬಸವ - ತಮ್ಮ ಅಂತರಂಗದ ಹುಡುಕಾಟದ ಮೂಲಕವೆ ಸಾರ್ವಜನಿಕ ನಾಯಕರಾದ್ರು.

ಇಂಥವರ ಬದುಕು ನನಗಂತೂ ಎಲ್ಲ ಕಾಲಕ್ಕೆ relevant.

■ಅರುಣ್

ಇಂದಿನ ಟಿ.ವಿ. ನಾಳಿನ ಕಂಪ್ಯೂಟರ್!



ಮಿಂಚಿನ ವೇಗದಲ್ಲಿ ಧಾವಿಸುತ್ತಿರುವ ಎಲೆಕ್ಟ್ರಾನಿಕ್ ತಂತ್ರಜ್ಞಾನದ ಅಭಿವೃದ್ಧಿ ದಿನಕ್ಕೊಂದು ಹೊಸತು ಸಾಧಿಸುತ್ತಿದೆ. ಇಂದಿನ ಆವಿಷ್ಕಾರ ನಿನ್ನೆಯ ಶೋಧವನ್ನು ಓಬಿರಾಯನ ಕಾಲದ್ದು ಎನಿಸುವಂತೆ ಮಾಡುತ್ತಿವೆ. ಅಂಥದೊಂದು ಶೋಧ ಒಮ್ಮುಖ ತಂತ್ರಜ್ಞಾನ. ಅದರಿಂದಾಗುವ ಉಪಯೋಗ, ಅದರ ಮಹತ್ತು ಕುರಿತು, ಈ ವಿಷಯಗಳಲ್ಲಿ ಆಳ ಜ್ಞಾನ ಇರುವ ವಸುಧೇಂದ್ರ ಸರಳ ಕನ್ನಡದಲ್ಲಿ ಬರೆದಿದ್ದಾರೆ. ಅವರು ಬಹುರಾಷ್ಟ್ರೀಯ ಸಾಫ್ಟ್‌ವೇರ್ ಕಂಪನಿ 'ಜೆನಿಸಿಸ್'ನಲ್ಲಿ ಪ್ರಾಜೆಕ್ಟ್ ಮ್ಯಾನೇಜರ್.

ಎಲೆಕ್ಟ್ರಾನಿಕ್ಸ್ ತಂತ್ರಜ್ಞಾನ ನಮ್ಮ ಜನಜೀವನದ ಮೇಲೆ ಬೀರಿರುವ ಪ್ರಭಾವ ಅಚ್ಚರಿಯನ್ನುಂಟು ಮಾಡುತ್ತದೆ. ನಿಮಿಷಕ್ಕೊಮ್ಮೆ ಗೆಳತಿಯರಿಗೆ ಫೋನ್ ಮಾಡುವ ನಿಮ್ಮ ಮಗಳು, ಹಠಮಾಡಿ ಕಂಪ್ಯೂಟರ್ ಕೊಡಿಸಿಕೊಂಡು ಈಗ ಅದಕ್ಕೆ ಜಿಗಣೆಯಂತೆ ಅಂಟಿಕೊಂಡಿರರುವ ನಿಮ್ಮ ಮಗ, ಟಿ.ವಿ.ಯ ಮುಂದೆ ಕುಳಿತರೆ ಪ್ರಪಂಚವನ್ನೇ ಮರೆತುಬಿಡುವ ನಿಮ್ಮವಳು, ಈ ಎಲ್ಲಾ ಗಲಾಟೆಗಳಿಲ್ಲದಾಗ ನೆಮ್ಮದಿಯಾಗಿ ರೇಡಿಯೋದಲ್ಲಿ ವಿವಿಧಭಾರತಿಯ ಮಧುರ ಗೀತೆಗಳನ್ನು ಕೇಳಲು ಬಯಸುವ ನೀವು! 'ಅವುಗಳಿಲ್ಲದಿದ್ದರೆ ಜೀವನ ಮಾಡೋದು ಹೇಗಪ್ಪಾ?' ಎಂದು ಭಯವಾಗುವಷ್ಟು ಅವಕ್ಕೆ ಹೊಂದಿಕೊಂಡು ಬಿಟ್ಟಿದ್ದೇವೆ.

ಎಲೆಕ್ಟ್ರಾನಿಕ್ ತಂತ್ರಜ್ಞಾನ ಪ್ರತಿಯೊಂದು ಹೊಸ ಅವಿಷ್ಕಾರವನ್ನು ಮಾಡಿದಾಗಲೂ, ತನ್ನ ಹಿಂದಿನ ಆವಿಷ್ಕಾರಕ್ಕಿಂತಲೂ ಹೆಚ್ಚಿನ ಪ್ರಭಾವ ಬೀರಿರುವುದನ್ನು ಕಂಡಿದ್ದೇವೆ. ಮೊದಲು ರೇಡಿಯೋ, ನಂತರ ದೂರದರ್ಶನ, ಕಂಪ್ಯೂಟರ್, ಅಂತರ್‌ಜಾಲ (ಇಂಟರ್‌ನೆಟ್).... ಹೀಗೆ ಒಂದರ ನಂತರ ಒಂದು ಬಂದು, ನಮ್ಮ ಜೀವನದ ರೀತಿ-ನೀತಿಗಳನ್ನು ಹಲವೇ ವರ್ಷಗಳಲ್ಲಿ ಬದಲಿಸಿರುವುದನ್ನು ಕಂಡಿದ್ದೇವೆ, ಕಂಡು ಅಚ್ಚರಿಪಟ್ಟಿದ್ದೇವೆ.

ವಿಚಿತ್ರವೆಂದರೆ, ಇಷ್ಟೆಲ್ಲಾ ಹೊಸ ಆವಿಷ್ಕಾರಗಳು ಬಂದರೂ ಅದಕ್ಕೆ ಅಂತ್ಯವೆಂಬುದಿಲ್ಲ. ಎಲೆಕ್ಟ್ರಾನಿಕ್ಸ್ ರಂಗ ಮತ್ತೆ ಮತ್ತೆ ಹೊಸ ಹೊಸ ಸಂಶೋಧನೆಗಳನ್ನು ನಡೆಸುತ್ತಲೇ ಇದೆ. ಹೊಸತೊಂದನ್ನು ಕಂಡು ಹಿಡಿದ ತಕ್ಷಣ ಅದು ನಿಮ್ಮ ಹಳೆಯ ವಸ್ತುವಿಗಿಂತ ಎಷ್ಟೊಂದು ಉತ್ತಮ ಮಟ್ಟವನ್ನು ಹೊಂದಿದೆ ಎಂದು ನಿಮಗೆ ಮನವರಿಕೆ ಮಾಡಿ, ನೀವು ನಿಮ್ಮ ಕೈಯಾರೆ ನಿಮ್ಮ ಮುದ್ದಿನ ಹಳೆಯ ಎಲೆಕ್ಟ್ರಾನಿಕ್ಸ್ ವಸ್ತುವನ್ನು ಮೂಲೆಗಟ್ಟಿ ಹೊಸ ಆವಿಷ್ಕಾರವನ್ನು ಕೊಂಡಾಡುವಂತೆ ಮಾಡಿಬಿಡುತ್ತದೆ!

ಅದೇ ಅದರ ಶಕ್ತಿ.

ಈ ನಿಟ್ಟಿನಲ್ಲಿ ಎಲೆಕ್ಟ್ರಾನಿಕ್ಸ್ ರಂಗದ ಹೊಸ ಆವಿಷ್ಕಾರವಾದ 'ಒಮ್ಮುಖ ತಂತ್ರಜ್ಞಾನ' (ಕನ್‌ವರ್ಜನ್ಸ್ ಟೆಕ್ನಾಲಜಿ) ಈ ಹಿಂದಿನ ಎಲ್ಲಾ ಆವಿಷ್ಕಾರಗಳನ್ನು ಮೀರಿಸಿ, ನಿಮ್ಮ ಮನೆಯ ಹೊಸ್ತಿಲನ್ನು ದಾಟಿ ಒಳಬರುವ ಕಾಲ ದೂರವಿಲ್ಲ. ಸಾಕಷ್ಟು ಸುದ್ದಿಯಲ್ಲಿರುವ ಈ ತಂತ್ರಜ್ಞಾನ ಈಗ ಎಲ್ಲಾ ಮುಖ್ಯ ಉದ್ದಿಮೆಗಳು ಇದಕ್ಕೆ ಕೈ ಹಾಕುವಂತೆ ಮಾಡಿದೆ. ಜನಜೀವನದ ಮೇಲೆ ಅತ್ಯಂತ ಗಾಢವಾದ ಪ್ರಭಾವವನ್ನು ಬೀರುವ ಈ ತಂತ್ರಜ್ಞಾನ ನಮಗೆ ಸಾಕಷ್ಟು ಸುಖ-ಸೌಲಭ್ಯಗಳನ್ನು ಒದಗಿಸಲಿದೆ.

ಈ ತಂತ್ರಜ್ಞಾನದ ಬಗ್ಗೆ ಮಾಹಿತಿಯನ್ನು ನೀಡುವುದೇ ಈ ಲೇಖನದ ಉದ್ದೇಶ.

'ಒಮ್ಮುಖ ತಂತ್ರಜ್ಞಾನ'ವೆಂದರೇನು?

ಒಮ್ಮೆ ಸೂಕ್ಷ್ಮವಾಗಿ ನಿಮ್ಮ ಮನೆಯಲ್ಲಿ ಓಡಾಡಿ. ನಿಮಗೆ ಹೊರ ಜಗತ್ತಿನೊಡನೆ ಸಂಪರ್ಕ ಕಲ್ಪಿಸುವ ಈ ಎಲೆಕ್ಟ್ರಾನಿಕ್ ವಸ್ತುಗಳು ಹೇಗೆ ಕೆಲಸ ಮಾಡುತ್ತಿವೆಯೆಂಬುದನ್ನು ಗಮನಿಸಿ. ನಿಮ್ಮ ಟಿ.ವಿ.ಗೆ ಕೇಬಲ್ ಮೂಲಕ, ನಿಮ್ಮ ಕಂಪ್ಯೂಟರ್‌ನಲ್ಲಿರುವ ಅಂತರ್‌ಜಾಲಕ್ಕೆ ಮತ್ತು ದೂರವಾಣಿಗೆ ದೂರವಾಣಿ ಇಲಾಖೆಯವರ ತಂತಿಗಳ ಮೂಲಕ, ರೇಡಿಯೋಕ್ಕೆ ರೇಡಿಯೋ ತರಂಗಗಳ ಮೂಲಕ, ಇನ್ನು ಸೆಲ್ ಫೋನಿದ್ದರೆ ಅದಕ್ಕೇ ಸರಿಹೊಂದುವ ತರಂಗಗಳ ಮೂಲಕ ಸಂಪರ್ಕವಿದೆಯಲ್ಲವೆ? ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ಪ್ರತಿಯೊಂದು ವಾಹಿನಿಯಲ್ಲಿಯೂ ರವಾನೆಯಾಗುತ್ತಿರುವುದು ಒಂದೇ ವಸ್ತು. ಅದೇ 'ಮಾಹಿತಿ'! (ಇನ್‌ಫಾರ್ಮೇಷನ್). ಈ ಮಾಹಿತಿ ದೃಶ್ಯವಾಗಿರಬಹುದು, ಧ್ವನಿಯಾಗಿರಬಹುದು, ಚಿತ್ರವಾಗಿರಬಹುದು ಅಥವಾ ಚಲನಚಿತ್ರವಾಗಿರಬಹುದು.

ಹೀಗೆ ಮಾಹಿತಿಯನ್ನು ಬೇರೆ ಬೇರೆ ವಿಧದಲ್ಲಿ ನಿಮ್ಮ ಮನೆಗೆ ಕಳುಹಿಸುವ ಬದಲು, ಒಂದೇ ಒಂದು ಕೇಬಲ್ ಮೂಲಕ ಕಳುಹಿಸಿದರೆ ಹೇಗೆಂದು ಎಂದಾದರೂ ಯೋಚಿಸಿದ್ದೀರಾ? ಅಂದರೆ ಈ ಒಂದು ಕೇಬಲ್ ಮೂಲಕ

ನೀವು ದೂರವಾಣಿಯನ್ನು ಉಪಯೋಗಿಸುವಂತಿರಬೇಕು. ಟಿ.ವಿ.ಯಲ್ಲಿ ನಿಮ್ಮ ಮೆಚ್ಚಿನ ಕಾರ್ಯಕ್ರಮಗಳನ್ನು ನೋಡುವಂತಿರಬೇಕು, ಅಂತರ್‌ಜಾಲವನ್ನು ಜಾಲಾಡುವ ಸೌಲಭ್ಯ ಬೇಕು, ನಿಮ್ಮ ಸೆಲ್ ಫೋನ್ ಕೆಲಸ ಮಾಡಬೇಕು, ನಿಮ್ಮ ಫ್ಯಾಕ್ಸ್ ಯಂತ್ರ ಕೂಡ ಕೆಲಸ ಮಾಡಬೇಕು.... ಹೀಗೆ, 'ಅಬ್ಬಾ' ಎನಿಸುತ್ತದೆಯೆ? 'ಅದು ಹೇಗೆ ಸಾಧ್ಯ' ಎನ್ನುತ್ತೀರಾ?

ಇದೇ 'ಒಮ್ಮುಖ ತಂತ್ರಜ್ಞಾನ'!

'ಮಾಹಿತಿ'ಯನ್ನು ರೂಪಾಂತರಗೊಳಿಸಿ ರವಾನೆ ಮಾಡಿ ಕಳುಹಿಸುವ ತಂತ್ರಜ್ಞಾನ ಎಲೆಕ್ಟ್ರಾನಿಕ್ ರಂಗಕ್ಕೆ ಈಗಾಗಲೇ ಚಿರಪರಿಚಿತ. ಉದಾಹರಣೆಗೆ ಧ್ವನಿಯನ್ನು ಕಡತಗಳಾಗಿ (ಫ್ಲಾಟ್ ಫೈಲ್ಸ್) ಪರಿವರ್ತಿಸಿ, ಅದನ್ನು ಮಾಹಿತಿ ವಾಹಿನಿಗಳ ಮೂಲಕ ರವಾನಿಸಿ, ಅನಂತರ ಅದನ್ನು ಮತ್ತೊಂದು ತಂತ್ರಜ್ಞಾನದಿಂದ ಧ್ವನಿಯಾಗಿ ಪರಿವರ್ತಿಸಬಹುದು. ಈ ರೀತಿಯಾಗಿ ಎಲ್ಲಾ ಬಗೆಯ ಮಾಹಿತಿಯನ್ನೂ ಒಂದು ಕೇಬಲ್ ಮೂಲಕ ಕಳುಹಿಸಿ, ಅನಂತರ ನಿಮ್ಮ ಎಲೆಕ್ಟ್ರಾನಿಕ್ ವಸ್ತುಗಳ ಸಹಾಯದಿಂದ ಅದನ್ನು ಬೇಕಾದ ರೀತಿಯಲ್ಲಿ ಪರಿವರ್ತಿಸಿಕೊಳ್ಳಬಹುದು.

ನಿಮ್ಮ ಟಿ.ವಿ. ಬರೀ ಟಿ.ವಿ.ಯಲ್ಲ!

ಈ ತಂತ್ರಜ್ಞಾನ ಶ್ರೀ ಸಾಮಾನ್ಯನಿಗೆ ಹೇಗೆ ಉಪಯೋಗವಾಗುತ್ತದೆಂದು ಯೋಚಿಸುತ್ತಿದ್ದೀರಾ? ಹಾಗಿದ್ದರೆ ನಿಮ್ಮ ಟಿ.ವಿ. ಕೆಲವೇ ದಿನಗಳಲ್ಲಿ ಈ ತಂತ್ರಜ್ಞಾನದಿಂದ ಹೇಗೆ ಪರಿವರ್ತನೆ ಹೊಂದುತ್ತದೆಯೆಂಬುದನ್ನು ನೋಡೋಣ.

ಇಂದು ಸಾಮಾನ್ಯವಾಗಿ ನಾವೆಲ್ಲಾ ಕೇಬಲ್ ಮೂಲಕವೇ ನಮ್ಮ ಟಿ.ವಿ.ಗೆ ಚಾನಲ್‌ಗಳನ್ನು ಪಡೆಯುತ್ತೀವಲ್ಲವೇ? ಆದರೆ ಇದರ ಮಿತಿಯನ್ನು ಗಮನಿಸಿ. ಇಲ್ಲಿ ಸಿದ್ಧಪಡಿಸಿದ ಚಾನಲ್‌ಗಳ ಕಾರ್ಯಕ್ರಮಗಳನ್ನು ಮಾತ್ರ ನಿಮಗೆ ರವಾನಿಸಲಾಗುತ್ತದೆ. ಆದರೆ ನಿಮ್ಮ ಅನಿಸಿಕೆಗಳನ್ನು ನಿಮ್ಮ ಟಿ.ವಿ.ಯ ಮುಖಾಂತರ ಚಾನಲ್‌ಗೆ ಕಳುಹಿಸಲಾಗುತ್ತದೆಯೆ? ಇಲ್ಲ. ಏಕೆಂದರೆ ನಿಮ್ಮ ಸದ್ಯದ ಕೇಬಲ್ ಒಂದೇ ದಿಕ್ಕಿನಲ್ಲಿ ಮಾಹಿತಿಯನ್ನು ರವಾನೆ ಮಾಡುತ್ತದೆ. ಅಂದರೆ ಚಾನಲ್‌ಗಳ ಮುಖಾಂತರ ಕಾರ್ಯಕ್ರಮಗಳು ನಿಮಗೆ ರವಾನೆಯಾಗುತ್ತವೆಯಾದರೂ, ನೀವದಕ್ಕೆ ಪ್ರತಿಕ್ರಿಯಿಸುವಂತಿಲ್ಲ.

ಈ 'ಒಮ್ಮುಖ ತಂತ್ರಜ್ಞಾನ'ದಿಂದ ಮಾಹಿತಿಯನ್ನು ಎರಡೂ ದಿಕ್ಕಿಗೆ ರವಾನಿಸಲು ಸಾಧ್ಯ ಮಾಡಲಾಗುತ್ತದೆ. ಸಾಮಾನ್ಯವಾಗಿ ನಾವು ಮಾಹಿತಿಯನ್ನು ಕಳುಹಿಸುವುದಕ್ಕಿಂತಲೂ ಪಡೆದುಕೊಳ್ಳುವುದೇ ಹೆಚ್ಚಾಗಿರುವುದರಿಂದ, ನಿಮಗೆ ಕಳುಹಿಸುವ ಮಾಹಿತಿಯ ವೇಗ ನೀವು ಕಳುಹಿಸುವ ಮಾಹಿತಿಯ ವೇಗಕ್ಕಿಂತಲೂ ನಾಲ್ಕು ಪಟ್ಟು ಹೆಚ್ಚಾಗಿರುವಂತೆ ನೋಡಿಕೊಳ್ಳಲಾಗುತ್ತದೆ. ಆಗ ನಿಮ್ಮ ಟಿ.ವಿ. ಏನೆಲ್ಲಾ ಕೆಲಸ ಮಾಡಬಹುದು ಎಂದು ಕುತೂಹಲವೆ?

ಸಿನಿಮಾಗಳ ದೊಡ್ಡ ಸಂಗ್ರಹವನ್ನು ಯಾರೋ ಇಟ್ಟಿದ್ದಾರೆಂದುಕೊಳ್ಳಿ, ಅದನ್ನು ನೀವು ನಿಮ್ಮ ಟಿ.ವಿಯ. ಮುಖಾಂತರ ಸಂಪರ್ಕಿಸಬಹುದಾದರೆ, ಆಗ ನೀವು ನಿಮಗೆ ಬೇಕಾದ ಸಿನಿಮಾವನ್ನು ಆ ಸಂಗ್ರಹದಿಂದ ಆಯ್ಕೆ ಮಾಡಿಕೊಂಡು ಯಾವಾಗ ಬೇಕೆಂದರೆ ಆಗ ನೋಡಬಹುದು. ಅಥವಾ ಯಾವುದೋ ಸ್ಪರ್ಧೆ ನಡೆಯುತ್ತಿದೆಯೆಂದರೆ, ಅದಕ್ಕೆ ಮನೆಯಲ್ಲಿಯೇ ಕುಳಿತು ಅದರ ನಿರ್ಣಾಯಕರಾಗಬಹುದು. ಇನ್ನೂ ಸರಳವಾಗಿ ಹೇಳಬೇಕೆಂದರೆ, 'ನಿಮ್ಮ ಆಯ್ಕೆ' ಕಾರ್ಯಕ್ರಮದಲ್ಲಿ ನಿಮಗೆ ಬೇಕಾದ ಹಾಡನ್ನು ನಿಮ್ಮ ರಿಮೋಟ್ ಮೂಲಕವೇ ಆ ಕಾರ್ಯಕ್ರಮವನ್ನು ನಿರ್ವಹಿಸುತ್ತಿರುವ ಚೆಂದುಳ್ಳಿ ಚೆಲುವೆಗೆ ತಿಳಿಸಬಹುದು! ಫೋನ್ ಮಾಡುವ ಅವಶ್ಯಕತೆಯೇ ಇಲ್ಲ!! ಈ ತಂತ್ರಜ್ಞಾನದಿಂದ ಪರಿಸ್ಥಿತಿ ಯಾವ ಮಟ್ಟವನ್ನು ಮುಟ್ಟಬಹುದೆಂದರೆ, ಯಾವುದೇ ಚಾನಲ್‌ನಲ್ಲೂ ಕಾರ್ಯಕ್ರಮದ ಪಟ್ಟಿಯೆಂಬುದು ಇಲ್ಲದೇ ಹೋಗಬಹುದು (ನೇರ ಪ್ರಸಾರವೊಂದನ್ನು ಹೊರತುಪಡಿಸಿ). ಅದರ ಬದಲು ಸಾವಿರಾರು ಕಾರ್ಯಕ್ರಮಗಳನ್ನು ಅವರು ಸಂಗ್ರಹಿಸಿ ಇಟ್ಟುಕೊಂಡರಾಯಿತು. ನೀವು ನಿಮಗೆ ಬಿಡುವಿದ್ದಾಗ ಆ ಚಾನಲ್‌ಗೆ ನುಗ್ಗಿ ನಿಮಗೆ ಬೇಕಾದ ಕಾರ್ಯಕ್ರಮವನ್ನು ಆಯ್ಕೆ ಮಾಡಿಕೊಂಡು ನೋಡಬಹುದು.

ಬರೀ ಇಷ್ಟೇ ಅಲ್ಲ. ನಿಮ್ಮ ಟಿ.ವಿ.ಯನ್ನು ಅಂತರ್‌ಜಾಲ ಜಾಲಾಡಲು ಉಪಯೋಗಿಸಿಕೊಳ್ಳಬಹುದು. ಆದರೆ ಅದಕ್ಕೆ ನಿಮ್ಮ ಟಿ.ವಿ.ಯ ಜೊತೆಗೆ ಮತ್ತೊಂದು ಉಪಕರಣವೂ ಬೇಕಾಗುತ್ತದೆ. ಅದನ್ನು ಟಾಪ್-ಬಾಕ್ಸ್ (ವಿಶೇಷ ಪೆಟ್ಟಿಗೆ) ಎಂದು ಕರೆಯುತ್ತಾರೆ. ಕೇಬಲ್‌ಮೂಲಕ ಬಂದ ಅಂತರ್‌ಜಾಲದ ಮಾಹಿತಿಯನ್ನು ಈ ಟಾಪ್-ಬಾಕ್ಸ್ ಬೇಕಾದ ರೀತಿಯಲ್ಲಿ ಪರಿವರ್ತಿಸಿ, ನಿಮ್ಮ ಟಿ.ವಿ.ಯ ಪರದೆಯ ಮೇಲೆ ನೀವು ಕೇಳಿದ ಮಾಹಿತಿಯನ್ನು ಪ್ರಕಟಿಸುತ್ತದೆ. ನೀವು ಅಂತರ್‌ಜಾಲದಲ್ಲಿ ಪಯಣಿಸಲು ಸಹಾಯವಾಗುವಂತೆ ಒಂದು ರಿಮೋಟ್ ಕೀಲಿಮಣೆ (ಕೀ-ಬೋರ್ಡ್) ಮತ್ತು ಮೌಸನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಈ ರೀತಿ ಕೇಬಲ್ ಮುಖಾಂತರ ರವಾನೆ ಮಾಡುವ ಮಾಹಿತಿ, ಈಗ ಸದ್ಯಕ್ಕೆ ಚಾಲ್ತಿಯಲ್ಲಿರುವ ದೂರವಾಣಿ ಮೂಲಕ ಮಾಹಿತಿ ರವಾನಿಸುವ ವೇಗಕ್ಕಿಂತ ಸುಮಾರು 1000 ಪಟ್ಟು ಹೆಚ್ಚಿರುತ್ತದೆ! ಅಂದರೆ ಇಂದಿನ ದೂರವಾಣಿ ಸಂಪರ್ಕದ ಮೂಲಕ ಯಾವುದೋ ಒಂದು ಅಂತರ್‌ಜಾಲದ ಪುಟದ ಮಾಹಿತಿಯೆಲ್ಲಾ ನಿಮ್ಮ ತೆರೆಯ ಮೇಲೆ ಮೂಡಲು ಸಾವಿರ ಸೆಕೆಂಡುಗಳು ಬೇಕಾದರೆ, ಅದೇ ಪುಟವನ್ನು ಕೇವಲ ಒಂದು ಸೆಕೆಂಡಿನಲ್ಲಿ ಕೇಬಲ್ ಮೂಲಕ ರವಾನಿಸಿ ನಿಮ್ಮ ಕಿರುತೆರೆಯಲ್ಲಿ ಕಾಣಿಸಬಹುದಾಗಿದೆ. ಇದರಿಂದಾಗಿ ಚಿತ್ರಗಳು (ಗ್ರಾಫಿಕ್ಸ್), ಚಲನಚಿತ್ರಗಳು (ವಿಡಿಯೋ ಕ್ಲಿಪ್ಸ್) ಮತ್ತು ಧ್ವನಿಗಳನ್ನು ಅತ್ಯಂತ ಕಡಿಮೆ ಸಮಯದಲ್ಲಿ ರವಾನಿಸಬಹುದು. ಜೊತೆಗೆ ಈ ರೀತಿಯಾಗಿ ಕೇಬಲ್ ಮೂಲಕ ಮಾಹಿತಿ ರವಾನೆ, ಸದ್ಯದಲ್ಲಿ ಪ್ರಚಲಿತದಲ್ಲಿರುವ ಟೆಲಿಫೋನ್ ಮೂಲಕ ಮಾಡುವ ಮಾಹಿತಿ ವರ್ಗಾವಣೆಗಿಂತ ತುಂಬಾ ಕಡಿಮೆ ಖರ್ಚಿನದಾಗುತ್ತದೆ. ಇಷ್ಟೇ ಅಲ್ಲದೆ ನೀವು ಅಂತರ್‌ಜಾಲವನ್ನು ಉಪಯೋಗಿಸಿಕೊಳ್ಳಬೇಕೆಂದರೆ ಸಾವಿರಾರು ರೂಪಾಯಿ ಕೊಟ್ಟು ಕಂಪ್ಯೂಟರೊಂದನ್ನು ಕೊಳ್ಳಬೇಕು ಎಂದೇನಿಲ್ಲ. ನಿಮ್ಮ ಟಿವಿಯೇ ಕಂಪ್ಯೂಟರ್ ಪಾತ್ರವನ್ನು ವಹಿಸುತ್ತದೆ. ಅದಲ್ಲದೆ ತುಂಬಾ ದುಬಾರಿಯ ಲಘುವರ (ಸಾಫ್ಟ್‌ವೇರ್)ಗಳನ್ನು ನಿಮ್ಮ ಕಂಪ್ಯೂಟರ್‌ನಲ್ಲಿ ಸೇರಿಸಬೇಕೆಂದಾಗಲಿ, ಅದನ್ನು ಕಾಲ ಕಾಲಕ್ಕೆ ಹೊಸ ಆವೃತ್ತಿಯಿಂದ ಪರಿಷ್ಕರಿಸಬೇಕೆಂದಾಗಲಿ, ಕಂಪ್ಯೂಟರ್ ವೈರಸ್ ದಾಳಿ ಮಾಡುತ್ತದೆಂಬ ಗೊಡವೆಯಾಗಲೀ ಇರುವುದಿಲ್ಲ.

ಆದರೆ ನಿಮ್ಮಲ್ಲೀಗಿರುವ ಟಿ.ವಿ.ಯನ್ನು ಉಪಯೋಗಿಸಿ ಅಂತರ್‌ಜಾಲವನ್ನು ನೋಡಬಹುದಾದರೂ, ಅದರಿಂದ ಮಾಹಿತಿಯನ್ನು ನಿಮ್ಮ ಫ್ಲಾಪಿಗಳಿಗೆ ಶೇಖರಿಸುವ ಸಾಧ್ಯತೆಯಿಲ್ಲ. ಅದರ ಬದಲಿಗೆ ಮಾರುಕಟ್ಟೆಯಲ್ಲಿ ಈಗ ವೆಬ್ ಟಿ.ವಿ.ಯೆಂಬ ಹೊಸ ಬಗೆಯ ಟಿ.ವಿ.ಗಳು ಬರುತ್ತಲಿವೆ. ಫಿಲಿಪ್ಸ್, ಎಲ್.ಜಿ, ಸೋನಿ, ಬಿ.ಪಿ.ಎಲ್. ಮುಂತಾದ ದೊಡ್ಡ ದೊಡ್ಡ ಕಂಪನಿಗಳು ಈಗಾಗಲೇ ಇಂತಹ ವಿಶೇಷ ಟಿ.ವಿ.ಗಳನ್ನು ತಯಾರಿಸಲಾರಂಭಿಸಿವೆ. ಇಂತಹ ವೆಬ್ ಟಿ.ವಿ.ಯನ್ನು ನೀವು ಕಂಪ್ಯೂಟರ್ ಮತ್ತು ಟಿ.ವಿ.ಯಾಗಿ ಬಳಸಿಕೊಳ್ಳಬಹುದು. ಸದ್ಯಕ್ಕೆ ಅದರ ಬೆಲೆಯನ್ನು ಸುಮಾರು 50,000 ರೂಪಾಯಿಗಳೆಂದು ಅಂದಾಜು ಮಾಡಲಾಗುತ್ತಿದೆಯಾದರೂ, ಕೆಲವೇ ದಿನಗಳಲ್ಲಿ ಅದು ಕುಸಿಯುವುದು ನಿಶ್ಚಯ.

ಈಗಾಗಲೇ ಬೆಂಗಳೂರಿನಲ್ಲಿ ಸಿಟಿ ಚಾನೆಲ್‌ನವರು ವಿ.ಎಕ್ಸ್.ಎಲ್. ಇನ್‌ಸ್ಟ್ರುಮೆಂಟ್ಸ್ ಲಿಮಿಟೆಡ್ ಎಂಬ ಕಂಪನಿಯೊಡಗೂಡಿ ಈ ತಂತ್ರವನ್ನು ಯಶಸ್ವಿಯಾಗಿ ಪ್ರಯೋಗ ಮಾಡಿ ನೋಡಿದೆ. ಅವರು ಸದ್ಯಕ್ಕೆ ಬರೀ ಕಂಪ್ಯೂಟರ್‌ಗೆ ಮಾತ್ರ ಕೇಬಲ್ ಮೂಲಕ ಅಂತರ್‌ಜಾಲದ ಮಾಹಿತಿಯನ್ನು ರವಾನೆ ಮಾಡುವ ಉದ್ದೇಶ ಹೊಂದಿದ್ದರೂ, ಅದನ್ನು ಟಿ.ವಿ. ಮತ್ತು ದೂರವಾಣಿಗೂ ಅಳವಡಿಸಿ ನೋಡುವ ಆಸೆಯನ್ನು ಹೊಂದಿದ್ದಾರೆ. ಈ ರೀತಿಯ ಕೇಬಲ್‌ನ್ನು ಉಪಯೋಗಿಸಿದಾಗ ಅದಕ್ಕೆ ಸರಿಹೊಂದುವ ಕೇಬಲ್ ಮೋಡಮ್ ಅನ್ನು ಬಳಸಬೇಕಾಗುತ್ತದೆ. ಆದರೆ ಈ ಕೇಬಲ್ ಮೋಡಮ್‌ಗಳು ಸದ್ಯದ ಮಾರುಕಟ್ಟೆಯಲ್ಲಿ ತುಂಬಾ ದುಬಾರಿಯಾಗಿರುವುದರಿಂದ, ಅವುಗಳನ್ನು ಸಿಟಿ ಚಾನೆಲ್ ಕಂಪನಿಯೇ ಖರೀದಿಸಿ ಗ್ರಾಹಕರಿಗೆ ಬಾಡಿಗೆಯಾಗಿ ಕೊಡುವ ಆಲೋಚನೆಯನ್ನು ಹೊಂದಿದೆ. ಈ ಸೌಲಭ್ಯಕ್ಕೆ ತಿಂಗಳಿಗೆ ಸುಮಾರು 1000 ರೂಪಾಯಿ ಮತ್ತು ಅದಕ್ಕೆ ಬೇಕಾದ ಮೋಡಮ್‌ಗೆ ಬಾಡಿಗೆ ಹಣವಾಗಿ ಸುಮಾರು 500 ರೂಪಾಯಿಗಳನ್ನು ಸಂಗ್ರಹಿಸುವ ಆಲೋಚನೆಯಲ್ಲಿದ್ದಾರೆ.

ಸಿಟಿ ಚಾನೆಲ್‌ನಂತೆಯೇ ಇನ್ ಕೇಬಲ್, ಎಂ.ಟಿ.ಎನ್.ಎಲ್. (ಮಹಾನಗರ ಟೆಲಿಫೋನ್ ನಿಗಂ ಲಿಮಿಟೆಡ್) ಕೂಡ ಈ ತಂತ್ರಜ್ಞಾನವನ್ನು

ಬಳಸಿಕೊಳ್ಳುವ ಆಲೋಚನೆಯಲ್ಲಿವೆ. ಆದರೆ ಈ ತಂತ್ರಜ್ಞಾನವನ್ನು ಉಪಯೋಗಿಸುವುದಕ್ಕಾಗಿ ಮನೆ ಮನೆಗೂ ಫೈಬರ್ ಆಪ್ಟಿಕ್ಸ್ ಕೇಬಲ್‌ಗಳನ್ನು ಹಾಕಬೇಕಾಗುತ್ತದೆ. ಈಗಾಗಲೇ ಈ ಕಾರ್ಯವೂ ತ್ವರಿತ ಗತಿಯಲ್ಲಿ ಸಾಗುತ್ತಿದೆ.

ದೂರವಾಣಿಯಾಗಿಯೂ ಬಳಸಬಹುದೆ?


ಹೌದು. ದೂರವಾಣಿಯಲ್ಲಿಯೂ ಮಾಹಿತಿಯನ್ನು ಒಂದು ಸ್ಥಳದಿಂದ ಮತ್ತೊಂದಕ್ಕೆ ರವಾನೆ ಮಾಡುವುದೇ ಗುರಿಯಾದ್ದರಿಂದ, ಈ ತಂತ್ರಜ್ಞಾನವನ್ನು ಬಳಸಬಹುದಾಗಿದೆ. ಅಂದರೆ ನಿಮ್ಮ ಕೇಬಲ್ ಅನ್ನು ನಿಮ್ಮ ದೂರವಾಣಿ ಪೆಟ್ಟಿಗೆಗೆ ಕನೆಕ್ಟ್ ಮಾಡಿ, ನೀವು ಮಾತನಾಡಬಹುದು. ಇದರಿಂದ ಮುಖ್ಯ ಲಾಭವೇನೆಂದರೆ, ನೀವು ಮಾತನಾಡಿದ್ದು ಮಾಹಿತಿಯ ರೂಪದಲ್ಲಿ ಉಪಗ್ರಹಕ್ಕೆ ತಲುಪಿ, ಅಲ್ಲಿಂದ ಕಲವೇ ಕ್ಷಣಗಳಲ್ಲಿ ಆ ಕಡೆಯ ಟೆಲಿಫೋನನನ್ನು ತಲುಪಿಬಿಡುವುದರಿಂದ ನೀವು ದೂರವಾಣಿ ಕರೆ ಮಾಡಿದ್ದು ಯಾವ ಸ್ಥಳಕ್ಕೆ ಎಂಬುದು ಮುಖ್ಯವಾಗುವುದಿಲ್ಲ. ಅಂದರೆ ನಿಮ್ಮ ಊರಲ್ಲಿ ಕುಳಿತು ಪಕ್ಕದ ಮನೆಯವನಿಗೆ ಫೋನ್ ಮಾಡಿದರೂ ಒಂದೇ ಅಥವಾ ದೂರದ ಅಮೆರಿಕಾದಲ್ಲಿರುವ ನಿಮ್ಮ ಮಗನಿಗೆ ಫೋನ್ ಮಾಡಿಧರೂ ಒಂದೇ! ಎರಡೂ ಕರೆಗಳು ಲೋಕಲ್ ಕಾಲ್‌ಗಳಾಗಿ ಪರಿವರ್ತನೆ ಹೊಂದುತ್ತವೆ. ಇದರಿಂದಾಗಿ ನೀವು ಗಂಟೆಗಟ್ಟಲೆ ದೂರದ ದೇಶದಲ್ಲಿರುವ ವ್ಯಕ್ತಿಯೊಡನೆ ಮಾತನಾಡಿದರೂ, ನಿಮ್ಮ ದೂರವಾಣಿಯ ಬಿಲ್ ಬಗ್ಗೆ ಚಿಂತಿಸುವ ಅವಶ್ಯಕತೆಯಿಲ್ಲ. ಆದರೆ ನೀವು ಕರೆ ಮಾಡಿದ ಟೆಲಿಫೋನ್ ಕೂಡ ಕೇಬಲ್ ಸಂಪರ್ಕದಿಂದ ನಿಯಂತ್ರಣಗೊಂಡಿರುವುದು ಅವಶ್ಯಕ.

ಈ ತಂತ್ರಜ್ಞಾನವನ್ನು ದೂರವಾಣಿಗೆ ಬಳಸುವ ಕ್ರಮ ಯಶಸ್ವಿಯಾಗಿ ಪರೀಕ್ಷೆಗೊಡ್ಡಿದ್ದರೂ, ಸರಕಾರ ಇದನ್ನು ಬಳಸಿಕೊಳ್ಳಲು ಪರವಾನಿಗೆಯನ್ನು ಕೊಟ್ಟಿಲ್ಲ. ಏಕೆಂದರೆ ಈಗಾಗಲೇ ಕೋಟಿಗಟ್ಟಲೆ ಹಣ ಸುರಿದು ರೂಪಿಸಿಕೊಂಡಿರುವ ನಮ್ಮ ದೂರವಾಣಿ ಇಲಾಖೆಯ ಗತಿಯೇನಾಗಬೇಕು! ಎಂಬುದು ಅದರ ವಾದ. ಆದರೆ ತಂತ್ರಜ್ಞಾನದ ಪ್ರಗತಿಗೆ ಕಾನೂನಿನ ತಡೆಗಳನ್ನು ಒಡ್ಡಲಾಗುವುದಿಲ್ಲ. ಅದು ಸಮುದ್ರಕ್ಕೆ ಮಣ್ಣಿನ ಗೋಡೆಯೊಂದನ್ನು ಕಟ್ಟಿ ಅದನ್ನು ತಡೆಗಟ್ಟಲು ಪ್ರಯತ್ನಿಸಿದಂತಾಗುತ್ತದೆ. ಇಂದಲ್ಲ ನಾಳೆ ಸರಕಾರವೂ ಆಧುನಿಕ ತಂತ್ರಜ್ಞಾನಕ್ಕೆ ತಲೆಬಾಗಲೇಬೇಕಾಗುತ್ತದೆ.

ನೀವು ಮಾತನಾಡಲು ಟೆಲಿಫೋನನ್ನು ಉಪಯೋಗಿಸುವುದರ ಬದಲು ಕಂಪ್ಯೂಟರ್ ಅಥವಾ ಟಿ.ವಿ. ಉಪಯೋಗಿಸಿಕೊಳ್ಳುವ ದಿನಗಳೂ ದೂರವಿಲ್ಲ. ಅದಕ್ಕೆ ಕ್ಯಾಮರಾವನ್ನು ಅಳವಡಿಸಿಕೊಂಡು, ಆ ಕೊನೆಯಿಂದ ಮಾತನಾಡುತ್ತಿರುವವರ ಚಿತ್ರವನ್ನೂ ಕಾಣಬಹುದು. ಅದೇ ರೀತಿ ಅವರೂ ನಿಮ್ಮ ಧ್ವನಿಯೊಂದಿಗೆ ನಿಮ್ಮನ್ನೂ ನೋಡಬಹುದು. ಈ ರೀತಿಯ ಸಂವಾದಕ್ಕೆ ವಿಡಿಯೋ ಕಾನ್‌ಫರೆನ್ಸ್ ಎಂದು ಕರೆಯುತ್ತಾರೆ.

■ ವಸುಧೇಂದ್ರ

ನಿಮ್ಮ ಟಿ.ವಿ. ಅಥವಾ ಕಂಪ್ಯೂಟರ್‌ಗೆ ಕೇಬಲ್ ಕನೆಕ್ಟ್ ಮಾಡುವ ರೀತಿ





ನೀವೇ ಹೇಳಿ, ಪ್ರಪಂಚದಲ್ಲೆಲ್ಲಾ ನಮ್ಮ ಹೆಸರೇ ಕಷ್ಟವೇ ಉಚ್ಚರಿಸಲು. ಅದೂ ನಮ್ಮ ದಕ್ಷಿಣ ಭಾರತದವರದು. ಇಲ್ಲಿನವರಿಗೆ ನಾಲಗೆ ತಿರುಗಿಸುವ ವ್ಯಂಜನಗಳ ಉಚ್ಚಾರ ಕಷ್ಟ ಎಂದು ಹೇಳಬಹುದು ನೀವು. ಆದರೆ ನನಗೇನೂ ಹಾಗೆನಿಸುವುದಿಲ್ಲ, ರಗಾಟ್ಸ್ಕಿ, ಪಿಸ್ಕರಾವ್ಸ್ಕಿ, ಲೆವಿಂಸ್ಕಿ, ಇವಾನವಸವಿಚ್ ಮುಂತಾದವುಗಳಿಗೆಲ್ಲಾ ತಿರುಗುವ ಇವರ ನಾಲಗೆ ದುದ್ದ, ಉಳ್ಳಾಗಡ್ಡಿ, ಮೆಣಸಿನಕಾಯಿಗಳಿಗೆ ಏಕೆ ತಿರುಗುವುದಿಲ್ಲವೋ, ನನಗಂತೂ ಇದುವರೆಗೂ ತಿಳಿದಿಲ್ಲ.

ಅಷ್ಟಕ್ಕೂ ಹೆಸರಿನಲ್ಲೇನಿದೆ ಮಹಾ !

''ಕೆಜಿನಲಿ! ಡಿಡ್ ಐ ಸೇ ದಟ್ ರೈಟ್'' ದುರ್ದಾನ ತೆಗೆದುಕೊಂಡಂತೆ ಕೇಳಿದಳು, ಸೆಕ್ರೆಟರಿ. ''ಕಾಗಿನೆಲೆ'' ಹ್ಹ, ಹ್ಹ, ಹ್ಹ, ಮಾಡಬಾರದ ತಪ್ಪು ಮಾಡಿ, ಕ್ಷಮಿಸು ತಾಯಿ, ಎನ್ನುವಂತೆ ಹೇಳಿದೆ. ಓ, ಐ ಆಂ ಸಾರಿ, ಎವರಿಬಡಿ ಹ್ಯಾಸ್ ಸ್ಟ್ರೇಂಜ್ ನೇಂಸ್ ಎನ್ನುತ್ತಾ, ತನ್ನ ಎಲ್ಲ ಕಂದು ಹಲ್ಲುಗಳನ್ನೂ ಪ್ರದರ್ಶಿಸುತ್ತಾ ಒಳಗೆ ಕರೆದುಕೊಂಡು ಹೋದಳು. ಒಳಗೆ ಕುರ್ಚಿಯ ಮೇಲೆ ಕೂತಿದ್ದವ ಯಾವುದೋ ದೊಡ್ಡ ಫೈಲನ್ನು ಕೂಲಂಕಷವಾಗಿ ಅಭ್ಯಸಿಸುವ ವಿಜ್ಞಾನಿಯಂತೆ ನನ್ನ ಫೈಲನ್ನು ನೋಡುತ್ತಿದ್ದ. ಏನೋ ಕಂಡಿದ್ದಾನೆ, ನನ್ನ ಸೀವಿಯಲ್ಲಿ ಇಲ್ಲ ಸ್ಟೇಟ್ಮೆಂಟ್ ಆಫ್ ಪರ್ಪಸ್ನಲ್ಲಿ ಅಂದು ಬೀಗುತ್ತ, ಕತ್ತರಿಗಾಲಿನಲ್ಲಿ ಪ್ರೊಫೆಷನಲ್ ಆಗಿ ಕೂತೆ. ಯಾಕೋ ಆಸಾಮಿ ಮೊದಲ ಪುಟದಿಂದ ಮುಂದೆ ಹೋದಂತೇ ಕಾಣಲಿಲ್ಲ. ಐದು ನಿಮಿಷ ಆದ ಮೇಲೆ ಇದ್ದಕ್ಕಿದ್ದ ಹಾಗೆ ಜ್ಞಾನೋದಯವಾದಂತೆ 'ಗೂರೂಪರ್ಸಡ್ ಕ್ಯಾಗಿನ್ಯಾಲಿ ರ್‍ಯಾಂಗನ್ಯಾ...., ಐ ಆಂ ಸಾರಿ, ಐ ಲಾಸ್ಟ್, ಎಂದ. ಇಟ್ಸ್ ಓಕೆ, ಅಂದು, ನನ್ನ ಹೆಸರನ್ನು ಪೂರಾ ಹೇಳಿದೆ. ಆಗ ತಿಳಿದದ್ದು ನನಗೆ, ಈತ ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿರುವುದು ನನ್ನ ಹೆಸರನ್ನು. ಇವರಪ್ಪನಾಣೆ ಮೊದಲ ಸಾಲಿಂದ ಕೆಳಗೆ ಹೋಗಿಲ್ಲ ಈತ.

ಇದು ಮೊದಲ ದಿನ ಅಮೆರಿಕಾದಲ್ಲಿ ರೆಸಿಡೆನ್ಸಿ ಇಂಟರ್ವ್ಯೂಗೆ ಬಂದಾಗ ಆದ ಅನುಭವ ನನಗೆ. ನನಗಿದ್ದುದ್ದು ಒಂದೇ ಹೆಸರು ಇಂಡಿಯಾದಲ್ಲಿ. ಗುರುಪ್ರಸಾದ್, ಎಂದು. ಹಳೇ ಮೈಸೂರಿನಲ್ಲಿ ಹುಟ್ಟಿ ಬೆಳೆದಿದ್ದಕ್ಕೆ ಟ್ರೇಡ್ ಆಫ್ ನನ್ನ ಕೊನೆಯ ಹೆಸರು. ನಮ್ಮ ವಂಶದವರನ್ನೆಲ್ಲಾ, ಶಿವಮೊಗ್ಗದಲ್ಲಿ ಕಾಗಿನೆಲೆ ಎಂದೇ ಕರೆಯುತ್ತಿದ್ದರೂ, ನಾನು ಮತ್ತು ನನ್ನ ತಮ್ಮ ಮಾತ್ರ ಶಿವಮೊಗ್ಗ ಬಿಟ್ಟ ಮೇಲೆ ನಮ್ಮ ಕಡೆಯ ಹೆಸರನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದೆವು. ಕಾಲೇಜಿನಲ್ಲಿ ಉತ್ತರ ಕರ್ನಾಟಕದವರಿಗೆಲ್ಲಾ ಏನೋ ಜಂಬ, ತಮಗೆ ಒಂದಕ್ಕಿಂತ ಹೆಚ್ಚು ಹೆಸರಿದೆ ಅಂತ. ನಿಜ ಹೇಳುತ್ತೀನಿ, ವೀಸಾ ಅಪ್ಲಿಕೇಶನ್‌ನಲ್ಲಿ ಲಾಸ್ಟ್ ನೇಮ್ ಕಾಲಂ ನಲ್ಲಿ ಖುಷಿಯಿಂದ ನನ್ನ ಕಡೆಯ ಹೆಸರನ್ನು ಹಾಕಿದ್ದೆ. ಅಮೆರಿಕದಲ್ಲಿ ಮೊದಲೇ ಇದ್ದವರು ಹೇಳಿದ್ದರು ನಿನ್ನ ಕಡೆಯ ಹೆಸರು ಇಲ್ಲಿನವರಿಗೆ ಉಚ್ಚಾರ ಮಾಡಲು ಕಷ್ಟ, ಬದಲಾಯಿಸಿಕೋ ಎಂದು. ನಾನೇನು ಮದುವೆಯಾದ ಹೆಣ್ಣೇ ಹೆಸರು ಬದಲಾಯಿಸಲು ಅಥವಾ ಅಮೆರಿಕ ಏನು ನನ್ನ ಅತ್ತೆಯ ಮನೆಯೇ, ಹಾಗೆ, ಹೀಗೆ ಎಂದು ನನಗೆ ನಾನೇ ಇಲ್ಲದ ಸಮಜಾಯಿಷಿ ಕೊಟ್ಟುಕೊಂಡು, ನನ್ನ ನಿಜವಾದ ಹೆಸರನ್ನೇ ಕೊಟ್ಟಿದ್ದೆ. ಬಿಟ್ಟು ಹೇಳಬೇಕೆಂದರೆ, ಒಂದು ರೀತಿ ಬೇರೆ ಐಡೆಂಟಿಟಿ ಬೇಕಿತ್ತೇನೋ ನನ್ನ ಒಳ ಮನಸ್ಸಿಗೆ ಬಹಳ ಸುಲಭವಾಗಿ ಒಪ್ಪಿಕೊಂಡುಬಿಟ್ಟಿತ್ತು ಈ ಹೊಸ ಹೆಸರನ್ನು.

ಈ ಮೂರು ವರ್ಷದ ರೆಸಿಡೆನ್ಸಿಯಲ್ಲಿ, ನಮ್ಮ ವಂಶದ ಹೆಸರನ್ನು ಬೇಕು ಬೇಕಾದ ಹಾಗೆ ಆಡಿ ಕೆಡಿಸಿದ್ದಾರೆ. ನನ್ನ ಕೊನೆಯ ಹೆಸರನ್ನು ಅಪಭ್ರಂಶಗೊಳಿಸುವುದರ ಮೂಲಕ ಇಲ್ಲಿ. ಕೆಜಿನಲಿ, ಕ್ಯಾಗಿನ್ಯಾಲಿ, ಕಾಜಿನಲ್ಲಿ, ಕೆಂಗೇಲಿ ಇತ್ಯಾದಿ. ನನ್ನ ಯಾವ ಊಹೆಗೂ ನಿಲುಕುವುದಿಲ್ಲ ಇಲ್ಲಿನವರು ನನ್ನ ಹೆಸರು ಹೇಳುವ ರೀತಿ. ಮೊದಮೊದಲು ನಾನು ತುಂಬಾ ನಿಷ್ಠುರವಾಗಿ ನನ್ನ ಹೆಸರನ್ನು ತಿದ್ದುತ್ತಿದ್ದೆ. ಆದ್ರೆ ಬರಬರುತ್ತಾ ಅದೇ ಒಂದು ದೊಡ್ಡ ಕೆಲಸವಾಗಿಬಿಟ್ಟಿತು. ಅದೂ ನನ್ನ ಕೆಲಸವೋ, ಮಾಡುವ ಪ್ರತಿಯೊಂದು ಕೆಲಸವೂ, ಹೆಸರಿಲ್ಲದೇ ನಡೆಯುವುದಿಲ್ಲ. ಬೀಪ್ ಬಂತು ಅಂತ ಉತ್ತರಿಸಿದರೆ, ನನಗೆ ಬೀಪ್ ಮಾಡಿದವಳೇ ನನ್ನ ಹೆಸರು ಓದುವುದಕ್ಕೆ ಮುಜುಗರ ಪಡುತ್ತಿರುತ್ತಾಳೆ. ''ಹೌದು ಯು ಸೇ ಯುವರ್ ನೇಮ್ ಕಾ....'' ಎನ್ನುತ್ತಿದ್ದಂತೆ ಮುಂದೆ ಆಗಲಿರುವ ಪ್ರಮಾದವನ್ನು ಎದುರಿಸಲಾಗದೆ ನನ್ನ

ಹೆಸರನ್ನು ಟೆಲಿಗ್ರಾಫ್ ಆಫೀಸಿನವರಂತೆ ಕೆ ಲೈಕ್ ಇನ್ ಎಂದು ಕಾಗುಣಿತ ಸಮೇತ ಒಪ್ಪಿಸುತ್ತೇನೆ. ಈ ಪ್ರೋಗ್ರೆಸ್ ನೋಟ್ಸ್ ಬರೆದವರು ಯಾರು, ಈ ಟೆಸ್ಟ್ ಆರ್ಡರ್ ಮಾಡಿದವರು ಯಾರು, ಇವತ್ತು ಯಾರ ಕಾಲ್ ಹೀಗೆ ಇತ್ಯಾದಿ ಇತ್ಯಾದಿಗಳಿಗೆ ಉತ್ತರವಾಗಿ ಬರುವ ನನ್ನ ನಾನಾ ವಿಧದ ಹೆಸರಿನ ರೂಪಗಳನ್ನು ಕೇಳಿ ನನಗೆ ನನ್ನ ಮೂಲ ಹೆಸರೇನೆಂಬುದೇ ಮರೆತು ಹೋಗಿದೆ.

ನಮ್ಮದೇ ಬ್ಯಾಚಿನಲ್ಲಿ ಇದ್ದಾನೆ ತಮಿಳಿನವ ಒಬ್ಬ, ಹೆಸರು ಅಯ್ಯಪೆರುಮಾಳ್ ಮಹಿಳಮಾರನ್ ಅಥವಾ ಅಚ್ಚ ತಮಿಳಿನಲ್ಲಿ ಅಯಬೆರುಮಾಲ್ ಮಹಿಲಮಾರನ್. ಇಲ್ಲಿನವರನ್ನು ಗೋಳು ಹುಯ್ದುಕೊಳ್ಳಲು ಇದಕ್ಕಿಂತ ಒಳ್ಳೆ ಹೆಸರು ಬೇಕೆ? ಆದರೆ ಕೊನೆಗೆ ಸೋತವ ಇವನೇ. ಯಾವ ಗತಿ ಬಂದಿತೆಂದರೆ ಇವನನ್ನು ಕೇಳಬೇಕಲ್ಲ ಎಂದು ಜನ ಇವನ ಹೆಸರನ್ನು ಹೇಳುವುದನ್ನೇ ಬಿಟ್ಟುಬಿಟ್ಟರು. ತನ್ನ ಹೆಸರಿಗಾಗುತ್ತಿರುವ ಹಿಂಸೆಯನ್ನು ನೋಡಲಾಗದೆ, ಅದಕ್ಕಿಂತ ಹೆಚ್ಚಾಗಿ ಹೀಗೇ ಬಿಟ್ಟರೆ ನಾನಿನ್ನು ಹೇಳ ಹೆಸರಿಲ್ಲದಂತೆ ಆಗುತ್ತೇನೆ ಎಂದು ಹೇಗಾದರೂ ಮಾಡಿ ಅದನ್ನು ತುಂಡರಿಸಬೇಕು ಎಂದುಕೊಂಡ. ರಾಬರ್ಟ್ ಬಾಬ್ ಆಗುವ ಹಾಗೆ, ಸುಸನ್ ಸೂ ಆಗುವ ಹಾಗೆ ತಾನೂ ಏನಾದರೂ ಆಗಬೇಕು ಅಂದುಕೊಂಡ. ಆದರೆ ಆಗುವುದೇನು. ಡಾ. ಅಯ್ಯ ಎಂದರೆ ಅದು ಕನ್ನಡ, ತಮಿಳು ಕಾಂಟೆಂಪರರಿಗಳಿಗೆ ಅಮ್ಮಾ ತಾಯಿ ಅನ್ನೋ ಹಾಗೆ ಅನ್ನಿಸುತ್ತೆ. ಮಹಿಳ ಎಂದು ಇಟ್ಟುಕೊಳ್ಳಲು ಈತನ ಗಂಡಸುತನ ಒಪ್ಪಲಿಲ್ಲ. ಕೊನೆಗೆ ಮನಸ್ಸಿಗೆ ಇಷ್ಟವಾದದ್ದು ಡಾ. ಮಾರನ್ ಎನ್ನುವ ನಿಜವಾದ ಕಡೆಯ ಹೆಸರು. ಸರಿ, ಕಷ್ಟಪಟ್ಟು ಅಫಿಡವಿಟ್ ಏನೋ ಮಾಡಿಸಿಬಿಟ್ಟ. ಆದರೆ ಅದೂ ಇಲ್ಲಿ ಡಾ. ಮೊರಾನ್ ಆಗುವುದೇ! ಯಾರಿಗೆ ಈತನ ಐಕ್ಯು ತಿಳಿದಿತ್ತೋ ಇಲ್ಲವೋ ಆದರೆ ಈಗ ಈ ಹೆಸರಿನಿಂದ ತನ್ನ ಬುದ್ದಿಮತ್ತೆಯನ್ನು ತಾನೆ ಪ್ರದರ್ಶಿಸಿದ್ದೂ ಅಲ್ಲದೆ ಅದಕ್ಕೆ ಪುಕ್ಕಟೆ ಪ್ರಚಾರವೂ ಸಿಕ್ಕಿತು. ಈಗಲೂ ಒಳ್ಳೆಯ ಹೆಸರಿಗೆ ಹುಡುಕುತ್ತಲೇ ಇದ್ದಾನೆ, ಪಾಪ.

ಮೊನ್ನೆ ಒಂದು ಪ್ರಸಂಗ ನಡೆಯಿತು. ನಮ್ಮ ಆಸ್ಪತ್ರೆಯಲ್ಲೆ ಇರುವ ರೆಸಿಡೆಂಟೊಬ್ಬ, ನೋಡಲು ಎಲ್ಲೋ ನಮ್ಮ ಭಾಗದ ಪ್ರಪಂಚದಿಂದಲೇ ಬಂದಂತಿದ್ದ. ಆದರೆ ಹೆಸರು ಮಾತ್ರ ಕ್ರಿಸ್ ಎಂದು. ನನ್ನ ಹೆಸರನ್ನು ಹೇಳಲು ತುಂಬಾ ತೊಂದರೆ ತೆಗೆದುಕೊಳ್ಳುತ್ತಿದ್ದ. ಯಾರೋ ಕನ್ಫೂಸ್ಡ್ ದೇಸಿ ಇರಬಹುದು ಎಂದುಕೊಂಡು ಪರವಾಗಿಲ್ಲ ನನ್ನ ಮೊದಲ ಹೆಸರಿನಿಂದ ಕರೆ, ಎಂದು ಹೇಳಿದ್ದೆ. ಅದನ್ನೂ ಕಷ್ಟಪಟ್ಟು ಗೂರೂ.... ಕಡೆಯ ರಕಾರವನ್ನು ರ ಮತ್ತು ಯಗಳ ಹೈಬ್ರಿಡ್ ಮಾಡಿ ಕರೆಯುತ್ತಿದ್ದ. ನನಗೆ ಈತ ನನ್ನ ಹೆಸರು ಕರೆದಾಗಲೆಲ್ಲಾ ಕುಡಿದು ಬಂದು ಕರೆದಹಾಗೆ ಕೇಳಿಸುತ್ತಿತ್ತು. ಹೀಗೆಯೇ ಒಂದು ದಿನ ಕೌಂಟರಿನಲ್ಲಿ ಕುಳಿತು ಏನೋ ಕೆಲಸ ಮಾಡುತ್ತಿದ್ದಾಗ ಅವನಿಗೆ ಬೀಪ್ ಬಂತು. ಫೋನ್‌ನಲ್ಲಿ ಮಾತನಾಡುತ್ತಿದ್ದಾಗ ತಿಳಿಯಿತು, ಈತ ಕನ್ನಡದವ ಎಂದು. ಅದೂ ಗಂಡುಮೆಟ್ಟಿನ ಧಾರವಾಡದ ಕನ್ನಡ ಮಾತನಾಡುತ್ತಿದ್ದ. ಪ್ರಾಯಶಃ ಆತನ ಹೆಂಡತಿಯ ಹತ್ತಿರ. ಗೌರಿ ಎಂದು ಕೂಗುತ್ತಿದ್ದ. ಎಲಾ ಇವನ ಹೆಂಡತಿಗೆ ಗೌರಿ ಎನ್ನುತ್ತಾನೆ, ಇಲ್ಲೆ ಇರುವ ಮೆಡಿಕಲ್ ಸ್ಟುಡೆಂಟಿಗೆ ಗ್ಯಾರಿ ಎನ್ನುತ್ತಾನೆ. ಆದರೆ ನನಗೆ ಗುರು ಎನ್ನುವುದು ಕಷ್ಟವೇ. ಫೋನಿಟ್ಟ ತಕ್ಷಣ ತಡೆಯಲಾರದೆ ಕೇಳಿದೆ ಕನ್ನಡದಲ್ಲಿ ''ನಿಮ್ಮದು ಧಾರವಾಡಾನ''. ಏನೋ ಕೇಳಬಾರದ್ದು ಕೇಳಿದವನಂತೆ ಒಂದು ತರಾ ಮುಖ ಮಾಡಿ, ''ಯಾ, ಹ್ಯಾವೇರಿ'' ಎಂದು ತಿರುಗಲಾರದ ನಾಲಿಗೆಯನ್ನು ತಿರುಗಿಸಿ ಹೊಸ ಶೈಲಿಯಲ್ಲಿ ಹೇಳಿದ್ದ ಅವರೂರ ಹೆಸರನ್ನು. ನನಗೆ ಮೈ ಉರಿದು ಹೋಯಿತು. ಸಾಲದ್ದಕ್ಕೆ, ಅಲ್ಲಿಯೇ ಇದ್ದ ಒಬ್ಬಳು ನರ್ಸ್ ಉತ್ಸುಕಳಾಗಿ ನನ್ನ ಮುಖ ನೋಡಿದಳು. ದೇವರಾಣೆ ಹೇಳ್ತೀನಿ, ಆ ಮೊಮೆಂಟಿನಲ್ಲಿ ಇವನ ಮರ್ಯಾದೆ ತೆಗೆಯುವುದೇ ನನ್ನ ಗುರಿಯಾಗಿತ್ತು. ''ಯೂ ನೋ, ಕ್ರಿಸ್ ಒರಿಜನಲ್ ನೇಮ್, ಇಟ್ಸ್ ಕೃಷ್ಣ'' ಎಂದೆ. ಅಂದಿನಿಂದ ಇಂದಿನತನಕ ನನ್ನ ಜತೆ ಮಾತನಾಡಿಲ್ಲ.

ನಮ್ಮ ಚೀಫ್ ಇವ್ಯಾವುದರ ರಗಳೆಯೇ ಬೇಡ ಎಂದು ನನ್ನನ್ನು ಡಾ. ಕೆ. ಎನ್ನುತ್ತಾರೆ. ಇದರಿಂದ ನನಗೇನು ತುಂಬಾ ತೊಂದರೆಯಿಲ್ಲ ಜಿಡಿ. ಆದ್ರೆ ಕೆಲವೊಮ್ಮೆ ಮನುಷ್ಯರಿಗೆ ಇಂಗ್ಲಿಷ್ ಅಕ್ಷರಗಳ ಹೆಸರು ಇರುವುದು ಜೇಮ್ಸ್ ಬಾಂಡ್ ಚಿತ್ರಗಳಲ್ಲಿ ಮಾತ್ರ ಅಂತ ಅನ್ನಿಸುತ್ತದೆ. ಪರವಾಗಿಲ್ಲ ಜಿಡಿ, ವಿಧವಿಧವಾಗಿ ನಾಲ್ಕೂ ಅಕ್ಷರಗಳನ್ನೂ ಹಿಂಡಿ ಹಿಪ್ಪರಣೆ ಮಾಡಿ ಹಿಂಸಿಸುವ ಬದಲು, ಒಂದೇ ಒಂದು ಅಕ್ಷರ ಕೇಳುವುದು ಕಿವಿಗೂ ಹಿತ, ಮನಸ್ಸಿಗೂ ಶಾಂತಿ.

ಇಲ್ಲಿನವರಿಗೆ ಅನುಕೂಲ ಆಗಲಿ ಅಂತ ಕೊನೆಯ ಹೆಸರನ್ನು ತುಂಡರಿಸಲು ನನ್ನ ಮನಸ್ಸೇಕೋ ಒಪ್ಪುತ್ತಿಲ್ಲ. ನನ್ನ ಸ್ನೇಹಿತರೇ ಇದ್ದಾರೆ. ತೊಳಕನಹಳ್ಳಿ ತಳಕ್ ಆದಂತೆ, ಚಟರ್ಜಿ ಚಾಟಿ ಆದಂತೆ ನಾನೂ ಏನಾದರೂ ಆಗಬೇಕೊ ಅಥವಾ ಕೆಲವರು ಮಾಡುವಂತೆ, ಹೆಸರನ್ನು ತುಂಡರಿಸಿ ಆಮೇಲ ಹೆಸರಿಟ್ಟವರಿಗೆ ಮರ್ಯಾದೆ ಕೊಡಲು ಇಂಗ್ಲಿಷ್‌ನಲ್ಲಿ ಆ ತುಂಡು ಹೆಸರನ್ನು ಬಹುವಚನ ಮಾಡಿ ಉದಾ : ತುಂಬಾಪುರ ತುಂಬ್ಸ್ ಆದಂತೆ, ಕಲಘಟಗಿ ಕಲ್ಸ್ ಆದಂತೆ ಕಾಗ್ಸ್ ಆಗಲೂ. ನನ್ನ ಹೆಸರ ಕೊಲೆಯೂ ಆಗದಂತೆ, ಇಲ್ಲಿನವರಿಗೆ ಹೇಳಲು ಅನುಕೂಲವೂ ಆಗುವಂತೆ ಅದರ ಹಳಗನ್ನಡ ರೂಪವಾದರಾಗಲಿ, ತತ್ಸಮ ತದ್ಭವಗಳಾಗಲಿ ಅಥವಾ ಅದನ್ನು ಪಾಶ್ಚಾತ್ಯೀಕರಿಸಿದರೂ, ಅಥವಾ ಇಲ್ಲಿನ ಕನ್ನಡಿಗರು ಪೌರ್ವಾತ್ಯಿಕರಿಸಿದರೂ ಪರವಾಗಿಲ್ಲ, ಅದಕ್ಕೆ ಒಂದು ರೂಪ ಕೊಟ್ಟು ಕಾಪಾಡಿದವರಿಗೆ ನಾನು ಆಭಾರಿಯಾಗಿರುತ್ತೇನೆ.

- ಕಾಗಿನೆಲೆ ಗುರುಪ್ರಸಾದ್
ಮಿಚಿಗನ್, ಅಮೆರಿಕಾ

ತಿಳಿದಿರಲಿ

ದೊಡ್ಡ ಕುಂಬಳಕಾಯಿ

ವಿಶ್ವದ ಭಾರೀ ಗಾತ್ರದ ಕುಂಬಳಕಾಯಿ ಸ್ವೀಡನ್‌ನಲ್ಲಿ ಇತ್ತೀಚೆಗೆ ಬೆಳೆದಿದ್ದಾರೆ. ಅದರ ತೂ 100.5 ಕಿಲೋಗ್ರಾಂ. ಸಧ್ಯದಲ್ಲಿಯೇ ಇದು ಭಾರಿ ಗಾತ್ರದ ಕುಂಬಳಕಾಯಿ ಎಂದು ವಿಶ್ವ ದಾಖಲೆಯ ಗಿನ್ನಿಸ್ ಪುಸ್ತಕದಲ್ಲಿ ಸ್ಥಾನ ಪಡೆಯಲಿದೆ. ಹಿಂದಿನ ದಾಖಲೆ 56.6 ಕಿಲೋಗ್ರಾಂ.

ಜ್ವರ ಬಂದಾಗ ನಮಗೇಕೆ ರುಚಿ ಗೊತ್ತಾಗುವುದಿಲ್ಲ?

ಅಜೀರ್ಣವಾದಾಗ ಅಥವಾ ಹೊಟ್ಟೆ ಕೆಟ್ಟಾಗ ಒಂದು ಬಗೆಯ ಹಿಟ್ಟಿನಂತಹ ವಸ್ತು ನಾಲಗೆಯ ಮೇಲೆ ಶೇಖರಣೆಯಾಗುತ್ತದೆ. ಆದ್ದರಿಂದ ಆಹಾರ ಕಣಗಳು ರುಚಿಗ್ರಂಥಿಗಳ ಸಮೀಪ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಕಾರಣದಿಂದಲೇ ಆಹಾರದ ರುಚಿ ಗೊತ್ತಾಗುವುದಿಲ್ಲ. ದೇಹದ ಏರಿದ ತಾಪಮಾನ ಮತ್ತು ಅತಿ ಬಿಸಿಯಾದ ಆಹಾರ ಎರಡೂ ರುಚಿಗ್ರಂಥಿಗಳನ್ನು ತಾತ್ಕಾಲಿಕವಾಗಿ ನಿಶ್ಚೇತನಗೊಳಿಸುವುದರಿಂದ ನಾಲಗೆಗೆ ಆಹಾರದ ನೈಜ ಸ್ವಾದ ತಿಳಿಯುವುದಿಲ್ಲ.

ಮಿಂಚು ಹುಳು ಬೆಳಕನ್ನು ಹೇಗೆ ಉತ್ಪಾದಿಸುತ್ತದೆ?

ಮಿಂಚುಹುಳವನ್ನು ಇಂಗ್ಲಿಷ್‌ನಲ್ಲಿ 'ಫೈರ್‌ಫ್ಲೈ' (Fire Fly) ಎಂದು ಕರೆಯುವ. ಈ ಹುಳುವಿನಲ್ಲಿ ಜೈವಿಕವಾಗಿ ಬೆಳಕನ್ನು ಸೃಷ್ಟಿಸುವ ವಿಶಿಷ್ಟತೆ ಇದೆ. ಆದರೆ ಇದರಿಂದ ಯಾವುದೇ ಶಾಖ ಬಿಡುಗಡೆ ಆಗುವುದಿಲ್ಲ. ಮಿಂಚುವ ಬೆಳಕಿಗೆ ಮುಖ್ಯವಾದ ಕಾರಣ 'ಲೂಸಿಫೆರಿನ್' ಎಂಬ ಕಿಣ್ವ, ಎಟಿಪಿ ಎಂಬ ಶಕ್ತಿದಾಯಕ ಅಣು ಹಾಗೂ ಮೆಗ್ನೀಷಿಯಂ. ಈ ಮೂರು ಸೇರಿದಾಗ ಬೆಳಕು ಹೊರ ಸೂಸುತ್ತದೆ. ಈ ಮೂರರಲ್ಲಿ ಯಾವುದೇ ಒಂದು ಇಲ್ಲದಿದ್ದಾಗ ಬೆಳಕು ಉತ್ಪಾದಿಸಲು ಸಾಧ್ಯವಾಗುವುದಿಲ್ಲ.

ನಿಂಬೆಹಣ್ಣು ಹುಳಿ, ಬೀಜ ಮಾತ್ರ ಕಹಿ ಏಕೆ?

ಲಿಂಬೆಹಣ್ಣು ಸಿಟ್ರಿಕ್ ಆಮ್ಲವನ್ನು ಒಳಗೊಂಡಿರುವುದರಿಂದ ಹುಳಿ ಆಗಿರುತ್ತದೆ. ಬೀಜದಲ್ಲಿ ಸಾವಯವ ಸಂಯುಕ್ತ ಅಲ್ಕಲಾಯ್ಡ್ ಇರುವುದರಿಂದ ಅದು ಕಹಿಯಾಗಿರುತ್ತದೆ.

ಸಂತೋಷಕುಮಾರ ಸು. ಬಂಡೆ

ಸ್ಟೆಫಿ ನಿರ್ಗಮನ

''ಸ್ಟೆಫಿ ನನಗೆ ತೀರಾ ಆಪ್ತವೆನಿಸುತ್ತಾಳೆ. ಈ ಆಪ್ತತೆ ಯಾವ ರೀತಿಯದು ಎಂದೇ ನನಗೆ ಗೊಂದಲ. ಗೆಳತಿಯ ಹಾಗೆ ಎಂದು ಹೇಳಿಕೊಳ್ಳಲು ಆಕೆ ಇನ್ನೂ ಚಿಕ್ಕವಳು. ಮಗಳ ಹಾಗೆ ಅಂದುಕೊಳ್ಳಲಾರದಷ್ಟು ದೊಡ್ಡವಳು'' ಎಂದು ಮಧ್ಯ ವಯಸ್ಸು ಸಮೀಪಿಸುತ್ತಿದ್ದ ಒಬ್ಬರು ನನ್ನೆದುರು ಕೆಲವು ವರ್ಷದ ಹಿಂದೆ ಹೇಳಿಕೊಂಡಿದ್ದರು. ಜರ್ಮನಿಯವಳಾದ ಸ್ಟೆಫಿ ಗ್ರಾಫ್ ಜಗತ್ತಿನ ನಾನಾ ದೇಶದ ಜನಕ್ಕೆ ಹೀಗೆ ಒಗಟಾಗಿ ಇದ್ದವಳು. ಆ ಕಾರಣಕ್ಕೆ ಅವಳಲ್ಲಿ ಹೆಚ್ಚು ಆಕರ್ಷಕ ಶಕ್ತಿ ಇದ್ದಿರಬಹುದು.



ಈ ತಿಂಗಳು ಅಮೆರಿಕನ್ ಓಪನ್ ಟೂರ್ನಿಯ ನಂತರ ಸ್ಟೆಫಿ ಗ್ರಾಫ್ ಅಂತರಾಷ್ಟ್ರೀಯ ಟೆನಿಸ್‌ಗೆ ವಿದಾಯ ಹಾಡುತ್ತಾಳೆ. ಕಳೆದ ಹದಿಮೂರು ವರ್ಷ ಟೆನಿಸ್ ಕಂಡ ಅತ್ಯುತ್ತಮ ಪ್ರತಿಭೆಯೊಂದು ಹೀಗೆ ರಂಗಬಿಟ್ಟು ಸದ್ದಿಲ್ಲದೇ ಸರಿಯುತ್ತಾ ಇರುವುದು ತುಂಬಾ ಜನಕ್ಕೆ ವಿಷಾದಕರ ಸಂಗತಿ.

ನಾಟಕಕ್ಕೆ ನಾಂದಿಯ ಹಾಡಿನ ಹಾಗೆ ಮಂಗಳ ಗೀತೆಯೂ ಇರುತ್ತದೆ. ಎಷ್ಟೋ ಸಲ ನಾಟಕದಲ್ಲಿ ತಲ್ಲೀನನಾದ ಪ್ರೇಕ್ಷಕನಿಗೆ 'ಅಯ್ಯೋ, ಆಗಲೇ ನಾಟಕ ಮುಗಿಯಿತೇ?' ಎಂದು ಮಂಗಳ ಶ್ಲೋಕ ಆರಂಭಗೊಂಡಾಗ ಅನಿಸುತ್ತದೆ. ಇದು ಸ್ವಲ್ಪ ಹಾಗೆ.

ಒಂದು ಸಲವೂ ಭಾರತಕ್ಕೆ ಬರದ ಸ್ಟೆಫಿ, ನಮ್ಮ ದೇಶದ ಸುವರ್ಣ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಟೆನಿಸ್ ಆಡಲು ಬರಬಹುದೆಂಬ ಸುದ್ದಿ ಇತ್ತು. ಆದರೆ ಆಕೆ ಬರಲಿಲ್ಲ. ಅದಕ್ಕೂ ತುಂಬಾ ಹಿಂದೆಯೇ ಕನ್ನಡದಲ್ಲಿ ಒಂದು ಕವನ ಅವಳನ್ನು ಕುರಿತು ರಚನೆಯಾಗಿತ್ತು.

ಬಾರೆ ಸ್ಟೆಫಿ ಭಾರತಕ್ಕೆ
ಮುಂಗೈ ಹೊಡೆತದಿಂದ ಜಗತ್ತನ್ನಾಳುವವಳೇ
ಬಾರೆ ಸ್ಟೆಫಿ ಒಮ್ಮೆ ಭಾರತಕ್ಕೂ

ಎಂಬ ಕೆಲವು ಸಾಲುಗಳು ಈಗಲೂ ನೆನಪಿವೆ. ಬರೆದವರು ಯಾರೆಂದು ತಿಳಿಯದು.

ನನಗೆ ಸ್ಟೆಫಿ ಅಪ್ಪಟ ಸೌಂದರ್ಯದ ಮಾದರಿ. ಈ ಸೌಂದರ್ಯ ದೇಹದ ಮಾಟ, ಮೈಯಬಣ್ಣ ಮೀರಿದ್ದು ಎಂದೂ ನನಗೆ ಅನಿಸುತ್ತದೆ. ಟೆನಿಸ್‌ರಂಗದಲ್ಲಿ ಕ್ರಿಸ್‌ಎವರ್ಟ್, ಸಬಾಟಿನಿ ತುಂಬಾ ಸುಂದರಿಯರು ಎಂದು ಹೆಸರು ಪಡೆದರು. ಅವರದ್ದು ಮಾದಕ ಸೌಂದರ್ಯ. ಸ್ಟೆಫಿ ಗ್ರಾಫ್‌ಳದು ಅಂತಹ ಮಾದಕ ಸೌಂದರ್ಯ ಅಲ್ಲ ಎಂದು ನನ್ನ ಭಾವನೆ. ಹದಿನೇಳರಲ್ಲಿ ಅಂತಾರಾಷ್ಟ್ರೀಯ ಟೆನಿಸ್ ರಂಗಕ್ಕೆ ಕಾಲಿಟ್ಟ ಸ್ಟೆಫಿ, 1988ರಲ್ಲಿ ಹತ್ತೊಂಬತ್ತರ ತರುಣಿ. ಅದೇ ವರ್ಷ ಮಾರ್ಟಿನಾ ವಿರುದ್ಧ ಸೆಣೆಸಿ ವಿಂಬಲ್ಡನ್ ಪ್ರಶಸ್ತಿ ಗೆದ್ದಳು. ಉಳಿದ ಮೂರು ಗ್ರ್ಯಾಂಡ್ ಸ್ಲ್ಯಾಂ ಪ್ರಶಸ್ತಿಗಳೂ ಆಕೆಯ ಪಾಲಾದವು.

ವಿಂಬಲ್ಡನ್ ಗೆದ್ದ ಆಕೆಯನ್ನು 'ಪ್ಲೇಬಾಯ್' ಪತ್ರಿಕೆಯ ಮಾಲೀಕ, ತನ್ನ ಪತ್ರಿಕೆಗೆ ಸ್ಟೆಫಿ ನಗ್ನವಾಗಿ ಪೋಸ್ ಕೊಡುವುದಾದರೆ ಲಕ್ಷಾಂತರ ಡಾಲರ್ ಕೊಡುವುದಾಗಿ ಘೋಷಿಸಿದ. ಅಂಥ ಆಹ್ವಾನವನ್ನು ಆಕೆ ಸಿಟ್ಟಿಲ್ಲದೇ, ನಯವಾಗಿ ನಿರಾಕರಿಸಿದ್ದಳು. ತಾನು ದೊಡ್ಡದೊಂದು ನಿರ್ಧಾರ ಮಾಡುತ್ತಿರುವೆ ಎಂಬ ಹಮ್ಮು ಕೂಡ ಆಕೆಯಲ್ಲಿ ಇರಲಿಲ್ಲ.

ಇದು ನನ್ನಂಥ ಹಲವರಿಗೆ ನಿಜಕ್ಕೂ ತೃಪ್ತಿ, ಸಮಾಧಾನ ತಂದ ಸಂಗತಿ. ಯಾವುದನ್ನೇ ಆಗಲಿ, ಅದು ಇರುವ ಸ್ವರೂಪದಲ್ಲಿಯೇ ಗ್ರಹಿಸಬೇಕು, ಮೆಚ್ಚಬೇಕು ಎಂದು ಅಂದುಕೊಂಡವನು ನಾನು. ಪಾಶ್ಚಿಮಾತ್ಯ ಜಗತ್ತಿನ ದೃಷ್ಟಿ ಬೇರೆಯೇ. ಎಲ್ಲವನ್ನೂ ಕೊನೆಯ ಸ್ತರದವರೆಗೆ ತೆರೆದು, ಬಿಚ್ಚಿ, ಬಿಡಿಸಿ ನೋಡಿಬಿಡಬೇಕೆಂಬ ದೃಷ್ಟಿ. ಆ ಕಾರಣಕ್ಕೇ 'ಪ್ಲೇಬಾಯ್' ಪತ್ರಿಕೆ ಒಂದು ನಿಲುವು ತಳೆಯಿತು. ಅದೇ ಪಾಶ್ಚಿಮಾತ್ಯ ಜಗತ್ತಿನವಳಾದ ಸ್ಟೆಫಿ 'ಅದು ಬೇಡ' ಎಂದು ಹೇಳುವ ಮೂಲಕ ನಮಗೆ ಎಲ್ಲೋ ತೀರ ಹತ್ತಿರದವಳು ಅನ್ನಿಸಿದಳು.

ಮೊನ್ನೆ ಫ್ರೆಂಚ್ ಓಪನ್ ಪಂದ್ಯಾವಳಿ ನಡೆದ ರೋಲ್ಯಾಂಡ್‌ಗ್ಯಾಡೆರೋ ಕ್ರೀಡಾಂಗಣಕ್ಕೆ ಬೀಗುತ್ತಾ ಬಂದವಳು ಸ್ವೀಡನ್ನಿನ ಮಾರ್ಟಿನಾ ಹಿಂಗಿಸ್. ಆಕೆಗೆ ತಾನು ಪ್ರಶಸ್ತಿ ಗೆಲ್ಲುವುದು ಎಷ್ಟು ಖಚಿತ ಆಗಿತ್ತು ಎಂದರೆ, ಪ್ರಶಸ್ತಿಯ ಜೊತೆ ಪೋಸು ನೀಡಲು ಆಕೆ ಹೊಸ ಡ್ರೆಸ್ ಕೂಡ ಹೊಲಿಸಿಟ್ಟಿದ್ದಳು.

ಆವರೆ ಪ್ರಶಸ್ತಿ ಗೆದ್ದಿದ್ದು ಸ್ಟೆಫಿ ಗ್ರಾಫ್. ಆಕೆ ಪತ್ರಿಕೆಯವರ ಜೊತೆ ಮಾತುಕತೆಯಾಡುವಾಗ ಯಾರೋ ಒಬ್ಬ ''ಮೂವತ್ತರ ನೀವು....'' ಎಂದ ಕೂಡಲೇ ತಡೆದ ಸ್ಟೆಫಿ ''ನಾನು ಇಪ್ಪತ್ತೊಂಬತ್ತು ದಾಟಿದ್ದೇನೆ. ಮೂವತ್ತು ತುಂಬಿಲ್ಲ'' ಎಂದು ಮಾತು ತುಂಡರಿಸಿದಳು. ಆಕೆ ಹುಟ್ಟಿದ್ದು 14 ಜೂನ್, 1969. ಸ್ಟೆಫಿ ಕೇವಲ ಟೆನಿಸ್ ಅಂಗಳದಲ್ಲಿ ಮಾತ್ರವಲ್ಲ,ಮಾತಿನಲ್ಲೂ ಕರಾರುವಾಕ್ಕು.

ವಿಂಬಲ್ಡನ್ ಟೂರ್ನಿಯಲ್ಲಿ ಮಾರ್ಟಿನಾ ಮೊದಲ ಸುತ್ತಿನಲ್ಲೇ ನಿರ್ಗಮಿಸಿದಳು. ಸ್ಟೆಫಿ ಫೈನಲ್‌ವರೆಗೂ ಬಂದು ಸೋತಳು. ಅಂದು ಜುಲೈ 4, ಅಮೆರಿಕಾ ಸ್ವಾತಂತ್ರ್ಯ ಗಳಿಸಿದ ದಿನ. ವಿಂಬಲ್ಡನ್ ಪ್ರಶಸ್ತಿ ಗೆದ್ದ ಪೀಟ್ ಸಾಂಪ್ರಾಸ್, ಲಿಂಡ್ಸೆ ಡೇವನ್ ಪೋರ್ಟ್ ಇಬ್ಬರೂ ಅಮೆರಿಕನರು. ಇದು ಭಾರೀ ಸಂಭ್ರಮಕ್ಕೆ ಕಾರಣ ಆಗಬೇಕಿತ್ತು. ಪಂದ್ಯ ಮುಗಿದು, ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಮಾತಾಡಿದ ಸ್ಟೆಫೀ 'ಇನ್ನು ಮುಂದೆ ಈ ಸೆಂಟರ್ ಕೋರ್ಟ್‌ನಲ್ಲಿ ನಾನು ಆಟಗಾರ್ತಿಯಾಗಿ ಕಾಣಿಸಿಕೊಳ್ಳುವುದಿಲ್ಲ' ಎಂದ ಒಂದು ಮಾತು ಇಡೀ ಕ್ರೀಡಾಂಗಣದಲ್ಲಿ, ಟಿವಿಯ ಮೂಲಕ ಪಂದ್ಯ ವೀಕ್ಷಿಸುತ್ತ ಇದ್ದವರಿಗೆ ಬರಸಿಡಿಲ ಹಾಗೆ ಎರಗಿತ್ತು. ಆಕೆ ಸೋತು ನಿರ್ಗಮಿಸಿದಳು ಎಂದು ನಮಗ್ಯಾರಿಗೂ ಅನ್ನಿಸಲಿಲ್ಲ. ಮತ್ತೆ ಸ್ಟೆಫಿಯನ್ನು ನಾವು ಕಾಣುವುದಿಲ್ಲ ಎಂಬ ಕಟು ಸತ್ಯವೇ ಆಳದಲ್ಲಿ ಕಾಡತೊಡಗಿತು.

ಟೆನಿಸ್ ಕ್ರೀಡೆಯಲ್ಲಿ ಆಸ್ಟ್ರೇಲಿಯಾದ ಆದಿವಾಸಿ ಗುಂಪಿಗೆ ಸೇರಿದ ಇವಾನ್ ಗೂಲಗಾಂಗ್, ಅಮೆರಿಕಾದ ಸುಂದರಿ ಕ್ರಿಸ್‌ಎವರ್ಟ್, ಮೆಕ್ಸಿಕೋ ಮೂಲದ ಗೇಬ್ರಿಯಾಲಾ ಸೆಬಾಟಿನಿ, ಝೆಕ್ ಮೂಲದ ಮಾರ್ಟಿನಾ ನವ್ರಟಿಲೋವಾ, ಅಮೆರಿಕಾದ ಮೋನಿಕಾ ಸೆಲೆಸ್ ತಮ್ಮ ಪ್ರಭುತ್ವ ಮೆರೆದಿದ್ದಾರೆ. ಈಚಿನ ದಿನಗಳಲ್ಲಿ ಹದಿ ಹರೆಯದ ಸ್ವೀಡನ್ನಿನ ಮಾರ್ಟಿನಾ ಹಿಂಗಿಸ್ ಅತ್ಯಂತ ಪ್ರಮುಖ ಆಟಗಾರ್ತಿ.

ಇವರೆಲ್ಲರ ನಡುವೆ ಸ್ಟೆಫಿ ಗ್ರಾಫ್ ಮಾತ್ರ ತೀರಾ ವಿಶಿಷ್ಟವಾಗಿ ಕಾಣುತ್ತಾಳೆ. 'ಮಹಿಳೆಯರ ಟೆನಿಸ್‌ನಲ್ಲಿ ಸ್ಪರ್ಧಿಸುತ್ತಿರುವ ಪುರುಷ' ಎಂದೇ ಛೇಡಿಸಲಾಗುವ ಮಾರ್ಟಿನಾ ನವ್ರಟಿಲೋವಾ 1988ರಲ್ಲಿ ಮೊದಲ ಸಲ ವಿಂಬಲ್ಡನ್‌ನಲ್ಲಿ ಸ್ಟೆಫಿ ಕೈಯಲ್ಲಿ ಸೋತಾಗ ''ಯುದ್ಧದ ಟ್ಯಾಂಕೊಂದು ನನ್ನ ಮೇಲೆ ಹಾಯ್ದು ಹೋದಂತಾಯಿತು'' ಎಂದು ಪ್ರತಿಕ್ರಿಯಿಸಿದ್ದಳು. ಅದೇ ವಿಂಬಲ್ಡನ್‌ನಿಂದ ನಿರ್ಗಮಿಸುವ ದಿನ ಕೂಡ ಸ್ಟೆಫಿ ಅತ್ಯಂತ ಶಾಂತವಾಗಿ ''ಇದು ಆಕೆಯ ದಿನ. ಆವಳಿಂದ ನಾನೇನೂ ಕಸಿದುಕೊಳ್ಳಲು ಇಷ್ಟಪಡುವುದಿಲ್ಲ'' ಎಂದಳು. ಇಲ್ಲಿ ಸೋಲಿನ ನಿರಾಶೆ ಇಲ್ಲ. ಗೆಲುವಿನ ಸಂಭ್ರಮ ಹೆಚ್ಚಿಸುವ ಉದಾರತೆ ಇದೆ.

ನಾವು ಸ್ಟೆಫಿ ಪಾಲ್ಗೊಳ್ಳುತ್ತಿದ್ದ ಆಟಗಳನ್ನು ವೀಕ್ಷಿಸಲು ಕಾತರರಾಗುತ್ತ ಇದ್ದುದು ಇಂಥ ಕ್ಷಣಗಳಿಗಾಗಿ. ಆಕೆ ತನ್ನದೇ ಜರ್ಮನಿಯ ಬೆಕರ್ ತಪ್ಪು ಮಾಡಿದಾಗ, ಹತಾಶನಾದಾಗ ಲೈನ್ಸ್‌ಮನ್‌ಗಳ ಬಳಿ ಬಂದು 'ಹೋ' ಎಂದು ಕಿರುಚುತ್ತಿದ್ದ ಹಾಗೆ ಒಮ್ಮೆಯೂ ಮಾಡುತ್ತ ಇರಲಿಲ್ಲ. ತೀರಾ ನಾಚಿಕೊಂಡವಳ ಹಾಗೆ, ತಬ್ಬಿಬ್ಬುಗೊಂಡವಳ ಹಾಗೆ ವರ್ತಿಸುತ್ತಿದ್ದಳು. ಆಗೊಂದು ಸಣ್ಣ ನಗೆ ಅವಳ ತುಟಿಗಳ ಅಂಚಿನಲ್ಲಿ ಮೂಡುತ್ತಿತ್ತು. ಅದು ನಮ್ಮಲ್ಲಿ ಸ್ಟೆಫಿಯ ಬಗೆಗಿನ ಪ್ರೀತಿಯನ್ನು, ಆಕೆಯ ಸೋಲಿನ ಬಗೆಗಿನ ವಿಷಾದವನ್ನು ಹೆಚ್ಚಿಸುತ್ತಿತ್ತು.

ಈಚಿನ ದಿನಗಳಲ್ಲಿ ಬಲ ಮತ್ತು ಆಟದ ತಂತ್ರಗಳೇ ಮುಖ್ಯ ಆಗುತ್ತಾ ಇದ್ದವು. ರೈಲ್ವೇ ಎಂಜಿನ್‌ನ ಹಾಗೆ ಬುಸುಗುಟ್ಟುತ್ತಾ ಚೆಂಡು ಹೊಡೆಯುತ್ತಿದ್ದ ಮೊನಿಕಾ ಸೆಲೆಸ್, ಎಳವೆಯಿಂದಲೇ ಯಾಂತ್ರಿಕತೆ ಮೈಗೂಡಿಸಿಕೊಂಡ ಹಿಂಗಿಸ್ ಅವರಂಥವರು ಎದುರಾಳಿಗಳಾದಾಗ ನಮ್ಮ ಈ ಸ್ಟೆಫಿ ಬಿರುಗಾಳಿಯ ಎದುರಿಟ್ಟ ಸಣ್ಣ ಹಣತೆಯೇನೋ ಎನಿಸಿಬಿಡುತ್ತಿತ್ತು. ಆಗೆಲ್ಲ ನಮ್ಮ ಎದೆಯ ತುಡಿತ ಗಾಳಿಯ ಎದುರಿಟ್ಟ ಹಣತೆಗೆ ಕೈ ಅಡ್ಡಹಿಡಿದು ರಕ್ಷಿಸಲು ಯತ್ನಿಸುವ ಹಾಗೆ.

ಬಹಳಷ್ಟು ಸಲ ಸ್ಟೆಫಿಯ ಅಸಾಮಾನ್ಯ ಪ್ರತಿಭೆ ಅವಳನ್ನು ಕಾಯುತ್ತಿತ್ತು. ಅಲ್ಲಿ ಶಕ್ತಿಯ ವಿಕೃತ ಪ್ರದರ್ಶನ ಇರುತ್ತಾ ಇರಲಿಲ್ಲ. ತಾಂತ್ರಿಕತೆಯ ವಿಜೃಂಭಣೆ ಇರುತ್ತಿರಲಿಲ್ಲ. ಟೆನಿಸ್ ಆಟದ ಅತ್ಯಂತ ಉನ್ನತ ಮಟ್ಟದ ಪ್ರತಿಭೆಯೊಂದು ಅಲ್ಲಿ ಮಿನುಗುತ್ತಿತ್ತು. ಸ್ಟೆಫಿಯ ಮುಖದಲ್ಲಿ ಸಣ್ಣದೊಂದು ನಗು ಅರಳುತ್ತಿತ್ತು. ಅಲ್ಲಿ ಹಾಹಾಕಾರ ಇರುತ್ತಿರಲಿಲ್ಲ. ಗೆಲುವಿನ ಹಮ್ಮು ಇರುತ್ತಾ ಇರಲಿಲ್ಲ.

ಸ್ಪೋರ್ಟ್ಸ್ ಡೇ ದಿನ ಮಗಳನ್ನು ಶಾಲೆಗೆ ಕಳಿಸುವಾಗ 'ನೀನು ಅಲ್ಲಿ ಓಡಿ, ಜಂಪ್ ಮಾಡಿ ಬಿದ್ದು ಗಾಯ ಮಾಡಿಕೊಂಡು, ಕಾಲು ಮುರಿದುಕೊಂಡು ಬರಬೇಡ' ಎಂದು ತಂದೆ ತಾಯಿಗಳು ಹೇಳಿ ಕಳುಹಿಸಿದ್ದರೂ ರನ್ನಿಂಗ್ ರೇಸಿನಲ್ಲಿ ಫಸ್ಟ್ ಪ್ರೈಜ್ ತೆಗೆದುಕೊಂಡು, ಅದನ್ನು ನಾಚಿಕೆ, ಸ್ವಲ್ಪ ಅಭಿಮಾನದ ಮುಜುಗರದಿಂದಲೇ ತಂದೆ ತಾಯಿಗೆ ತೋರಿಸುವ ಹುಡುಗಿಯ ಹಾಗೆ ಈ ನಮ್ಮ ಸ್ಟೆಫಿ.

ಅವಳ ಆಟದಲ್ಲಿ ಗೆಲ್ಲಲೇಬೇಕೆಂಬ ಛಲಕ್ಕಿಂತ, ಗೆಲ್ಲುವ ವಿಶ್ವಾಸ ಇರುತ್ತಿತ್ತು. ಹೀಗಾಗಿ ಅವಳು ಸೋತಾಗ ಕೂಡ ಆಕೆ ಸೋತಿದ್ದಾಳೆ ಎಂದು ಅನಿಸುತ್ತಲೇ ಇರಲಿಲ್ಲ. ಹದಿಹರೆಯದವರ ಶಕ್ತಿ, ತಂತ್ರ ಎದುರು ಕೂಡ ಪ್ರತಿಭೆ ಎಂಬುದೇ ತೀರಾ ಮುಖ್ಯ ಎಂದು ಹಲವು ಸಲ ಸಾಧಿಸಿ ತೋರಿಸಿದ ಸ್ಟೆಫಿ ಈಗ ನಿವೃತ್ತಳಾಗುತ್ತಿದ್ದಾಳೆ. ಮೂವತ್ತು ನಿವೃತ್ತಿಯ ವಯಸ್ಸು ಅಲ್ಲ. ಆದರೆ, ಬದುಕೆಂಬ ವಿಚಿತ್ರ ಕ್ರೀಡಾರಂಗದಲ್ಲಿ ಯಾರ್ಯಾರೋ ಯಾವ್ಯಾವಾಗಲೋ ಅನಿರೀಕ್ಷಿತವಾಗಿ ನಿರ್ಗಮಿಸಿಬಿಡುತ್ತಾರೆ.

ಆದರೆ ಸ್ಟೆಫಿ ಹದಿಮೂರು ವರ್ಷ ಟೆನಿಸ್ ಒಂದು ಕಲೆಯಂತೆ ಬಿಂಬಿಸಿ ವಿದಾಯ ಹೇಳುತ್ತಾ ಇದ್ದಾಳೆ. ಆಕೆ ಜರ್ಮನಿಯ ಪ್ರಧಾನ ಬ್ಯಾಂಕ್ ಎನಿಸಿದ ಬುಂಡೆಸ್ ಬ್ಯಾಂಕ್‌ಗಿಂತ ಹೆಚ್ಚು ಹಣ ಸಂಪಾದಿಸುತ್ತಾಳೆ. ಅದಕ್ಕಿಂತ ಮಿಗಿಲಾಗಿ ಜನರ ಪ್ರೀತಿ ಸಂಪಾದಿಸಿದ್ದಾಳೆ. ■

ನಿಮ್ಮ ಬಿಂದಿಯ ಬಗ್ಗೆ ಎಚ್ಚರವಿರಲಿ



ಬಿಂದಿ ಇವತ್ತಿನ ಫ್ಯಾಷನ್. ಅನುಕೂಲಕರ ವೈವಿಧ್ಯಮಯ ಬಣ್ಣಗಳಲ್ಲಿ ದೊರೆಯುತ್ತದೆ. ಬೇಕಾದ ಆಕಾರ, ಗಾತ್ರದಲ್ಲೂ ಲಭ್ಯ. ಇದೆಲ್ಲ ಸರಿ. ತುಂಬಾ ಕಾಲ ಹೀಗೆ ಬಿಂದಿ ಬಳಸಿದರೆ ನಾನಾ ರೀತಿಯ ಚರ್ಮದ ರೋಗ ಹರಡುತ್ತದೆ ಎಂದು ಇತ್ತೀಚಿನ ಸಂಶೋಧನೆ ತಿಳಿಸುತ್ತದೆ. ಉತ್ತರ ಪ್ರದೇಶದ ಲಖನೌನ ಎರಡು ಸಂಸ್ಥೆಗಳು ನಡೆಸಿದ ಅಧ್ಯಯನದಿಂದ ಇದು ಗೊತ್ತಾಗಿದೆ.

ಬಿಂದಿ ಹಣೆಗೆ ಅಂಟುವಂತೆ ಮಾಡುವ ಗೋಂದು ಮೊದಲು ಅಡಿಕೆಮರದ ಉತ್ಪನ್ನದಿಂದ ಬರುತ್ತಿತ್ತು. ಆಗ ಇಂಥ ತೊಂದರೆ ಇರಲಿಲ್ಲ. ಸಸ್ಯಜನ್ಯ ಗೋಂದು ಅಪಾಯಕಾರಿ ಆಗಿರಲಿಲ್ಲ.

ಇತ್ತೀಚಿನ ದಿನಗಳಲ್ಲಿ ಬಿಂದಿಗಳಿಗೆ ಬಳಸುವ ಗೋಂದು ರಾಸಾಯನಿಕಗಳ ಸಂಯೋಜನೆಯಿಂದ ತಯಾರಿಸಿದ್ದು. ಇದೇ ಇಂಥ ದೋಷಕ್ಕೆ ಕಾರಣ.

ಲಖನೌದ ಇಂಡಸ್ಟ್ರಿಯಲ್ ಟಾಕ್ಸಿಕಾಲಜಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಡರ್ಮಲ್ ಟಾಕ್ಸಿಕಾಲಜಿ ಪ್ರಯೋಗಾಲಯದ ಮುಖ್ಯಸ್ಥ ಬಿ.ಎನ್. ಗುಪ್ತ ಈ ಕುರಿತು ಅಧ್ಯಯನ ಮಾಡಿದ್ದಾರೆ. ಬಿಂದಿಯ ಗೋಂದಿನಲ್ಲಿರುವ ಪ್ಯಾರಾ ಟರ್ಷಿಯರಿ ಬ್ಯೂಟೈಲ್ ಫೀನಾಲ್, ಪಾದರಸ ಹೆಚ್ಚಾಗಿರುವ ರಾಸಾಯನಿಕಗಳಿಂದ ಇಂಥ ತೊಂದರೆ ಉಂಟಾಗುತ್ತದೆ ಎಂದು ಅವರು ಹೇಳಿದ್ದಾರೆ.

ಇಂಥ ಬಿಂದಿ ಉಪಯೋಗಿಸುವ ಭಾರತೀಯ ಹಾಗೂ ದಕ್ಷಿಣ ರಷಿಯಾದ ಮಹಿಳೆಯರ ಹಣೆಗಳಲ್ಲಿ ಬಿಳಿಯ ಮಚ್ಚೆಗಳು ಕಾಣಿಸಿಕೊಂಡಿವೆ ಎಂದೂ ಅವರು ಹೇಳುತ್ತಾರೆ. ■


ವಿಂಬಲ್ಡನ್: ಕೆಲವು ಸಂಗತಿಗಳು

● ಇಂಗ್ಲೆಂಡಿನ ಎಲ್ಲ ಆಗು ಹೋಗುಗಳಲ್ಲಿ ರಾಣಿಯ ಪಾತ್ರ ಮಹತ್ವದ್ದು. ವಿಂಬಲ್ಡನ್ ಟೆನಿಸ್ ಟೂರ್ನಿಯ ಪ್ರಧಾನ ಪೋಷಕಿ ಆಕೆ. 1977ರಲ್ಲಿ ಟೂರ್ನಿಯ ಶತಮಾನೋತ್ಸವ ಸಂದರ್ಭದಲ್ಲಿ ಮಾತ್ರ ಆಕೆ ಖುದ್ದು ಹಾಜರಾಗಿ ಮಹಿಳಾ ಸಿಂಗಲ್ಸ್ ಫೈನಲ್ ವೀಕ್ಷಿಸಿದ್ದರು. ಆ ವರ್ಷ ವರ್ಜಿನಿಯಾ ವೇಡ್ ಸಿಂಗಲ್ಸ್ ಪ್ರಶಸ್ತಿ ಗಳಿಸಿದರು.


● ವಿಂಬಲ್ಡನ್‌ನ ಮುಖ್ಯ ಅಂಕಣ ಸೆಂಟರ್ ಕೋರ್ಟ್ ಹಾಗೂ ಇತರ ಹದಿನಾರು ಅಂಕಣಗಳಲ್ಲಿ ನಡೆಯುವ ಪಂದ್ಯವನ್ನು ನಲವತ್ತು ಸಾವಿರ ಜನ ವೀಕ್ಷಿಸಬಹುದು. ಬಹಳಷ್ಟು ಸಲ ಇಲ್ಲಿ ಪ್ರವೇಶ ಪಡೆಯುವುದು ಭಾರೀ ಅದೃಷ್ಟವೆಂದೇ ಭಾವಿಸಲಾಗುತ್ತದೆ. ಸಾರ್ವಜನಿಕರಿಗಾಗಿ ಇರುವ ಟಿಕೆಟ್ ಪಡೆಯಲು ಸರತಿಯ ಸಾಲಿನಲ್ಲಿ ಜನ ಈಗಲೂ ನಿಲ್ಲುತ್ತಾರೆ.

● ಇತ್ತೀಚಿನ ದಿನಗಳ ವಿಂಬಲ್ಡನ್‌ನಲ್ಲಿ ಅಮೆರಿಕಾ, ಜರ್ಮನಿ, ಆಸ್ಟ್ರೇಲಿಯಾಗಳದ್ದೆ ಪ್ರಾಬಲ್ಯ. ಪಂದ್ಯಾವಳಿ ನಡೆಸುವ ಇಂಗ್ಲೆಂಡ್ ಇಲ್ಲಿ ಪ್ರಶಸ್ತಿ ಗಳಿಸುವುದು ಅಪರೂಪ. ತೀರಾ ಹಿಂದೆ ಬ್ರಿಟನ್ನಿನ ಫ್ರೆಡ್ ಪೆರ್ರಿ 1934ರಿಂದ ಸತತ ಮೂರು ವರ್ಷ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದು ದಾಖಲೆ.

● ಈಗೀಗ ಹದಿನಾರು ತುಂಬುವ ಮುಂಚೆಯೇ ಅಂತರರಾಷ್ಟ್ರೀಯ ಟೆನಿಸ್ ರಂಗದಲ್ಲಿ ಮಿಂಚುವ ಬಾಲೆಯರದೇ ಮೇಲುಗೈ. ಮೋನಿಕಾ ಸೆಲೆಸ್, ಮಾರ್ಟಿನಾ ಹಿಂಗಿಸ್, ಜೆಲೆನಾಡೊಕಿಕ್, ಮಿರ್‍ಯಾನಾ ಲುಸಿಕ್ ಎಲ್ಲ ಹದಿಹರೆಯದವರು. ಎಳೆಯ ಮಿರ್‍ಯಾನಾ ಲುಸಿಕ್ ವಿರುದ್ಧ ಮಹಿಳೆಯರ ಸೆಮಿಫೈನಲ್ಸ್‌ನಲ್ಲಿ ಈ ಬಾರಿ ಸೆಣಸಿದ ಜರ್ಮನಿಯ ಸ್ಟೆಫಿಗ್ರಾಫ್‌ಗೆ ಮೂವತ್ತು ವರ್ಷ. ಕೊನೆಗೂ ಫೈನಲ್ಸ್ ಪ್ರಶಸ್ತಿ ಅಮೆರಿಕಾದ ಇಪ್ಪತ್ತಾರರ ಹರೆಯದ ಲಿಂಡ್ಸೆ ಡೇವನ್ ಪೋರ್ಟ್ ಪಾಲಾಯಿತು. ಆದರೆ ಆಕೆ ಗೆದ್ದಿದ್ದು ಹೆಚ್ಚು ಸುದ್ದಿಯಾಗಲಿಲ್ಲ. ಏಕೆಂದರೆ ಫೈನಲ್ಸ್ ಪಂದ್ಯ ಮುಗಿಯುತ್ತಿದ್ದಂತೆ ಸ್ಟೆಫಿ ಗ್ರಾಫ್ ನಿವೃತ್ತಿ ಘೋಷಿಸಿದಳು. ಇಪ್ಪತ್ತು ದಾಟುತ್ತಿದ್ದ ಹಾಗೆ ಪ್ರಶಸ್ತಿ,



ಮಾರ್ಟಿನಾ



ರಾಯ್ ಎಮರ್‌ಸನ್



ಮಾರ್ಗರೇಟ್ ಕೋರ್ಟ್

ದುಡ್ಡು ಬಾಚಿಕೊಂಡು ನಿರ್ಗಮಿಸಿ ಬಿಡುವುದು ಮಹಿಳೆಯರಿಗೆ ಅನಿವಾರ್ಯ ಆಗುತ್ತಿದೆ. 1971ರಲ್ಲಿ ಮೊದಲ ಬಾರಿ ವಿಂಬಲ್ಡನ್ ಪ್ರಶಸ್ತಿ ಗಳಿಸಿದ್ದ ಇವಾನ್ ಗೂಲಗಾಂಗ್ 1980ರಲ್ಲಿ ವೃತ್ತಿಪರ ಟೆನಿಸ್ ಟೂರ್ನಿಗೆ ಮರಳುವಾಗ ಮದುವೆಯಾಗಿ, ಒಂದು ಮಗುವಿನ ತಾಯಿ ಆಗಿದ್ದಳು. ಆ ವರ್ಷ ಆಕೆ ಅಮೆರಿಕಾದ ಕ್ರಿಸ್ ಎವರ್ಟ್‌ನ ಸೋಲಿಸಿ ಪ್ರಶಸ್ತಿ ಗಿಟ್ಟಿಸಿಕೊಂಡರು.

● ಜೂನ್ ಜುಲೈ ತಿಂಗಳಲ್ಲಿ ಎರಡುವಾರ ನಡೆಯುವ ವಿಂಬಲ್ಡನ್ ಟೆನಿಸ್ ಟೂರ್ನಿಯನ್ನು ಆಲ್ ಇಂಗ್ಲೆಂಡ್ ಲಾನ್ ಡೆವಿಸ್ ಕ್ಲಬ್ ನಡೆಸುತ್ತದೆ. ಟೆನಿಸ್‌ನ ಕಾಶಿ ಎಂದೇ ಕರೆಯಲಾಗುವ ವಿಂಬಲ್ಡನ್‌ನಲ್ಲಿ ಆಡುವುದು, ಆಡಿ ಗೆಲ್ಲುವುದೇ ಟೆನಿಸ್‌ಪಟುಗಳ ಜೀವನದ ಮಹತ್ವಾಕಾಂಕ್ಷೆ.

ಸೆಂಟರ್ ಕೋರ್ಟ್ ಮತ್ತು ಹದಿನಾರು ಅಂಕಣಗಳಲ್ಲಿ ಹುಲ್ಲು ಬೆಳೆಸಿ ವಿಶೇಷ ರೀತಿಯ ಅಂಕಣ ಸಿದ್ಧಗೊಳಿಸಲಾಗುತ್ತದೆ. ಸೆಂಟರ್ ಕೋರ್ಟ್‌ನ ಮೃದುಹುಲ್ಲಿನ ಅಂಕಣದಲ್ಲಿ ಮೊದಲು ಆಡುವುದು ಕಷ್ಟ. ಅಂಕಣದಲ್ಲಿ ಕಾಲು ಜಾರುತ್ತದೆ. ಇದನ್ನು ತಪ್ಪಿಸಲು ಟೂರ್ನಿ ಆರಂಭಕ್ಕೆ ಮುನ್ನಾ ದಿನ ಆಲ್‌ಇಂಗ್ಲೆಂಡ್ ಲಾನ್ ಟೆನಿಸ್ ಕ್ಲಬ್‌ನ ನಾಲ್ವರು ಮಹಿಳಾ ಆಟಗಾರ್ತಿಯರು ಸಣ್ಣದೊಂದು ಡಬಲ್ಸ್ ಪಂದ್ಯ ಇಲ್ಲಿ ಆಡುತ್ತಾರೆ. ಇದರಿಂದ ಹುಲ್ಲಿನ ಅಂಕಣ ಹದಗೊಳ್ಳುತ್ತದೆ.

● ಇವಾನ್ ಲೆಂಡ್ಲ್ ತನ್ನ ಟೆನಿಸ್ ವೃತ್ತಿ ಜೀವನದಲ್ಲಿ ಬೇರೆಲ್ಲ ಟೂರ್ನಿ ಪ್ರಶಸ್ತಿಗಳನ್ನು ಗಳಿಸಿದ್ದರೂ ವಿಂಬಲ್ಡನ್ ಪ್ರಶಸ್ತಿಗಳಿಸುವುದು ಮಾತ್ರ ಸಾಧ್ಯವಾಗಲಿಲ್ಲ. ಮಣ್ಣಿನ ಅಂಕಣದಲ್ಲಿ ಎದುರಾಳಿಯೇ ಇಲ್ಲ ಎಂಬಂತಿದ್ದ ಲೆಂಡ್ಲ್‌ಗೆ ವಿಂಬಲ್ಡನ್‌ನ ಹುಲ್ಲಿನ ಅಂಕಣ ಒಲಿಯಲೇ ಇಲ್ಲ. ಆದರೆ, ಆತನಿಗೆ ಒಂದೇ ಸಮಾಧಾನ ಸಂಗತಿ, ಎಂದರೆ ಆತ 18 ವರ್ಷದವನಿದ್ದಾಗ ಇದೇ ವಿಂಬಲ್ಡನ್‌ನ ಜ್ಯೂನಿಯರ್ ಸಿಂಗಲ್ಸ್ ಪುರುಷರ ಪ್ರಶಸ್ತಿ 1978ರಲ್ಲಿ ಗಳಿಸಿದ್ದ. ■



ಬಾಲ ಸೈನಿಕರು

ಎಳೆಯ, ಇನ್ನೂ ಬುದ್ಧಿ ಬಲಿತಿರದ ಇಂಥ ಹುಡುಗ ಹುಡುಗಿಯರು ಮೊದಲ ಹಂತದಲ್ಲಿ ಉಗ್ರಗಾಮಿಗಳ ಕೂಲಿಯಾಳುಗಳಂತೆ ಕೆಲಸ ಮಾಡಬೇಕಾಗುತ್ತದೆ. ತೀರಾ ಹೊರೆ ಹೊತ್ತು ಕಠಿಣ ಮಾರ್ಗದಲ್ಲಿ ನಡೆದು ಸಾಗುವುದು, ಭಾರವಾದ ಬಂದೂಕು ಹೊತ್ತು ಮದ್ದುಗುಂಡು ಸಾಗಿಸುವುದು ಇವರ ಪಾಲಿನ ಕೆಲಸ.

ಕಳೆದ ಅಕ್ಟೋಬರ್‌ನಲ್ಲಿ ಶ್ರೀಲಂಕಾದ ಸೈನ್ಯಕ್ಕೆ ಹಲವು ಎಲ್‌ಟಿಟಿಇ ಉಗ್ರಗಾಮಿಗಳು ಶರಣಾದರು. ಉತ್ತರ ಶ್ರೀಲಂಕಾದ ಮಂಕುಲಂ ಕದನ ಭೂಮಿಯಲ್ಲಿ ಶರಣಾದ ಇಂಥ ಹದಿನೈದು ಜನ ಇನ್ನೂ ಎಳೆಯ ಮಕ್ಕಳು. ಅವರಲ್ಲಿ ನಾಲ್ಕು ಜನ ಹುಡುಗಿಯರು.

ಪತ್ರಿಕಾ ಗೋಷ್ಠಿಯಲ್ಲಿ ಮಾತಾಡಿದ ಹದಿನೇಳು ವರ್ಷದ ಹುಡುಗಿ ರಾಸಾಮಣಿ ''ನಾವು ಶಸ್ತ್ರಾಸ್ತ್ರ ಕೆಳಗೆ ಹಾಕಿ, ಕೈಯೆತ್ತಿ ಶರಣಾಗುತ್ತಾ ಇರುವುದಾಗಿ ಬಾಗಿ ಹೇಳಿದರೂ, ಮೊದಲ ದಿನ ಗುಂಡಿನ ಸದ್ದಿಂದ ಎದುರಿದ್ದ ಸೈನಿಕರಿಗೆ ಕೇಳಲಿಲ್ಲ. ಆ ದಿನ ಬಂಕರ್‌ಗಳಿಗೆ ಹಿಂದಿರುಗಿ, ಮರುದಿನ ಮತ್ತೆ ಶರಣು ಬಂದೆವು'' ಎಂದು ಸ್ಪಷ್ಟವಾಗಿ ತಿಳಿಸಿದಳು.

ಮಂಕುಲಂ ಕದನ ಭೂಮಿಯಲ್ಲಿ ಹೀಗೆ ಇಪ್ಪತ್ತಾರು ಬಾಲ ಸೈನಿಕರು ಶರಣಾಗಿದ್ದರು. ಇವರೆಲ್ಲ ಹದಿಮೂರರಿಂದ ಹದಿನೆಂಟು ವರ್ಷದವರು.

ಇಷ್ಟಾದ ಮೇಲೂ ಈಳಂ ಸಂಘಟನೆ ಹೊಸದಾಗಿ ತಮಿಳು ಹುಡುಗ, ಹುಡುಗಿಯರನ್ನು ತನ್ನ ಸೈನ್ಯಕ್ಕೆ ಸೇರಿಸಿಕೊಂಡು ತರಬೇತಿ ನೀಡುವ ಕಾರ್ಯ ಮುಂದುವರಿಸಿದೆ.

ಓದಿ, ಬರೆದು, ಆಟವಾಡಬೇಕಾದ ಸಮಯದಲ್ಲಿ ಈ ಮಕ್ಕಳು ಬರ್ಬರತೆಗೆ ಬಲಿಯಾಗುವುದು ತೀರಾ ಸಾಮಾನ್ಯ. ಕೆಲವು ಸಂದರ್ಭದಲ್ಲಿ ಇಂಥ ಎಳೆಯರನ್ನೇ ಲೈಂಗಿಕ ತೃಷೆ ಹಿಂಗಿಸಿಕೊಳ್ಳಲು ಇಂಥ ಸಂಘಟನೆಗಳು ಬಳಸಿಕೊಳ್ಳುತ್ತವೆ. ಇದರಿಂದ ಲೈಂಗಿಕ ರೋಗಗಳ ಹರಡುವಿಕೆಗೂ ಇವರು ಕಾರಣ. ಬಹಳಷ್ಟು ಸಂದರ್ಭಗಳಲ್ಲಿ ಇಂಥ ಎಳೆಯರು ಲೈಂಗಿಕ ದೌರ್ಜನ್ಯಕ್ಕೆ ತಾವೇ ಬಲಿಯಾಗುವುದೂ ಉಂಟು. •

ಈಚಿನ ದಿನಗಳಲ್ಲಿ ಎಳೆಯರನ್ನು ಸೈನಿಕ ಕಾರ್ಯಾಚರಣೆಗೆ ಬಳಸುವ ಪ್ರವೃತ್ತಿ ಜಾಸ್ತಿ ಆಗುತ್ತಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಸಂಘಟನೆಗಳು, ಇದರ ವಿರುದ್ಧ ದನಿ ಎತ್ತಿವೆ. ಆದರೆ ಅದಿನ್ನೂ ತೀರಾ ಕ್ಷೀಣ ದನಿಯಾಗಿಯೇ ಉಳಿದು ಕೊಂಡಿದೆ.

ತೀರಾ ಎಳೆಯ ವಯಸ್ಸಿನ ಹುಡುಗ, ಹುಡುಗಿಯರನ್ನು ತಮ್ಮ ಸಶಸ್ತ್ರ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸುವುದು ಉಗ್ರಗಾಮಿ ಸಂಘಟನೆಗಳಿಂದ ವ್ಯವಸ್ಥಿತವಾಗಿ ನಡೆಯುತ್ತಲೇ ಇದೆ. ನಮ್ಮಲ್ಲಿಯೇ ಜಮ್ಮು ಮತ್ತು ಕಾಶ್ಮೀರ, ಆಂಧ್ರ ಪ್ರದೇಶ ಹಾಗೂ ಕರ್ನಾಟಕದಲ್ಲಿ ಇಂಥ ಪ್ರವೃತ್ತಿ ಕಾಣಿಸಿಕೊಂಡಿದೆ. ಜಮ್ಮು ಕಾಶ್ಮೀರದಲ್ಲಿ ನಾನಾ ಉಗ್ರಗಾಮಿ ಸಂಘಟನೆಯವರು, ಎಳೆಯರ ಮನ ಒಲಿಸಿ, ಗಡಿದಾಟಿಸಿ ಪಾಕಿಸ್ತಾನಕ್ಕೆ ಕಳಿಸಿ, ಅಲ್ಲಿ ತರಬೇತಿ ನೀಡಿ ವಾಪಸು ಕರೆತಂದು ಭಯೋತ್ಪಾದನೆಗೆ ಬಳಸುತ್ತಾರೆ. ಆಂಧ್ರ ಪ್ರದೇಶ ಮತ್ತು ಕರ್ನಾಟಕದ ಗಡಿ ಭಾಗದ ಕೆಲವು ಜಿಲ್ಲೆಗಳಲ್ಲಿ ಪೀಪಲ್ಸ್ ವಾರ್ ಗ್ರೂಪ್ ಮತ್ತು ರೈತ ಕೂಲಿ ಸಂಘಗಳಲ್ಲಿ ತೊಡಗಿಕೊಂಡವರಲ್ಲಿ ಬಹುಪಾಲು ಜನ ತೀರಾ ಎಳೆಯರು. ಇವು ಹತ್ತಿರದ ದೇಶಗಳ ಸಂಗತಿ. ಜಗತ್ತಿನಲ್ಲಿ ಈ ಹೊತ್ತು ಮೂವತ್ತೆಂಟು ರಾಷ್ಟ್ರಗಳಲ್ಲಿ ಈ ಪಿಡುಗು ಪ್ರಬಲವಾಗಿದೆ. ಏಷಿಯಾ ಖಂಡದ ಇಂಡಿಯಾ, ಬರ್ಮಾ, ಶ್ರೀಲಂಕಾ, ಪಾಕಿಸ್ತಾನ, ಆಫ್ಘಾನಿಸ್ತಾನ, ಬಾಂಗ್ಲಾದೇಶಗಳಲ್ಲಿ ಮಾತ್ರವಲ್ಲ ಮುಂದುವರಿದ ಯುರೋಪು ಖಂಡದ ಐರ್ಲೆಂಡ್, ಯುಗೋಸ್ಲಾವಿಯಾ, ಆಫ್ರಿಕಾ ಮತ್ತು ದಕ್ಷಿಣ ಆಫ್ರಿಕಾದ ಬಹುತೇಕ ಕಡೆಗಳಲ್ಲಿ ಎಳೆಯರನ್ನು ಸಶಸ್ತ್ರ ಹೋರಾಟಕ್ಕೆ ಸೇರಿಸಿಕೊಳ್ಳಲಾಗುತ್ತಿದೆ.

ಬಹುತೇಕ ಇಂಥ ಎಳೆಯರು ಉಗ್ರಗಾಮಿ ಸಂಘಟನೆಯ ಆದರ್ಶಕ್ಕೆ ಆಕರ್ಷಿತರಾಗುತ್ತಾರೆ. ಇದಲ್ಲದೇ ಬಡತನ, ಮನೆಯ ದುಃಸ್ಥಿತಿಯ ಲಾಭ ಪಡೆದುಕೊಳ್ಳುವ ಸಂಘಟಕರು, ಇಂಥ ಹುಡುಗ, ಹುಡುಗಿಯರನ್ನು ತಮ್ಮತ್ತ ಸೆಳೆದುಕೊಳ್ಳುತ್ತಾರೆ. ಇದು ಬಹಳಷ್ಟು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಪ್ರಬಲವಾಗಿ ಬೆಳೆಯುತ್ತಿರುವ ಪಿಡುಗು ಎಂದು ಸ್ವೀಡನ್ನಿನ 'ಮಕ್ಕಳನ್ನು ಉಳಿಸಿ' ಎಂಬ ಘೋಷ ವಾಕ್ಯದ ರಾಡ್ಡಾ ಬಾರನ್ ತನ್ನ ಒಂದು ವಾರ್ತಾಪತ್ರದಲ್ಲಿ ತಿಳಿಸಿದೆ. ಇಂಥ ಹಲವಾರು ಸಂಘಟನೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುತ್ತಿವೆ. ಯುದ್ಧ, ಸಶಸ್ತ್ರ ಹೋರಾಟ ನಡೆದಾಗೆಲ್ಲ ಅದರ ಭೀಕರತೆ ತಟ್ಟುವುದು ಎಳೆಯ ಮಕ್ಕಳನ್ನೇ. ಅನಾಥರಾಗುವ, ದಿಕ್ಕಿಲ್ಲದಂತಾಗಿಬಿಡುವ ಮಕ್ಕಳು ಯುದ್ಧದ ನಂತರ ತೀವ್ರ ರೀತಿಯ ಪರಿಣಾಮ ಎದುರಿಸಬೇಕಾಗುತ್ತದೆ. ಯುದ್ಧ ನಡೆಯುವಾಗ ತ್ಯಾಗ, ಬಲಿದಾನದಂಥ ಮಾತು ಎಲ್ಲರೂ ಆಡುತ್ತಾರೆ. ಸೈನಿಕನೊಬ್ಬ ಸತ್ತ ನಂತರ ಆತನನ್ನೇ ಅವಲಂಬಿಸಿದ ಸಂಸಾರ ನಾನಾ ಕಷ್ಟ ಕಾರ್ಪಣ್ಯಗಳಿಗೆ ಈಡಾಗುತ್ತದೆ. ಯುದ್ಧ ನಡೆದ ಸಮಯದಲ್ಲಿ ತೀವ್ರ

ಅನುಕಂಪ, ಪ್ರಶಂಸೆ ಸುರಿಸುವ ಜನ ಮತ್ತು ಸರ್ಕಾರಗಳು, ಯುದ್ಧ ನಿಂತ ನಂತರ ತಮಗೂ ಯುದ್ಧಕ್ಕೂ ಏನೂ ಸಂಬಂಧವೇ ಇಲ್ಲ ಎಂಬಂತೆ ಕೈತೊಳೆದುಕೊಂಡು ಸುಮ್ಮನಾಗಿಬಿಡುತ್ತವೆ. 1971ರಲ್ಲಿ ನಡೆದ ಬಾಂಗ್ಲಾಯುದ್ಧದ ಸಮಯದಲ್ಲಿ ಅಸುನೀಗಿದ ಸೈನಿಕರ ಸಂಸಾರಗಳ ಪುನರ್ವಸತಿ ಕಾರ್ಯ ಇನ್ನೂ ಆಗಿಲ್ಲ ಎಂದರೆ ಆಶ್ಚರ್ಯಪಡಬೇಕಾಗಿಲ್ಲ. ಇಂಥ ವಿಚಿತ್ರಗಳಿಂದಾಗಿ ಹೆಚ್ಚಿನ ದುಷ್ಪರಿಣಾಮ ಆಗುವುದೇ ಆಯಾ ಕುಟುಂಬಗಳಲ್ಲಿರುವ ಎಳೆಯ ಮಕ್ಕಳ ಮೇಲೆ.

ವಿಶ್ವಸಂಸ್ಥೆಯಂಥ ಸಂಘಟನೆ ಕೂಡ ಬಾಲ ಸೈನಿಕರ ಪ್ರವೃತ್ತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಎರಡು ವರ್ಷದ ಹಿಂದೆ ಸಶಸ್ತ್ರ ಹೋರಾಟದಲ್ಲಿ ತೊಡಗಿದ್ದ ಎಳೆಯರ ಸಂಖ್ಯೆ ಎರಡು ಲಕ್ಷದಷ್ಟಿದ್ದರೆ, ಈಗ ಅದು ಮೂರು ಲಕ್ಷದ ಗಡಿದಾಟಿದೆ.

ವಿಶ್ವಸಂಸ್ಥೆಯ ಮಕ್ಕಳ ವಿಭಾಗದ ರಾಯಭಾರಿ ಬಲಾರ್ ಒಟನ್ನು ಹೇಳಿಕೆಯೊಂದನ್ನು ನೀಡಿ, ಸರ್ಕಾರ ಮತ್ತು ಸಂಘಟನೆಗಳು ಹದಿನೆಂಟಕ್ಕಿಂತ ಕಡಿಮೆ ವಯಸ್ಸಿನವರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವುದನ್ನು ತಡೆಯಲು ಜನಜಾಗೃತಿ ಮೂಡಿಸಲು ಹಾಗೂ ರಾಜಕೀಯ ಒತ್ತಡ ಹೇರಲು ನಿರ್ಧರಿಸುವುದಾಗಿ ಹೇಳಿದ್ದಾರೆ. ಹದಿನೈದಕ್ಕಿಂತ ಕಡಿಮೆ ವಯಸ್ಸಿನವರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವುದು ಮತ್ತು ಅಂಥವರನ್ನು ಸಶಸ್ತ್ರ ಹೋರಾಟದಲ್ಲಿ ಬಳಸುವುದು ಯುದ್ಧಾಪರಾಧ ಎಂದು ಅಂತಾರಾಷ್ಟ್ರೀಯ ಕಾನೂನು ರಚನೆಗೂ ವಿಶ್ವಸಂಸ್ಥೆ ಮುಂದಾಗಲಿದೆ ಎಂದೂ ಒಟನ್ನು ಹೇಳಿದ್ದಾರೆ.

ಈ ರೀತಿ ಒತ್ತಡಗಳು ಹೆಚ್ಚಾದ ಮೇಲೆ ತಾಲಿಬಾನ್ ಸಂಘಟನೆಯ ಧಾರ್ಮಿಕ ಮುಖಂಡ ಮುಲ್ಲಾ ಓಮರ್ ಇತ್ತೀಚೆಗೆ ಹೇಳಿಕೆ ನೀಡಿ, ಮೀಸೆ, ಗಡ್ಡ ಮೂಡಿರದ ಎಳೆಯರನ್ನು ಸಶಸ್ತ್ರ ಸಂಘಟನೆಗೆ ಸೇರಿಸಿಕೊಳ್ಳುವುದಿಲ್ಲ ಎಂದು ಭರವಸೆ ನೀಡಿದ್ದಾರೆ.

ಇಷ್ಟೆಲ್ಲ ನಡೆಯುತ್ತಿದ್ದರೂ ಬ್ರಿಟನ್‌ನಂಥ ಮುಂದುವರೆದ ದೇಶದಲ್ಲಿಯೇ ಅಂತರಾಷ್ಟ್ರೀಯ ನಿಯಮದ ಉಲ್ಲಂಘನೆ ಇನ್ನೂ ಮುಂದುವರಿದಿದೆ. ಅಲ್ಲಿ ಸೈನಿಕ ತರಬೇತಿ, ಸಶಸ್ತ್ರ ಹೋರಾಟಕ್ಕೆಂದು ಹದಿನಾರು ವಯಸ್ಸಿನವರನ್ನು ಆರಿಸುತ್ತಾರೆ. ಹದಿನೇಳು, ಹದಿನೆಂಟು ತುಂಬುವಾಗ ಅವರೆಲ್ಲ ತರಬೇತಿ ಪಡೆದು ಸಶಸ್ತ್ರ ಹೋರಾಟಗಳಲ್ಲಿ ಸಕ್ರಿಯವಾಗುತ್ತಾರೆ. ಸದೃಢ ಸೈನಿಕ ಪಡೆ ಕಟ್ಟುವುದು ಹೀಗೆ ಮಾಡಿದಾಗ ಮಾತ್ರ ಸಾಧ್ಯ ಎಂಬುದು ಬ್ರಿಟಿಷ್ ಸರ್ಕಾರದ ವಾದ.

ಜಗತ್ತಿನ ಎಲ್ಲೆಡೆ ಮೂವತ್ತಾರು ವಿವಿಧ ಸಶಸ್ತ್ರ ಹೋರಾಟಗಳು ಜರುಗುತ್ತಿವೆ. ಇವುಗಳಲ್ಲಿ ತೊಡಗಿರುವ ಬಾಲಸೈನಿಕರ ಸಂಖ್ಯೆ ಮೂರು ಲಕ್ಷಕ್ಕೂ ಹೆಚ್ಚು. ಇಂಥ ಮಕ್ಕಳ ಜೀವನ ತೀರಾ ದುರ್ಭರ. ಅವರಲ್ಲಿ ಬಹುಪಾಲು ಜನ ಬಲವಂತದಿಂದ, ಪರಿಸ್ಥಿತಿಯ ಒತ್ತಡದಿಂದ ಇಂಥ ಸಂಘಟನೆ ಸೇರಿದವರು. ಇವರೆಲ್ಲ ಮೊದಲು ಕೂಲಿಯಾಳುಗಳಾಗಿ, ಸೈನಿಕ ಹಾಗೂ ಸಶಸ್ತ್ರ ಹೋರಾಟ ಸಂಘಟನೆಯ ಬೇಸ್ ಕ್ಯಾಂಪಿನ ಲೈಂಗಿಕ ಸಾಧನಗಳಾಗಿ ಬಳಸಲ್ಪಡುತ್ತಾರೆ.

ಹೋರಾಟದಲ್ಲಿ ಗಾಯವಾಗುವುದು, ಸಾವಿಗೀಡಾಗುವುದು ಇದ್ದೇ ಇರುತ್ತದೆ. ಈಚಿನ ದಿನಗಳಲ್ಲಿ ಹಗುರವಾದ ಸ್ವಯಂ ಚಾಲಿತ ಬಂದೂಕುಗಳು ಜನಪ್ರಿಯ ಆಗುತ್ತಿದ್ದರೂ, ಆಗತಾನೇ ಹೋರಾಟಕ್ಕಿಳಿದ ಎಳೆಯರು ಭಾರದ ಬಂದೂಕು ಹೊತ್ತು ತಿರುಗುತ್ತಾ ಬೆನ್ನು ವಿಕೃತಗೊಳಿಸಿಕೊಳ್ಳುತ್ತಾರೆ. ಬದುಕುಳಿದು ಬಂದರೂ ಸಹಜ ಜೀವನ ನಡೆಸಲು ಸಾಧ್ಯವೇ ಇರದಷ್ಟು ಅವರ ಆರೋಗ್ಯ ಮತ್ತು ಮನಸ್ಸುಗಳು ಹದಗೆಟ್ಟಿರುತ್ತವೆ.

ಮಕ್ಕಳ ಹಕ್ಕುಗಳ ಕುರಿತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕ ಕಾನೂನುಗಳು ಇವೆಯಾದರೂ ಅವುಗಳ ಅನುಷ್ಠಾನ ಮಾತ್ರ ಕಷ್ಟಸಾಧ್ಯ.

ಇತ್ತೀಚೆಗೆ ಕಾರ್ಗಿಲ್‌ನಲ್ಲಿ ನಡೆದ ಕದನದಲ್ಲಿ ಸತ್ತ ಭಾರತೀಯ ಯುವಕರೆಲ್ಲ ಹೆಚ್ಚಾಗಿ ಹತ್ತೊಂಬತ್ತರಿಂದ ಇಪ್ಪತ್ತೈದು ವರ್ಷ ವಯಸ್ಸಿನವರು. ನಾವು ಸುಖದಿಂದ ಇರಲು ಈ ಎಳೆಯ ಜೀವಗಳು ಬಲಿದಾನ ಆಗಬೇಕಾದ್ದು ವಿಚಿತ್ರ ಪರಿಸ್ಥಿತಿ.

ಅಂಥದರಲ್ಲಿ ಬದುಕಿಗೆ ಕಣ್ಣು ತೆರೆಯುವ ಮುಂಚೆಯೇ ಉಗ್ರಗಾಮಿ, ಭಯೋತ್ಪಾದಕ ಸಂಘಟನೆಗಳಲ್ಲಿ ತೊಡಗಿ ಬದುಕು ನೀಗಿಸಿಕೊಂಡುಬಿಡುವ ಇಂಥ ಎಳೆಯರ ಬಗ್ಗೆ ನಿಜಕ್ಕೂ ಕಾಳಜಿಯಿಂದ ವರ್ತಿಸಬೇಕಾದ ಕಾಲ ಇದು. ಇಲ್ಲವಾದಲ್ಲಿ ಕಾಲ ಮೀರಿ ಹೋಗುತ್ತದೆ.

■ ಸುಧಾಂಶು

ನನ್ನ ಪ್ರಪಂಚ



ನನಗೆ ಕ್ರಿಕೆಟ್ ತುಂಬಾ ಇಷ್ಟವಾದ ಆಟ. ನಾನು ಶಾಲೆಯಿಂದ ಬಂದ ತಕ್ಷಣ ನನಗಾಗಿ ನನ್ನ ಸ್ನೇಹಿತರು ಬಾಲು, ಬ್ಯಾಟು ತಂದು ಬಾರೋ ಪ್ರಸನ್ನ ಕ್ರಿಕೆಟ್ ಆಟ ಆಡೋಣ ಅಂತ ಕರೆಯುತ್ತಾರೆ. ನನಗೂ ಅದೇ ಬೇಕಾಗಿರುತ್ತದೆ. ಅವರು ಬಂದ ತಕ್ಷಣ ಆಟ ಆಡಲು ಹೋಗುತ್ತೇನೆ ಮತ್ತು ಸೈಕಲ್ ಹೊಡೆಯುವ ಆಸೆ ಬಹಳ. ನಮ್ಮ ಅಪ್ಪಾಜಿಯ ಸೈಕಲ್ ತೆಗೆದುಕೊಂಡು ನಾಲ್ಕೈದು ಸುತ್ತು ಸುತ್ತುತ್ತೇನೆ. ನನಗೆ ಕ್ರಿಕೆಟ್, ಸೈಕಲ್ ಅಂದರೆ ಬಹಳ ಇಷ್ಟ. ಮೊನ್ನೆ ಫೆಬ್ರುವರಿ ಏಳರಂದು ಅನಿಲ್ ಕುಂಬ್ಳೆ ಹತ್ತು ವಿಕೆಟ್ ತೆಗೆದುಕೊಂಡಿದ್ದು ತಿಳಿದು ಅವತ್ತು ಬರೇ ಕ್ರಿಕೆಟ್ ಆಡಿದ್ದೇ ಆಡಿದ್ದು. ನನಗೆ ಈ ರೀತಿ ಪ್ರಶಸ್ತಿ ವಿಜೇತನಾಗುವ ಆಸೆ.

■ ಕೆ.ಎಸ್. ಪ್ರಸನ್ನ

■


ಈ ಅಂಕಣ ಎಳೆಯರಿಗಾಗಿ. ಎಳೆಯರು ತಮ್ಮದೇ ಪ್ರಪಂಚದ ಅದ್ಭುತಗಳನ್ನು ಬರೆದು ಕಳುಹಿಸಬಹುದು. ಜೊತೆಗೆ ಒಂದು ಭಾವಚಿತ್ರ ಪೂರೈಸಲಿ. ಲೇಖನ ಕಳುಹಿಸಬೇಕಾದ ವಿಳಾಸ :

ಸಂಪಾದಕ
ನನ್ನ ಪ್ರಪಂಚ ವಿಭಾಗ
'ಬಿಸಿಲ ಬದುಕು'
473, 1ನೇ ಕ್ರಾಸ್, 1ನೇ ಬ್ಲಾಕ್
3ನೇ ಸ್ಟೇಜ್, ಬಸವೇಶ್ವರನಗರ
ಬೆಂಗಳೂರು - 560 079

■

ಜನತಾ ದರ್ಶನ

ಕಥೆ



ಸೂರ್ಯ ಇನ್ನೂ ನೆತ್ತಿಯ ಮೇಲೆ ಬಂದಿರಲಿಲ್ಲ. ಆದರೂ ಮೈಬೆವರಿ ಬಾಯಾರುವಷ್ಟು ಪ್ರಖರವಾಗಿತ್ತು ಬಿಸಿಲು. ತಹಸಿಲ ಕಾರ್ಯಾಲಯದ ಆವಣದಲ್ಲಿ ನಿಂತಿದ್ದ ಶಿವರುದ್ರ ಒಂದು ಕಾಲಿನ ಚಪ್ಪಲಿ ಬಿಟ್ಟು ನೆಲದ ಮೇಲೆ ಬರಿಗಾಲನ್ನಿಟ್ಟ; ನೆಲ ಸುಡುತ್ತಿತ್ತು. ಕೈಯಿಂದ ತಲೆಯನ್ನು ಮುಟ್ಟಿಕೊಂಡ; ಅದೂ ಸುಡುತ್ತಿತ್ತು. ಕೈಚೀಲದೊಳಗಿಂದ ಶಲ್ಯ ಹೊರತೆಗೆದು ಬೆವರೊರೆಸಿಕೊಂಡ. ಅವನು ತನ್ನ ಮನೆ ಊರು ಬಿಟ್ಟು ಎಂದೂ ಎಲ್ಲಿಗೂ ಹೋದವನಲ್ಲ. ತನ್ನೂರಿನಿಂದ ಎಂಟು ಕಿಲೋಮೀಟರ್ ದೂರದಲ್ಲಿರುವ ತಾಲೂಕು ಕೇಂದ್ರಕ್ಕೆ ಬಂದದ್ದೂ ಇದೇ ಮೊದಲ ಸಲ. ಅದಕ್ಕೇ ತಹಸಿಲ್ ಕಾರ್ಯಾಲಯವನ್ನು ಮತ್ತು ಅದರ ಸುತ್ತಮುತ್ತಲಿನ ಪರಸರವನ್ನು ಕುತೂಹಲದಿಂದ ನೋಡುತ್ತಿದ್ದ. ಒಂದು ತಾಸಿನ ಹಿಂದೆ ಬಸ್ಸಿನಿಂದಿಳಿದಾಗ ಅವನಿಗೆ ದಿಕ್ಕೇ ತಪ್ಪಿದಂತಾಗಿತ್ತು. ನಿಂತ ನೆಲ, ಉಸಿರಾಡುವ ಗಾಳಿ ಕೂಡ ಪರಕೀಯವೆನಿಸಿದ್ದವು. ಅವನ ಮುಂದೆ ಎರಡು ದಾರಿಗಳಿದ್ದವು. ಯಾವ ದಾರಿಗೆ ಹೋಗಬೇಕೆಂದು ತೋಚದೆ ಸ್ವಲ್ಪ ಹೊತ್ತು ಸುಮ್ಮನೆ ನಿಂತ. ದಾರಿಯಲ್ಲಿ ಹೋಗುತ್ತಿದ್ದ, ತನ್ನ ಹಾಗೆ ಸಂಭಾವಿತನಂತೆ ಕಾಣಿಸಿದ ಒಬ್ಬ ಮನುಷ್ಯನನ್ನು ತಡೆದು ಕೈಲಾಸಕ್ಕೆ ದಾರಿ ಯಾವುದು ಎಂದು ಹರಿದಾಸರು ಕೇಳಿದಂತೆ ತಹಸಿಲ ಕಾರ್ಯಾಲಯಕ್ಕೆ ದಾರಿ ಯಾವುದು ಎಂದು ಕೇಳಿದ. ಆ ಮನುಷ್ಯ ತೋರಿಸಿದ. ದಾರಿ ಹಿಡಿದು ನಡೆದ. ಎಲ್ಲಿ ದಾರಿ ತಪ್ಪುತ್ತದೇನೋ ಎಂದುಕೊಂಡು ಸ್ವಲ್ಪ ದೂರ ಹೋಗಿ ಮತ್ತೊಬ್ಬನನ್ನು ಕೇಳಿ ಮುಂದೆ ನಡೆದ. ಆ ಕಡೆ ಈ ಕಡೆ ನೋಡದೆ ಗಾಢ ಯೋಚನೆಯಲ್ಲಿ ನಡೆಯುತ್ತ ನಡೆಯುತ್ತ ತಹಸಿಲ ಕಾರ್ಯಾಲಯ ದಾಟಿ ಮುಂದೆ ಹೋದ. ಇನ್ನೆಷ್ಟು ದೂರಿದೆ ಎಂದುಕೊಂಡ. ಅವಸರದಲ್ಲಿ ಹೊರಟಿದ್ದ ವ್ಯಕ್ತಿಯೊಬ್ಬನನ್ನು ಕೈ ಮಾಡಿ ನಿಲ್ಲಿಸಿ ತಹಸಿಲ ಕಾರ್ಯಾಲಯ ಎಲ್ಲೆಂದು ಕೇಳಿದ. ಆ ವ್ಯಕ್ತಿ ಶಿವರುದ್ರನನ್ನು ಸಿಟ್ಟಿನಿಂದ ನೋಡಿ ತಹಸಿಲ ಕಾರ್ಯಾಲಯ ಮುಂದಿಲ್ಲ ಹಿಂದಕ್ಕೋಯ್ತು ಎಂದು ಸಿಟ್ಟಿನಿಂದಲೆ ಹೇಳಿ ಹೋದ. ಆ ಕಡೆ ಈ ಕಡೆ ನೋಡದೆ ಬರೀ ಮುಂದೆ ನೋಡುತ್ತ ಬಂದ ಶಿವರುದ್ರ, ತನ್ನನ್ನು ತಾನೇ 'ಅರುಗೇಡಿ' ಎಂದು ಮನಸ್ಸಿನಲ್ಲಿ ಬೈಯ್ದುಕೊಂಡು ಹಿಂದಕ್ಕೆ ತಿರುಗಿದ. ಬರೀ ಮುಂದೆ ನೋಡದನೆ, ಯೋಚನೆಯಲ್ಲಿ ಮುಳುಗದೆ ಆ ಕಡೆ ಈ ಕಡೆ ನೋಡುತ್ತ ನಡೆದ. ತಹಸಿಲ ಕಾರ್ಯಾಲಯ ಎಂದು ಬರೆದಿದ್ದ ಬೋರ್ಡು ಫಕ್ಕನೆ ಕಣ್ಣಿಗೆ ಬಿತ್ತು. ಗಕ್ಕನೆ ನಿಂತ. ತನಗೆ ಓದಲು ಬರದಿದ್ದರೆ ಇದೇ ತಹಸಿಲ ಕಾರ್ಯಾಲಯ ಎಂದು ಗೊತ್ತಾಗದೆ ಮುಂದಕ್ಕೆ ಹೋಗುತ್ತಿದ್ದೇನೋ ಎಂದು ತನಗೆ ಓದಲು ಬಂದಿದ್ದಕ್ಕೆ ಖುಷಿಪಟ್ಟ. ಒಲ್ಲೆಂದರೂ ರಾತ್ರಿ ಶಾಲೆಗೆ ಒತ್ತಾಯದಿಂದ ಕರೆದುಕೊಂಡು ಹೋಗಿ ಮೂರೇ ತಿಂಗಳಲ್ಲಿ ಓದು ಬರಹ ಕಲಿಸಿದ ಈರಣ್ಣನಿಗೆ ಮನಸ್ಸಿನಲ್ಲಿಯೇ ಕೃತಜ್ಞತೆ ಸಲ್ಲಿಸಿದ. ತಹಸಿಲ ಕಾರ್ಯಾಲಯದ ಆವರಣದೊಳಗೆ ಕಾಲಿರಿಸಿದ. ಕೂಡಲು ಸರಿಯಾದ ಜಾಗ ಕಾಣಿಸಲಿಲ್ಲ. ಅದಕ್ಕೆ ನಿಂತೇ ಬಿಟ್ಟಿದ್ದ.

ಶಿವರುದ್ರ, ಆರಂದ್ರ ಆರೇ ಎಕ್ರೆ, ಅದೂ ಫಲವತ್ತಲ್ಲದ ಜಮೀನು ಹೊಂದಿದ ಒಬ್ಬ ಬಡರೈತ. ವಯಸ್ಸಿನಲ್ಲಿ ಐವತ್ತರ ಗಡಿ ದಾಟಿದ್ದ ಅವನು ಹರೆಯಕ್ಕೆ ಬಂದ ವರ್ಷದಿಂದ ನಲವತ್ತು ವಸಂತಗಳ ಬದಲಿಗೆ ನಲವತ್ತು ಸಲ ಬರಗಾಲ ಕಂಡಿದ್ದ. ಬಿಸಿಲು, ಚಳಿ, ಗಾಳಿ ಮಳೆಯೆನ್ನದೆ ಹೊಲ ಹಸನು ಮಾಡಿದರೂ ಅವನು ಬದುಕು ಹಸನಾಗಲಿಲ್ಲ. ತನ್ನ ಹೊಲ ತಾನು ಲೆಕ್ಕಹಾಕಿದ್ದಕ್ಕಿಂತ ಹೆಚ್ಚು ಬೆಳೆದಿದ್ದು ತನಗೇ ಗೊತ್ತಿಲ್ಲ. ಒಂದು ವರ್ಷನೂ ಸುಗ್ಗಿ ಕಾಲದಲ್ಲಿ ಹೆಂಡತಿಗೆ ಹೊಸ ಸೀರೆ ತರಲಿಲ್ಲ. ಇದ್ದೊಬ್ಬ ಮಗನಿಗೆ ಹೊಸ ಅಂಗಿ ಹೊಲಿಸಲಿಲ್ಲ. ನೀರಾವರಿ ಸೌಲಭ್ಯ ಹೊಂದಿದ ದೊಡ್ಡ ರೈತರೇ ಸಾಕಪ್ಪ ಸಾಕು ಈ ಒಕ್ಕಲತನ ಎಂದು ನೊಂದು ಹೇಳುವಾಗ ಬರೀ ಆರೆಕ್ರೆ ಖುಷ್ಕಿ ಹೊಂದಿದ ಶಿವರುದ್ರನ ಪಾಡೇನು? ಮಣ್ಣಿನ ಮಕ್ಕಳ ಹಣೆಬರನೇ ಇಷ್ಟು ಎಂದುಕೊಂಡಿದ್ದ ಶಿವರುದ್ರ.

ಪ್ರತಿದಿನ ಹತ್ತುಗಂಟೆ ಆದಮೇಲೆಯೆ ಅಲುಗಾಡುತ್ತ ಆಫೀಸಿಗೆ ಬರುತ್ತಿದ್ದ ತಹಸಿಲ ಕಾರ್ಯಾಲಯದ ಸಿಬ್ಬಂದಿಯವರು ಆ ದಿನ ಎರಡು ತಾಸು ಮೊದಲೆ ಬಂದು ಜಿಲ್ಲಾ ಉಸ್ತುವಾರಿ ಮಂತ್ರಿಗಳ ಜನತಾದರ್ಶನ ಕಾರ್ಯಕ್ರಮಕ್ಕಾಗಿ ವ್ಯವಸ್ಥೆ ಮಾಡುತ್ತಿದ್ದರು. ತಹಸಿಲದಾರರು, ಕಾರಕೂನರು, ಚಪರಾಶಿಗಳೂ ಸೇರಿದಂತೆ ಎಲ್ಲರೂ ಮದುವೆ ಮನೆಯಲ್ಲಿ ಓಡಾಡುವಂತೆ ಒಳಗಿಂದ ಹೊರಗೆ ಹೊರಗಿಂದ ಒಳಗೆ ಓಡಾಡುತ್ತಿದ್ದರು. ಶಿವರುದ್ರ, ಅದನ್ನೆಲ್ಲ ನೋಡುತ್ತ ನಿಂತಿದ್ದ.

ಒಂದು ಬ್ಯಾನರ್ ಕಟ್ಟಲು ಇಬ್ಬರು ಚಪರಾಶಿಗಳಿಗೆ ಅರ್ಧಗಂಟೆ ಹಿಡಿಯಿತು. ಶಿವರುದ್ರ, ಬ್ಯಾನರ್ ಮೇಲಿನ ಬರಹವನ್ನು ಓದಿದ. ಜನತಾ ದರ್ಶನ ಎಂದು ಬರೆದಿತ್ತು. ಮಂತ್ರಿಗಳ ಕಾರ್ಯಕ್ರಮ ನಡೆಯುವ ಸ್ಥಳ ಇದೇ ಎಂದು ಖಾತ್ರಿಯಾಯಿತು. ಅಲ್ಲಿಗೆ ಬಂದಾಗಿನಿಂದ ನಿಂತುಕೊಂಡಿದ್ದರಿಂದ ಕಾಲುಗಳು ಸ್ವಲ್ಪ ನೋಯ್ದು ಅನುಭವವಾಗತೊಡಗಿತು. ತಹಸಿಲ ಕಾರ್ಯಾಲಯದ ಆವರಣದ ಮೂಲೆಯಲ್ಲಿದ್ದ ಒಂದು ಗಿಡದ ಕೆಳಗೆ ಹೋಗಿ ಕುಳಿತ. ಕುಳಿತಲ್ಲಿಂದಲೆ ಬ್ಯಾನರ್‌ಕಡೆ ನೋಡಿದ. ಓದಿದ.

ಕಳೆದ ವರ್ಷ ತೊಗರಿ ಬಿತ್ತಿದವರಿಗೆಲ್ಲ ಬಂಪರ್ ಬೆಳೆ ಬಂದಿತ್ತು. ಮಾರ್ಕೆಟಿನಲ್ಲಿ ತೊಗರಿಗೆ ಧಾರಣೆನೂ ಸರಿಯಾಗಿತ್ತು. ಕಡ್ಲಿ ಬಿತ್ತಿ ಕಳವಳ ಪಟ್ಟುಕೊಂಡ ಶಿವರುದ್ರ ಈ ವರ್ಷ ತೊಗರಿ ಬಿತ್ತಿದ. ಮಳೆನೂ ಸರಿಯಾಗೇ ಆಗಿತ್ತು. ಆದ್ರ ಬೆಳಿಗೆ ಕಾಯಿಕೊರಕ ಹುಳ ಹತ್ತಿದವು. ಕೀಟನಾಶಕ ಸಿಂಪರಿಸದ್ರ ಹುಳಗಳು ಸಾಯ್ತವ ಅಂತ ಸಾವಿರ ರೂಪಾಯಿ ಸಾಲ ಮಾಡಿ ಕೀಟನಾಶಕ ತಂದು, ಬಾಡಿಗೆ ಸ್ಪ್ರೇ ತಗೊಂದು ಸಿಂಪರಿಸಿದ. ಕಾಯಿ ಬಲಿಯುವದಕ್ಕಿಂತ ಮೊದಲೇ ತಿಂದು ಬಲಿತುಬಿಟ್ಟಿದ್ದ ಕಾಯಿಕೊರಕ ಹುಳಗಳ ಮೇಲೆ ಕೀಟನಾಶಕದ ಅಸರ್ ಏನೇನೂ ಆಗಲಿಲ್ಲ. ಪೂರ್ತಿ ಬೆಳೆ ಹಾಳಾಗಿ ಹೋಯ್ತು. ಖರೀಫ್ ಕೈಗೆ ಹತ್ತದಿದ್ರೂ ರಬ್ಬಿಯಾದ್ರೂ ಇರ್ತದಲ್ಲ ಎಂದು ದೊಡ್ಡ ರೈತರು ಸಮಾಧಾನ ಪಟ್ಟುಕೊಂಡಿದ್ದರು. ಬರೀ ಖುಷ್ಕಿಯನ್ನು ನಂಬಿದ ಶಿವರುದ್ರನ ಕಷ್ಟ ಯಾರ ಮುಂದೆಯೂ ಹೇಳದಂತಿತ್ತು. ರಾಶಿ ಮಾಡಿ ಬಂಡಿಯಲ್ಲಿ ತೊಗರಿ ಚೀಲಗಳನ್ನು ಮನೆಗೆ ತರುವದರ ಬದಲಿಗೆ ಒಲೆಗೆ ಹಚ್ಚಿ ಉರಿಯಲು ತೊಗರಿ ಕಟಗಿ ತಂದ.

''ತೊಗರಿ ಬೆಳೆ ಹಾನಿ-ರೈತರಿಗೆ ಪರಿಹಾರ'' ಎಂದು ಪತ್ರಿಕೆಯಲ್ಲಿ ಹಲವಾರು ಸಲ ಓದಿದ್ದ ಈರಣ್ಣ, ರಾತ್ರಿಶಾಲೆಯಲ್ಲಿ ಶಿವರುದ್ರನಿಗೆ ಪರಿಹಾರದ ವಿಷಯ ಹೇಳಿದ್ದ. ಅಷ್ಟೇ ಅಲ್ಲ ತಹಸಿಲ ಕಾರ್ಯಾಲಯದಾಗ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಜನತಾ ದರ್ಶನ ಕಾರ್ಯಕ್ರಮ ನಡೀತದ. ಮಂತ್ರಿಗಳು ನಿಮ್ಮಂಥವರ ಕಷ್ಟ ಸುಖ ಕೇಳಿ ಮನವಿಪತ್ರ ತಗೊಂಡು ಸ್ಥಳದಲ್ಲೇ ಪರಿಹಾರ ಮಂಜೂರು ಮಾಡ್ತಾರೆ ಎಂದೂ ಹೇಳಿದ್ದ. ಆ ರಾತ್ರಿ ಮನಿಗೆ ಬಂದು ಮಲಗಿದ ಶಿವರುದ್ರನಿಗೆ ನಿದ್ರೆ ಬರಲಿಲ್ಲ. 'ತೊಗರಿ ಬೆಳೆ ಹಾನಿಗೆ ಪರಿಹಾರ, ಸ್ಥಳದಲ್ಲೆ ಪರಿಹಾರ ಮಂಜೂರು' ಎಂದು ತನ್ನಲ್ಲಿ ತಾನೇ ಅಂದುಕೊಳ್ಳುತ್ತಿದ್ದ. ಎಚ್ಚರಿದ್ದೇ ಕನವರಿಸಿದಂತೆ ಮಾಡಿದ. ಇಡೀ ರಾತ್ರಿ ನಿದ್ರೆಯಿಲ್ಲದೆ ಹೊರಳಾಡಿದ. ಝುಂಜಾನೆ ಮುಖ ತೊಳೆದುಕೊಂಡು ಈರಣ್ಣನ ಮನೆಗೆ ಹೋದ. ಅದೇ ಆಗ ಎದ್ದು ಆಕಳಿಸುತ್ತಿದ್ದ ಈರಣ್ಣ ಶಿವರುದ್ರನನ್ನು ಒಳಗೆ ಕರೆದು ಕೂಡಿಸಿದ.

ಜನತಾ ದರ್ಶನ ಸ್ಥಳದಲ್ಲೇ ಪರಿಹಾರ ಅಂದ್ಯಲ್ಲ ಈರಣ್ಣ. ನಾನೂ ನನ್ನ ತೊಗರಿ ಬೆಳೆ ಹಾನಿಗೆ ಪರಿಹಾರ ಕೇಳಬೇಕಂತ ಮಾಡೀನಿ. ಮಂತ್ರಿಗಳಿಗೆ ಒಂದು ಮನವಿ ಪತ್ರ ಬರ್ದು ಕೊಡು ಎಂದು ಶಿವರುದ್ರ ತನ್ನ ಕೈಯಲ್ಲಿ ಸುರಳಿ ಹೊಡೆದು ಹಿಡಿದುಕೊಂಡಿದ್ದ ಬಿಳಿ ಕಾಗದ ಈರಣ್ಣನ ಕೈಗೆ ಕೊಟ್ಟ. ಈರಣ್ಣ ಒಲ್ಲೆನ್ನದೆ ಮುಖ ತೊಳೆದುಕೊಂಡು ಬಂದು ಶಿವರುದ್ರನ ಮಗ್ಗಲಲ್ಲಿ ಕುಳಿತು ಮನವಿಪತ್ರ ಬರೆದ. ಒಂದು ಸಲ ಓದಿದ. ಶಿವರುದ್ರನೂ ಓದಿದ. ಕೆಳಗೆ ಶಿವರುದ್ರ ಎಂದು ಬರೆದಿದ್ದ ತನ್ನ ಹೆಸರಿನ ಮೇಲೆ ಸಹಿ ಮಾಡಿದ.



ಶಿವರುದ್ರ ಮತ್ತೆ ಬ್ಯಾನರ್ ಕಡೆಗೆ ನೋಡಿದ. ಜನತಾ ದರ್ಶನ ಎಂದು ಓದಿದ. ಕೈಚೀಲದೊಳಗೆ ಸುರಳಿ ಹೊಡೆದು ಇಟ್ಟಿದ್ದ ಮನವಿ ಪತ್ರವನ್ನು ಸಾವಕಾಶವಾಗಿ ಹೊರಗೆ ತೆಗೆದ. ಸುರಳಿ ಬಿಚ್ಚಿ ಓದಿದ. ಮತ್ತೊಮ್ಮೆ ಓದಿದ. ತಾನು ಆ ಮನವಿಪತ್ರವನ್ನು ಮಂತ್ರಿಗಳಿಗೆ ಕೊಟ್ಟಂತೆ, ಮಂತ್ರಿಗಳು ತನಗೆ ಸ್ಥಳದಲ್ಲಿಯೇ ಪರಿಹಾರ ಮಂಜೂರು ಮಾಡಿದಂತೆ ಭಾವಿಸಿಕೊಂಡ. ಮರುಗಳಿಗೆಯಲ್ಲಿ ವಾಸ್ತವಕ್ಕೆ ಬಂದ. ಮನವಿ ಪತ್ರವನ್ನು ಸುರಳಿ ಹೊಡೆದು ಕೈಚಿಲದೊಳಗಿಟ್ಟ.

ಸೂರ್ಯ ನೆತ್ತಿಯ ಮೇಲೆ ಬಂದಿದ್ದ. ಕೈಚೀಲದೊಳಗಿನ ಶಲ್ಯ ಹೊರ ತೆಗೆದು ಮತ್ತೊಮ್ಮೆ ಬೆವರೊರೆಸಿಕೊಂಡ. ತಹಸಿಲ ಕಾರ್ಯಾಲಯದ ಸಿಬ್ಬಂದಿಯವರು ಇನ್ನೂ ವ್ಯವಸ್ಥೆ ಮಾಡುವದರಲ್ಲಿಯೇ ಇದ್ದರು. ಕಾರ್ಯಕ್ರಮ ಶುರುವಾಗಲು ಇನ್ನೂ ತಡವಿದೆ ಎಂದುಕೊಂಡ ಶಿವರುದ್ರ ತಹಸಿಲ ಕಾರ್ಯಾಲಯದ ಆವರಣದ ಹೊರಗಿದ್ದ ಡಬ್ಬಿ ಚಹಾದಂಗಡಿಗೆ ಹೋಗಿ ಎರಡು ಗ್ಲಾಸ್ ನೀರು ಕುಡಿದು ಕರಿನೀರಿನಂಥ ಕರ್‍ರಗಿನ ಚಹಾ ಕುಡಿದ. ಮತ್ತೆ ಬಾಯಿ ಆರಬಾರದೆಂದು ಚಿಕಣಿ ಅಡಕಿ ಹೋಳು ಬಾಯಲ್ಲಿ ಹಾಕಿಕೊಂಡು ಮೆಲಿಯುತ್ತ ಮತ್ತೆ ತಹಸಿಲ ಕಾರ್ಯಾಲಯದೊಳಗಿನ ಗಿಡದ ಕೆಳಗೆ ಹೋಗಿ ಕುಳಿತ.

ಜನತಾ ದರ್ಶನ ವೇದಿಕೆ ಸಿದ್ಧವಾಗಿತ್ತು. ವೇದಿಕೆಯಲ್ಲಿ ಗಣ್ಯ ವ್ಯಕ್ತಿಗಳಿಗಾಗಿಯೇ ಇರುವ ಎಂಟು ಕುರ್ಚಿಗಳನ್ನು ಹಾಕಿದ್ರು. ವೇದಿಕೆಯ ಮುಂದೆ ಸಾಮಾನ್ಯ ಜನರಿಗಾಗಿ ನೂರಿನ್ನೂರು ಕುರ್ಚಿಗಳಿದ್ದವು. ಹೂವಿನ ಹಾರಗಳಿಂದ ತುಂಬಿದ್ದ ಬುಟ್ಟಿ ಒಂದು ಕಡೆ ಇಟ್ಟಿದ್ರು. ಪಬ್ಲಿಸಿಟಿ ಹುಡುಗ ತನ್ನ ಮನಸ್ಸಿಗೆ ಬಂದ ಹಿಂದಿ ಚಿತ್ರಗೀತೆಗಳ ಕ್ಯಾಸೆಟ್ ಹಾಕುತ್ತಿದ್ದ. ಇನ್ನು ಸ್ವಲ್ಪ ಹೊತ್ನಲ್ಲಿ ಮಂತ್ರಿಗಳ ಜನತಾ ದರ್ಶನ ಕಾರ್ಯಕ್ರಮ ನಡಿತದೆ. ಮಂತ್ರಿಗಳು ಜನರ ಮನವಿ ಪತ್ರ ಪಡೆದು ಸಮಸ್ಯೆಗೆ ಸ್ಥಳದಲ್ಲಿಯೇ ಪರಿಹಾರ ನೀಡುತ್ತಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಹಸಿಲ ಕಾರ್ಯಾಲಯದ ಸಿಬ್ಬಂದಿಯವರು ಆಗಾಗ ಧ್ವನಿವರ್ಧಕದಲ್ಲಿ ಹೇಳುತ್ತಿದ್ದರು.


ಜನರು ಒಬ್ಬೊಬ್ಬರಾಗಿ ಬರುತ್ತಿದ್ದರು. ಕೆಲವರು ಕೈಯಲ್ಲಿ ಮನವಿ ಪತ್ರ ಹಿಡಿದುಕೊಂಡೇ ಬರುತ್ತಿದ್ದರು. ಮತ್ತೆ ಕೆಲವರರು ಅಲ್ಲೇ ಕುಳಿತು ಮನವಿ ಪತ್ರ ಬರೆಸುತ್ತಿದ್ದರು. ಭಾಳ ಜನ ಪರಿಹಾರ ಕೇಳಕ್ಕ ಬಂದ್ರ ತನ್ನ ಗತಿ ಏನು ಎಂಬ ಚಿಂತೆ ಸಣ್ಣಗೆ ಕಾಡತೊಡಗಿತು ಶಿವರುದ್ರನಿಗೆ. ಎಲ್ಲರ ಸಮಸ್ಯೆ ಒಂದೇ ಇರಲ್ಲ. ಯಾರ್‍ಯಾರ ಸಮಸ್ಯೆ ಏನೇನೋ ಇರ್ತದ. ತನ್ನದಂತೂ ತೊಗರಿಬೆಳೆ ಹಾನಿ. ತನ್ನ ಮನವಿಪತ್ರವನ್ನು ಮಂತ್ರಿಗಳು ಮನಸ್ಸುಕೊಟ್ಟು ಓದಿ ಪರಿಹಾರ ಮಂಜೂರು ಮಾಡ್ತಾರ ಎಂದುಕೊಂಡ. ತೊಗರಿ ಬೆಳೆಯುವ ರೈತರಿಗೆ ನೆರವು ನೀಡಲು ತೊಗರಿ ಮಂಡಳಿ ರಚಿಸ್ತೀವಿ ಎಂದೆಲ್ಲಾ ಹೇಳುವ ಮಂತ್ರಿಗಳು ತೊಗರಿ ಬಿತ್ತಿ ಹಾನಿ ಅನುಭವಿಸೋ ನಿನ್ನಂಥ ರೈತರಿಗೆ ಪರಿಹಾರ ಕೊಡಲೇಬೇಕು, ಕೊಟ್ಟೇ ಕೊಡ್ತಾರ ಎಂದು ಈರಣ್ಣ ಹೇಳಿದ್ದನ್ನು ನೆನಪಿಸಿಕೊಂಡಾಗ ಶಿವರುದ್ರನಿಗೆ ಧೈರ್ಯ ಬಂತು.

ಮಂತ್ರಿಗಳಿಗೆ ಮನವಿಪತ್ರ ಕೊಡುವಾಗ ಅವರ ಕಾಲಿಗೆ ಬಿದ್ರಾತು. ಅವರಿಗೆ ಕನಿಕರ ಬಂದು ಮನವಿಪತ್ರ ಸರಿಯಾಗಿ ಓದಿ ಸ್ಥಳದಲ್ಲೆ ಪರಿಹಾರ ಮಂಜೂರು ಮಾಡಬಹುದೇನೋ ಎಂದು ಆಲೋಚಿಸಿದ ಶಿವರುದ್ರ ಮರುಕ್ಷಣದಲ್ಲಿಯೇ ಮಂತ್ರಿಗಳದು ಯಾವ ಜಾತಿನೋ ಏನೋ? ಹ್ಯಾಗ ಕಾಲಿಗೆ ಬೀಳೋದು ಎಂದುಕೊಂಡ. ಮಂತ್ರಿಗಳಿಗೆ ಜಾತಿನೇ ಇರೂದಿಲ್ಲ. ಎಲ್ಲಾ ಜಾತಿ ಜನರು ಆರಿಸಿ ಕಳಿಸಿರ್ತಾರ. ಮಂತ್ರಿ ಆಗಿರ್ತಾರ ಎಂದು ಈರಣ್ಣ ಯಾವಾಗಲೋ ಒಂದು ಸಲ ಹೇಳಿದ್ದು ನೆನಪಾಯ್ತು. ಈರಣ್ಣನ ಸಮಾಜವಾದ ಧೋರಣೆ ಶಿವರುದ್ರನಿಗೆ ಸರಿಕಾಣಿಸಿತು. ಜಾತಿ ಅಭಿಮಾನ ಬಿಟ್ಟು ಮಂತ್ರಿಗಳ ಕಾಲಿಗೆ ಬೀಳಬೇಕೆಂದೇ ನಿರ್ಧರಿಸಿಬಿಟ್ಟ.

ಜನತಾ ದರ್ಶನ ಕಾರ್ಯಕ್ರಮದಲ್ಲಿ ಮಂತ್ರಿಗಳಿಗೆ ಮನವಿ ಪತ್ರ ಕೊಡಲು ಬಂದವರೆಲ್ಲರೂ ವೇದಿಕೆಯ ಎಡಭಾಗಲ್ಲಿ ಸಾಲಾಗಿ ನಿಲ್ಲಬೇಕು ಎಂದು ತಹಸಿಲ್ದಾರರೇ ಧ್ವನಿವರ್ಧಕದಲ್ಲಿ ಹೇಳಿದರು. ಐದು ನಿಮಿಷಗಳಲ್ಲಿ ಎಪ್ಪತ್ತು ಎಂಭತ್ತು ಜನರು ಸಾಲುಗಟ್ಟಿ ನಿಂತರು. ಗಿಡದ ಕೆಳಗೆ ಕುಳಿತಿದ್ದ ಶಿರುದ್ರ ಸಾಲುಗಟ್ಟಿ ನಿಂತವರನ್ನು ನೋಡಿ ಅಬ್ಬಾ... ಎಷ್ಟು ಮಂದಿ ಎಂದು ಬಾಯಿಗೆ ಕೈ ಹಚ್ಚಿಕೊಂಡ. ಇನ್ನೂ ತಾನು ಗಿಡದ ಕಳಗೇ ಕುಳಿತರೆ ಸರಿಯಲ್ಲ ಎಂದುಕೊಂಡು ಕೈ ಚೀಲ ಕೈಯಲ್ಲಿ ಹಿಡಿದುಕೊಂಡು ಬೇಗ ಬೇಗ ಹೋಗಿ ಸಾಲಿನ ಕೊನೆಯಲ್ಲಿ

ನಿಂತ. ಸಾಲಿನಲ್ಲಿ ಎಷ್ಟು ಜನರಿಬಹುದು, ತಾನು ಎಷ್ಟನೆಯವನು ಎಂದು ತಿಳಿದುಕೊಳ್ಳಲು ಸಾಲಿನ ಆರಂಭದಿಂದ ಒಬ್ಬೊಬ್ಬರನ್ನು ನೋಡುತ್ತ ಎಣಿಸಿದ. ಎಂಭತ್ತಾ ಲ್ಕು ಜನರಿದ್ದರು. ತನ್ನದು ಎಂಭತ್ತೈದನೆಯದು. ಅಷ್ಟೂ ಜನರ ಪಾಳಿ ಆದ ಮೇಲೆ ತನ್ನ ಪಾಳಿ ಏನಾಗುತ್ತದೋ ಏನೋ ಎಂದುಕೊಂಡ. ಮಂತ್ರಿಗಳು ನಡುವೆ ಎದ್ದು ಹೋದ್ರೆ ತನ್ನ ಗತಿ ಏನು ಎಂದೂ ಆಲೋಚಿಸಿದ.

ಹತ್ತು ನಿಮಿಷಗಳ ಹಿಂದೆ ಸಾಲಿನ ಕೊನೆಯಲ್ಲಿ ನಿಂತಿದ್ದ ಶಿವರುದ್ರ ಈಗ ಹಿಂದಕ್ಕೆ ತಿರುಗಿ ನೋಡಿದ. ಸಾಲು ಇನ್ನೂ ಬೆಳೆದಿತ್ತು ಅವನ ಬೆನ್ನ ಹಿಂದೆ ಇನ್ನೂ ಇಪ್ಪತ್ತು ಜನರು ನಿಂತಿದ್ದರು. ಕೆಲವರು ಮನವಿ ಪತ್ರಗಳನ್ನು ಎಲ್ಲರಿಗೂ ಕಾಣುವಂತೆ ಕೈಯಲ್ಲಿ ಹಿಡಿದುಕೊಂಡಿದ್ದರೆ ಇನ್ನು ಕೆಲವು ಜನರು ಕಿಸೆಯಲ್ಲಿಟ್ಟುಕೊಂಡಿದ್ದರು. ಬಹಳಷ್ಟು ಜನರ ಕೈಯಲ್ಲಿ ಟೈಪ್ ಮಾಡಿದ ಮನವಿ ಪತ್ರಗಳಿದ್ದವು.



ಆಗಲೆ ಬಂದ ಕೆಲವು ಜನರು ಸಾಲಿನ ಕೊನೆಯಲ್ಲಿ ಸ್ವಲ್ಪ ಹೊತ್ತು ನಿಂತು ಆ ಮೇಲೆ ಮುಂದೆ ಹೋಗಿ ಸಾಲಿನ ಮಧ್ಯ ಸೇರಿಕೊಳ್ಳುತ್ತಿದ್ದರು. ಶಿವರುದ್ರನ ಹಿಂದೆ ನಿಂತವನೊಬ್ಬ ನೋಡು ನೋಡುತ್ತಿದ್ದಂತೆ ಮುಂದೆ ಹೋಗಿ ಸೇರಿಕೊಂಡ. ಅವನಂತೆ ಮತ್ತೊಬ್ಬ ಹೋದ. ಹೀಗೇ ಶಿವರುದ್ರನ ಹಿಂದೆ ನಿಂತವರೆಲ್ಲರೂ ಒಬ್ಬೊಬ್ಬರಾಗಿ ಮುಂದೆ ಹೋಗಿ ನಿಂತರು. ಶಿವರುದ್ರ ಪೆಚ್ಚಾದ. ಹಾಗೆ ನೋಡಿದರೆ ಎಲ್ಲರಿಗಿಂತ ಮೊದಲು ಬಂದವನು ಶಿವರುದ್ರ. ಅವನು ಇದನ್ನು ಯಾರಿಗೆ ಹೇಳಬೇಕು? ತಾನೇ ಮೊದಲು ಬಂದವನು ಎಂದು ಹೇಳಿದರೆ ಯಾರು ನಂಬಬೇಕು?

ಶಿವರುದ್ರನನ್ನು ಹಿಂದೆ ಹಾಕಿ ಮುಂದೆ ಹೋದವರೆಲ್ಲ ಇವನ ಕಡೆ ನೋಡಿ ನಗುತ್ತಿದ್ದರು. ಇವರೆಂಥ ಜನರು, ಎಂಥ ರೀತಿ ಎಂದು ಶಿವರುದ್ರ ಮನಸ್ಸಿನಲ್ಲಿಯೇ ಅಂದುಕೊಂಡ. ಲಾಠಿ ಬೀಸುತ್ತ ಅಡ್ಡಾಡುತ್ತಿದ್ದ ಪೋಲಿಸ ಕಾನಸ್ಟೆಬಲ್ ಸಾಲಿನಲ್ಲಿ ತಮ್ಮ ಜಾಗ ಬಿಟ್ಟು ಮುಂದೆ ಹೋಗಿ ಸೇರಿಕೊಂಡವರನ್ನು ಹಿಂದಕ್ಕೆ ತಂದು ನಿಲ್ಲಿಸುತ್ತಾನೇನೋ ಎಂದುಕೊಂಡ. ಆ ಪೋಲಿಸ್ ಕಾನಸ್ಟೇಬಲ್ 'ಕ್ಯೂ' ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಸಾಲಿನಲ್ಲಿನ ಜಾಗ ಬಿಟ್ಟು ಮುಂದೆ ಹೋಗಿ ನಿಂತವನೊಬ್ಬನ ಹತ್ತಿರ ಹೋಗಿ ನಿಂತು ಮಾತಾಡುತ್ತಿದ್ದ. ಆ ಪೋಲಿಸ್ ಕಾನಸ್ಟೆಬಲ್ ತಿರುಗಾಡುತ್ತಾ ಶಿವರುದ್ರನ ಹತ್ತಿರಕ್ಕೂ ಬಂದ. ಅವರೆಲ್ಲ ನನಗಿಂತ ಹಿಂದಿದ್ದರು ಈಗ ಮುಂದಿದ್ದಾರೆ ಎಂದು ಹೇಳಬೇಕೆಂದ. ಆದರೆ ಧೈರ್ಯ ಸಾಲಲಿಲ್ಲ.

ಮಂತ್ರಿಗಳು ಬಂದಿದ್ದಾರೆ. ಯಾರೂ ಗದ್ದಲ ಮಾಡದೆ ಶಾಂತವಾಗಿ ಕೂಡಬೇಕು ಎಂದು ತಹಸಿಲ್ದಾರರೇ ಧ್ವನಿವರ್ಧಕದಲ್ಲಿ ಹೇಳಿದರು. ಮಂತ್ರಿಗಳು ನೇರವಾಗಿ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬರುತ್ತಾರೆಂದು ಕೊಂಡ ಶಿವರುದ್ರ ತಹಸಿಲ ಕಾರ್ಯಾಲಯದ ಗೇಟಿನ ಕಡೆಗೇ ನೋಡ ತೊಡಗಿದ. ಮಂತ್ರಿಗಳು ಮೊದಲು ಐಬಿಗೆ ಹೋಗಿ ಚಾ ಪಾನಿ ಮಾಡ್ಕೊಂಡು ಇಲ್ಲಿಗೆ ಬರ್‍ತಾರೆ ಎಂದು ಮಗ್ಗುಲಲ್ಲಿ ನಿಂತವನು ಹೇಳಿದಾಗ ಶಿವರುದ್ರ ಹೌದಾ ಎಂದ.

ವಾಹನಗಳು ಬರುವ ಸದ್ದು ಕೇಳಿಸಿತು. ಮಂತ್ರಿಗಳನ್ನು ಬರಮಾಡಿ ಕೊಳ್ಳಲು ತಹಸಿಲ್ದಾರರು ಓಡುತ್ತಾ ಗೇಟಿನ ಬಳಿ ಹೋಗಿ ನಿಂತರು. ಒಂದರ ಹಿಂದೆ ಮತ್ತೊಂದರಂತೆ ಜೀಪುಗಳು, ಕಾರುಗಳು ತಹಸಿಲ ಕಾರ್ಯಾಲಯದಲ್ಲಿ ಬಂದು ನಿಂತವು. ಮೇಲೆ ಕೆಂಪು ಲೈಟಿದ್ದ ಕಾರಿನಿಂದ ಮಂತ್ರಿಗಳು ಇಳಿದರು. ತಹಸಿಲ್ದಾರರು ಮಂತ್ರಿಗಳನ್ನು ವೇದಿಕೆಯ ಕಡೆಗೆ ಕರೆದುಕೊಂಡು ಬಂದರು. ಮಂತ್ರಿಗಳ ಜೊತೆಗೆ ಅವರ ಅನುಯಾಯಿಗಳೂ ಬಂದರು. ಕಡಕ್ ಖಾದಿ ಅಂಗಿ ತೊಟ್ಟು ಖಾದಿ ಧೋತರ ಉಟ್ಕೊಂಡು ಖಾದಿ ಗಾಂಧೀ ಟೋಪಿ ಇಟಗೊಂಡವರೆಲ್ಲ ಮಂತ್ರಿಗಳ ಅನುಯಾಯಿಗಳೆಂದು ಸುಲಭವಾಗಿ ಗುರುತಿಸುವಂತಿತ್ತು. ಪಬ್ಲಿಸಿಟಿ ಹುಡುಗ ಕ್ಯಾಸೆಟ್ ಹಾಡು ನಿಲ್ಲಿಸಿದ. ತಾಲೂಕಿನ ಅಧಿಕಾರಿಗಳು, ಗಣ್ಯರು ಮಂತ್ರಿಗಳ ಕೈ ಕುಲುಕಿ ತಮ್ಮನ್ನು ಪರಿಚಯಿಸಿ ಕೊಂಡರು.

ಕಾರ್ಯಕ್ರಮ ಶುರುವಾಯಿತು. ಮೊದಲು ಇಬ್ಬರು ಹುಡುಗಿಯರು ಪ್ರಾರ್ಥನಾಗೀತೆಯಾಗಿ ಪುರಂದರ ದಾಸರ ಪದ್ಯವನ್ನು ತಪ್ಪು ತಪ್ಪಾಗಿ ಹಾಡಿ ಚಪ್ಪಾಳೆ ತಟ್ಟಿಸಿಕೊಂಡರು. ಸ್ವಾಗತ ಭಾಷಣ ತಹಸಿಲ್ದಾರರದಾಗಿತ್ತು. ಅವರು ಜನತಾ ದರ್ಶನ ಕಾರ್ಯಕ್ರಮದ ಉದ್ದೇಶವನ್ನು ಸಂಕ್ಷಿಪ್ತವಾಗಿ ತಿಳಿಸಿ ಸರ್ವರನ್ನೂ ಸ್ವಾಗತಿಸಿದರು. ನಂತರ ಮಾಲಾರ್ಪಣೆ. ಎಲ್ಲ ಸಂಘ ಸಂಸ್ಥೆಗಳಿಂದ ಮಂತ್ರಿಗಳಿಗೆ ಮಾಲಾರ್ಪಣೆ. ಎಲ್ಲ ಜಾತಿ ಜನಾಂಗಗಳ ಮುಖಂಡರಿಂದಲೂ ಮಾಲಾರ್ಪಣೆ. ಹೀಗೆ ಮಾಲಾರ್ಪಣೆಗೇ ಅರ್ಧ ತಾಸು ಹೋಯ್ತು. ಮಂತ್ರಿಗಳ ಮುಂದೆ ಹೂಮಾಲೆಗಳು ರಾಶಿಯಾಗಿ ಬಿದ್ದವು. ಮಂತ್ರಿಗಳು ನಗುನಗುತ್ತಾ ತಲೆಬಗ್ಗಿಸಿ ಎಲ್ಲರ ಕೈಯಿಂದಲೂ ಹೂವಿನ ಹಾರ ಹಾಕಿಸಿಕೊಂಡು ಎಲ್ಲರನ್ನೂ ಸಂತುಷ್ಟಗೊಳಿಸಿದರು.

ಮಂತ್ರಿಗಳಿಗೆ ಮನವಿಪತ್ರ ಕೊಡಲು ಸಾಲಿನಲ್ಲಿ ನಿಂತವರ ಕಾಲುಗಳು ನೋಯುತ್ತಿದ್ದವು. ಇನ್ನೇನು ಸ್ವಲ್ಪ ಹೊತ್ತಿನಲ್ಲಿ ಮಂತ್ರಿಗಳ ಮುಂದೆ ನಿಂತಿರುತ್ತೇವೆ. ಮಂತ್ರಿಗಳು ತಮ್ಮ ಮನವಿಪತ್ರ ಪಡೆದು ಪರಿಹಾರ ಮಂಜೂರು ಮಾಡುತ್ತಾರೆ ಎಂದುಕೊಳ್ಳುತ್ತಿದ್ದರು. ಸಾಲಿನ ಕೊನೆಯಲ್ಲಿ ನಿಂತಿದ್ದ ಶಿವರುದ್ರ ಕೈಚೀಲದೊಳಗಿಂದ ಮನವಿ ಪತ್ರ ಹೊರತೆಗೆದು ಕೈಯಲ್ಲಿ ಹಿಡಿದುಕೊಂಡ ಈಗ ಮಾನ್ಯ ಮಂತ್ರಿಗಳು ಮನವಿಪತ್ರಗಳನ್ನು ಸ್ವೀಕರಿಸುತ್ತಾರೆ ಎಂದು ತಹಸಿಲ್ದಾರರು ಹೇಳಿದರು. ಮಾನ್ಯ ಮಂತ್ರಿಗಳು ಇನ್ನೇನು ಮನವಿ ಪತ್ರ ಸ್ವೀಕರಿಸಲು ಎದ್ದು ನಿಲ್ಲುವಷ್ಟರಲ್ಲಿ ಅವರಿಗೆ ಮುಖ್ಯ ಮಂತ್ರಿಗಳಿಂದ ವೈರಲೆಸ್ ಮೆಸ್ಸೇಜ ಬಂತು. ಮಂತ್ರಿಗಳು ಪೋಲಿಸ್ ಕಂಟ್ರೋಲ್ ರೂಮನ್ನು ಸಂಪರ್ಕಿಸಿದರು. ಸಾಲಿನಲ್ಲಿ ನಿಂತವರ ಎದೆ ಬಡಿದುಕೊಳ್ಳುತ್ತಿತ್ತು. ಮಂತ್ರಿಗಳು ತಹಸಿಲ್ದಾರರನ್ನು ಕರೆದು ಅವರ ಕಿವಿಯಲ್ಲಿ ಏನೋ ಹೇಳಿದರು. ತಹಸಿಲ್ದಾರರು ಧ್ವನಿವರ್ಧಕದ ಮುಂದೆ ಹೋಗಿ ''ಮಾನ್ಯ ಮಂತ್ರಿಗಳು ಅರ್ಜೆಂಟಾಗಿ ಬೆಂಗಳೂರಿಗೆ ಹೋಗಬೇಕಾಗಿದೆ'' ಎಂದು ಹೇಳುತ್ತಿದ್ದಂತೆಯೆ ಮಂತ್ರಿಗಳೇ ಎದ್ದುನಿಂತು ಧ್ವನಿವರ್ಧಕ್ಕಾಗಿಯೂ ಕಾಯದೆ ''ಮಹಾ ಜನಗಳೇ ನಿಮ್ಮ ಆಶೀರ್ವಾದ ಬಲದಿಂದಲೆ ನಾನು ಆರಿಸಿಹೋಗಿ ಮಂತ್ರಿಯಾಗಿದ್ದೇನೆ. ನಾನು ನಿಮ್ಮನ್ನು ಎಂದೂ ಮರೆಯುವಂತಿಲ್ಲ. ಈಗ ನನಗೆ ಇಷ್ಟು ಜನರ ಮನವಿಪತ್ರ ಸ್ವೀಕರಿಸಲು ಸಮಯವಿಲ್ಲ. ನಾಳೆ ಮುಂಜಾನೆ ಸಚಿವ ಸಂಪುಟದ ತುರ್ತು ಸಭೆಯಿದೆ. ಅದಕ್ಕಾಗಿ ನಾನು ಈ ಕೂಡಲೆ ಹೋಗಬೇಕು. ನಿಮ್ಮ ಮನವಿ ಪತ್ರಗಳನ್ನು ತಹಸಿಲ್ದಾರರು ಪಡೆದು ಪರಿಶೀಲಸಿ ನಿಮ್ಮ ನಿಮ್ಮ ವಿಳಾಸಕ್ಕೆ ಬರೆದು ತಿಳಿಸುತ್ತಾರೆ. ದಯವಿಟ್ಟು ಕ್ಷಮಿಸಿರಿ'' ಎಂದು ಎರಡೂ ಕೈಗಳನ್ನು ಮೇಲೆತ್ತಿ ಎಲ್ಲರಿಗೂ ನಮಸ್ಕರಿಸಿ ವೇದಿಕೆ ಬಿಟ್ಟು ಹೋದರು.

ಸಾಲಿನಲ್ಲಿ ನಿಂತವರೆಲ್ಲ ಕಕ್ಕಾಬಿಕ್ಕಿಯಾದರು. ಇದೇನು ''ಜನತಾ ದರ್ಶನ'' 'ಇದೇನು ಜನತಾ ದರ್ಶನ' ಎಂದು ಆಡಿಕೊಳ್ಳತೊಡಗಿದರು. ಮಂತ್ರಿಗಳನ್ನು ಬೀಳ್ಕೊಟ್ಟು ವೇದಿಕೆಗೆ ಬಂದ ತಹಸಿಲ್ದಾರರು ನೋಡುತ್ತಾರೆ. ಅಲ್ಲಿ ಮನವಿ ಪತ್ರ ಹಿಡಿದುಕೊಂಡವರ ಸಾಲೇ ಇಲ್ಲ. ಅವರೆಲ್ಲರೂ ನಿರಾಶರಾಗಿ ಹೋಗಿ ಬಿಟ್ಟಿದ್ದರು. ಮನವಿಪತ್ರ ಕೊಡಲು ಬಂದಿದ್ದವರೆಲ್ಲ ವೇದಿಕೆಯ ಬಳಿಗೆ ಬರಬೇಕೆಂದು ತಹಸಿಲ್ದಾರರು ಧ್ವನಿವರ್ಧಕದಲ್ಲಿ ಹೇಳಿದರು.

ಸ್ವಲ್ಪ ಹೊತ್ತಿನ ಹಿಂದೆ ಜನರಿಂದ ತುಂಬಿದ್ದ ತಹಸಿಲ್ ಕಾರ್ಯಾಲಯದ ಆವರಣ ಈಗ ನಿರ್ಜನವಾಗಿತ್ತು. ಮನವಿ ಪತ್ರ ಕೊಡಲು ಜನರು ಸಾಲಾಗಿ ನಿಂತ ಸ್ಥಳದಲ್ಲಿ ಹಾಗೇ ಉದ್ದಕ್ಕೆ ಕಾಗದದ ಚೂರುಗಳು ಬಿದ್ದಿದ್ದವು. ಯಾರೂ ಮನವಿ ಪತ್ರವನ್ನು ಜೊತೆಗೆ ಒಯ್ದಿರಲಿಲ್ಲ. ಅಲ್ಲೇ ಹರಿದು ಹಾಕಿದ್ದರು. ಅವೇ ಆ ಕಾಗದದ ಚೂರುಗಳು. ಶಿವರುದ್ರನ ಮನವಿ ಪತ್ರದ ಚೂರುಗಳೂ ಆ ಚೂರುಗಳ ರಾಶಿಯಲ್ಲಿದ್ದವು.

■ **ಮಾಣಿಕರಾವ ಪವಾರ, ಗುಲಬರ್ಗಾ**

ಮಳೆಗೂ ಕಾನೂನು

ನಗರವಾಸಿಗಳು ಮಳೆ ಬಂದರೆ ಪರದಾಡುತ್ತಾರೆ. ಮಳೆ ನಿಲ್ಲಲು ಕಾಯುತ್ತಾ ''ಈಗಲೇ ಈ ಮಳೆ ಬರಬೇಕಿತ್ತಾ?'' ಎಂದು ಗೊಣಗುತ್ತಾರೆ. ಅಂದರೆ ನ್ಯಾಯಾಧೀಶನೊಬ್ಬ ಮಳೆಯನ್ನೇ ತನ್ನ ಆದೇಶದಿಂದ ನಿಲ್ಲಿಸಿದ ಅಪರೂಪದ ಘಟನೆ ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿ ನಡೆಯಿತು.

1986ರಲ್ಲಿ ಒಂದು ಪ್ರಕರಣ ಸ್ಯಾನ್ ಫ್ರಾನ್ಸಿಸ್ಕೋ ನ್ಯಾಯಾಲಯದಲ್ಲಿ ವಿಚಾರಣೆಗೆ ಬಂತು. ಅಂದು ಧಾರಾಕಾರ ಮಳೆಯಿಂದಾಗಿ ಜ್ಯೂರಿಗಳು ನ್ಯಾಯಾಲಯಕ್ಕೆ ಬರಲಾಗಲಿಲ್ಲ. ಜಿಲ್ಲಾ ನ್ಯಾಯಾಧೀಶ ಸಾಮ್ಯುಯಲ್ ಕಿಂಗ್ 'ಮುಂದಿನ ಮಂಗಳವಾರದೊಳಗೆ ಮಳೆ ನಿಲ್ಲಬೇಕೆಂದು ನಾನು ಈ ಮೂಲಕ ಆದೇಶಿಸುತ್ತೇನೆ' ಎಂದು ಆದೇಶ ಹೊರಡಿಸಿದರು.

ಅದಾದ ನಂತರ ಆ ಭಾಗದಲ್ಲಿ ಐದು ವರ್ಷ ಕಾಲ ಮಳೆಯೇ ಆಗದೆ ಬರ ಕಾಣಿಸಿತು. ಕೆಲವು ಸಹೋದ್ಯೋಗಿಗಳು ನ್ಯಾಯಾಧೀಶ ಕಿಂಗ್ ಹೊರಡಿಸಿದ್ದ ಆದೇಶದಿಂದಲೇ ಹೀಗಾಗಿದೆ ಎಂದು ನೆನಪಿಸಿದಾಗ ಆತ ಮತ್ತೊಂದು ಆದೇಶ ಹೊರಡಿಸಿದರು.

'ಈ ಹಿಂದೆ ಮಳೆ ನಿಲ್ಲಬೇಕೆಂದು ಹೊರಡಿಸಿದ್ದ ಆದೇಶ 1991ರ ಫೆಬ್ರವರಿ 14ರಿಂದ ಜಾರಿಗೆ ಬರುವಂತೆ ಹಿಂದೆ ಪಡೆದಿದ್ದೇನೆ. ಕ್ಯಾಲಿಫೋರ್ನಿಯಾದಲ್ಲಿ 1991ರ ಫೆಬ್ರವರಿ 27ರಿಂದ ಮಳೆ ಆಗುವಂತೆ ಹೊಸದಾಗಿ ಆದೇಶಿಸುತ್ತಿದ್ದೇನೆ'.

ನಂಬಿದರೆ ನಂಬಿ, ಬಿಟ್ಟರೆ ಬಿಡಿ. ನ್ಯಾಯಾಧೀಶರು ಸೂಚಿಸಿದ್ದ ದಿನದಂದೇ ಆ ಭಾಗದಲ್ಲಿ ಹಿಂದೆಂದೂ ಕಂಡಿರದಷ್ಟು ಮಳೆ ಆಯಿತು.

ಮುತ್ತಿನ ಬೆಲೆ

ಬಾಂಗ್ಲಾದ ತರುಣನೊಬ್ಬ ತನ್ನೂರಿನ ಶಾಲಾ ಬಾಲಕಿಯನ್ನು ಬಲವಂತದಿಂದ ಮುತ್ತಿಟ್ಟ. ಅದಕ್ಕೀಗ ಆತ 12500 ಟಕಾ ದಂಡ ತೆರಬೇಕಾಗಿದೆ. ಅವನ ಬಡ ತಂದೆ, ತಾಯಿ, ಕುಟುಂಬದವರ ಐದು ತಿಂಗಳ ಆದಾಯವೇ ಈ ದಂಡದ ಪಾಲಾಗಲಿದೆ.

ಗಾಯ್‌ಬಂಧಾ ಜಿಲ್ಲೆಯ ಹಳ್ಳಿಯೊಂದರ ತರುಣ ಮೊಹಮ್ಮದ್ ಅಫ್ಜಲ್. ಆತ ನೆರೆ ಮನೆಯ ಹುಡುಗಿ, ಶಾಲೆಗೆ ಹೋಗುತ್ತಿದ್ದಾಗ ಸಮಯ ಕಾಯ್ದು ಭತ್ತದ ಗದ್ದೆಯಲ್ಲಿ ಅಡ್ಡ ಹಾಕಿ ಚುಂಬಿಸಿಬಿಟ್ಟ. ಅದನ್ನು ಹಳ್ಳಿಯ ಹಿರಿಯರ ಮುಂದೆ ಒಪ್ಪಿಕೊಂಡ. ಅದಕ್ಕೆ ಈ ದಂಡ.


'ಹೋದರೆ ಹೋಗಲಿ ಬಿಡಿ. ಪೋಲೀಸರಿಗೆ ಈ ವಿಚಾರ ತಿಳಿದು ಕೇಸು ಹಾಕಿದ್ದರೆ, ನ್ಯಾಯಾಲಯ ಹತ್ತು ವರ್ಷದ ಸೆರೆವಾಸ ಶಿಕ್ಷೆ ವಿಧಿಸುತ್ತಿತ್ತು' ಎಂದು ಅವನ ಹಿರಿಯರು ಹೇಳುತ್ತಿದ್ದಾರೆ.

ಜಿರಲೆ ಸಾಕುವ ಭೂಪ

ಜಿರಲೆ ಎಂದರೆ ಅಸಹ್ಯಪಡುವ ಗಂಡಸರು, ಹುಲಿ ಕಂಡಂತೆ ಚೀರುವ ಮಹಿಳೆಯರು ಸಾಮಾನ್ಯ.

ವಿಚಿತ್ರ ಜಗತ್ತು





ಆದರೆ ಇಂಥ ಅಸಹ್ಯ ಜೀವಿಗಳನ್ನೇ ತನ್ನ ಫಾರಂನಲ್ಲಿ ಸಾಕಿ ತಿಂಗಳಿಗೆ 540 ಡಾಲರ್‌ವರೆಗೆ ಗಳಿಸುತ್ತಿರುವ ಭೂಪನೊಬ್ಬ ಮಲೇಷಿಯಾದ ರಾಜಧಾನಿ ಬ್ಯಾಂಕಾಕ್ ಸಮೀಪವೇ ಇದ್ದಾನೆ.

ಮೂವತ್ಮೂರು ವರ್ಷದ ಸೋಂಕಿಯಾಟ್, ಅರ್ಥಿಕ ಹಿಂಜರಿತದಿಂದ ತತ್ತರಿಸಿರುವ ಮಲೇಷಿಯಾದಲ್ಲಿ ಬದುಕಲು ಕಂಡುಕೊಂಡ ದಾರಿ ಇದು. ತನ್ನ ಫಾರಂನ ಎರಡು ಕೇಂದ್ರಗಳಲ್ಲಿ ಸಾವಿರಾರು ಜಿರಲೆ ಸಾಕಿ ಬೆಳೆಸುವ ಈತ, ಅವನ್ನು ಕೊಂದು ಒಣಗಿಸುತ್ತಾನೆ. ಮೀನು ಹಿಡಿಯುವವರು ಗಾಳಕ್ಕೆ ಚುಚ್ಚಲು ಈ ಜಿರಲೆಗಳನ್ನು ಒಂಬತ್ತು ಸೆಂಟ್ಸ್‌ಗೆ ಒಂದರಂತೆ ಖರೀದಿಸುತ್ತಾರೆ.

ಇಂಡಿಯಾದಿಂದ ಬಿಸಿನೆಸ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಡಿಗ್ರಿ ಪಡೆದು ಎರಡು ವರ್ಷದ ಹಿಂದೆ ತನ್ನೂರಿಗೆ ಬಂದ ಸೋಂಕಿಯಾಟ್‌ಗೆ ಎಲ್ಲೂ ಕೆಲಸ ದೊರೆಯಲಿಲ್ಲ. ದೇಶದ ಆರ್ಥಿಕ ಹಿಂಜರಿತದಿಂದಾಗಿ ನೂರಾರು ನಿರುದ್ಯೋಗಿಗಳು ಸೃಷ್ಟಿಯಾಗಿದ್ದರು.

ಮೀನು ಹಿಡಿಯುವ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿದ್ದ ಈತ ಸತ್ತ ಜಿರಲೆಗಳನ್ನು ಗಾಳಕ್ಕೆ ಚುಚ್ಚಿ ಯಶಸ್ವಿಯಾಗಿ ಮೀನು ಹಿಡಿಯುತ್ತಿದ್ದ. ಇದನ್ನೇ ಜಾಣ್ಮೆಯಿಂದ ಏಕೆ ವ್ಯಾಪಾರಕ್ಕೆ ಬಳಸಬಾರದು ಎಂದು ಯೋಚಿಸಿದ. ಆಗ ಎಲ್ಲರೆಲ್ಲ ಕೃತಕವಾಗಿ ನಿರ್ಮಿಸಿದ ಕೀಟ, ಕೆಲ ಕೃತಕ ಮೀನಿನ ಬೇಟೆ ಆಡುತ್ತಿದ್ದರು. ಇಷ್ಟಾದರೂ ಇಂಟರ್‌ನೆಟ್‌ನಲ್ಲಿ ಹುಡುಕಾಡಿ, ಯಾವ್ಯಾವ ಕೀಟಗಳನ್ನು ಮೀನು ಹಿಡಿಯಬಹುದೆಂದು ಪಟ್ಟಿ ಮಾಡಿಕೊಂಡ. ಹಲವು ಪ್ರಯೋಗಗಳ ನಂತರ ಜಿರಲೆಯೇ ಯಶಸ್ವಿಯಾಯಿತು.

ಈಗ ವಾರಕ್ಕೆ ತನ್ನ ಎರಡು ಫಾರಂಗಳಲ್ಲಿ ಮೂರು ಸಾವಿರ ಜಿರಲೆ ಉತ್ಪಾದಿಸುತ್ತಾನೆ. ಇವು ಕೃತಕ ಬೇಟೆಯ ಕೀಟಗಳಿಗಿಂತ ಅಗ್ಗ. ಹೀಗಾಗಿ ಸೋಂಕಿಯಾಟ್ ಯಶಸ್ಸು ಪಡೆದಿದ್ದಾನೆ.

ಕೆಂಪು ಬಣ್ಣದ ಮಹಿಮ

ಕೆಂಪು ಸಿಟ್ಟಿನ ಪ್ರತೀಕ. ಆದರೆ, ಈ ಬಣ್ಣವನ್ನು ನಾನಾ ದೇಶಗಳಲ್ಲಿ ನಾನಾ ರೀತಿ ಬಳಸುತ್ತಾ ಬಂದಿದ್ದಾರೆ. ನಮ್ಮಲ್ಲಿ ಅಂಚೆ ಕಚೇರಿ, ಪೋಲೀಸು ಠಾಣೆಗಳಿಗೆ ಬಳಸುವುದು ಇದೇ ಕೆಂಪು ಬಣ್ಣ. ಜಪಾನಿನ ಶಿಂಟೋ ಮತದ ಅನುಯಾಯಿಗಳಿಗೆ ಕೆಂಪು ಬಣ್ಣ ಪವಿತ್ರ. ಫ್ರಾನ್ಸಿನಲ್ಲಿ ಕಾನೂನು ಕಾಲೇಜುಗಳ ಬಣ್ಣ ಕೆಂಪು. ಚೀನಾದಲ್ಲಿ ಮದುವೆಯ ಚಿಹ್ನೆಯಾಗಿ ಕೆಂಪು ಬಳಸುತ್ತಾರೆ.

ಮಕ್ಕಳಾಗದಿರಲು ಬ್ಯಾಂಡೇಜ್

ಇನ್ನು ಮುಂದೆ ಸಂತಾನ ನಿಯಂತ್ರಣಕ್ಕೆ ಗುಳಿಗೆ ನುಂಗುವ ಗೋಜಿಲ್ಲ. ವಾರಕ್ಕೊಂದು ಬ್ಯಾಂಡೇಜಿನಂಥ ಪಟ್ಟಿಯನ್ನು ಚರ್ಮದ ಮೇಲೆ ಅಂಟಿಸಿಕೊಂಡರೆ ಸಾಕು. ಇದರಿಂದ ಮಕ್ಕಳಾಗುವ ಸಂಭವ ತಪ್ಪುತ್ತದೆ.

ಇಂಥ ಸಂತಾನ ನಿಯಂತ್ರಣ ಬ್ಯಾಂಡೇಜು ಪಟ್ಟಿ ತಯಾರಿಸಿರುವವರು ಮತ್ಯಾರೂ ಅಲ್ಲ, ಬ್ಯಾಂಡೇಜುಗಳ ತಯಾರಿಕೆಗೆ ಹೆಸರಾದ ಜಾನ್ಸನ್ ಅಂಡ್ ಜಾನ್ಸನ್ ಕಂಪೆನಿಯವರು. ಈಗಾಗಲೇ ಮಾರುಕಟ್ಟೆಗೆ ಇದನ್ನು ತರಲು ಅರ್ಜಿ ಹಾಕಿಕೊಂಡಿರುವ ಕಂಪೆನಿ, ಆದಷ್ಟು ಬೇಗ ಈ ಸಂತಾನ ನಿಯಂತ್ರಣ ಪಟ್ಟಿಗಳನ್ನು ಸಾರ್ವಜನಿಕರ ಬಳಕೆಗೆ ಬಿಡುಗಡೆ ಮಾಡಲಿದೆ. ಇದು ಸಂತಾನ ನಿಯಂತ್ರಣ ಗುಳಿಗೆಯ ಹಾಗೇ ಯಶಸ್ವಿ ಹಾಗೂ ಗುಳಿಗೆ ನುಂಗುವ ಕಿರಿಕಿರಿಯಿಂದ ಮುಕ್ತಿಯನ್ನು ಕಾಪಾಡುತ್ತದೆ.

ಇಷ್ಟೆಲ್ಲ ನಂಬಿಕೆ ಇದ್ದರೂ, ಕಂಪೆನಿ ಮತ್ತೊಂದು ಸುತ್ತಿನ ಅಂತಿಮ ಪ್ರಯೋಗ ಮುಂದುವರಿಸಿದೆ.

■ ವೆಂಕಟೇಶ ಚಿನ್ನವಾಸರು



ಯಾರಿಗೂ ತಟ್ಟದಿರಲಿ ಇಂಥ ದುಃಖ

ವಿಸ್ಕಿಯಂಥ ಒಂದು ಸಣ್ಣ ಅಭ್ಯಾಸ ಮನುಷ್ಯ ಜೀವಿಯನ್ನೇ ಬಲಿತೆಗೆದುಕೊಳ್ಳಬಹುದೆಂಬ ವಿಚಾರ ನನ್ನನ್ನು ಕಂಗೆಡಿಸುತ್ತದೆ. ನನಗೆ ನನ್ನದೇ ಮಿತಿಗಳಿದ್ದವು. ಅಜ್ಞಾನಗಳಿದ್ದವು. ಸ್ವಲ್ಪ ಜಾಗರೂಕ ಆಗಿದ್ದರೆ, ಧೈರ್ಯವಾಗಿದ್ದರೆ ನಾನು ತಂದೆಯವರನ್ನು ಬದುಕಿಸಿಕೊಳ್ಳಬಹುದಿತ್ತೋ ಏನೋ!

ಇಂಥದೊಂದು ವಿಚಾರ ನಾನು ಬರೆಯಬಹುದೆಂಬ ಕಲ್ಪನೆಯೂ ನನಗೆ ಇರಲಿಲ್ಲ. ಬಹುಶಃ ನನ್ನ ತಂದೆ ಬದುಕಿದ್ದರೆ ಇದನ್ನು ಬರೆಯುವ ಅಗತ್ಯವೂ ಇರುತ್ತಿರಲಿಲ್ಲ. ಇಪ್ಪತ್ತೈದು ವರ್ಷದ ನಾನು ತಂದೆಯನ್ನು ಕಳೆದುಕೊಂಡೆ. ಹಾಗೆ ಅದು ಆಗಬೇಕಾದ್ದು ಇರಲಿಲ್ಲ. ನನ್ನ ಹಾಗೆ ಬೇರೆ ಯಾರಿಗೂ ಆಗದಿರಲಿ ಎಂಬ ಕಾರಣಕ್ಕಷ್ಟೇ ಇದನ್ನು ದಾಖಲೆಯಾಗಿ ಉಳಿಸುತ್ತಿದ್ದೇನೆ.

ಮದರಾಸಿನಲ್ಲಿ ಹುಟ್ಟಿ, ಬೆಳೆದ ನನಗೆ ಕಂಪ್ಯೂಟರ್ ಸೈನ್ಸ್‌ನಲ್ಲಿ ಡಿಗ್ರಿ ಮುಗಿಸಿದ ಮೇಲೆ ಬೆಂಗಳೂರಿನಲ್ಲಿ ಕೆಲಸ ಸಿಕ್ಕಿತು. ನನ್ನ ತಂದೆಗೆ ತುಂಬಾ ಸಂತೋಷವಾಯಿತು. ಹೆಸರಾಂತ ವಕೀಲರಾದ ಅವರು, ಆ ಸಂದರ್ಭಕ್ಕೆಂದೇ ದೊಡ್ಡ ಪಾರ್ಟಿ ಕೂಡ ಏರ್ಪಡಿಸಿದ್ದರು. ಅದೆಷ್ಟೇ ನನಗೆ ಸಂತಸದ ಸಂದರ್ಭ ಆಗಿದ್ದರೂ, ಅವತ್ತಿನ ಪಾರ್ಟಿಯ ಬಗ್ಗೆ ನಾನು ಉತ್ಸಾಹಿತನಾಗಿರಲಿಲ್ಲ. ಕೆಲವು ದಿನಗಳಿಂದ ತಂದೆಯ ಮೂಡ್ ಸರಿ ಇರುತ್ತಾ ಇರಲಿಲ್ಲ. ಅವರ ಕೈ ನಡುಗುತ್ತಿತ್ತು. ತಿಂಗಳ ಹಿಂದೆ ಅವರು ಡಾಕ್ಟರೊಬ್ಬರಿಂದ ಚಿಕಿತ್ಸೆ ಪಡೆಯುತ್ತಾ ಇದ್ದರು. ''ಈಗೆಲ್ಲ ಸರಿಯಾಗಿದೆ. ಚಿಂತೆ ಏನೂ ಇಲ್ಲ'' ಎಂದು ಅವರು ಹೇಳುತ್ತಾ ಇದ್ದರೂ, ತಂದೆಯವರು ಏನೋ ಮುಚ್ಚಿಡುತ್ತಾ ಇದ್ದಾರೆ ಅನ್ನಿಸುತ್ತಾ ಇತ್ತು.

''ನಿಮ್ಮಪ್ಪ ಅಷ್ಟು ವೀಕ್ ಅಂತ ಅಂದ್ಕೊಂಡಿದಿಯೇನೋ! ನೋಡ್ತಾ ಇರು. ಒಂದು ಹನಿ ವಿಸ್ಕಿ ಮುಟ್ಟಿದರೆ ಕೇಳು ಪಾರ್ಟೀಲಿ...'' ಎಂದು ಅವರು ನನ್ನನ್ನು ಸಮಾಧಾನಿಸಲು ಯತ್ನಿಸಿದರೂ, ನನಗಂತೂ ನಂಬಿಕೆ ಇರಲಿಲ್ಲ.

ವಿಚಿತ್ರವೆಂದರೆ ಅವತ್ತು ಪಾರ್ಟಿಯಲ್ಲಿ ಅವರು ಒಂದೇ ಒಂದು ಹನಿ ವಿಸ್ಕಿಯನ್ನೂ ಮುಟ್ಟಿರಲಿಲ್ಲ. ನನಗೆ ಹೆಮ್ಮೆ, ಸಂತೋಷ.

''ಅಪ್ಪಾ, ನೀವು ನಿಜವಾಗಲೂ ಗ್ರೇಟ್'' ಎಂದು ಹೇಳಬೇಕೆನ್ನಿಸಿತು. ಆಗಲೇ ಆ ಘಟನೆ ನಡೆದಿದ್ದು. ಒಳಗಿನ ರೂಮಿನಲ್ಲಿ ಫೋನ್ ಇತ್ತು. ಅದು ರಿಂಗಾಗುತ್ತಿದ್ದುದು ಗಮನಿಸಿ, ಉತ್ತರಿಸಲೆಂದು ನಾನು ಒಳಗೆ ಅಡಿಯಿಡಬೇಕು, ರೂಮಿನ ಮೂಲೆಯಲ್ಲಿ ನಿಂತ ತಂದೆ, ಪುಸ್ತಕಗಳ ಸಂದಿಯಿಂದ ವಿಸ್ಕಿಯ ಬಾಟಲು ಎತ್ತಿಕೊಂಡು ಗಬಗಬನೆ ಒಂದಿಷ್ಟು ಬಾಯಿಗೆ ಸುರಿದುಕೊಳ್ಳುತ್ತಾ ಇದ್ದುದು ಕಾಣಿಸಿತು. ನನಗೆ ಮನಸ್ಸು ತಡೆಯಲಿಲ್ಲ. ಆದರೂ ನಿಗ್ರಹಿಸಿಕೊಂಡು, ಕಂಡೂ ಕಾಣದವನ ಹಾಗೆ ಹಿಂದೆ ಬಂದು ಬಿಟ್ಟೆ.

ಕದಿಯುವಾಗ ಸಿಕ್ಕುಬಿದ್ದ ಕಳ್ಳನನ್ನು ಹಿಡಿದು ದಂಡಿಸುವಂತೆ ನಾನು ಗಲಾಟೆ ಮಾಡಬಹುದಿತ್ತು. ಆದರೆ, ತೀರಾ ಜಂಭದ ವ್ಯಕ್ತಿಯಾದ ತಂದೆಗೆ ಅದರಿಂದ ಒಳ್ಳೆಯದು ಆಗುವುದಕ್ಕಿಂತ ಹೆಚ್ಚಾಗಿ ಕೆಟ್ಟದ್ದೇ ಆಗುತ್ತದೆ ಅಂತ ನನಗನ್ನಿಸಿತು.

ಅವರು ಹೆಸರಾಂತ ವಕೀಲರಾದ ಹಾಗೆ, ನಾನಾ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು. ಸಂಗೀತ, ಸಮಾಜ ಸೇವೆ ಎಂದರೆ ತುದಿಗಾಲಲಲ್ಲಿ ನಿಂತಿರುತ್ತಾ ಇದ್ದರು. ದೊಡ್ಡ ಹೆಸರಿತ್ತು. ಆದಾಯವೂ ದೊಡ್ಡದಿತ್ತು. ಅದೇನಾಯಿತೋ! ನನ್ನ ತಾಯಿ ನಾನು ಹದಿನೈದು ವರ್ಷದ ಹುಡುಗನಿದ್ದಾಗ ತೀರಿಕೊಂಡರು. ಅದು ತಂದೆಗೂ ದೊಡ್ಡ ಆಘಾತ. ಮನೆಯಲ್ಲಿ ಹುಡುಗನನ್ನು ನೋಡಿಕೊಳ್ಳಲು, ಗೃಹಕೃತ್ಯ ಸರಿದೂಗಿಸಲು ಒಬ್ಬರು ಬೇಕು ಎಂದು ಆಪ್ತರು, ನೆಂಟರಿಷ್ಟರು ಒತ್ತಾಯಿಸಿ ತಂದೆಯವರಿಗೆ ಇನ್ನೊಂದು ಮದುವೆಯೇನೋ ಮಾಡಿದರು. ಆದರೆ, ಅದರಿಂದ ಅವರ ವೈಯಕ್ತಿಕ ಬದುಕಿನಲ್ಲಿ ಸುಧಾರಣೆ ಕಾಣಲಿಲ್ಲ. ನನ್ನ ತಾಯಿ ಬದುಕಿದ್ದಾಗ ಯಾವಾಗಲೋ ಒಮ್ಮೆ, ಸ್ನೇಹಿತರು, ಸಹೋದ್ಯೋಗಿಗಳ ಬಲವಂತಕ್ಕೆ ಎಂದು ವಿಸ್ಕಿಯ ರುಚಿ ನೋಡುತ್ತಿದ್ದ ಅವರು ನಿತ್ಯ ಎಂಬಂತೆ ಕುಡಿಯತೊಡಗಿದರು.

ಫೋನ್ ಮಾಡಿ ಕ್ರೇಟ್‌ಗಟ್ಟಲೆ ವಿಸ್ಕಿಯನ್ನು ಮನೆಗೇ ತರಿಸಿಕೊಳ್ಳುತ್ತಾ ಇದ್ದರು. ಮೊದಲು ಮೊದಲು ರಾತ್ರಿ ಕೆಲಸವೆಲ್ಲ ಮುಗಿದ ನಂತರ ಒಂದೆರಡು ಪೆಗ್ ವಿಸ್ಕಿ ಕುಡಿಯುತ್ತಾ ಇದ್ದವರು, ಬರುಬರುತ್ತಾ ವಿಸ್ಕಿ ಇಲ್ಲದೆ ಯಾವೊಂದು ಕೆಲಸವೂ ಸಾಧ್ಯವೇ ಇಲ್ಲ ಎಂಬ ಸ್ಥಿತಿಗೆ ಬಂದರು.

ಆ ಸಮಯಕ್ಕೇ ಅವರು ಡಾಕ್ಟರಿಂದ ಚಿಕಿತ್ಸೆ ಪಡೆಯಲು ಆರಂಭಿಸಿದ್ದು, ಅವತ್ತು ಪಾರ್ಟಿ ಹೇಗೆ ಮುಗಿಸಿದೆನೋ! ಮರುದಿನ ಬೆಳಿಗ್ಗೆ ತಂದೆಯವರು ಹೊರಗೆ ಹೋಗಿದ್ದಾಗ ಸುಮ್ಮನೇ ಲೈಬ್ರರಿಯಲ್ಲಿ, ಅವರ ರೂಮಿನಲ್ಲಿ ತಡಕಾಡಿದ. ಪುಸ್ತಕಗಳ ಸಂದಿಯಲ್ಲಿ, ಬೀರುವಿನ ಬಟ್ಟೆಗಳ ನಡುವೆ, ಅವರ ಕೇಸಿನ ಫೈಲುಗಳ ನಡುವೆ ಬಚ್ಚಿಟ್ಟಿದ್ದ ನಾನಾ ಬಾಟಲುಗಳನ್ನು ಕಣ್ಣಾರೆ ಕಂಡ ಮೇಲೆ, ಮನಸ್ಸು ತೀರಾ ಪೆಚ್ಚೆನಿಸಿತು. ಚಿಕ್ಕಮ್ಮನಿಗೆ ಇದೆಲ್ಲ ತಿಳಿಯುವಂಥದಲ್ಲ. ಅವರು ಏನಾದರೊಂದು ಮನೆಗೆಲಸ ಮಾಡುತ್ತಾ ಇದ್ದು ಬಿಡುತ್ತಾರೆ.

ತೀರಾ ದುಃಖಿತ ಹೃದಯದಿಂದಲೇ ನಾನು ಬೆಂಗಳೂರಿಗೆ ಬಂದೆ. ಆಗಾಗ ತಂದೆಯವರು ಫೋನ್ ಮಾಡಿ ಯೋಗಕ್ಷೇಮ ವಿಚಾರಿಸುತ್ತಾ ಇದ್ದರು. ಅವರ ಮಾತಲ್ಲಿ ತೊದಲಿಕೆ ಇರುತ್ತಾ ಇತ್ತು. ಬೆಳಿಗ್ಗೆ ಬೆಳಿಗ್ಗೆಯೇ ಅವರು ಕುಡಿಯುತ್ತಾರೆ ಎಂಬುದು ನನಗೆ ಖಚಿತವಾಗಿತ್ತು. ಆದರೆ, ತಂದೆಯ ಎದುರೇ ನಿಂತು ಏನೊಂದೂ ಹೇಳಲಾರದ ನಾನು ಒಳಗೊಳಗೇ ನೋಯುತ್ತಾ ಇದ್ದೆ.

ಅಂಥದರಲ್ಲಿ ಒಂದು ದಿನ ಅವರು ಫೋನ್ ಮಾಡಿ ''ನಾನು ಆಸ್ಪತ್ರೆ

ಸೇರಿಕೊಂಡಿದೀನಿ ಕಣೋ. ಸ್ವಲ್ಪ ಕಷ್ಟ ಆಗತಾ ಇತ್ತು, ಏನಿಲ್ಲ ಸ್ವಲ್ಪ ಹೊಟ್ಟೆ ಉರಿ, ಕೆಮ್ಮು, ನೀನೇನು ಗಾಬರಿ ಆಗಬೇಡ. ಇಲ್ಲಿಗೆ ಬರೋಕ್ಕೂ ಹೋಗಬೇಡ....." ಎಂದು ಅವರಂದಾಗ ನನಗೆ ಅವರು ಆಸ್ಪತ್ರೆಯಿಂದಲೇ ಮಾತಾಡುತ್ತಿದ್ದಾರೆ ಎಂಬ ಕಲ್ಪನೆ ಕೂಡ ಇರಲಿಲ್ಲ. ಬೆಳಗಿನ ಅಷ್ಟು ಹೊತ್ತಿಗೇ ಚೆನ್ನಾಗಿ ಕುಡಿದು, ಮನೇಲೇ ಮಾತಾಡ್ತಾ ಇದ್ದಾರೆ ಅನ್ನಿಸಿತ್ತು. ಸ್ವಲ್ಪ ಹೊತ್ತು ಬಿಟ್ಟು ಮತ್ತೆ ಮನೆಗೆ ಫೋನ್ ಮಾಡಿದಾಗ, ಅವರು ಆಸ್ಪತ್ರೆ ಸೇರಿರುವುದು ನಿಜ ಎಂದು ಮನೆಯಲ್ಲಿ ಇದ್ದವರು ಹೇಳಿದರು.

ಮನಸ್ಸು ತಡೆಯದೇ ಹೊರಟುಬಿಟ್ಟೆ. ನಮ್ಮ ಪರಿಚಯದವರೇ ಆದ ಡಾ|| ಶ್ರೀನಿವಾಸನ್ ಅವರ ನರ್ಸಿಂಗ್ ಹೋಂಗೆ ಅವರು ಸೇರಿದ್ದರು. ಹೋಗಿ ಡಾಕ್ಟರನ್ನು ಕಂಡಾಗ ಅವರು 'ಎಲ್ಲ ಕೈ ಮೀರಿದೆ' ಎಂಬಂತೆ ಹೇಳಿದ್ದು ಅಲ್ಲದೆ, 'ಇನ್ನು ಕೆಲವು ದಿವಸ ಬದುಕಿದರೆ ಹೆಚ್ಚು'' ಎಂದಾಗ ನನಗೆ ಆಕಾಶ ತಲೆಯ ಮೇಲೇ ಬಿದ್ದಹಾಗನ್ನಿಸಿತು.

''ಲಿವರ್‌ನ ಸಿರ್ರೋಸಿಸ್ ಆಗಿದೆ. ಲಿವರ್ ಬರೀ ಒಂದು ಒಣ ಚರ್ಮದ ತುಂಡಿನ ಹಾಗೆ ಆಗಿದೆ. ಅದರಿಂದ ಏನೂ ಕೆಲಸ ಆಗತಾ ಇಲ್ಲ. ಅದರಿಂದಾಗಿ ಕಿಡ್ನಿ ಕೂಡ ವಿಫಲವಾಗ್ತಾ ಇದೆ. ಹೃದಯದ ಕೆಲಸ ತೀರಾ ಕಷ್ಟ'' ಎಂದೆಲ್ಲ ಡಾಕ್ಟರು ವಿವರಿಸುತ್ತಾ ಇದ್ದಾಗ, ಅದು ನನ್ನ ತಂದೆಯ ವಿಚಾರವೋ, ಬೇರೆ ಯಾವುದೋ ರೋಗಿಯ ಕೇಸ್ ಹಿಸ್ಟರಿಯೋ ಎಂಬ ಗುಮಾನಿ ನನಗೆ. ವಿಸ್ಕಿಯನ್ನೋ, ರಮ್ಮನ್ನೋ ಕುಡಿಯೋದರಿಂದ ಪ್ರಾಣವೇ ಹೋಗುವಂಥ ಅಪಾಯ ಅಂತೂ ಆಗೋದಿಲ್ಲ ಎಂಬ ಅಪಾರ ನಂಬಿಕೆ ನನಗಿತ್ತು.

ವಾರ್ಡಿನಲ್ಲಿ ಮಲಗಿದ್ದ ತಂದೆಯವರನ್ನು ಕಂಡಾಗ, ನನ್ನ ಭಾವನೆಯೆಲ್ಲ ಸುಳ್ಳಾದವು. ಎಲುಬಿಗಂಟಿದ ಚರ್ಮ ಸುಕ್ಕುಗಟ್ಟಿತ್ತು. ಅಸಹ್ಯ ಹಳದಿ ಮಿಶ್ರಿತ ಹಸಿರು ಬಣ್ಣ ದೇಹದ ತುಂಬ ವ್ಯಾಪಿತ್ತು. ಒಬ್ಬ ಸುಂದರ ಮನುಷ್ಯನ ಮೈ ಬಣ್ಣ ಹೀಗಾಗಬಹುದೆಂಬ ಕಲ್ಪನೆ ಕೂಡ ನನಗೆ ಇರಲಿಲ್ಲ. ಕಣ್ಣುಗಳಿಗೆ ಬೆಳಕು ಬಿಟ್ಟರೆ ಹಿಂಸೆಯಾಗುತ್ತದೆ ಎಂದು ಪಟ್ಟಿ ಬಿಗಿದಿದ್ದರು.

ಮೃದುವಾಗಿ ಮೈ ನೇವರಿಸಿದೆ. ಉಸಿರು ಎಳೆಯಲು ಕಷ್ಟವಾಗುತ್ತಿತ್ತು. ಕಿಡ್ನಿ ವಿಫಲವಾದ್ದರಿಂದ ಹೊಟ್ಟೆಯೆಲ್ಲ ಉಬ್ಬರಿಸಿತ್ತು. ಯಾವುದೋ ಔಷಧಿಯ ಪ್ರಭಾವದಿಂದ ಅವರು ಅರೆಪ್ರಜ್ಞಾವಸ್ಥೆಯಲ್ಲಿ ಎಂಬಂತೆ ಇದ್ದರು. ಮಾರನೆಯ ದಿನ, ಮಗ ಬಂದಿದ್ದಾನೆ ಎಂದು ತಿಳಿದು ಕಣ್ಣು ಮುಚ್ಚಿದ ಪಟ್ಟಿ ತೆಗೆಸಿಕೊಂಡರು. ನನಗೆ ಭಯದಿಂದ ಚೀರುವಂತಾಯಿತು. ಕಣ್ಣು ಆಚೆಗೆ ಸಿಡಿಯಲು ಸಿದ್ಧವಾದಂತೆ ಕಂಡವು. ಎಷ್ಟೋ ಸಲ ಅವರು ಕುಡಿದಾಗ ಕೆಂಪಾದ ಕಣ್ಣುಗಳನ್ನ ನಾನು ನೋಡಿದ್ದೆ. ಆದರೆ, ಅವತ್ತು ಕಣ್ಣಿನ ಗುಡ್ಡೆಗಳು ರಕ್ತದಲ್ಲಿ ಅದ್ದಿ ತೆಗೆದಂತೆ.... ಓ! ದೇವರೇ! ಹಸಿರುಗಟ್ಟಿದ ಮೈ, ಸಿಡಿಯುವಂತಿರುವ ಕಣ್ಣುಗುಡ್ಡೆ.... ರಕ್ತನಾಳಗಳೆಲ್ಲ ಉಬ್ಬಿ ಸೂಸಿದ ಕೆಂಪು.... ತುಟಿ ಕಚ್ಚಿ ನಿಂತು ಎಲ್ಲ ಸಹಿಸಿದೆ ಎಂದು ಕಾಣುತ್ತದೆ.

ನಾನು ಹೊರ ಬಂದು ಬಾಲ್ಕನಿಯಲ್ಲಿ ತಂಬಾ ಹೊತ್ತು ನಿಂತಿದ್ದೆ. ಏನು ಮಾಡಿದರೂ ಮನಸ್ಸಿಗೆ ಸಮಾಧಾನವಿಲ್ಲ. ವಿಸ್ಕಿ, ರಂ ನಂತಹ ಎಣ್ಣೆ ಚಟವೊಂದು ಮನುಷ್ಯನನ್ನು ಇಂಥದೊಂದು ಭೀಕರ ಸ್ಥಿತಿಗೆ ನೂಕ ಬಹುದೆಂಬುದೇ ನನಗೆ ವಿಚಿತ್ರವಾಗಿ ಕಾಣುತ್ತಿತ್ತು. ತಂದೆಯವರು ಮಲಗಿದ ರೀತಿ, ಅವರ ಉಬ್ಬಿದ ಹೊಟ್ಟೆ, ಪ್ರತಿಬಾರಿ ಉಸಿರು ಹೊರಹಾಕುವಾಗ ಅವರು ಪಡುತ್ತಿದ್ದ ವೇದನೆ, ಉಸಿರು ಒಳಗೆಳೆದುಕೊಳ್ಳುವಾಗ ಇದಕ್ಕಿಂತ ದೊಡ್ಡ ವೇದನೆಯ ಸ್ವರ....

ನೋಡುವುದು ಸಾಧ್ಯವಾಗದೇ ಬಾಲ್ಕನಿಗೆ ಬಂದು ನಿಲ್ಲುತ್ತಿದ್ದೆ. ನಾಲ್ಕೈದು ದಿನಗಳೇ ಹೀಗೆ ಕಳೆದಿರಬಹುದು. ಅವತ್ತು ಹಾಗೇ, ತಂದೆಯವರನ್ನು ಕಂಡು ವಿಷಣ್ಣವಾಗಿ ಬಂದು ಬಾಲ್ಕನಿಯಲ್ಲಿ ನಿಂತಿದ್ದೆ.

''ಸರ್, ಬರ್ತೀರಾ?'' ಎಂಬ ಧ್ವನಿ ಕೇಳಿ ತಿರುಗಿದೆ. ನನ್ನ ತಂದೆಯವರನ್ನು ನೋಡಿಕೊಳ್ಳುತ್ತಿದ್ದ ನರ್ಸ್ ಮುಖ ಕೆಳಗೆ ಹಾಕಿ ನಿಂತಿದ್ದಳು. ನನ್ನ ತಂದೆ ತೀರಿಕೊಂಡಿದ್ದಾರೆ ಎಂಬುದು ಅರ್ಥವಾಯಿತು. ಬಿದ್ದು ಬಿಡಬಹುದು ಅನ್ನಿಸಿತು. ನನ್ನ ಅಕ್ಕನ ವಯಸ್ಸಿನ ಆ ನರ್ಸ್, ನನ್ನ ತೋಳು ಹಿಡಿದು ನಡೆಸಿಕೊಂಡು ಕರೆದೊಯ್ದಳು. ನನ್ನ ತಂದೆಯ ಜೀವ ಹೋಗಿತ್ತು. ಈಗ ನನ್ನೆಲ್ಲ ದುಃಖ, ಅನಾಥತನಗಳ ನಡುವೆ, ವಿಸ್ಕಿಯಂಥ ಒಂದು ಸಣ್ಣ ಅಭ್ಯಾಸ ಮನುಷ್ಯ ಜೀವಿಯನ್ನೇ ಬಲಿತೆಗೆದುಕೊಳ್ಳಬಹುದೆಂಬ ವಿಚಾರ ನನ್ನನ್ನು ಕಂಗೆಡಿಸುತ್ತದೆ. ನನಗೆ ನನ್ನದೇ ಮಿತಿಗಳಿದ್ದವು. ಅಜ್ಞಾನಗಳಿದ್ದವು. ಸ್ವಲ್ಪ ಜಾಗರೂಕ ಆಗಿದ್ದರೆ, ಧೈರ್ಯವಾಗಿದ್ದರೆ ನಾನು ತಂದೆಯವರನ್ನು ಬದುಕಿಸಿಕೊಳ್ಳಬಹುದಿತ್ತೋ ಏನೋ!

ಆದರೆ.... ಇದೆಲ್ಲ ರೇ..... ಜಗತ್ತು.

ನನ್ನ ಹಾಗೆ ಬೇರೆಯವರಿಗೆ ಇಂಥ ದುಃಖ ತಟ್ಟದೇ ಇರಲಿ ಅನ್ನೊ ಕಾರಣಕ್ಕಷ್ಟೆ ಈ ಲೇಖನ ಬರೆದಿರುವೆ.

■ ಸಂತಾನಂ ಎಂ.

[ಇಲ್ಲಿ ಬರುವ ವ್ಯಕ್ತಿಗಳ ಹೆಸರುಗಳನ್ನು ಗೋಪ್ಯತೆಯ ಕಾರಣಗಳಿಂದ ಬದಲಿಸಲಾಗಿದೆ]

ಮಾತಿನ ಬುತ್ತಿ

ಕಟ್ಟಿಕೊಟ್ಟ ಬುತ್ತಿ ಹೇಳಿಕೊಟ್ಟ ಮಾತು ಬಹಳದಿನ ನಿಲ್ಲುವುದಿಲ್ಲ ಎಂದು ಹಿರಿಯರು ಹೇಳುತ್ತಾ ಬಂದಿದ್ದಾರೆ. ಕಟ್ಟಿಕೊಟ್ಟ ಬುತ್ತಿಯ ವಿಚಾರಕ್ಕೆ ಇದು ನಿಜವಿರಬಹುದು. ನನ್ನ ತಂದೆ ಸರ್ಕಾರದ ಸಾಮಾನ್ಯ ಚಾಕರಿಯಲ್ಲಿ ಇದ್ದವರು. ಈಚೆಗೆ ಎರಡು ವರ್ಷದ ಹಿಂದೆ ವಯಸ್ಸಾಗಿ, ತಂದೆ ತೀರಿಕೊಂಡರು. ಅವರು ಇದ್ದಾಗ ಎಷ್ಟೋ ಮಾತು ಆಡುತ್ತಾ ಇದ್ದರು. ಅವೆಲ್ಲ ಇವತ್ತಿಗೂ ನೆನಪಾಗುತ್ತವೆ. ಅದೂ ಆಯಾಯ ಹೊತ್ತಿನಲ್ಲಿ ನನ್ನ ನಿರ್ಧಾರಕ್ಕೆ, ಮನಸ್ಸಿಗೆ ಒಂದು ದಾರಿ ತೋರುತ್ತವೆ.

ತೀರಾ ಸಹಜ, ಮಾತಿನ ನಡುವೆ ಅವರಾಡುತ್ತಿದ್ದ ಕೆಲವು ಉಕ್ತಿಗಳು ಗಾದೆ ಮಾತಂತೆ ಇರಬಹುದು. ಅವರ ಹಿರಿಯರಿಂದ ಪಡೆದುಕೊಂಡಿದ್ದು ಇರಬಹುದು.

ಅಂಥ ಹಲವು ಮಾತಿನ ಬುತ್ತಿಯಾಗಿ ನನ್ನ ಜೊತೆಗಿವೆ :

ಕಚ್ಚೆ, ಕೈ ಬಾಯಿ ಶುದ್ಧವಾಗಿದ್ದರೆ ಮನುಷ್ಯ ಎಲ್ಲೂ ಬದುಕಬಹುದು.

ಅರಸಾಗಲಿ ಆಳಾಗಲೀ, ಇಬ್ಬರೂ ಮನುಷ್ಯರೇ. ಆಳು ಅಂತ ಕೀಳಾಗಿ ನೋಡಬೇಡ.

ಹೊಟ್ಟೆ ತುಂಬಿದವನಿಗೆ ಹುಗ್ಗಿ ಮುಳ್ಳು, ಹಸಿದವನಿಗೆ ಅಂಬಲೀನೇ ಅಮೃತ.

✸ ಮನಸ್ಸಿಗೆ ಬಂದಿದ್ದು ಮಾತಾಗೋ ಮುಂಚೆ, ಇದು ಮಾತಾಗೋ ಅಷ್ಟು ಯೋಗ್ಯವೇ ಅಂತ ವಿಚಾರ ಮಾಡು. ನುಂಗಿಕೊಂಡರೆ ಎದೆಭಾರ ಆಗಬಹುದು. ಆದರೆ, ಮಾತು ಆಡಿದಮೇಲೆ ಹಿಂದೆ ಪಡೆಯೋದು ಆಗೋದಿಲ್ಲ.

✸ ಮಾತು ಮುಖ್ಯ. ಆಡಿದ್ದು ಸಂಜೀವಿನಿ ಆಗಬಹುದು. ತಪ್ಪಾಗಿ ಆಡಿದ ಮಾತು ಇನ್ನೊಬ್ಬನ್ನ ಕೊಲ್ಲಬಹುದು. ಇಲ್ಲ ಅಂದರೆ ಘಾಸಿಗೊಳಿಸಿ ಮಾಯದ ಕಲೆಯಾಗಿ ಉಳೀಬಹುದು. ಮಾತಾಡೋಕ್ಕೆ ಮುಂಚೆ ಎಚ್ಚರ ಇರಲಿ.

ಒಳ್ಳೇ ಮಾತಾಡೊಕ್ಕೆ ಹಿಂಜರಿಬೇಡ. ಕೆಟ್ಟ ಮಾತು ಆಡದೇ ಇರೋದೇ ಒಳ್ಳೇದು.

✸ ಏನೇ ಮಾಡಬೇಕಾದರೂ ಹತ್ತು ಸಲ ಯೋಚಿಸಿ. ನಾಳೆ ದಿನ, ನಾನು ಅವತ್ತು ಮಾಡಿದ್ದು ನನಗೇ ತಪ್ಪು ಅನಿಸಬಾರದು. ಶ್ರೀಮಂತಿಕೆ ಅನ್ನೋದು ಹಣಕಾಸು, ಆಸ್ತಿಪಾಸ್ತಿಯಲ್ಲಿ ಇಲ್ಲ. ನಿನ್ನೊಳಗೆ, ನಿನ್ನ ನಡವಳಿಕೆಯೊಳಗೆ ಶ್ರೀಮಂತಿಕೆ ಇರಬೇಕು.

ಶ್ರೀಮಂತಿಕೆ ಸಹಜ ಅಲ್ಲದೇ ಹೋದಾಗ ಆಡಂಬರ ಆಗಿಬಿಡುತ್ತೆ.

✸ ಬಟ್ಟೆ ತೊಡೋದು ಕಲೆ.

✸ ಬೆಲೆಬಾಳೋ ಬಟ್ಟೆ ಧರಿಸಿಬಿಟ್ಟರೆ ಚೆನ್ನಾಗಿ ಕಾಣಬಹುದು ಅನ್ನೋದು ನಿಜ ಅಲ್ಲ.

✸ ಜನಗಳಿಗೆ ಮುಖಕೊಟ್ಟು ಮಾತಾಡು. ಅವರೇನು ಅನ್ನೋದು ಅರ್ಥವಾಗುತ್ತೆ. ಅವರ ಭಾವನೆ ಮನದಟ್ಟಾಗುತ್ತೆ.

ಸುಳ್ಳು, ಕಪಟದ ಮನುಷ್ಯ ಮುಖಕೊಟ್ಟು ಮಾತು ಆಡಲಾರ.

■ ಮುರಳೀಧರ

ಬಾಯಿ ಬಿಡದ ಗಂಡನೊಂದಿಗೆ

ಬೆಳಗಿನಿಂದ ಮನೆಯಲ್ಲಿ ಒಂಟಿಯಾಗಿದ್ದು, ಪತಿ ಯಾವಾಗ ಮನೆಗೆ ಬರುತ್ತಾನೋ ಎಂದು ಕಾತರಿಸುತ್ತಿರುತ್ತಾಳೆ ಸ್ತ್ರೀ. ಪತಿ ಮನೆಗೆ ಬರುತ್ತಲೇ ಅದೆಷ್ಟೋ ವಿಷಯಗಳನ್ನು ಹೇಳಬೇಕು, ಇಬ್ಬರೂ ಮಾತಾಡುತ್ತಾ ಒಂದಿಷ್ಟು ಮನೆಯ ಹೊರಗಡೆ ಸುತ್ತಾಡಿ ಬರಬೇಕು, ಎಂದೆಲ್ಲಾ ಯೋಚಿಸುತ್ತಿರುತ್ತಾಳೆ. ಆದರೆ ಪತಿ ಮನೆಗೆ ಬರುತ್ತಲೆ ಪೇಪರ್ ಹಿಡಿದುಕೊಂಡೋ, ಟಿ.ವಿ. ನೋಡುತ್ತಲೋ ಗಟ್ಟಿಯಾಗಿ ಕುರ್ಚಿ ಹಿಡಿದು ಕುಳಿತುಬಿಟ್ಟರೆ.... ಅವಳ ಬೇಸರಕ್ಕೆ ಕೊನೆಮೊದಲಿಲ್ಲದಂತಾಗುತ್ತದೆ.



ಗಂಡನಾದವನು ಮನೆಯಲ್ಲಿ ಬೇಕಾದ ಸಮಾನುಗಳನ್ನು ಪೂರೈಕೆ ಮಾಡುವುದೇ ತನ್ನ ಪರಮ ಕರ್ತವ್ಯ ಎಂದುಕೊಳ್ಳುತ್ತಾನೆ. ತನ್ನ ಮಾತುಗಳಿಗಾಗಿ ಒಂದು ಜೀವ ಕಾತರಿಸುತ್ತಿದೆ, ತನ್ನಿಂದಲೇ ಅವಳಿಗೆ ಸಾಂತ್ವನ ಸಿಗುತ್ತದೆ ಎಂದು ನಂಬುವ ಗೊಡವೆಗೆ ಗಂಡಸು ಹೋಗುವುದಿಲ್ಲ. ಸೀರೆಗಳು, ಬೆಲೆಬಾಳುವ ಬಹುಮಾನಗಳನ್ನು ಕೊಟ್ಟರೇನೆ ಪತ್ನಿ ಸಂತೋಷಪಡುತ್ತಾಳೆಂದು ಅಭಿಪ್ರಾಯಪಡುವ ಗಂಡಸರ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಹೆಂಡತಿ ವ್ಯಕ್ತಪಡಿಸುವ ಅಸಂತೃಪ್ತಿ ಬಹಳಷ್ಟು ಗಂಡಸರಿಗೆ ಅರ್ಥವಾಗುವುದಿಲ್ಲ.

ಬೇಸರ ಕಳೆಯಲು ಹೆಚ್ಚಾಗಿ ಹರಟೆ ಆಶ್ರಯಿಸುತ್ತಾರೆ ಸ್ತ್ರೀಯರು. ಮದುವೆಯಾದ ಮೇಲೆ ಏನೆಲ್ಲಾ ಸುದ್ದಿಗಳನ್ನು ತನ್ನ ಸಖನೊಡನೆ ಹಂಚಿಕೊಳ್ಳಬೇಕೆಂದು ಅಂದುಕೊಂಡಿರುತ್ತಾರೆ. ಮದುವೆಗೆ ಮೊದಲು ಗೆಳತಿಯರೊಂದಿಗೆ ಕೊಚ್ಚಿದ ಹರಟೆ ನೆನಪಿಸಿಕೊಳ್ಳುತ್ತಾಲೇ ಇರುತ್ತಾರೆ. ಈಡುಜೋಡು ಕಲೆತ ಮೇಲೆಯೂ ತಮ್ಮ ಮಾತುಗಳನ್ನು ಇನ್ನೊಬ್ಬರು ಕೇಳಿಸಿಕೊಳ್ಳಬೇಕೆಂಬ ಒತ್ತಾಸೆ ಸ್ತ್ರೀಯರಲ್ಲಿ ಇದ್ದೇ ಇರುತ್ತದೆ.

ಸ್ತ್ರೀಯರು ಬಯಸುವ ಮಾತು

ಮನೆಯಲ್ಲಿ ಸಂಗಾತಿ ಹೇಳುವ ಸುದ್ದಿಗಳು ರಾಜಕೀಯಕ್ಕೆ, ತನ್ನ ಆಫೀಸಿಗೆ ಸಂಬಂಧಿಸಿದವುಗಳಾಗಿದ್ದರೆ ಅಂತಹವುಗಳನ್ನು ಸ್ತ್ರೀಯರು ಅಷ್ಟಾಗಿ ಇಷ್ಟಪಡುವುದಿಲ್ಲ. ಸಖನ ಬಾಯಿಯಿಂದ ಬರುವ ಮಾತುಗಳಿಗೆ ತಾನೇ ಕೇಂದ್ರಬಿಂದುವಾಗಿರಬೇಕೆಂದು ಅವಳ ತವಕ.

ತನ್ನ ಸೌಂದರ್ಯ ಗಂಡ ಮೆಚ್ಚಬೇಕು. ತಾನೆಂದರೆ ತನ್ನ ಪತಿಗೆ ಅಂಕೆ ಇಲ್ಲದ ಪ್ರೀತಿ. ತಾನು ಮನೆಯನ್ನು ನಡೆಸಿಕೊಂಡು ಹೋಗುವ ಅಚ್ಚುಕಟ್ಟು ಆತ ಆಗಾಗ್ಗೆ ಹೊಗಳುತ್ತಲೇ ಇರಬೇಕೆಂದು ಬಯಸುತ್ತಿರುತ್ತಾಳೆ. ಆದರೆ ಅಂತಹ ಮಾತುಗಳು ಸಾಕಷ್ಟು ಗಂಡಸಿನ ಬಾಯಿಂದ ಬರುವುದೇ ಇಲ್ಲ.

ಇದರ ಪರಿಣಾಮ.... ಸ್ತ್ರೀಯರಲ್ಲಿ ನಿರುತ್ಸಾಹ ಕಾಣಿಸಿಕೊಳ್ಳತೊಡಗುತ್ತದೆ. ಗಂಡನಾದವನು ತನ್ನೊಡನೆ ಮನಬಿಚ್ಚಿ ಮಾತಾಡುತ್ತಿಲ್ಲ. ಹೀಗಾಗಲು ಆತ ಮದುವೆಗೆ ಮುಂಚೆ ಯಾರೊಡನೋ ಸಂಬಂಧ ಏರಿಸಿಕೊಂಡಿರಬೇಕು. ಅದನ್ನು ಇನ್ನೂ ಜ್ಞಾಪಿಸಿಕೊಳ್ಳುತ್ತಿರಬೇಕು.... ಮೊದಲಾದ ಊಹೆಗಳಿಂದ ಸಂಸಾರ ನಾಶಪಡಿಸಿಕೊಂಡ ವನಿತೆಯರಿಗೇನೂ ಬರವಿಲ್ಲ.

ಸದಾ ಬಾಯಿ ಮುಚ್ಚಿ ಕುಳಿತಿರುವ ಈತನೊಡನೆ ಹೇಗೆ ಸಂಸಾರ ಮಾಡುವುದು. ಇದಕ್ಕಿಂತಲೂ ಮದುವೆಯೇ ಆಗದಿದ್ದರೆ ಚೆನ್ನಾಗಿರುತ್ತಿತ್ತು. ಇಲ್ಲವೆ ಸಂಸಾರ ಬಂಧನದಿಂದ ದೂರವಾಗಿ ಬಿಡಬೇಕೆಂಬ ಆಲೋಚನೆ ಸ್ತ್ರೀಯರಲ್ಲಿ ಬಂದರೆ ಆಶ್ಚರ್ಯವೇನೂ ಇಲ್ಲ.

ಆದರೆ ಗಂಡು ಜೊತೆ ಇಲ್ಲದೆ ಈ ಸಮಾಜದಲ್ಲಿ ಬದುಕುವುದು ಎಂದರೆ ಪ್ರವಾಹದ ವಿರುದ್ಧ ಈಜಿದಂತೆ. ಸ್ತ್ರೀ, ಪುರುಷರ ನಡುವೆ ಅನೇಕ ರೀತಿ ವ್ಯತ್ಯಾಸಗಳನ್ನು ಪ್ರಕೃತಿಯೇ ಸೃಷ್ಟಿಸಿದೆ. ಸಾಮಾಜಿಕ ಕಟ್ಟುಪಾಡುಗಳು ಮತ್ತಷ್ಟು ಸಮಸ್ಯೆಗಳನ್ನು ಸ್ತ್ರೀಯರ ನೆತ್ತಿಯ ಮೇಲೆ ಹೇರಿವೆ. ಮುಖ್ಯವಾಗಿ ಸ್ತ್ರೀ ಇಲ್ಲಿ ಸಮತೋಲನ ಸಾಧಿಸಿ, ಸಮಸ್ಯೆಗಳನ್ನು ಸರಿಪಡಿಸುತ್ತಾ ತಿದ್ದಿಕೊಳ್ಳುತ್ತಾ ಸಂಸಾರ ಸಾಗಿಸಬೇಕು.

ಆಶಯಗಳು ಬೇರೆ

ಸಂಸಾರದಲ್ಲಿ ಸ್ತ್ರೀ, ಪುರುಷರು ಆಶಿಸುವ ಅಂಶಗಳು ಬೇರೆ ಬೇರೆ. ತನ್ನೊಡನೆ ಜೀವನ ಹಂಚಿಕೊಳ್ಳುವ ಗಂಡನನ್ನು ಕೇವಲ ಪತಿಯಂತೆ ನೋಡುವುದಿಲ್ಲ. ಆತಂತೆ ಪ್ರಿಯಕರನಂತೆ, ಆಪತ್ತಿನಲ್ಲಿ ಆಗುವ ಆಪ್ತನಂತೆ ಹರಟೆಯಲ್ಲಿ ಸ್ನೇಹಿತೆಯಂತೆ ಇರಬೇಕೆಂದುಕೊಳ್ಳುತ್ತಾಳೆ. ತಾನು ಮಾಡುವ ಎಲ್ಲಾ ಕೆಲಸಗಳನ್ನು ಪ್ರೋತ್ಸಾಹಿಸಬೇಕೆಂದು, ಮಿತವಾಗಿ ಬೆದರಿಕೆ ಹಾಕುತ್ತಾ ಲಾಲಿಸಬೇಕೆಂದು ಅಗತ್ಯ ಬಿದ್ದಾಗ ಮಾರ್ಗದರ್ಶನ ನೀಡಿ ತನ್ನನ್ನು ಸರಿದಾರಿಗೆ ತರುವ ಪತಿ ಇರಬೇಕೆಂದು ಸ್ತ್ರೀ ಬಯಸುತ್ತಾಳೆ.

ಆದರೆ ಪ್ರತಿಯೊಬ್ಬ ಗಂಡಸಿನಲ್ಲಿ ಇವೆಲ್ಲಾ ಗುಣಗಳನ್ನು ಹುಡುಕುವುದೊಂದು ವ್ಯರ್ಥ ಪ್ರಯತ್ನ. ಕಾರಣ ಈ ಸಮಾಜ ಸ್ತ್ರೀಯರನ್ನು ಬೆಳೆಸುವ ರೀತಿ ಬೇರೆಯೇ ಆಗಿರುತ್ತದೆ.

ಹುಡುಗರು ಮನದೊಳಗಿನ ಭಾವನೆಯನ್ನು ಹೊರಗೆ ಹೇಳಿಕೊಳ್ಳಬಾರದೆನ್ನುತ್ತಾರೆ ಹಿರಿಯರು. ನೋವಿನಿಂದ ಅಳುತ್ತಾ ಕುಳಿತ ಗಂಡಸನ್ನು ನೋಡಿ, ಹೆಣ್ಣಿನಂತೆ ಅಳುತ್ತಿದ್ದೀಯಲ್ಲಾ ಎಂದು ಅಪಹಾಸ್ಯ ಮಾಡುತ್ತಾರೆ. ಅದಕ್ಕಾಗಿ ಕಷ್ಟವಾದರೂ ಸುಖವಾದರೂ ಹುಡುಗರು ಮನೆಯವರೊಂದಿಗೆ ತಮ್ಮ ವೈಯಕ್ತಿಕ ಭಾವನೆ ಹಂಚಿಕೊಳ್ಳುವುದಿಲ್ಲ.

ಗಂಡು ಹುಡುಗರು ಮನೆಯ ಹೊರಗೆ ಎಷ್ಟು ಹೊತ್ತಿದ್ದರೂ, ತಡವಾಗಿ ಮನೆಗೆ ಬಂದರೂ ತಪ್ಪಿಯೂ ಅವರನ್ನು ತಂದೆ, ತಾಯಿ ಬಯ್ಯುವುದಿಲ್ಲ. ಅದೇ ಹುಡುಗಿಯರ ವಿಷಯಕ್ಕಾದರೆ ಅವರ ಚಲನವಲನದ ಮೇಲೆ ಸದಾ ನಿಗಾ ಇಡಲಾಗಿರುತ್ತದೆ.

ಬೆಳೆಸುವ ಕ್ರಮ

ಹುಡುಗಿಯರು ತಮ್ಮ ವೈಯಕ್ತಿಕ ವಿಷಯಗಳಿಗೆ ಸಂಬಂಧಿಸಿದ್ದನ್ನು ತಾಯಿಯೊಡನೆ, ತಂದೆಯೊಡನೆ ಹೇಳಿಕೊಳ್ಳುವುದು ಅವಶ್ಯಕವಿರುತ್ತದೆ. ತನ್ನ ದೇಹದಲ್ಲಿ ವಯಸ್ಸಿಗೆ ಅನುಗುಣವಾಗಿ ನಡೆಯುವ ಬದಲಾವಣೆಗಳನ್ನು ತಾಯಿಗೆ ಹೇಳಿಕೊಳ್ಳುವುದರಲ್ಲಿ ಹುಡುಗಿ ಸಂಕೋಚಪಡುವುದಿಲ್ಲ. ಅದೇ ಹುಡುಗರ ವಿಷಯ ತೆಗೆದುಕೊಂಡರೆ ಅಂಗಸ್ತಂಭನ, ಸ್ವಪ್ನ ಸ್ಖಲನದ ಬಗ್ಗೆ ಯಾರೊಡನೆಯೂ ಹೇಳಿಕೊಳ್ಳುವುದಿಲ್ಲ. ಕೊನೆಗೆ ಹುಡುಗರ ತಂದೆಯೂ ಕೂಡಾ ಅಂತಹ ವಿಷಯಗಳನ್ನು ಕೇಳಿಸಿಕೊಳ್ಳುವುದಿಲ್ಲ.

ಆದ್ದರಿಂದ ಗಂಡಸರು ವ್ಯಕ್ತಿಗತ ವಿಷಯಗಳನ್ನು ಯಾರಿಗೂ ಹೇಳಬಾರದು ಎಂಬ ಭಾವನೆಯಿಂದ, ನಿಯಮದಿಂದ ಬೆಳೆಯುತ್ತಾರೆ. ಗಂಡಸಾದವನು ಮನೆಯಲ್ಲಿ ಬೇಕಾದ ಸಮಾನುಗಳನ್ನು ಪೂರೈಕೆ ಮಾಡುವುದೇ ತನ್ನ ಪರಮ

ಕರ್ತವ್ಯ ಎಂದುಕೊಳ್ಳುತ್ತಾನೆ. ತನ್ನ ಮಾತುಗಳಿಗಾಗಿ ಒಂದು ಜೀವ ಕಾತರಿಸುತ್ತಿದೆ, ತನ್ನಿಂದಲೇ ಅವಳಿಗೆ ಸಾಂತ್ವನ ಸಿಗುತ್ತದೆ ಎಂದು ನಂಬುವ ಗೊಡವೆಗೆ ಗಂಡಸು ಹೋಗುವುದಿಲ್ಲ. ಸೀರೆಗಳು, ಬೆಲೆಬಾಳುವ ಬಹುಮಾನಗಳನ್ನು ಕೊಟ್ಟರೇನೆ ಪತ್ನಿ ಸಂತೋಷಪಡುತ್ತಾಳೆಂದು ಅಭಿಪ್ರಾಯಪಡುವ ಗಂಡಸರ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಹೆಂಡತಿ ವ್ಯಕ್ತಪಡಿಸುವ ಅಸಂತೃಪ್ತಿ



ಬಹಳಷ್ಟು ಗಂಡಸರಿಗೆ ಅರ್ಥವಾಗುವುದಿಲ್ಲ.ಮನೆಗೆ ಬೇಕಾದುದೆಲ್ಲಾ ತರುತ್ತಿದ್ದೇನೆ, ಪಗಾರದ ಹಣವನ್ನು ಅವಳ ಕೈಗೇ ಕೊಡುತ್ತಿದ್ದೇನೆ, ಅವಳು ಏನು ನಿರ್ಧಾರ ತೆಗೆದುಕೊಂಡರೂ ಅದಕ್ಕೆ ಸಮ್ಮತಿ ಸೂಚಿಸುತ್ತೇನೆ. ಇದಕ್ಕಿಂತಲೂ ಇನ್ನೇನು ಮಾಡಬೇಕು. ನಿನಗಿನ್ನೂ ಯಾಕೆ ಅತೃಪ್ತಿ? ಎಂದು ಗಂಡಸರು ಆಗಾಗ್ಗೆ ಪ್ರಶ್ನಿಸುತ್ತಾರೆ. ಈ ಪ್ರಶ್ನೆಗೆ ಸಮಾಧಾನ ಸ್ತ್ರೀ, ಪುರುಷರ ಮನಸ್ಸುಗಳ ವ್ಯತ್ಯಾಸ ತಿಳಿದುಕೊಂಡವರು ಮಾತ್ರವೇ ಹೇಳಬಲ್ಲರು.

ರಾಜಿ ಇರಲಿ

ಪ್ರೇಮ, ಕೋಪ, ಅಸಹ್ಯ, ಸೇಡು ಇವೆಲ್ಲಾ ಏನಿದ್ದರೂ ಮಾತುಗಳಿಂದ ಹೊರಬೀಳಬೇಕು. ಪತಿ ಮನೆಯಲ್ಲಿ ಇಲ್ಲದ ಸಮಯದಲ್ಲಿ ನಡೆದ ಸಂಗತಿಗಳನ್ನೆಲ್ಲಾ ಆತ ಮನೆಗೆ ಬರುತ್ತಲೇ ಹೇಳಿಬಿಡುತ್ತಾಳೆ ಪತ್ನಿ. ಹಾಗೇ ಪತಿಯ ಆಫೀಸಿನಲ್ಲಿ ನಡೆದ ವಿಷಯಗಳನ್ನು ಕೇಳಬೇಕೆಂದು ಬಯಸುತ್ತಾಳೆ. ಆದರೆ ಆತ ಆಫೀಸಿನಿಂದ ಬಂದು ಮನೆಯ ಹಿತಕರ ವಾತಾವರಣದಲ್ಲಿರುವಾಗ ಆಫೀಸಿನ ವಿಷಯಗಳ ನೆನಪು ಬೋರ್ ಅಂದುಕೊಳ್ಳುತ್ತಾನೆ.

ಗಂಡಸರಲ್ಲಿ ಘರ್ಷಣೆಗೆ ಎಳೆದೊಯ್ಯುವ ಅಂಶದ ಮೇಲೆ ಮಾತಾಡುವುದು ಇಷ್ಟವಾಗುವುದಿಲ್ಲ, ಅಂಥ ವಿಷಯಗಳು ತಪ್ಪದೇ ಸ್ತ್ರೀಯರಲ್ಲಿ ಕಣ್ಣೀರು ತರಿಸುತ್ತವೆ. ಭಾವೋದ್ರೇಕ, ಪತ್ನಿಯ ಕಣ್ಣೀರು ಗಂಡಸರಿಗೆ ಸಹನೆಯಾಗುವುದಿಲ್ಲ. ಅದಕ್ಕೇನೆ ಹೆಂಗಸರನ್ನು ಅರ್ಥ ಮಾಡಿಕೊಳ್ಳುವುದು ಈ ಜನ್ಮದಲ್ಲಿ ಸಾಧ್ಯವಿಲ್ಲವೆಂದು ಗೊಣಗುತ್ತಿರುತ್ತಾರೆ.

ಆದರೆ ತನ್ನ ಹೆಂಡತಿಯೊಡನೆ ಬಾಯಿಬಿಡಬಾರದು ಎಂದು ಯಾವ ಗಂಡಸೂ ಪ್ರತಿಜ್ಞೆ ಮಾಡಿ ಕುಳಿತುಕೊಳ್ಳುವುದಿಲ್ಲ. ತನಗೆ ತಿಳಿಯದ ವಿಷಯ, ಹೊಸ ಕ್ಷೇತ್ರದ ಬಗ್ಗೆ ಬೇರೆ ಯಾರು ಸಹಾಯ ಮಾಡಿದರೂ ಆತ ಸ್ವೀಕರಿಸಲು ಸಿದ್ಧ. ಆ ದೆಸೆಯಲ್ಲಿ ಆತನನ್ನು ಮಾತಿಗೆಳೆಯುವ ಪ್ರಯತ್ನ ಪತ್ನಿ ಮಾಡಬೇಕು.

ವಿವಾಹ ಬಂಧದಲ್ಲಿ ಪತಿಯಿಂದ ಏನೇನನ್ನು ಬಯಸಿದ್ದಳು, ಎಷ್ಟನ್ನ ಬಯಸಿದ್ದಳು, ಅದೆಲ್ಲಾ ದೊರಕದೇ ಹೋದಾಗ ತಾನೆಷ್ಟು ನಿರಾಶೆ ಪಟ್ಟದ್ದಾಳೆಂಬುದನ್ನು ಪದೇ ಪದೇ ಹೇಳುತ್ತಾ, ಅದನ್ನೇ ಸದಾ ವಿಮರ್ಶಿಸುತ್ತಾ ಕೂಡುವ ಸ್ತ್ರೀಯರನ್ನು ಗಂಡಸರು ಸೇರುವುದಿಲ್ಲ. ಇಂತಹ ಹೆಂಗಸರ ಎದುರಿಗೆ ಮತ್ತಷ್ಟು ಬಿಗುಮಾನ ತೋರುತ್ತಾರೆ. ಏನು ಮಾತಾಡಿದರೂ ಅದೊಂದು ಹೊಸ ವಿವಾದಕ್ಕೆ ದಾರಿಯಾಗಬಹುದೆಂದು ಗಂಡಸು ಭಯಪಡುತ್ತಾನೆ.

ಹೆಂಗಸರ ಕೊಂಕು ಮಾತುಗಳು ಗಂಡಸರಿಗೆ ಸಹ್ಯವಾಗುವುದಿಲ್ಲ. ತಾನು ಏನು ಬಯಸುತ್ತಾಳೆಂಬುದು ಸರಳವಾಗಿ ಗಂಡಸಿಗೆ ಹೇಳಿದರೆ ಆತ ಕೂಡಲೇ ಸ್ಪಂದಿಸುತ್ತಾನೆ. ಹಾಗಲ್ಲದೆ ವಿಷಯವನ್ನು ನಿಗೂಢವಾಗಿ ಇಟ್ಟು ದೊಡ್ಡ ಧ್ವನಿಯಲ್ಲಿ ವಾದಕ್ಕಿಳಿದರೆ ಗಂಡಸು ಭಯಗೊಂಡು ತಪ್ಪಿಸಿಕೊಳ್ಳಲು ಹವಣಿಕೆ ಮಾಡುತ್ತಾನೆ

ಮಾತಿನ ವರಸೆ

ಸ್ತ್ರೀ ಗಂಡನೊಡನೆ ಮೆಲ್ಲಗೆ ಯಾವುದೇ ಕಾಠಿಣ್ಯವಿಲ್ಲದೆ ಮಾತಾಡುವುದು ಅಗತ್ಯ. ಹೆಂಡತಿಯ ಗಂಟಲು ಏರಿದರೆ ಗಂಡಸು ಕೂಡಲೇ ಬಾಯಿ ಮುಚ್ಚಿಕೊಳ್ಳುತ್ತಾನೆ. ಆನಂತರ ಸಂಭಾಷಣೆ ಮುಂದೆ ಸಾಗದು; ಸಂಭಾಷಣೆ ಮುಂದುವರೆಯಬೇಕಾದರೆ, ಇಬ್ಬರೂ ತಮ್ಮ-ತಮ್ಮ ಅಹಂ ಕೊಂಚ ಬದಿಗಿರಿಸಲೇಬೇಕು.

ಹೆಂಡತಿಯೊಂದಿಗೆ ಏಕಾಂತದಲ್ಲಿರುವಾಗ ಹೇಳಿದ ವಿಷಯಗಳು, ವಿಶೇಷಗಳು, ರಹಸ್ಯಗಳು ಇತರರಿಗೆ ತಿಳಿಯಬಾರದೆಂದು ಗಂಡಸಿನ ಬಯಕೆಯಾಗಿರುತ್ತದೆ. ತನ್ನ ಹೆಂಡತಿಯ ಬಗ್ಗೆ, ಮಲಗುವ ಕೊಠಡಿಯ ಬಗ್ಗೆ, ವಿಶೇಷಗಳ ಬಗ್ಗೆ ಸಾಮಾನ್ಯವಾಗಿ ಗಂಡಸರು ಇತರರಿಗೆ ಹೇಳುವುದಿಲ್ಲ. ಆದರೆ ಕೆಲವರು ತಮಗೆ ಆಪ್ತರೆಂದುಕೊಂಡ ಬಂಧುಗಳಿಗೆ, ಗೆಳೆಯರಿಗೆ ರಹಸ್ಯ ಸುದ್ದಿಗಳನ್ನು ಹೇಳುವುದಕ್ಕೆ ಯಾವುದೇ ಸಂಕೋಚ ಪಡುವುದಿಲ್ಲ.

ಹೆಚ್ಚಾಗಿ ಚರ್ಚೆಯಲ್ಲಿ, ಇತರ ವಿಶೇಷವಾದವುಗಳಲ್ಲಿ ಮಲಗುವ ಕೊಠಡಿಯ ಘಟನೆಯ ವಿವರಗಳನ್ನು ತಮ್ಮ ವಾದಕ್ಕೆ ಸಾಕ್ಷಿಯಾಗಿ, ಸಮರ್ಥನೆಗಾಗಿ ಬಳಸಿಕೊಳ್ಳುತ್ತಾರೆ. ಇಂತಹ ವರ್ತನೆಯಿಂದ ಗಡಿರೇಖೆಯನ್ನು ಅನಾವಶ್ಯಕವಾಗಿ ದಾಟಿದಂತಾಗುತ್ತದೆ. ಇದರಿಂದ ಈರ್ವರೂ ಸರಸ-ಸಲ್ಲಾಪದಲ್ಲಿ ಮಾತಾಡಿಕೊಂಡ ಸತ್ಯ, ಅಸತ್ಯ ಘಟನೆಗಳು ಬಹಿರಂಗಗೊಂಡು ಮುಜುಗರ ಪಡಬೇಕಾಗುತ್ತದೆ.

ಅಡ್ಡ ಬರಬಾರದು

ಗಂಡ ಮಾತಾಡುತ್ತಿಲ್ಲ.... ಮಾತಾಡುವುದೇ ಇಲ್ಲವೆಂದು ಪದೇ ಪದೇ ಪ್ರಚಾರ ಮಾಡುವ ತಪ್ಪನ್ನು ಹೆಂಗಸರೇ ಮಾಡುತ್ತಾರೆ. ಇದರಿಂದ ಇಬ್ಬರ ಮಧ್ಯೆ ಅನಗತ್ಯ ಗಂಭೀರ ಭಾವ ಬೆಳೆಯುತ್ತದೆಯೇ ಹೊರತು ಮಾತುಗಳು ಬೆಳೆಯವು.

ಗಂಡಸು ಮಾತು ಪ್ರಾರಂಭಿಸುತ್ತಲೇ ಹಾಸ್ಯ ಮಾಡಬಾರದು. ಯಾವುದೇ ನೆಪದಿಂದ ಹೆಂಗಸು ವಿಮರ್ಶೆಗೆ ತೊಡಗಬಾರದು. ಕೆಲವರು ಅಪರೂಪಕ್ಕೆ ಮಾತಿಗಿಳಿದ ಗಂಡನ ಮಾತಿನಲ್ಲಿನ ಲೋಪಗಳನ್ನು ಹುಡುಕತೊಡಗುತ್ತಾರೆ. ಇದರಿಂದ ಒಳ್ಳೆಯ ಪರಿಣಾಮವೇನೂ ದೊರೆಯಲಾರದು. ಆರಂಭದಲ್ಲಿ ಗಂಡಸು ಎಂತಹ ಕಳಪೆ ಸುದ್ದಿ ಹೇಳಿದರೂ ಹೆಂಗಸು ಸುಮ್ಮನೆ ಇದ್ದು ಬಿಟ್ಟರೆ, ಆತನನ್ನು ಮಾತಾಡಲು ಪ್ರೋತ್ಸಾಹಿಸಿದಂತಾಗುತ್ತದೆ. ಮಾತುಗಳು ಆರಂಭವಾದರೆ, ಸೆಲೆ ದೊರೆತರೆ ಅದನ್ನೇ ಪ್ರವಾಹವನ್ನಾಗಿಸಿ, ತಮಗಿಷ್ಟವಾದ ಅಂಶಗಳ ಮೇಲೆ ಹೊರಳಿಸುವುದು ಮಹಿಳೆ ಸುಲಭವಾಗುತ್ತದೆ.


ಇತರರ ಅಭಿಪ್ರಾಯಗಳನ್ನು ಗೌರವಿಸುವದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಒಬ್ಬರ ಅಭಿಪ್ರಾಯಗಳು ಉಳಿದವರೆಲ್ಲರಿಗೂ ನೆಚ್ಚಿಕೆಯಾಗಬೇಕೆಂದೇನೂ ಇಲ್ಲ. ಅವರ ಅಭಿಪ್ರಾಯಗಳನ್ನು ಕೇಳಿಸಿಕೊಂಡರೆ ಯಾರಿಗೇನು ನಷ್ಟವಿಲ್ಲವಲ್ಲ. ಗಂಡ ಹೇಳುವ ವಿಷಯಗಳು ಇಷ್ಟವಾಗದೇ ಹೋದರೂ ಮುಖದ ಮೇಲೆ ಹೊಡೆದಂತೆ ಖಂಡಿಸುವ ಅಗತ್ಯವಾದರೂ ಏನಿರುತ್ತದೆ? ಅನಗತ್ಯವಾಗಿ ಪದೇ ಪದೇ ವಿರೋಧ ವ್ಯಕ್ತಪಡಿಸುವುದು ಸರಿಯಲ್ಲ.

ಮಕ್ಕಳೊಡನೆ

ಮಕ್ಕಳೊಡನೆ ತಂದೆ ಸಲಿಗೆಯಿಂದ ಮಾತಾಡುತ್ತಾನೆ. ಮಕ್ಕಳಲ್ಲಿರುವ ನಿಷ್ಪಕ್ಷಪಾತ ಧೋರಣೆ ಯಾರನ್ನಾದರೂ ಮಾತಿಗೆಳೆಯುತ್ತವೆ. ಬೇರೆಯವರು ಹೇಳುವುದನ್ನು ಕೇಳಿಸಿಕೊಳ್ಳುವುದೂ ಒಂದು ಕಲೆ. ಕೇಳಿಸಿಕೊಳ್ಳುವ ಕಲೆ ಸ್ತ್ರೀಯರಲ್ಲಿ ತೀರಾ ಕಡಿಮೆ. ಈ ಧೋರಣೆ ಗಂಡ ಹೆಂಡಿರ ನಡುವೆ ಅನಾವಶ್ಯಕ ಘರ್ಷಣೆಗಳನ್ನು ಹೆಚ್ಚಿಸುತ್ತದೆ.

■ ಕೆ.ಬಿ.ಬೊಮ್ಮನಾಳ

ಬೇಕಾಗಿದ್ದಾನೆ



ಒಸಮಾ ಬಿನ್‌ಲ್ಯಾಡೆನ್

ಜಗತ್ತಿನಲ್ಲಿ ಭಯೋತ್ಪಾದನೆಯಂಥ ಪಾತಕವಿಲ್ಲ. ಆದರೆ, ಅದರಿಂದ ಸಿಗುವಷ್ಟು ಪ್ರಚಾರ ಇನ್ನು ಯಾವ ಕೆಲಸದಿಂದಲೂ ದೊರೆಯುವುದಿಲ್ಲ. ಅಂಥ ಪಾತಕಗಳ ಅಗ್ರಣಿ ಒಸಮಾ ಬಿನ್ ಲ್ಯಾಡೆನ್.

ಈಗ ಅವನನ್ನು ಹುಡುಕಿ ಕೊಟ್ಟವರಿಗೆ ಅಪಾರ ಮೊತ್ತದ ಬಹುಮಾನ. ಕೊಂದರೂ ಅಷ್ಟೆ. ಮೂರು ಸಲ ಅವನನ್ನು ಕೊಲ್ಲುವ ಯತ್ನಗಳಾಗಿವೆ. ಕೊಲ್ಲಲು ಹೋದ ಮೂರೂ ಮಂದಿ ಹತರಾಗಿದ್ದಾರೆ.

ಲ್ಯಾಡೆನ್‌ನ ಅಂಗರಕ್ಷಕ ಪಡೆಯಲ್ಲಿ ಇರುವವರ ಸಂಖ್ಯೆಯೇ ಇನ್ನೂರು. ಇತ್ತೀಚಿನ ದಿನಗಳಲ್ಲಿ ಇಡೀ ಪಡೆಯ ಸದಸ್ಯರನ್ನು ಬದಲಿಸಲಾಗಿದೆ. ಉಗ್ರ ತಾಲೀಬಾನ್‌ಗಳು ಈಗವನ ಅಂಗರಕ್ಷಕ ಪಡೆಯಲ್ಲಿ ಒಬ್ಬರೂ ಇಲ್ಲ. ಆತನ ಸುತ್ತ ಅರಬ್ ಸಂಜಾತ ಕ್ರೂರ ಯೋಧರ ಪಡೆಯೇ ಇದೆ. ಸೌದಿ ಅರೇಬಿಯಾದ ಕಟ್ಟಡ ನಿರ್ಮಾಪಕನೊಬ್ಬನ ಮಗ ಈ ಒಸಮಾ ಬಿನ್ ಲ್ಯಾಡೆನ್. ವಿವಿಧೆಡೆಗಳಲ್ಲಿ ಇರುವ ಆತನ ಆಸ್ತಿ ಮೌಲ್ಯವೇ 125 ದಶಲಕ್ಷ ಡಾಲರ್‌ಗೂ ಹೆಚ್ಚು. ನಲವತ್ತೈದರ ಈತನಿಗೆ ಮೂವರು ಪತ್ನಿಯರು. ನಿಂತಲ್ಲಿ ನಿಲ್ಲಲಾರದೇ, ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸುತ್ತಲೇ ಇರಬೇಕಾದ ಪಾಡು. ಹೀಗಾಗಿ ಇಂದೀಗ ಅವನು ನಂಬುವುದು, ಆಪ್ತ ವಿಚಾರಗಳನ್ನು ಹಂಚಿ ಕೊಳ್ಳುವುದು ಹಿರಿಯ ಮಗ, ಹದಿನಾರು ವರ್ಷದ ಮೊಹಮ್ಮದ್‌ನಲ್ಲಿ ಮಾತ್ರ.

ಆತ ಚಲಿಸುವಾಗ ದೊಡ್ಡ ಪಡೆಯೇ ಬೆನ್ನಿಗಿರುತ್ತದೆ. ಹಿಂದೆ ಮುಂದೆ ಟ್ರಕ್‌ಗಳೂ ಸೇರಿದಂತೆ ಆರೇಳು ವಾಹನದ ದಂಡು. ಸ್ವಲ್ಪ ದೂರ ಸಾಗಿದ ನಂತರ ಈ ಬೆಂಗಾವಲಿನ ಪಡೆಬಿಟ್ಟು, ಇನ್ನೊಂದು ವಾಹನ ಪಡೆಯಲ್ಲಿ ಆತ ಪ್ರಯಾಣಿಸುತ್ತಾನೆ.

ಜಗತ್ತಿನಾದ್ಯಂತ ಸಂಪರ್ಕ ಇರಿಸಿಕೊಳ್ಳುವ ಅವನಿಗೆ ಎಲೆಕ್ಟ್ರಾನಿಕ್, ಮೊಬೈಲ್ ಸಂಪರ್ಕದ ಕೊರತೆ ಇಲ್ಲ. ಎಂದೂ ತಪ್ಪಿಯೂ ಅವನು ಅಂಥ ಫೋನುಗಳಲ್ಲಿ ಮಾತಾಡುವುದಿಲ್ಲ. ಇವನ ಚಲನವಲನದ ಮೇಲೆ ಕಣ್ಣಿಟ್ಟಿರುವ ಅಮೆರಿಕನ್‌ರು, ಯಾವ ಕ್ಷಣದಲ್ಲಾದರೂ ಫೋನು ಸಂಪರ್ಕ ಪತ್ತೆ ಹಚ್ಚಿ, ನಿಂತ ನೆಲದಲ್ಲಿಯೇ ಅವನನ್ನು ಕೊನೆ ಗಾಣಿಸುತ್ತಾರೆ ಎಂಬ ಅಂಜಿಕೆ ಇದೆ. ಆತ ಹೇಳಬೇಕಾದ ಮಾತೆಲ್ಲ ಫೋನಿನ ಮೂಲಕ ಆಪ್ತರಿಂದಲೇ ರವಾನೆಯಾಗುತ್ತದೆ. ಕಟ್ಟಾ ಧಾರ್ಮಿಕ ನಂಬಿಕೆಯ ಬಿನ್‌ಲ್ಯಾಡೆನ್ ಸೂರ್ಯೋದಯಕ್ಕೆ ಮುಂಚೆಯೇ ಎದ್ದು ನಮಾಜು ಮುಗಿಸಿ, ಖುರಾನ್ ಪಠಿಸುತ್ತಾನೆ. ಇಲ್ಲವೆ ಧಾರ್ಮಿಕ ಗ್ರಂಥ ಓದುತ್ತಾನೆ. ಆನಂತರ ಸಣ್ಣದೊಂದು ಉಪಾಹಾರ. ಒಣ ಖರ್ಜೂರ, ಮೊಸರು, ಆಫ್ಘನ್ ಬ್ರೆಡ್ ಹಾಗೂ ಬ್ಲಾಕ್ ಟೀ ಇಷ್ಟೇ.

ಮೊದಲೆಲ್ಲ ವ್ಯಾಯಾಮ, ಕಸರತ್ತು ಮಾಡಿ ದೇಹ ಹದವಾಗಿ ಇಟ್ಟುಕೊಂಡಿದ್ದ. ಈಗ ದೇಹದಂಡನೆ ಸಾಧ್ಯವಿಲ್ಲ. ಆಫ್ಘಾನ್‌ನಲ್ಲಿ ರಷ್ಯನರ ವಿರುದ್ಧ ಕಾರ್ಯಾಚರಣೆ ನಡೆಸಿದಾಗ ಬೆನ್ನಿಗಾದ ಗಾಯದಿಂದ, ನೋವು ಇನ್ನೂ ಉಳಿದುಕೊಂಡಿದೆ. ದೇಹದ ದಂಡನೆ ಸಾಧ್ಯವೇ ಇಲ್ಲ. ಆತನಿಗೆ ಏನೋ ಕಾಯಿಲೆ ತಗುಲಿದೆ ಎಂಬ ಪುಕಾರು ಕೂಡ ಇದೆ. ಆದರೆ ಅದೇನೆಂದು ಯಾರಿಗೂ ಸ್ಪಷ್ಟವಾಗಿ ತಿಳಿದಿಲ್ಲ. ಪ್ರಬಲ ಚಿಕಿತ್ಸೆ ಅಗತ್ಯ. ಅದ್ಯಾವುದಕ್ಕೂ ಆತ ಮನಸ್ಸು ಕೊಟ್ಟಿಲ್ಲ.

ಸೌದಿ ಅರೇಬಿಯಾದ ಅಮೆರಿಕಾ ಎಂಬಸಿ ಸೆಂಟರ್ ಬಾಂಬ್ ಪ್ರಕರಣದ ನಂತರ ಬಿನ್ ಲ್ಯಾಡೆನ್ ಮೇಲೆ ಅಲ್ಲಿನವರ ಕಣ್ಣುಬಿದ್ದಿದೆ. ಮೂಲ ಸೌದಿ ಅರೇಬಿಯಾದವನಾದ ಈತ ಈಜಿಪ್ಟ್‌ಗೆ, ಅಲ್ಲಿಂದ ಪಾಕಿಸ್ತಾನಕ್ಕೆ, ನಂತರ ಅಫ್ಘಾನಿಸ್ಥಾನಕ್ಕೆ ಜಿಗಿದ ಮೇಲೆ ಆತ ಎಲ್ಲಿದ್ದಾನೆ ಎಂದು ಪತ್ತೆ ಹಚ್ಚುವುದು ಕಷ್ಟವಾಗಿದೆ. ತಾಲೀಬಾನ್ ಉಗ್ರಗಾಮಿಗಳ ಬೆಂಬಲಕ್ಕೆ ನಿಂತ ಈತ, ಅಲ್ಲಿನ ಧರ್ಮಗುರುಗಳಿಗೆ ತೀರಾ ಬೇಕಾದ ಮನುಷ್ಯ. ತಾಲೀಬಾನ್ ಸಂಘಟನೆಯ ಮುಖ್ಯ ಧರ್ಮಗುರು ಒಂದು ಕಣ್ಣಿನ ಮುಲ್ಲಾ ಓಮರ್ ಜೊತೆ ಈತನಿಗೆ ಅನ್ಯೋನ್ಯ ಸಂಬಂಧ. ಮುಲ್ಲಾ ಓಮರ್‌ಗೆಂದೇ ಬಿನ್‌ಲ್ಯಾಡೆನ್ ಕಾಂದಹಾರನ ಪಶ್ಚಿಮದ ಅಂಚಿನಲ್ಲಿ ಶ್ರೀಮಂತ ಬಂಗಲೆ ಕಟ್ಟಿಸಿಕೊಟ್ಟಿದ್ದಾನೆ.

ಕಾಂದಹಾರ್‌ನ ಹೊಸ ಮಸೀದಿ ಕಟ್ಟಲು ಆತ ಹಣ ಒದಗಿಸಿದ್ದೂ ಇದೆ. ಅದೇ ಮಸೀದಿಯಲ್ಲಿ ಆತ ಕಳೆದ ಜನವರಿಯಲ್ಲಿ ಈದ್ ಹಬ್ಬದ ವೇಳೆ ಪ್ರಾರ್ಥನೆ ಸಲ್ಲಿಸಿದ್ದು ಕಂಡವರಿದ್ದಾರೆ. ಮೂರು ವರ್ಷದ ಹಿಂದೆ ತಾಲೀಬಾನ್‌ಗಳು ಕಾಬೂಲ್ ವಶಪಡಿಸಿಕೊಳ್ಳಲೂ ಆತ ನೆರವಾದದ್ದಿದೆ.

ಕಳೆದ ಅಕ್ಟೋಬರ್ ವೇಳೆಗೆ ತಾಲಿಬಾನ್‌ಗಳ ಮೇಲೆ ಅಮೆರಿಕಾದ ಒತ್ತಡ ಹೆಚ್ಚಿತು. ಒಸಾಮ ಬಿನ್ ಲ್ಯಾಡೆನ್‌ನನ್ನು ಹಿಡಿದೊಪ್ಪಿಸದೇ ಇದ್ದರೆ, ಕಾರ್ಯಾಚರಣೆಗೆ ಮುಂದಾಗುವುದು ಅನಿವಾರ್ಯ ಎಂದು ಖುದ್ದು ಕ್ಲಿಂಟನ್ ಪ್ರಕಟಿಸಿದ.

ಆತ ಇದ್ದಕ್ಕಿದ್ದ ಹಾಗೆ ಕಾಂದಹಾರ್‌ನಿಂದ ಕಾಣೆಯಾದ. ಅವನೆಲ್ಲಿದ್ದಾನೋ ತಿಳಿಯದು ಎಂದು ತಾಲಿಬಾನ್‌ಗಳು ಕೈತೊಳೆದುಕೊಂಡರು.

ಡಿಸೆಂಬರ್ ಮೂರನೇ ವಾರದಲ್ಲಿ ಲ್ಯಾಡೆನ್ ಕಾಂದಹಾರದ ಹೊರವಲಯದ ಶಿಬಿರ ಒಂದರ ಮುಂದೆ ಪಾಕ್ ಮತ್ತು ಅರಬ್ ಪತ್ರಕರ್ತರಿಗೆ ಸಂದರ್ಶನ ನೀಡಿದ್ದು ಪತ್ತೆಯಾಯಿತು. ಜನವರಿಯಲ್ಲಿ ಈದ್ ಹಬ್ಬದ ಪ್ರಾರ್ಥನೆ ಕೂಡ ಅದೇ ಊರಿನ ಹೊಸ ಮಸೀದಿಯಲ್ಲಿ ಆತ ಸಲ್ಲಿಸಿದ. ಮುಲ್ಲಾ ಓಮರ್ ಹಾಗೂ ಲ್ಯಾಡೆನ್ ಕಾಂದಹಾರ್‌ನ ಸರೋವರಗಳಲ್ಲಿ ಮೀನು ಹಿಡಿಯಲು ಹೋಗುತ್ತಾ ಇದ್ದುದು ಕಂಡವರಿದ್ದಾರೆ. ಅವರ ಕೈಯಲ್ಲಿ ಮೀನು ಗಾಳಗಳಲ್ಲದೆ, ಹ್ಯಾಂಡ್ ಗ್ರೆನೇಡುಗಳೂ ಇರುತ್ತಿದ್ದವೆಂದೂ ಹೇಳಲಾಗುತ್ತಿದೆ.

ಇತ್ತೀಚಿನ ವರದಿಯಂತೆ ಜಲಾಲಾಬಾದ್‌ನಿಂದ ಹತ್ತು ಕಿಲೋಮೀಟರ್ ದೂರದಲ್ಲಿ ಬಿನ್‌ಲ್ಯಾಡೆನ್ ತೋಟದ ಮನೆಯೊಂದು ಖರೀದಿಸಿದ್ದಾನೆ ಎಂಬ ಸುದ್ದಿ ಇದೆ. ಇದು ಆಯಕಟ್ಟಿನ ಜಾಗ. ರಷ್ಯನರ ಪ್ರಾಬಲ್ಯದ ಕಾಲಕ್ಕೆ ಇದೊಂದು ಸಮುದಾಯ ಕೃಷಿ ಕೇಂದ್ರ ಆಗಿತ್ತು. ಈಗ ಅಲ್ಲಿ ರಷಿಯಾದಲ್ಲಿ ತಯಾರಾದ ಟ್ರ್ಯಾಕ್ಟರುಗಳು ಕೆಟ್ಟು ನಿಂತಿವೆ. ಇರುವ ಒಂದೆರಡು ಮನೆಗಳೂ ವಾಸ ಯೋಗ್ಯವಲ್ಲ. ಈ ಸುದ್ದಿ ತಿಳಿದು 'ಅಬ್ಸರ್ವರ್' ಪತ್ರಿಕೆಯ ವರದಿಗಾರರು ಸ್ಥಳಕ್ಕೆ ಭೇಟಿ ನೀಡಿದಾಗ ಕಂಡ ದೃಶ್ಯ ಇದು. ಜಲಾಲಾಬಾದ್‌ನ ಜಿಲ್ಲಾಧಿಕಾರಿ ಕೂಡ ಆ ಜಮೀನು ಯಾರಿಗೂ ಕೊಟ್ಟಿಲ್ಲ ಎಂದೇ ಹೇಳುತ್ತಾರೆ.

ಲ್ಯಾಡೆನ್ ಈ ಜಾಗ ಆರಿಸಿಕೊಳ್ಳಲು ಕಾರಣವೂ ಇದೆ. ತೋಟದ ಮನೆಗೆ ಬರಲು ಸರಿಯಾದ ರಸ್ತೆ ಇಲ್ಲ. ಆದರೆ, ಆತನಿಗೆ ಜಲಾಲಾಬಾದ್ ಹತ್ತಿರ. ಅಲ್ಲಿಂದ ಐವತ್ತು ಕಿಲೋಮೀಟರ್ ಪ್ರಯಾಣಿಸಿದರೆ ಪಾಕಿಸ್ತಾನದ ಗಡಿ. ಖೈಬರ್ ಕಣಿವೆ ದಾಟಿ ಮುಂದೆ ನಡೆದರೆ ಪೇಷಾವರ್. ಜನರಿಂದ ದೂರವಾದ ಆ ಜಮೀನಿನಲ್ಲಿ ಉಗ್ರಗಾಮಿಗಳಿಗೆ ಆತ ಶಿಬಿರ ನಡೆಸಬಹುದು. ಅದಕ್ಕಿಂತ ಮುಖ್ಯವಾಗಿ ಜಮೀನಿನಲ್ಲಿ ಅಫೀಮು ಬೆಳೆದು, ತಯಾರಿಸಿ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ರವಾನಿಸಬಹುದು. ಈಗಾಗಲೇ ಕಾಂದಹಾರ್ ಮತ್ತಿತರ ಕಡೆಗಳಲ್ಲಿ ಶಿಬಿರಗಳನ್ನು ಮಾಡಿಕೊಂಡಿರುವ ಬಿನ್‌ಲ್ಯಾಡೆನ್ ಕಾಂದಹಾರ್, ಜಲಾಲ್‌ಬಾದ್, ಬೆಟ್ಟಗುಡ್ಡಗಳ ಸೀಮೆಯಾದ ಓರುಝುಗಾನ್ ನಡುವೆ ಸುತ್ತಾಡುತ್ತಿದ್ದಾನೆ. ತನ್ನ ಅನಾರೋಗ್ಯದ ನಡುವೆಯೂ ದಿನಾ ಇನ್ನೂರು ಕಿಲೋಮೀಟರ್‌ಗಳಷ್ಟು ಹದಗೆಟ್ಟ ರಸ್ತೆಗಳಲ್ಲಿ ಪ್ರಯಾಣ. ಇಷ್ಟೆಲ್ಲ ಇದ್ದರೂ ಜಲಾಲಾಬಾದ್ ಸಮೀಪದ ತೋಟದ ಮನೆಯೇ ಆತನ ಅಡ್ಡೆ ಆದಂತಿದೆ. ಅಲ್ಲಿ ಎರಡು ಸುತ್ತು ಅಂಗರಕ್ಷಕರ ಪಡೆಯ ಅಭೇದ್ಯ ಕೋಟೆ ಇದೆ.

ಒಸಮಾ ಬಿನ್ ಲ್ಯಾಡೆನ್ ಎಷ್ಟೇ ಶ್ರೀಮಂತನಿದ್ದರೂ, ತಾಯ್ನಾಡಾದ ಸೌದಿ ಅರೇಬಿಯಾದಲ್ಲಿಯೂ ಅವನಿಗೆ ರಕ್ಷಣೆ ಇಲ್ಲ. ಕಷ್ಟದ ಜೀವನಕ್ಕೆ ಒಗ್ಗಿಹೋಗಿರುವ ಲ್ಯಾಡೆನ್‌ಗೆ ಸೌಕರ್ಯ, ಸವಲತ್ತುಗಳ ಅಗತ್ಯವಿಲ್ಲ. ಅಫ್ಘಾನರ ಹಾಗೆ ಮೆತ್ತನೆಯ ಹಾಸು, ದಿಂಬುಗಳು ಇಲ್ಲದೆಯೇ ಬದುಕು ಸಾಗಿಸಬಲ್ಲ.

ಅವನ ಬೇಟೆಗಾಗಿ ಜಗತ್ತು ಸಜ್ಜಾಗಿದೆ. ಇಲೀ ಬೆಟ್ಟದಲ್ಲಿ ಅಡಗಿಕೊಂಡಿದೆ.

ಈಗ ಕಾರ್ಗಿಲ್‌ನಲ್ಲಿ ಕಾಣಿಸಿಕೊಂಡ ಅಕ್ರಮಣಕಾರರಲ್ಲಿ, ಮೂರು ಸಂಘಟನೆಗಳು ಲ್ಯಾಡೆನ್‌ಗೆ ನಿಷ್ಠ. ಆ ಕಾರಣಕ್ಕೇ ಪಾಕಿಸ್ತಾನ ಹಿಂದೆ ಸರಿಯಬೇಕೆಂದು ಕ್ಲಿಂಟನ್ ಸೂಚಿಸಿದ್ದು.

ಕಾರ್ಗಿಲ್‌ವರೆಗೂ ಕೈಚಾಚಿರುವ ಬಿನ್‌ಲ್ಯಾಡೆನ್ ಸುಮ್ಮನೆ ಕೂರುವ ಜಾಯಮಾನದವನಲ್ಲ. ಧರ್ಮ, ಪಂಥಗಳ ಹೆಸರಲ್ಲಿ ಕ್ರೌರ್ಯ ಮೆರೆಸುತ್ತಾ ಇತಿಹಾಸವನ್ನು ಹಿಂದೊತ್ತುವ ಕ್ರಿಯೆಯಲ್ಲಿ ನಿರತನಾದ ಲ್ಯಾಡೆನ್ ಇತ್ತ ತಾಲೀಬಾನ್‌ಗಳಿಗೂ ಬೇಕು, ಅತ್ತ ಸೌದಿ ಅರೇಬಿಯಾ ಮತ್ತು ಅಮೆರಿಕಾಗಳಿಗೂ ಬೇಕು. ■

ಹುಬ್ಬಳ್ಳಿಯ ವೈಶ್ಯಬ್ಯಾಂಕ್ ನೌಕರ ಅಶೋಕ ಲಕ್ಷ್ಮಣ ಬಾಬರ್ ಕಳೆದ ಹದಿನಾರು ವರ್ಷಗಳಲ್ಲಿ ಒಮ್ಮೆಯೂ ರಜೆ ತೆಗೆದುಕೊಂಡಿಲ್ಲ. ಉಳಿದ ಸೇವಾವಧಿಯಲ್ಲಿ ಇದೇ ಕ್ರಮ ಮುಂದುವರೆಸಿ ದಾಖಲೆ ನಿರ್ಮಿಸುವ ಉದ್ದೇಶ ಆತನದು.

1983ರಲ್ಲಿ ಬ್ಯಾಂಕ್ ಸೇರಿದ ಆತ ಏಳು ವರ್ಷದ ನಂತರ ಅಪಘಾತಕ್ಕೆ ಸಿಲುಕಿದಾಗಲೂ, ಆಸ್ಪತ್ರೆಗೆ ಹೋಗಿ ಬ್ಯಾಂಡೇಜು ಮಾಡಿಸಿಕೊಂಡು ಸೀದಾ ಕರ್ತವ್ಯದ ಮೇಲೆ ಹಾಜರಾದರು ಪುಣ್ಯಕ್ಕೆ. ಇವರ ಮದುವೆ ಭಾನುವಾರ ನಡೆದದ್ದರಿಂದ ರಜೆ ಬೇಡವಾಯಿತು. ಆದರೆ, ತಂದೆ ಸತ್ತದಿನ ಆತ ಬ್ಯಾಂಕಿನ ಕರ್ತವ್ಯ ನಿರ್ವಹಿಸಿದ ನಂತರವೇ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

★


ಹಿರಿಯ ಕಾಂಗ್ರೆಸ್ ನಾಯಕ ಬಿ.ಜನಾರ್ದನ ಪೂಜಾರಿ ಮಳೆಯ ಪ್ರತಾಪದಿಂದಾಗಿ ಮನೆಯಿಂದ ಹೊರಬರಲು ದೋಣಿ ಆಶ್ರಯಿಸಿದ ಘಟನೆ ಈಚೆಗೆ ನಡೆಯಿತು. ಅವರ ಊರಾದ ಬಂಟ್ವಾಳದ ಮನೆ ಮಳೆ ನೀರಿಂದ ಸುತ್ತುವರೆದಿತ್ತು. ಇವರಿಗೆ ತುರ್ತಾಗಿ ದೆಹಲಿಗೆ ಹೋಗುವ ಕಾರ್ಯಕ್ರಮ ಬಿತ್ತು. ಅದಕ್ಕೆ ಮಂಗಳೂರಿನ ಬಜಪೆ ವಿಮಾನ ನಿಲ್ದಾಣ ಮುಟ್ಟಬೇಕು. ಆದರೆ ಮನೆಯಿಂದ ಹೊರಬೀಳುವುದು ಹೇಗೆ? ಕೊನೆಗೆ ಊರಿನವರು ಉಪಾಯ ಮಾಡಿ ಪೂಜಾರಿಯವರನ್ನು ದೋಣಿಯೇರಿಸಿದರು. ಮಳೆ ನೀರಲ್ಲಿ ಹುಟ್ಟು ಹಾಕುತ್ತಾ ದೋಣಿಯನ್ನು ರಾಷ್ಟ್ರೀಯ ಹೆದ್ದಾರಿಗೆ ತರಲಾಯಿತು. ಅಲ್ಲಿಂದ ಅವರು ಕಾರ್‌ನಲ್ಲಿ ಬಜಪೆ ವಿಮಾನ ನಿಲ್ದಾಣ ಸೇರಿದರು.

★

ಒಂದಲ್ಲ, ಎರಡಲ್ಲ 482 ನಿಘಂಟುಗಳನ್ನು ಒಮ್ಮೆಲೇ ನೀವು ಬಳಸಬಹುದು. ಯಾವುದೇ ನಿಘಂಟು ಹೊತ್ತು ಓಡಾಡಬೇಕಾದ್ದಿಲ್ಲ. ಪುಟ ತಿರುಗಿಸಿ ಹುಡುಕುವ ಗೋಜಿಲ್ಲ. ಇದು ಸಾಧ್ಯವಾಗಿರುವುದು ಇಂಟರ್‌ನೆಟ್‌ನಲ್ಲಿ. ಯೂರೋಪಿಯನ್ ಮತ್ತಿತರ ಭಾಷೆಗಳ 482 ನಿಘಂಟುಗಳನ್ನು ಒಂದೆಡೆ ವೆಬ್ ಪೇಜಿನಲ್ಲಿ ತಂದಿದ್ದು, ಇದರಲ್ಲಿ 22800 ಲಕ್ಷ ಪದಗಳಿವೆ.

ಮೇರಿಯೋ ಪುಜೋ

ಜನಪ್ರಿಯತೆಯಿಂದ ಸಂಕೋಚಗೊಂಡ ಲೇಖಕ



ಈ ಲೇಖಕ ಅಮೆರಿಕದ ಪಾಪಿಗಳ ಲೋಕವಾದ ಮಾಫಿಯಾ ಬಗ್ಗೆ ಬರೆದ ಪುಸ್ತಕ, 'ಗಾಡ್ ಫಾದರ್' ದಿಂದ ಎಲ್ಲರಿಗೂ ಪರಿಚಯ. ಅದರ ಬಗ್ಗೆ ಇಡೀ ಪ್ರಪಂಚ ರೋಮಾಂಚಿತಗೊಂಡರೆ, ಪುಜೋ ಗೊಂದಲದಲ್ಲಿದ್ದರು. ದಾಸ್ತೋವೆಸ್ಕಿಯನ್ನು ವಿಶ್ವದ ಅತ್ಯುತ್ತಮ ಬರಹಗಾರ ಎಂದು ಬಣ್ಣಿಸಿ, ತಾವೂ ಹಾಗೆಯೇ ಗಂಭೀರ ಲೇಖಕನಾಗಬೇಕೆಂದು ಕಷ್ಟಪಟ್ಟು ಬರೆದ ಫಾರ್ಚೂನ್ ಪಿಲಿಗ್ರಿಮ್ ಎಂಬಂತಹ ಕಾದಂಬರಿಗಳು ಕೇವಲ ಒಳ್ಳೆ ವಿಮರ್ಶೆ ಪಡೆದಿದ್ದವು, ಖರ್ಚಾಗಿರಲಿಲ್ಲ.

ತಮ್ಮ 78ನೇ ವಯಸ್ಸಿನಲ್ಲಿ ಹೃದಯದೌರ್ಬಲ್ಯ ಮತ್ತು ಡಯಾಬಿಟಿಸ್ ರೋಗದಿಂದ ಬಳಲಿ ಕಳೆದ ತಿಂಗಳು ತೀರಿಕೊಂಡ ಮೇರಿಯೋ ಪುಜೋ ಅಧ್ಯಕ್ಷ ಕ್ಲಿಂಟನ್ ಬಗ್ಗೆ ಆಡಿರುವ ಮಾತುಗಳು ಪೂಜೋ ಅವರ ಸಹಜ ಮುಗ್ಧ ಶೈಲಿಯಲ್ಲೇ ಇದೆ.

'ಪಾಪ ಕ್ಲಿಂಟನ್, ಆವಯ್ಯ ಕುಡಿಯುವುದಿಲ್ಲ, ಜೂಜಾಡುವುದಿಲ್ಲ, ಇನ್ನೇನು ಮಾಡಿಯಾನು? ಸಹಜವಾಗಿ ಕೈ ಅಲ್ಲಲ್ಲಿ ದಾರಿತಪ್ಪಿ ಅಡ್ಡಾಡುತ್ತೆ. ಈ ಲೈಂಗಿಕ ಚಟುವಟಿಕೆ ಹಗರಣವನ್ನಾಗಿ ಮಾಡಬೇಕಿರಲಿಲ್ಲ'' ಎಂದರು ಪುಜೋ.

ಪುಜೋ ಕುಡಿಯುತ್ತಿದ್ದರೋ ಇಲ್ಲವೋ, ಜೂಜಾಟ ಅವರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಜೂಜಿನ ಕ್ರಿಯೆ, ಅಮೆರಿಕದಲ್ಲಿ ಅದಕ್ಕಿರುವ ಸವಲತ್ತುಗಳು, ವಿಖ್ಯಾತ ಕ್ಯಾಸಿನೋಗಳು, ಅಹೋ ರಾತ್ರಿ ವಿದೇಶಿ ಪ್ರವಾಸಿಗಳನ್ನು ಆಕರ್ಷಿಸುವ ರೀತಿ, ಮಧ್ಯರಾತ್ರಿ ಮೀರಿ ಜೂಜು ನಡೆಯುವಾಗ, ಜೂಜುಕೋರರು, ಬಳಲಿದಾಗ ಪೈಪಿನ ಮೂಲಕ ಆಕ್ಸಿಜನ್ ಗಾಳಿ ಬಿಟ್ಟು ಅವರೆಲ್ಲರೂ ಪುನಃಶ್ಚೇತನ ಪಡೆದು ಮತ್ತೆ ಜೂಜು ಆಡುವಂತೆ ಮಾಡುವ ಕ್ರಿಯೆಗಳು ಅವರ ಬರವಣಿಗೆಯಲ್ಲಿ ಮಾತ್ರ ಸಹಜವಾಗಿ ಬಂದಿವೆ.

ಪುಜೋ ಜೂಜಿನ ವಿವರಗಳಿಗಾಗಿ ವಿಶ್ವವಿಖ್ಯಾತಿ ಪಡೆದಿಲ್ಲ. ಅಮೆರಿಕದ ಪಾಪಿಗಳ ಲೋಕ ವಾದ ಮಾಫಿಯಾ ಬಗ್ಗೆ ಬರೆದ ಪುಸ್ತಕ, 'ಗಾಡ್ ಫಾದರ್' ದಿಂದ ಎಲ್ಲರಿಗೂ ಪರಿಚಯವಾದದ್ದು. ಅದರ ಬಗ್ಗೆ ಇಡೀ ಪ್ರಪಂಚ ರೋಮಾಂಚಿತಗೊಂಡರೆ, ಪುಜೋ ಗೊಂದಲದಲ್ಲಿದ್ದರು. ದಾಸ್ತೋವೆಸ್ಕಿಯನ್ನು ವಿಶ್ವದ ಅತ್ಯುತ್ತಮ ಬರಹಗಾರ ಎಂದು ಬಣ್ಣಿಸಿ, ತಾವೂ ಹಾಗೆಯೇ ಗಂಭೀರ ಲೇಖಕನಾಗಬೇಕೆಂದು ಕಷ್ಟಪಟ್ಟು ಬರೆದ ಫಾರ್ಚೂನ್ ಪಿಲಿಗ್ರಿಮ್ ಎಂಬಂತಹ ಕಾದಂಬರಿಗಳು ಕೇವಲ ಒಳ್ಳೆ ವಿಮರ್ಶೆ ಪಡೆದಿದ್ದವು, ಖರ್ಚಾಗಿರಲಿಲ್ಲ.

ಐದು ಬೆಳೆದ ಮಕ್ಕಳು, ಹೆಂಡತಿ, ಜೂಜಿನಿಂದಾದ ಸಾಲ ತೀರಿಸಲು ಜನಪ್ರಿಯ ಪುಸ್ತಕ 'ಗಾಡ್‌ಫಾದರ್' ಅವಸರದಲ್ಲಿ ಬರೆದ. ಆದರೂ ಸರಾಗವಾಗಿ ಹೊರಬಂದ ಕೃತಿ. ತನ್ನ ಉತ್ತಮ ಕೃತಿಗಳನ್ನು ರಿಜೆಕ್ಟ್ ಮಾಡಿ ಸಂತೆಗೆ ಮೂರು ಮೊಳ ನೇಯ್ದಂತಹ ಕೃತಿಯನ್ನೇ ಜನ ಆದರದಿಂದ ಸ್ವೀಕಾರ ಮಾಡಿದ್ದು

ಪುಜೋಗೆ ಸಂಕೋಚವನ್ನುಂಟು ಮಾಡಿತ್ತು.

ಮುವತ್ತರ ದಶಕದಲ್ಲಿ ಇಟಲಿಯಿಂದ ಅಮೆರಿಕಕ್ಕೆ ವಲಸೆ ಬಂದ ಸಹಸ್ರಾರು ಕುಟುಂಬಗಳಲ್ಲಿ ಪುಜೋ ತಂದೆ ತಾಯಿ ಅಣ್ಣತಂಗಿಯರೂ ಇದ್ದರು. ಬೆಳೆದದ್ದು ಮಾನಹಟ್ಟನ್ನಿನ ಸ್ಲಂನಲ್ಲಿ. ಅದನ್ನು ಆ ಕಾಲದಲ್ಲೇ ನರಕದ ಅಡಿಗೆಮನೆ (Hells Kitchen) ಎಂದು ಕರೆಯುತ್ತಿದ್ದರು. ಪುಜೋವಿನ ತಮ್ಮಂದಿರು ಸಹಜವಾಗಿ ಹುಡುಗಿಯರ ಚೆಲ್ಲಾಟದೊಂದಿಗೆ ಬೆಳೆದರೆ, ಪುಜೋ ಈ ನರಕದಿಂದ ಹೊರಬರಲು ತವಕಿಸುತ್ತಿದ್ದರು. ಒಳ್ಳೆ ಕೆಲಸ ಸಿಕ್ಕರೆ ದೈಹಿಕ ಬಿಡುಗಡೆ. ಆದರೆ ಮಾನಸಿಕವಾಗಿ ಹೊರಬರಬೇಕಾದರೆ ಬರಹಗಾರನೇ ಆಗಬೇಕೆಂದು ಪರಿಗಣಿಸಿದ್ದರು. ಸಂಕೋಚದ ಸ್ವಭಾವ ಇವರನ್ನು ಸದಾ ಪಬ್ಲಿಕ್ ಲೈಬ್ರರಿಯಲ್ಲೇ ಕಳೆಯುವಂತೆ ಮಾಡಿತು.

ಮುಂದೆ ಸರ್ಕಾರಿ ಕಚೇರಿಯಲ್ಲಿ ಕ್ಲರ್ಕ್ ಕೆಲಸ ಸಿಕ್ಕಿದರೂ, ಸಂಜೆ, ರಾತ್ರಿವೇಳೆ ಬರಹದ ಕ್ರಿಯೆ ನಡೆಯುತ್ತಿತ್ತು. ಆಗ ತಾನೆ ಹೊಸ ಹೊಸ ಮಾದರಿ ಪಾಕ್ಷಿಕ ಪತ್ರಿಕೆಗಳಿಗೆ, ಎಲ್ಲ ಕ್ರಿಯಾಶೀಲ ಬರಹಗಾರರು ಹೊಟ್ಟೆಪಾಡಿಗೆ ಮಾಡುವಂತೆ, ಲೇಖನ ಬರೆದು ಸ್ವಲ್ಪ ದುಡ್ಡು, ಸ್ವಲ್ಪ ತೃಪ್ತಿಪಡೆಯುತ್ತಿದ್ದರು. ಆದರೆ ಗಂಭೀರವಾಗಿ ಮಾಡುತ್ತಿದ್ದುದು ತಮ್ಮ ಕಾದಂಬರಿ ರಚನೆ ಕ್ರಿಯೆ. ಏಳು ವರ್ಷದ ಫಲವಾಗಿ.... 'ಪಿಲಿಗ್ರಿಮ್' ಹೊರಬಂದಿತು. ಇದು ಒಂದು 'Small classic' ಎಂದು ನ್ಯೂಯಾರ್ಕ್ ಟೈಮ್ಸ್ ಬಣ್ಣಿಸಿತು. ಆದರೆ ಪ್ರತಿಗಳು ಖರ್ಚಾಗದೇ ಉಳಿದವು.

ಆ ವೇಳೆಗೆ ಪುಜೋವಿಗೆ ಮದುವೆಯಾಗಿ, ಮಕ್ಕಳಾಗಿದ್ದವು. ಮುಂದಿನ ಕಾದಂಬರಿಯ ಬಗ್ಗೆ ಮುಂಗಡ ಹಣವನ್ನು ಸಾಲವಾಗಿ ಪಡೆಯಲು ಪ್ರಕಾಶಕರ ಬಳಿ ಹೋದಾಗ ತಮ್ಮ ಹಿಂದಿನ ಕಾದಂಬರಿಗಳಲ್ಲಿ ತುಸುವೇತು ಅಲ್ಲಲ್ಲಿ ವಿವರಗಳು ಬಂದಿದ್ದ ಮಾಫಿಯಾ ಬಗ್ಗೆ ಬರೆದಲ್ಲಿ ಸ್ವಲ್ಪ ಹಣ ಕೊಡಬಹುದೆಂದು ಪ್ರಕಾಶಕರು ತಿಳಿಸಿದರು. ಸಾಲ ಪಡೆದ ಪುಜೋ ಬೇಸರದಿಂದಲೇ ಮನೆಗೆ ಹಿಂದಿರುಗಿದ.

ಪುಜೋವಿನ ತಾಯಿ ಚಿಕ್ಕಂದಿನಲ್ಲಿ ಸ್ಲಂನಲ್ಲಿದ್ದಾಗ ತನ್ನ ಮಕ್ಕಳಿಗೆ ಹೇಳಿದ್ದೇ, ಮಾಫಿಯಾ ನಾಯಕರ ರೋಮಾಂಚಕ ಕತೆಗಳು ಬೈಬಲ್‌ನ, ಈಸೋಪನ ಕತೆಗಳಲ್ಲ.

ಮುಂದೆ ಒಂದು ವರ್ಷ ಸುಮ್ಮನೆ ಬರೆದದ್ದೇ ಬರೆದದ್ದು. ಕಛೇರಿಗೆ ಚಕ್ಕರ್ ಹೊಡೆದು, ಲೈಬ್ರರಿಗೆ ಹೋಗಿ, ಪೋಲೀಸ್ ಕಡತದಿಂದ ಹೆಕ್ಕಿ ಪಡೆದ ವಿವರಗಳು, ಗಾಡ್ ಫಾದರ್ ಆಗಿ ಮೂಡಿ ಬಂದಿತು. ಕಛೇರಿಗೂ ಹೋಗದೆ, ಮನೆಯಲ್ಲಿದ್ದ ಒಂದು ಸೋಫಾವಿನ ಮೇಲೆ ಹಸ್ತಪ್ರತಿ, ಪತ್ರಿಕೆಗಳು ಇವುಗಳ ಮಧ್ಯೆ ಆಗಾಗ ತೂಕಡಿಸುತ್ತ ಮನೆಯಲ್ಲಾ ಗಲೀಜು ಮಾಡುತ್ತಿದ್ದ ಎಂದೇ ಅವನ ಹೆಂಡತಿ ಗೊಣಗುತ್ತಿದ್ದಳು.

ಆದರೆ ಮೂಡಿ ಬಂದಿದ್ದು, ಆಗ ಅಮೆರಿಕವನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡು ಪರ್ಯಾಯ ಸರ್ಕಾರ, ವಾಣಿಜ್ಯವನ್ನು ನಡೆಸುತ್ತಿದ್ದ ಆರೇಳು ಮಾಫಿಯಾ ಕುಟುಂಬದ ಚಿತ್ರಣ. ಬಡತನದಲ್ಲಿ ಹುಟ್ಟಿ ಬೆಳೆದು, ಹೊಟ್ಟೆಪಾಡಿಗೆ ಆ ಕಾಲದಲ್ಲೇ ಯಾವುದು Scarcity ಇತ್ತೋ ಅದನ್ನು ಕಾಳಸಂತೆಯಲ್ಲಿ ಮಾರುತ್ತ, ಅದರಲ್ಲಿ ಬಂದ ಹಣವನ್ನು, ಆಗ ರಾಜ್ಯಭಾರ ಮಾಡುತ್ತಿದ್ದ ಡಾನ್‌ಗಳಿಗೆ ಒಪ್ಪಿಸಿ, ಡಾನ್‌ಗಳು ತೀರ ವಿಕೃತವಾದಾಗ ಅವರನ್ನು ಸದ್ದಿಲ್ಲದೆ ತೀರಿಸಿ, ತಾವೇ ಡಾನ್‌ಗಳಾಗಿ, ರಾಜ್ಯಕೋಶದ ಅಧಿಕಾರಿಗಳಾಗಿ, ಬಡವರಿಗೆ ತಮ್ಮದೇ ಆದ ರೀತಿ ನ್ಯಾಯ ಹೇಳುವ ಸ್ಥಾನ ಪಡೆದು ಮಕ್ಕಳೆಲ್ಲವೂ ಓದಿ ಮುಂದೆ ರಾಷ್ಟ್ರಾಧ್ಯಕ್ಷರಾಗಬೇಕಾದ ಪರಿಸ್ಥಿತಿಯ ಚಿತ್ರಣ ಇದು. ಈಗಿನ ಕೆನಡಿ ಕುಟುಂಬವೂ ಮೂಲತಃ ಅಂತಹ ಒಂದು ಮಾಫಿಯಾ ಕುಟುಂಬಕ್ಕೆ ಸೇರಿದ್ದು ಎಂಬ ಸೂಕ್ಷ್ಮವೂ ಅಲ್ಲಿತ್ತು.

ಇನ್ನೂ ಸರಿಯಾಗಿ ತಿದ್ದಿಲ್ಲದ ಕಾದಂಬರಿ ಪ್ರತಿಯನ್ನು ಪುಜೋ ಪ್ರಕಾಶಕರ ಬಳಿ ಕೊಟ್ಟ. ಅದರ ಮೇಲೆ ಕಣ್ಣಾಡಿಸಿ ಪ್ರಕಾಶಕರು ಎಷ್ಟು ಬೇಕು ಎಂದಾಗ ಒಂದು ಲಕ್ಷ ಡಾಲರ್ ಎಂದ. ಮಾತಿಲ್ಲದೆ ಮುಂಗಡ ಕೊಟ್ಟರು. ತನ್ನ ಇಡೀ ಕುಟುಂಬವನ್ನು ಯುರೋಪಿನ ಯಾತ್ರೆಗೆ ಕರೆದುಕೊಂಡು ಹೋದ. ಉಳಿದ ಹಣವನ್ನು ಜೂಜಾಡಿ, ಮಕ್ಕಳಿಗೂ ಜೂಜಾಡುವಂತೆ ಹೇಳಿಕೊಟ್ಟ. ಸಂತೋಷವಾಗಿಯೇ ಎಲ್ಲರೂ ಹಣ ಕಳೆದಾಗ, ತನ್ನ ಮಕ್ಕಳು ತನ್ನಂತೆ ಜಾಣತನದಿಂದ ಜೂಜಾಡುವುದನ್ನು ಕಲಿಯಲಿಲ್ಲವೆಂದು ಕೊರಗಿದ. ಮತ್ತೆ ಅಮೆರಿಕಕ್ಕೆ ಹಿಂದಿರುಗಿ ಮತ್ತೆ ಹಣ ಕೇಳಿದ. ಪ್ರಕಾಶಕರು ಹೋದ ತಿಂಗಳು ಕೊಟ್ಟಿದ್ದು ಏನಾಯಿತು ಎಂದಾಗ ಖರ್ಚಾಯಿತು ಎಂದ. ಸಾಮಾನ್ಯವಾಗಿ ಪ್ರಕಾಶಕರು ಅವರ ಉಪಸಂಪಾದಕರಿಗೆ ಪ್ರತಿ ಕೊಟ್ಟು, ಅಲ್ಲಲ್ಲಿ ತೀಡಿ, ತಿದ್ದಿ, ಪೇಜುಗಟ್ಟಲೆ ಬರಹವನ್ನು ಹೊಡೆದು ಹಾಕಿ, ಕಾದಂಬರಿಯಾಗಿ ಪುಟವಿಟ್ಟ ಚಿನ್ನದಂತೆ ಹೊರತರುತ್ತಾರೆ. ಆದರೆ 'ಗಾಡ್‌ಫಾದರ್'ನ್ನು ಅದರಲ್ಲಿದ್ದ ಬರವಣಿಗೆ, ಚಿತ್ರರಚನೆ, ಪ್ಲಾಟ್‌ನ ಬೆಳವಣಿಗೆ ಕಂಡು ಆವೇಶ, ಅವಸರದಲ್ಲಿ ಆದಷ್ಟೂ ತ್ವರಿತವಾಗಿ ಹೊರತರುವ ಹುನ್ನಾರದಲ್ಲಿದ್ದರು. ಪುಜೋವನ್ನು ಪ್ರಕಾಶಕರು ಕಛೇರಿಗೆ ಒಮ್ಮೆಯೂ ಬಂದು ಹೋಗು ಎನ್ನಲಿಲ್ಲ. ಎಲ್ಲವೂ ಅದ್ಭುತವಾಗಿದೆ ಎಂದರು, ಕೇಳಿದಾಗಲೆಲ್ಲ ಹಣ ಕೊಟ್ಟು ಕಳಿಸಿಬಿಡುತ್ತಿದ್ದರು.

ಗಾಡ್‌ಫಾದರ್ ಹೊರಬಂದಾಗ ಇಡೀ ಅಮೆರಿಕ, ವಿಶ್ವ ರೋಮಾಂಚನ ಗೊಂಡಿತ್ತು. ಒಟ್ಟು ಇಪ್ಪತ್ತೆರಡು ಲಕ್ಷ ಪ್ರತಿ ಮಾರಾಟವಾಗಿತ್ತು. ಮಾಫಿಯಾ ಪ್ರಪಂಚದ ವಿವರಗಳನ್ನು ಅಲ್ಲಲ್ಲಿ ಗುಸು ಗುಸು ಕೇಳಿದ್ದರು, ಅಲ್ಲಲ್ಲಿ ಸ್ವಲ್ಪ ವಿವರಗಳನ್ನು ಓದಿದ್ದರು. ಆದರೆ ಈ ರೀತಿ, ಪಾಪಿಗಳ ಲೋಕದ ರಂಗುರಂಗಿನ, ಹಂಗಿಲ್ಲದೆ ಉಸಿರನ್ನು ಕೈಲಿ ಹಿಡಿದು ಓಡಾಡುವ ಪಾತ್ರಗಳ ಪರಿಚಯವಾಗಿರಲಿಲ್ಲ.

ಆದರೆ ಪುಜೋ ಈ ಕಾದಂಬರಿಯನ್ನು ಇನ್ನೂ ಹತ್ತರಷ್ಟು ಚೆನ್ನಾಗಿ ಬರೆಯಬಹುದಿತ್ತು. ಚರ್ಚೆಗೆ, ಸಲಹೆಗೆ ಒಮ್ಮೆಯಾದರೂ ಪ್ರಕಾಶಕರು - ಉಪ ಸಂಪಾದಕರು ತನ್ನನ್ನು ಕರೆಯಬಾರದಿತ್ತೇ! ಎಂದು ತಲೆ ಚಚ್ಚಿಕೊಂಡ.

ಮಾಫಿಯಾ ಪ್ರಪಂಚವನ್ನೇ ಸಿಂಪತೆಟಿಕ್ ಆಗಿ ಚಿತ್ರಿಸಿದರಿಂದಲೋ ಏನೋ ಪುಜೋಗೆ ವಿಚಿತ್ರ ಅನುಭವಗಳು ಆದವು. ಹೋಟೆಲಿನಲ್ಲಿ ಊಟ ಮಾಡಿದ ಮೇಲೆ ಬಿಲ್ ಕೊಡಲು ಹೋದಾಗ ಮಾಣಿ ನಿಮ್ಮ ಬಿಲ್ಲನ್ನು ಬೇರೆ ಯಾರೋ ಕೊಟ್ಟಿದ್ದಾರೆ ಎನ್ನುತ್ತಿದ್ದ. ಜೂಜಿನ ಸಾಲವನ್ನು ತೀರಿಸಲು ಹೋದಾಗಲೂ ಇದೇ ರೀತಿ ಉತ್ತರ ಬರುತ್ತಿತ್ತು. ಯಾರು ನನ್ನ ಸಾಲವನ್ನು ತೀರಿಸಿದವರು ಎಂದರೆ ದೂರದಲ್ಲಿದ್ದ ವ್ಯಕ್ತಿಯನ್ನು ತೋರಿಸುತ್ತಿದ್ದರು. ಆಕಡೆ ನೋಡಿದಾಗ, ಹ್ಯಾಟ್ ಹಾಕಿಕೊಂಡ ವ್ಯಕ್ತಿಯೊಬ್ಬ ಇಟಾಲಿಯನ್ ಶೈಲಿಯಲ್ಲಿ ಸಲಾಂ ಮಾಡಿ ಮಾಯವಾಗುತ್ತಿದ್ದ.

ಗಾಡ್‌ಫಾದರ್ ನಂತರ ಪುಜೋ Fools die (ಮೂರ್ಖರು ಸಾಯುತ್ತಾರೆ), ದಿ ಲಾಸ್ಟ್ ಡಾನ್, ಈಗ ಸಾಯುವ ಮುನ್ನ ಒಮರ್ಟಾ ಬರೆದ. ಎಲ್ಲವೂ ಮಾಫಿಯಾ ಒಳ ಪ್ರಪಂಚದ ವಿವರಗಳೇ. ಯಾವುದೂ ಗಾಡ್‌ಫಾದರ್ ಅಷ್ಟು ಜನಪ್ರಿಯವಾಗಲಿಲ್ಲ. ಪುಜೋಗೆ ಬೇಸರವೂ ಆಗಿರಲಿಲ್ಲ. ಕ್ಲಾಸಿಕ್ ಪುಸ್ತಕ ಬರೆಯಲು ಆಶಿಸಿದ್ದ, ಜನ ಕೊಂಡಾಡಿದ್ದು ಕೇವಲ ರೋಚಕ ಬರವಣಿಗೆ. ಆ ವೇಳೆಗೆ ಸರಳವಾದ ಏಳೆಂಟು ಪದಗಳಿಗೆ ಮೀರದ ಪರಿಣಾಮಕಾರಿಯಾದ ವಾಕ್ಯಗಳ ಮೂಲಕ ಕತೆ ಹೇಳುವ ಶೈಲಿ ಕರಗತವಾಗಿತ್ತು. ಬೇರೆ ಬರಹಗಾರರಿಗೆ ಮಾದರಿಯೂ ಆಗಿತ್ತು. ಗಾಡ್‌ಫಾದರ್, ಚಿತ್ರಕಥೆ, ಗಾಡ್‌ಫಾದರ್ -2 ಚಿತ್ರಕಥೆ, ಸೂಪರ್‌ಮ್ಯಾನ್ ಸರಣಿಯ ಮೊದಲ ಚಿತ್ರಕ್ಕೂ ಚಿತ್ರಕತೆ ಬರೆದು, ಪೂಜೋ ಎರಡು ಬಾರಿ ಆಸ್ಕರ್ ಪ್ರಶಸ್ತಿ ಪಡೆದ. ಹಾಲಿವುಡ್‌ನ ಆಸ್ಕರ್ ಪ್ರಶಸ್ತಿ ಸಮಾರಂಭದ ಚಿತ್ರಣವನ್ನು ನೀವು, ಗಾಡ್‌ಫಾದರ್‌ಗಿಂತ ರೋಚಕವಾಗಿರುವ, ಗಾಡ್‌ಫಾದರ್ ಪೇಪರ್ಸ್ ಎಂಬ ಪುಸ್ತಕದಲ್ಲಿ ಓದಲೇ ಬೇಕು.

ಪುಜೋ ತೀರ ಸಂಕೋಚದ ಮನುಷ್ಯ! ತನ್ನ ಬಗ್ಗೆ, ತನ್ನ ಬರಹಗಳ ಬಗ್ಗೆ ಪ್ರಚಾರ ಪಡೆಯಲು ಸಂಕೋಚ. ಡಯಾಬಿಟೀಸ್ ಹೃದಯವನ್ನು ದುರ್ಬಲಗೊಳಿಸಿತ್ತು. ಆದರೆ ಸ್ಲಂನಿಂದ ದೂರ ದೂರ ಬಂದು, ವಿಶಾಲವಾದ ಮನೆಯೊಂದರಲ್ಲಿ ಐದು ಮಕ್ಕಳು, ಒಂಬತ್ತು ಮೊಮ್ಮಕ್ಕಳೊಂದಿಗೆ ಕಾಲ ಕಳೆದ. ಕಣ್ಣು ದುರ್ಬಲಗೊಂಡಿದ್ದರೂ ತಿಂಗಳಿಗೆ ಸಾವಿರ ಡಾಲರಷ್ಟು ಪುಸ್ತಕ ಕೊಂಡು ಓದಿ ಹರಟುತ್ತಿದ್ದ. ತನ್ನ ಕೋಣೆಯಿಂದ ಕೆಳಗಿನ ಅಂತಸ್ತಿನಲ್ಲಿದ್ದ ಅಡುಗೆಮನೆಗೆ ನಡೆಯಲೂ ಬಳಲುತ್ತಿದ್ದ. ತನ್ನ ಕೋಣೆಯಿಂದ ಒಂದು ಎಸ್ಕಲೇಟರ್ ಹಾಕಿಸಿದ್ದ. ಅದರ ಮೇಲೆ ನಿಂತು ಸರಿಸೃಪದಂತೆ ಸಾಗುತ್ತ, ಅಪರೂಪಕ್ಕೆ ಕರೆದಿದ್ದ ಮಿತ್ರರಿಗೆ ಸೆಲ್ಯೂಟ್ ಹೊಡೆದು ನಿಂತಲ್ಲೇ ಚಲಿಸುತ್ತಿದ್ದ ಆಕೃತಿಯೇ ಕಡೆಯಲ್ಲಿ ಅವರ ಮಿತ್ರರಲ್ಲಿ ಉಳಿದಿದ್ದದ್ದು. 'ಒಮರ್ಟಾ' ಬರೆದಾಯ್ತಲ್ಲ. ಇನ್ನು ನಾನು ನಿರಾಳ ಸಾಯಬಹುದು' ಎಂದು ಮೊದಲೇ ಹೇಳಿದ್ದ.

■ ರಾಜು

ಸಂಗೀತಗಾರನ ತೇರು

ಗದಗದಲ್ಲಿ ಅಪರೂಪದ ಜಾತ್ರೆಯೊಂದು ಈ ಶತಮಾನದ ಮಧ್ಯಭಾಗದಿಂದ ಪ್ರತಿವರ್ಷ ನಡೆಯುತ್ತಿದೆ. ಈ ಜಾತ್ರೆ ಉಳಿದ ಜಾತ್ರೆಗಳಂತಲ್ಲ. ಈ ಜಾತ್ರೆಯಲ್ಲಿ ಹರಿವ ತೇರು ಒಬ್ಬ ಸಂಗೀತಗಾರನದು. ಈತ ಬೇರಾರೂ ಅಲ್ಲ. ಸಂಗೀತ ಕ್ಷೇತ್ರದ ಎಲ್ಲರೂ ತುಂಬು ಗೌರವದಿಂದ ಸ್ಮರಿಸುವ ಪಂಚಾಕ್ಷರ ಗವಾಯಿ. ಅವರೇ ಇಲ್ಲಿ ಕ್ರಿಯಾಚೈತನ್ಯದೊಂದಿಗೆ ಸೂಕ್ಷ್ಮಕಾಯದಲ್ಲಿ ನೆಲೆಗೊಂಡಿದ್ದಾರೆ. ತಮ್ಮ ಹುಟ್ಟಿನೊಂದಿಗಿನ ಅಂಧತ್ವದ ಮಿತಿಗಳನ್ನು ತೊಡೆದುಕೊಳ್ಳುವಂಥ ಔನ್ನತ್ಯದ ಬಾಳನ್ನು, ಎಲ್ಲ ಕಷ್ಟ ಪರಂಪರೆಗಳ ನಡುವೆಯೂ ದಾಟಿದವರು ಪಂಚಾಕ್ಷರ ಗವಾಯಿಗಳು. ಸಾವಿರಾರು ಅಂಧರ, ಸುಪ್ತ ಪ್ರತಿಭೆ ಹುದುಗಿದ ಮಕ್ಕಳ ಬಾಳು ಸಂಗೀತ ಕಲೆಯಲ್ಲಿ ವಿಕಸನಗೊಳ್ಳಲು ದೇಶದಲ್ಲೇ ಅಪೂರ್ವವೆನಿಸುವ ಸಂಗೀತ ಶಾಲೆಯೊಂದನ್ನು ಹುಟ್ಟು ಹಾಕಿದವರು ಈ ಗವಾಯಿಗಳು. ಅವರ ಪುಣ್ಯತಿಥಿಯಂದು ಈ ಅಪರೂಪದ ತೇರು ಹರಿಯುತ್ತದೆ. ಇದಕ್ಕಾಗಿ ಅವರ ಶಿಷ್ಯ ಬಳಗವಷ್ಟೇ ಅಲ್ಲದೆ ಈ ಪ್ರಾಂತ್ಯದ ಹಳ್ಳಿಗಾಡು ಜನರೂ ಬಂದು ನೆರೆಯುತ್ತಾರೆ.



ತಿರುವೈಯೂರಿನಲ್ಲಿ ತ್ಯಾಗರಾಜರ, ಕುಂದಗೋಳದಲ್ಲಿ ಸವಾಯಿ ಗಂಧರ್ವರ ಆರಾಧನೆ ನಡೆಯುತ್ತದೆ. ಇವೆರಡೂ ಜನಪ್ರಿಯ. ಅಲ್ಲಿನ ಸಂಗೀತ ಸೇವೆ ಅನುಪಮ. ಅಷ್ಟು ಜನಪ್ರಿಯ ಆಗಿರದ ಸಂಗೀತ ಸೇವೆಯೊಂದು ಗದಗದಲ್ಲಿ ಪ್ರತಿವರ್ಷ ನಡೆಯುತ್ತಿದೆ.

ಬರಿಯ ಸಂಗೀತಗಾರರಷ್ಟೇ ಅಲ್ಲದೆ ಯೋಗಿಯ ವ್ಯಕ್ತಿತ್ವವೂ ಇರುವ ಪಂಚಾಕ್ಷರ ಗವಾಯಿಗಳಿಗೆ ಈ ಜಾತ್ರೆಯಲ್ಲಿ ಸಲ್ಲುವ ಗೌರವಾರ್ಪಣೆ ಎಂಥವರ ಮೈಮನಗಳನ್ನೂ ತಟ್ಟುತ್ತದೆ. ಉತ್ತರ ಕರ್ನಾಟಕದ ವಾದ್ಯಗಳ ವೈವಿಧ್ಯ, ಅವುಗಳ ನಾದ-ಲಯ ತೇರಿಗಾಗಿ ಮೊಳಗುವುದು ಒಂದು ರೀತಿಯದಾದರೆ, ತೇರು ಹರಿದ ಮೇಲೆ ರಾತ್ರಿ-ಹಗಲು ನಿರಂತರವಾಗಿ ನಡೆವ ಶಿಷ್ಯ ಪರಂಪರೆಯ ಕಲಾವಿದರ ಸಂಗೀತ ಕಾರ್ಯಕ್ರಮಗಳು ಮತ್ತೊಂದು ಬಗೆಯ ನಾದದ ಹೊಳೆ ಹರಿಸುತ್ತವೆ. ದೇಶದ ಹಲವೆಡೆ ನಡೆವ ಅಹೋರಾತ್ರಿಯ ಸಂಗೀತ ಕಾರ್ಯಕ್ರಮಗಳು ಮಾಧ್ಯಮದವರ ಪ್ರಚಾರದಲ್ಲಿ ಪ್ರಸಿದ್ಧಿ ಪಡೆದಿವೆ; ಆದರೆ ಇಲ್ಲಿ, ನಡೆವ ರಾತ್ರಿ-ಹಗಲಿನ ನಿರಂತರ ಕಾರ್ಯಕ್ರಮಗಳು ಮಾಧ್ಯಮದ ಹೊರತಾಗಿಯೇ ಅಪರೂಪದ ಸಂಗೀತಲೋಕದಲ್ಲಿ ವಿಹರಿಸಿದಂತಾಗುತ್ತದೆ. ಈ ವರುಷದಿಂದ ಕಾರ್ಯಕ್ರಮಗಳಿಗೆ 'ಕುಮಾರಶ್ರೀ' ಎಂಬ ಪ್ರಶಸ್ತಿಯ ವಿಶೇಷವೂ ಸೇರಿಕೊಂಡಿದ್ದು, ಮೊನ್ನೆ ನಡೆದ ಜಾತ್ರೆಯಲ್ಲಿ 'ಪ್ರಭುದೇವ ಸರದಾರ', ಅವರು ಈ ಪ್ರಶಸ್ತಿಯ ಮೊದಲ ಗೌರವ ಪಡೆದರು.


ಕರ್ನಾಟಕದವರಾಗಿ ದೇಶದ ದೊಡ್ಡ ಸಂಗೀತಗಾರರಾಗಿ ಹೆಸರು ಪಡೆದ ಪಂಡಿತ ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್, ಭೀಮ್‌ಸೇನ್ ಜೋಷಿ ನಂತರದಲ್ಲಿ ಆ ಎತ್ತರಕ್ಕೆ ಏರುವ ಸಾಧನೆಯನ್ನು ಪಂಚಾಕ್ಷರ ಗವಾಯಿಗಳ ಶಿಷ್ಯ ಪರಂಪರೆ ತೋರುತ್ತಿದ್ದಾರೆ. ಪರಮೇಶ್ವರ ಭಟ್, ಗಣಪತಿ ಭಟ್ ಅಂಥವರು ಈಗಾಗಲೇ ದೊಡ್ಡಗಾಯಕರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವರು ಗವಾಯಿಗಳ ಗರಡಿಯಲ್ಲಿ ಬೆಳೆದ ರಾಜಗುರು ಅವರ ಶಿಷ್ಯರು. ಇವರೊಂದಿಗೆ ತಮ್ಮ ಸ್ಥಾನವನ್ನು ಗಟ್ಟಿಗೊಳಿಸಿಕೊಳ್ಳುತ್ತಿದ್ದಾರೆ ವೆಂಕಟೇಶ ಕುಮಾರ್, ಕುಮಾರದಾಸ್ ಮತ್ತು ಸೋಮನಾಥ ಮರಡೂರರಂಥವರು. ಇವರೆಲ್ಲ ಗವಾಯಿಗಳ ಪರಂಪರೆಗೆ ಸೇರಿದವರೇ ಎಂಬುದು ಗಮನಾರ್ಹ.

ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭಗೊಂಡ 'ವೀರೇಶ್ವರ ಪುಣ್ಯಾಶ್ರಮ' ಆಗ ರಾಜರ ಆಶ್ರಯದಲ್ಲಿ ಬೆಳೆಯಲಿಲ್ಲ. ನಂತರದಲ್ಲಿ ಸರ್ಕಾರದ ನೆರವು ಪಡೆಯುವತ್ತ ಹೊರಳಲಿಲ್ಲ. ಜನರೇ, ಈ ಅಪೂರ್ವ ಸಂಗೀತ ಶಾಲೆ ಇವತ್ತಿನ ಮಟ್ಟಿಗೆ ಬೆಳೆಯಲು ಧನ-ಧಾನ್ಯದ ನೆರವನ್ನು ನೀಡುತ್ತ ಬಂದಿದ್ದು ಈ ದೇಶದಲ್ಲಿ ಅಪೂರ್ವ ನಿದರ್ಶನವೊಂದನ್ನು ತೋರುವಂತಿದೆ. ಎಂಬತ್ತೈದು ವರ್ಷ ದಾಟಿದರೂ ಇಂಥ ಶಾಲೆಯನ್ನು ತಮ್ಮ ಮಾರ್ಗದರ್ಶನದಲ್ಲಿ ನಡೆಸುತ್ತ ಮಾಧ್ಯಮಗಳ ಪ್ರಚಾರದ ಗೋಜಿಗೆ ಹೋಗದಂತಿದ್ದಾರೆ ಪಂಡಿತ ಪುಟ್ಟರಾಜ ಗವಾಯಿಗಳು. ಅವರ ಕಾರ್ಯಕ್ಕೆ ಸಲ್ಲಬೇಕಿದ್ದ ಮನ್ನಣೆಯನ್ನು ಸರ್ಕಾರ ಸರಿಯಾಗಿ ನೀಡದಿದ್ದರೂ ಜನ ಅವರನ್ನು ಕೈಬಿಟ್ಟಿಲ್ಲ. ಕಾವಿ ತೊಡದೆ, ಮಠದ ಪೀಠದಂಥ ಶಕ್ತಿಯಿಲ್ಲದೆ ಸಂಗೀತ ಲೋಕದ ಉನ್ನತ ಸ್ಥಾನದಲ್ಲಿರುವ ಪಟ್ಟರಾಜ ಗವಾಯಿಗಳಿಗೆ ಈವರೆಗೂ ಕ್ಷೇತ್ರದ ಸಂಗೀತ-ನಾಟಕ ಅಕಾಡೆಮಿಯಂಥ ಪ್ರಶಸ್ತಿ ಬಂದಿಲ್ಲದಿರುವುದು ನಮ್ಮ ಸರ್ಕಾರಿ ಸಂಸ್ಥೆಗಳ ಕಾರ್ಯವೈಖರಿಗೆ ಒಂದು ನಿದರ್ಶನ ಎಂಬಂತಿದೆ.

ಪಂಚಾಕ್ಷರ ಗವಾಯಿಗಳ ಬಾಳಿನಲ್ಲಿ ಹಲವಾರು ಪವಾಡಸದೃಶ ಘಟನೆಗಳಿವೆ. ಅವುಗಳಲ್ಲೊಂದು ಇದು: ಗವಾಯಿಗಳು ಬಳಸುತ್ತಿದ್ದ ವಿಶೇಷ ಆಕಾರದ ಪುಟ್ಟ ತಂಬಿಗೆಯೊಂದು ಕಳೆದುಹೋಯಿತು. ಕೆಲ ದಿನಗಳ ನಂತರ ತಮ್ಮ ಸಹಚರನೊಂದಿಗೆ ನಡೆದು ಹೊರಟಿದ್ದ ಗವಾಯಿಗಳು ದಾರಿಯ ಬದಿಯಲ್ಲಿ ಪಾತ್ರೆಗಳನ್ನು ಬೆಳಗುತ್ತ ಕೂತಿದ್ದ ಹೆಂಗಸೊಬ್ಬಳ ಕೈಲಿದ್ದ ಪಾತ್ರೆಯತ್ತ ತಮ್ಮ ಸಹಚರನ ಗಮನ ಸೆಳೆದು 'ತಮ್ಮ, ಆ ಪಾತ್ರೆ ನಮ್ಮದೇನೋ ನೋಡು' ಎಂದರು. ನೋಡಿದರೆ ಅದು ಕಳೆದು ಹೋಗಿದ್ದ ಗವಾಯಿಗಳ ತಂಬಿಗೆಯಾಗಿತ್ತು. ಈ ವಿಷಯ ಕೇಳಿದೊಡನೆ ಆ ಹೆಂಗಸು ತಂಬಿಗೆಯನ್ನು ತೊಳೆದು ಗವಾಯಿಗಳ ಪಾದಕ್ಕಿಟ್ಟು ನಮಸ್ಕರಿಸಿದಳು. ಆಕೆ ಆ ಪಾತ್ರೆಯನ್ನು ಯಾರಿಂದಲೋ ಕೊಂಡಿದ್ದಳು. ಇದನ್ನು ಕಳ್ಳತನ ಮಾಡಿದಾತ ಈಕೆಗೆ ಮಾರಿದ್ದ. ಆದರೆ ಗವಾಯಿಗಳು ಕಣ್ಣಿಂದ ನೋಡದೆ ತಮ್ಮ ಪಾತ್ರೆ ಆಕೆಯ ಕೈಲಿದ್ದುದನ್ನು ಅರಿತದ್ದು ಹೇಗೆ?

■ ಲಿಂಗರಾಜು

ಜಿರಲೆ ಎಂಬ ತರಲೆ ಕೀಟ



ಈ ಕೀಟ ಕಾಫ್ಕಾನ ಸುಪ್ರಸಿದ್ಧ ಕಾದಂಬರಿ ಮೆಟಮಾರ್ಫಸಿಸ್‌ನ ಕೇಂದ್ರ ಪಾತ್ರವಾಗಿದೆ ಎಂಬುದು ಬಹಳಷ್ಟು ಜನಕ್ಕೆ ತಿಳಿಯದು

ಸೊಳ್ಳೆ ಹೊಡೆದು ಸಾಯಿಸಬಹುದು. ಕಚ್ಚಿದ ತಿಗಣೆ ಹೊಸಕಿ ವಿಕೃತ ಖುಷಿಪಡಬಹುದು. ಆದರೆ ಜಿರಲೆ ವಿಚಾರಕ್ಕೆ ಬಂದರೆ, ಬಡಿದು ಕೊಲ್ಲಲು ಪರಕೆಯೇ ಆಗಬೇಕು. ಅಸಹ್ಯ! ಅದನ್ನು ಕೈಯಲ್ಲಿ ಮುಟ್ಟಿದೋರುಂಟೇ! ಕೆಲವು ಮಹಿಳೆಯರಿರುತ್ತಾರೆ. ಲಲನೆಯರು ಎನ್ನುವುದೇ ಸರಿ. ಕರಾಟೆ ಪಟುಗಳಾಗಿ ಎಲ್ಲರನ್ನೂ ನಡುಗಿಸುತ್ತಾರೆ. ಅದೇಕೋ ಜಿರಲೆ ಕಂಡರೆ ಸಾಕು. ಚಿಟ್ಟಂತ ಚೀರಿ ಬಿಡುತ್ತಾರೆ. ಆಗಲೂ ಅಷ್ಟೆ. ಅವರಿಗೆ ಜಿರಲೆ ಕಂಡರೆ ಆಗುವುದು ಹೆದರಿಕೆ ಅಲ್ಲ; ಅಸಹ್ಯ. ಇಂಥ ಅಸಹ್ಯ ಪ್ರಾಣಿ ಮಹಾನ್ ಕಾದಂಬರಿ ಒಂದರ ನಾಯಕ ಎಂದರೆ ಆಶ್ಚರ್ಯವಾಗುತ್ತದೆಯೇ! ಫ್ರಾಂಜ್ ಕಾಫ್ಕಾ ತನ್ನ ಅದ್ಭುತ ಕಾದಂಬರಿ ಮೆಟಮಾರ್ಫಸಿಸ್‌ನಲ್ಲಿ ಬಣ್ಣಿಸಿದ್ದು ಇದೇ ಪ್ರಾಣಿಯನ್ನೇ. ಮಲಗಿದ್ದ ಮನುಷ್ಯ ಅಂಗಾತ ಬಿದ್ದ ಜಿರಲೆಯಾಗಿ ರೂಪಾಂತರ ಹೊಂದಿದ ಸ್ಥಿತಿಯ ಬಣ್ಣನೆ ಅಲ್ಲಿ ಬರುತ್ತದೆ. ಅಮೆರಿಕಾದ ಈ ಕೀಟ ಈಗ ಇಡೀ ಭೂಗ್ರಹದ ತುಂಬಾ ಹರಡಿಕೊಂಡಿದೆ. ಅದಕ್ಕೆ ಅದರ ವೈಜ್ಞಾನಿಕ ಹೆಸರು ಪೆರಿಪ್ಲಾನೆಟಾ ಅಮೆರಿಕಾನ. ಅಮೆರಿಕಾದ ಈ ನಿವಾಸಿ ಭೂಗ್ರಹವೆಲ್ಲ ಆವರಿಸಿಕೊಂಡಿದೆ ಎಂಬುದು ಈ ಗ್ರೀಕ್-ಲ್ಯಾಟಿನ್ ಪದಗಳ ಅರ್ಥ. ಕೀಟ ವರ್ಗದ, ಸಂದಿಪದಿಗಳ ವಂಶಕ್ಕೆ ಸೇರಿದ ಜಿರಲೆ ಕನಿಷ್ಠ ಇನ್ನೂರು ದಶಲಕ್ಷ ವರ್ಷಗಳಿಂದಲೂ ಈ ಭೂಮಿಯ ಮೇಲಿದೆ. ಬೇಕಾದಷ್ಟು ಕೀಟಗಳು, ಇತರ ಜೀವಿಗಳು ನಾಶ ಹೊಂದಿ, ಮಾರ್ಪಾಡಾಗಿ ಏನೆಲ್ಲ ಅವಸ್ಥೆ ಅನುಭವಿಸಿದ್ದರೂ, ಇದೊಂದರಲ್ಲಿ ಅಷ್ಟೊಂದು ವರ್ಷಗಳಿಂದಲೂ ಬದಲಾವಣೆಯೇ ಆಗಿಲ್ಲ ಎನ್ನುವುದು ನಿಜ. ನೂರಾ ಅರವತ್ತು ಮಿಲಿಯನ್ ವರ್ಷಗಳ ಹಿಂದೆ ಉಛ್ರಾಯ ಕಂಡಿದ್ದ ದೈತ್ಯ ಸರೀಸೃಪಗಳಾದ ಡಿನೋಸಾರ್‌ಗಳು ಹೇಳಹೆಸರಿಲ್ಲದಂತಾಗಿವೆ. ಮನುಷ್ಯ ತನ್ನ ಎರಡು ಕಾಲುಗಳ ಮೇಲೆ ನಿಲ್ಲಲು ಆರಂಭಿಸಿದ್ದೇ ಎರಡು ಲಕ್ಷ ವರ್ಷಗಳ ಹಿಂದೆ. ಅಂದರೆ ಜಿರಲೆಯ ಪ್ರಾಚೀನತೆ ಮತ್ತು ಅದರ ಬದುಕುವ ಸಾಮರ್ಥ್ಯದ ಅಗಾಧತೆಯ ಅರಿವಾದೀತು.

ಮನೆಯ ಕೊರೆಯುವ ರೆಫ್ರಿಜಿರೇಟರಿನ ಒಳಗೆ, ಗ್ಯಾಸಸ್ಟೌವ್‌ನ ಉರಿಯುವ ಬರ್ನರ್ ಕೆಳಗೆ, ಗಬ್ಬುನಾಥದ ಮೋರಿ, ತಿಪ್ಪೆಯ ರಾಶಿ.... ಎಲ್ಲಿ ನೋಡಿದರೂ ಕಾಣಲು ಸಿಗುವ ಜಿರಲೆ ಶೀತ ಪ್ರದೇಶದಲ್ಲಿನ ಹಾಗೆ ಉಷ್ಣ ಪ್ರದೇಶದಲ್ಲೂ ಬದುಕಬಲ್ಲದು. ಹಾಗಾಗಿಯೇ ಅದು ಸರ್ವಾಂತರ್ಯಾಮಿ, ಸರ್ವಕಾಲಿಕ. ಇದು ಹೇಗೆ ಸಾಧ್ಯ? ದೇಹ ರಚನೆ ಮತ್ತು ವಿಶಿಷ್ಟ ಆಹಾರ ಸೇವನಾ ಕ್ರಮವೇ ಇದರ ಒಳಗುಟ್ಟು.

ಕೈಟೋನ್ ಎಂಬ ಮೇಣದಂಥ ವಸ್ತುವಿನಿಂದ ಇದರ ಹೊರಮೈ ರಚನೆ. ಈ ಬಾಹ್ಯ ಹಂದರವೇ ಇಡೀ ದೇಹಕ್ಕೆ ಆಧಾರ. ಬೇರೆ ಕೀಟವರ್ಗದ ಜೀವಿಗಳ ಹಾಗೆ ಇದಕ್ಕೂ ಅಸ್ಥಿ ಪಂಜರ ಇಲ್ಲ. ಕಪ್ಪು ಮಿಶ್ರಿತ ಕಂದು ಮೈಬಣ್ಣ. ಇದರಲ್ಲಿ ಹಲವು ರೀತಿಯ ಪ್ರಭೇದಗಳೂ ಉಂಟು. ಬೆಳೆದ ಗಂಡು ಜಿರಲೆಗೆ ರೆಕ್ಕೆಗಳುಂಟು. ಹೆಣ್ಣು ಜಿರಲೆಗೆ, ಎಳೆ ಜಿರಲೆಗೆ ಇಂಥ ಯೋಗವಿಲ್ಲ. ಹೆಣ್ಣು ಜೀವಿಯಲ್ಲಿ ರೆಕ್ಕೆಯ ಪಳೆಯುಳಿಕೆ ಮಾತ್ರ ಕಾಣುತ್ತದೆ. ಪೊರೆ ಕಳಚಿ ಬಂದಾಗ ಅದು ಬಿಳಿ ಜಿರಲೆಯಾಗಿರುತ್ತದೆ. ಇಡೀ ಮೈ ಕೈಟೋನ್ ಎಂಬ ವಸ್ತುವಿನಿಂದಾಗಿದ್ದು ಅತೀವ ಶೀತ, ಉಷ್ಣಗಳನ್ನು ತಡೆದುಕೊಳ್ಳಬಲ್ಲದು. ಹಾಗಾಗಿಯೇ ಇದು ಎಲ್ಲೆಂದರಲ್ಲಿ ಇರಲು ಸಾಧ್ಯ ಆಗಿರುವುದು.

'ಏನಾದರೂ ಮಾಡುತಿರು ತಮ್ಮ' ಎಂದು ಅಡಿಗರು ಹಾಡಿದ ಹಾಗೆ 'ಏನಾದರೂ ತಿನ್ನುತಿರು'' ಎಂದು ಜಿರಲೆಗೆ ಯಾರೋ ದೀಕ್ಷೆ ಕೊಟ್ಟಿರಬೇಕು. ಆಂಟೆನಾದಂಥ ಮೀಸೆ. ಅದರಿಂದ ಬೆದಕುತ್ತಾ ಮುಂದೆ ಸಾಗುವಾಗ ಚಾಚಿಕೊಳ್ಳುವ ಕುತ್ತಿಗೆ. ಅದಕ್ಕೆ ಆರು ತಟ್ಟೆಗಳನ್ನು ಜೋಡಿಸಿ ಮಾಡಿಟ್ಟಂತೆ, ತಲೆಯ ಅರ್ಧಭಾಗ ಬರೀ ಕಣ್ಣು. ಎಲ್ಲ ಕೀಟಗಳಿಗೂ ಇರುವ ಹಾಗೆ ಇದಕ್ಕೂ ಸಂಯುಕ್ತ ಅಕ್ಷಿ. ಬಾಯಲ್ಲಿ ಸೊಂಡಿಲ ಹಾಗೆ ಇದ್ದ ನಳಿಕೆಯ ಪಳೆಯುಳಿಕೆ ಇದೆ.

ಸಿಕ್ಕ ವಸ್ತು ಹಿಡಿಯಲು ನಾನಾ ಬಗೆಯ ಸಣ್ಣ ಸಣ್ಣ ಗರಗಸಗಳನ್ನು ಜೋಡಿಸಿದಂತೆ ಮಾಡಿದ ಮುಂಗಾಲು. ಅದಕ್ಕೂ ಮುನ್ನ ಅಡಕೊತ್ತಿನ ಹಾಗೆ ಸಿಕ್ಕ ವಸ್ತು ಹಿಡಿದು ಕತ್ತರಿಸುವ ಕೋರೆ. ಅದಕ್ಕೆ ಮ್ಯಾಂಡಿಬಲ್ಸ್ ಎಂದೂ ಕರೆಯುತ್ತಾರೆ.

ಮುಂಗಾಲಿಂದ ಹಿಡಿದು, ಕೋರೆಯಿಂದ ಕತ್ತರಿಸಿ ಚೂರಾಗುವ ವಸ್ತು ಗುಳುಂ ಎಂದು ನುಂಗುತ್ತಾ ಮುಂದೆ ಸಾಗುವುದೇ ಇದರ ಕಾಯಕ.

ತಲೆ ಅಂಟಿಕೊಂಡಿರುವುದು ಎದೆ ಅಥವಾ ಪಪೆಗೆ. ಆ ನಂತರದ್ದು ಹೊಟ್ಟೆ. ಮೈಯಲ್ಲಿ ಹರಿಯುವ ರಕ್ತಕ್ಕೆ ಕೆಂಪು ಬಣ್ಣವಿಲ್ಲ. ಕೆಂಪು ರಕ್ತ ಕಣವಿಲ್ಲದ ಇದನ್ನು ಹಿಮೋಫಿಲ್ ಅಥವಾ ದುಗ್ಧರಸ ಎನ್ನುತ್ತಾರೆ. ಕೀಟ ವರ್ಗಗಳಲ್ಲಿ ಒಂದೊಂದು ಕೀಟಕ್ಕೆ ಒಂದೊಂದು ಬಗೆಯ ಆಹಾರ ನಿಗದಿಯಾಗಿರುತ್ತದೆ. ಜೇನು ಕುಡಿಯುವ, ಸೊಪ್ಪು ತಿನ್ನುವ, ಇತರ ಕೀಟ ಹಿಡಿದು ತಿನ್ನುವ; ಹೀಗೆ ನಾನಾ ರೀತಿಯ ಆಹಾರ ಕ್ರಮ ಈ ಕೀಟಗಳದ್ದು. ಯಾವುದೋ ಒಂದು ಬಗೆಯ ಆಹಾರ ದೊರೆಯದಂತಾದರೆ ಅದನ್ನು ನೆಚ್ಚಿ ಬದುಕುವ ಕೀಟಕ್ಕೆ ಉಳಿಗಾಲವಿಲ್ಲ. ಎಷ್ಟೋ ಕೀಟ ಸಂತತಿಗಳೇ ಈ ಕಾರಣಕ್ಕೆ ಸಂಪೂರ್ಣ ನಾಶಗೊಂಡಿವೆ.

ಜಿರಲೆಯ ವಿಶೇಷತೆ ಎಂದರೆ ಅದು ಏನನ್ನು ಬೇಕಾದರೂ ತಿಂದು ಬದುಕಬಲ್ಲದು. ಸತ್ತ ಪ್ರಾಣಿಯ ದೇಹ, ಎಲೆ, ಕಸ, ಮರ, ಒಣಗಿದ ಚರ್ಮ.... ಹೀಗೆ ಏನೆಲ್ಲ ತಿಂದು ಜೀರ್ಣಿಸಿಕೊಳ್ಳುವ ಶಕ್ತಿ ಅದಕ್ಕೆ ಇದೆ ಎಂದೇ ಜಿರಲೆ ಉಳಿದುಕೊಂಡು ಬಂದಿದೆ.

ಇದು ಏನೇನೋ ತಿನ್ನಬಹುದು. ಸಣ್ಣಪುಟ್ಟ ಕ್ರಿಮಿ ಕೀಟಗಳನ್ನು ಭಕ್ಷಿಸಬಹುದು. ಆದರೆ ಇದನ್ನೇ ಹಿಡಿದು ತಿನ್ನುವ ಇನ್ನೊಂದು ಕೀಟ, ಪಕ್ಷಿ ಯಾವುದೂ ಇಲ್ಲದ್ದೇ ಇದಕ್ಕೊಂದು ವರದಾನವಾಗಿದೆ. ಸತ್ತ ಜಿರಲೆಯನ್ನು ಕಾಗೆ, ಇರುವೆ ತಿನ್ನಬಹುದು. ಆದರೆ ಬದುಕಿದ್ದ ಜಿರಲೆ ಹಿಡಿದು ಭಕ್ಷಿಸುವ ಯಾವುದೇ ಜೀವಿ ಇಲ್ಲ. ಇದಕ್ಕೆ ಎಲ್ಲವೂ ಆಹಾರ. ಆದರೆ, ಇದು ಯಾವುದಕ್ಕೂ ಆಹಾರ ಅಲ್ಲ ಎಂಬುದೇ ಸೋಜಿಗ.

ಕೆಲವೇ ತಿಂಗಳು ಬದುಕುವ ಜಿರಲೆಯದು ಅಪಾರ ಸಂತಾನ ಶಕ್ತಿ. ಬೆಳೆದು ವಯಸ್ಸಿಗೆ ಬಂದ ಹೆಣ್ಣು ತಾನು ಆಹಾರ ಹುಡುಕುತ್ತಿರುವಾಗಲೇ ಮೊಟ್ಟೆ ಇಡಬಹುದಾದ ಸೂಕ್ತ ಜಾಗಗಳ ಅನ್ವೇಷಣೆ ನಡೆಸುತ್ತಾ ಹೋಗುತ್ತದೆ. ನೂರಾರು ಮೊಟ್ಟೆಗಳಲ್ಲಿ ಕೆಲವು ಉಳಿದು ಪಕ್ವವಾದರೂ ಸಾಕು, ಜಿರಲೆಯ ಸಂತಾನ ಹಲವು ಪಟ್ಟಾಗಿ ವೃದ್ಧಿ ಹೊಂದುತ್ತಲೇ ಇರುತ್ತದೆ.

ಜೀವ ಜಾಲದಲ್ಲಿ ಯಾವುದೇ ಪ್ರಾಣಿ ನಿರುಪಯುಕ್ತ ಅಲ್ಲ. ಜಿರಲೆಯ ಬಗ್ಗೆ ಮನುಷ್ಯನಿಗೆ ಅಸಹ್ಯ ಇರಬಹುದು. ಆದರೆ ಅದು ಮಾಡುವ 'ಸ್ಕ್ಯಾವೆಂಜಿಂಗ್' ಅಂದರೆ ಜಾಡಮಾಲಿಯ ಕೆಲಸ ಪ್ರಕೃತಿಯ ಜಾಲಕ್ಕೆ ಸಲ್ಲಿಸುವ ಕೊಡುಗೆ. ಆದರೆ, ಇದ್ಯಾವುದನ್ನೂ ಅರಿಯದ ನಾವು ಜಿರಲೆ ಕಂಡರೆ ಹೇಸುತ್ತೇವೆ. ಕೊಲ್ಲುತ್ತೇವೆ. ತೀರಾ ಹೆಚ್ಚಾದರೆ ಕೀಟನಾಶಕ ಸಿಂಪಡಿಸಿ ಕೊಲ್ಲುತ್ತೇವೆ. ಮನೆಯ ಇತರ ಕೀಟಗಳ ಹಾಗೆ ಜಿರಲೆ ಯಾವುದೇ ರೋಗ ಹಠಡುವ ಜೀವಿ ಅಲ್ಲ. ನೊಣ ಸಾಂಕ್ರಾಮಿಕ ರೋಗಕ್ಕೆ ಕಾರಣವಾದರೆ, ಸೊಳ್ಳೆ ಕಡಿತದಿಂದ ಮಲೇರಿಯಾ ಬರುವುದುಂಟು. ಅಂಥ ರೋಗಗಳ್ಯಾವೂ ಜಿರಲೆಯಿಂದ ಹರಡುವುದಿಲ್ಲ. ಇಂಥ ನಿರುಪಯುಕ್ತ, ಅಸಹ್ಯ ಎನಿಸಿಕೊಂಡ ಪ್ರಾಣಿ ಮುಂದೊಂದು ದಿನ ಮಾನವನಿಗೇ ತೀರಾ ಉಪಯುಕ್ತ ಎನಿಸೀತು. ಜಿರಲೆಗಳ ನಿರಂತರತೆ, ಎಲ್ಲ ಕಡೆ ಇರಬಲ್ಲ ಶಕ್ತಿ ಗಮನಿಸಿರುವ ವಿಜ್ಞಾನಿಗಳು ಇದರಿಂದ ಕ್ಯಾನ್ಸರ್‌ಗೆ ಮದ್ದು ಕಂಡು ಹಿಡಿಯಬಹುದೇ ಎಂದು ಚಿಂತಿಸುತ್ತಿದ್ದಾರೆ. ಅವರೆಲ್ಲರ ಪ್ರಯೋಗಕ್ಕೆ ಜಿರಲೆ ಈಗೊಂದು ವಸ್ತು. ನಾಳೆ ಅವರೇನಾದರೂ ಯಶಸ್ಸು ಸಾಧಿಸಿದರೆ ಜಿರಲೆ ಜೀವ ರಕ್ಷಕ ಕೂಡ ಆದೀತು.

■ ಶೇಷಗಿರಿ ಜೋಡೀದಾರ್.

ದೊರೆಯತನಕ ದೂರು

ಮರೆಯಬಾರದ ಚರಿತ್ರೆ

ಪ್ರತಿ ಊರಿಗೊಂದು ಇತಿಹಾಸ ಇದೆ. ಹಾಗೆ ಪ್ರತಿ ಕೇರಿಗೂ ಒಂದು ಸಣ್ಣ ಇತಿಹಾಸ ಇರುತ್ತದೆ. ಕೊಪ್ಪಳದ ಮೂಲ ನಿವಾಸಿ ಆಗಿದ್ದ ಸಾಲಾರ್ ಜಂಗ್, ಹೈದರಾಬಾದಿನ ನಿಜಾಮರ ಬಳಿ ದಿವಾನರಾಗಲು ನಡೆದು ಹೋದ ಹಾದಿ ದೊಡ್ಡದು. ಅದರ ಪಳೆಯುಳಿಕೆಯಾಗಿ ಈಗ ಕೊಪ್ಪಳದಲ್ಲಿ ಉಳಿದುಕೊಂಡಿರುವುದು ಸಾಲಾರ್ ಜಂಗ್ ರಸ್ತೆ ಮಾತ್ರ. ಸಾಲಾರ್ ಜಂಗ್ ಹೆಸರು ಈಗ ಜಗತ್ತಿನ ಎಲ್ಲೆಡೆ ಚಿರಪರಿಚಿತ. ಆತ ಮುಂದಿನ ಪೀಳಿಗೆಗೆ ಬಿಟ್ಟು ಹೋದ ಮ್ಯೂಸಿಯಂ ಬಹುದೊಡ್ಡ ರಾಷ್ಟ್ರೀಯ ಆಸ್ತಿ. ಅಂಥ ವಿಶ್ವಮಾನ್ಯ ವ್ಯಕ್ತಿಯ ಬೇರುಗಳು ಇದ್ದುದು ಕರ್ನಾಟಕದಲ್ಲಿ ಎಂಬುದು ಹುಡುಕಿ ನೋಡಿದವರಿಗೆ ಮಾತ್ರ ತಿಳಿಯುವ ಸಂಗತಿ.

ಹೀಗೆ ದೊಡ್ಡ ಸಾಧನೆ ಮಾಡಿಯೂ, ಸ್ವಲ್ಪ ಕಾಲದ ನಂತರ ಜನರ ಸ್ಮೃತಿ ಪಟಲದಿಂದಲೇ ಮಾಸಿಬಿಡುವ ಎಷ್ಟೋ ಜನರಿದ್ದಾರೆ. ಅಂಥ ವ್ಯಕ್ತಿಯೊಬ್ಬರ ಕತೆ ಇದು. ಸಾಮಾನ್ಯ ನೇಕಾರ ಜನಾಂಗದ ಈ ಹೆಣ್ಣು ಮಗಳು, ತನ್ನ ಸಮುದಾಯಕ್ಕಾದ ಅನ್ಯಾಯ ಸರಿಪಡಿಸಲು, ತನ್ನ ಅದ್ಭುತ ಕಲೆಯನ್ನೇ ಬಳಸಿಕೊಂಡದ್ದು, ಜಾನಪದದ ಕತೆಯಂತೆ ಅನ್ನಿಸಿದ್ದರೂ ಆಶ್ಚರ್ಯವಲ್ಲ.

ಬೆಂಗಳೂರಿನಲ್ಲಿ ಬ್ರಿಟಿಷರ ಕಾಲಕ್ಕೆ ನಡೆದಿರಬಹುದಾದ ಈ ಘಟನೆಯನ್ನು ಹಿರಿಯರೊಬ್ಬರು ನನಗೆ ತುಂಬಾ ಹಿಂದೆ ಹೇಳಿದ್ದರು. ಊರಿನ ಬಗ್ಗೆ ಅಭಿಮಾನ, ಬದಲಾಗುತ್ತಿರುವ ನಾಗರಿಕತೆಯ ಬಗೆಗಿನ ಬೇಸರ ಮತ್ತು ಊರಿನವರಾಗಿಯೂ ಇಲ್ಲಿನ ಬಗ್ಗೆ ಅಭಿಮಾನ ಪಡದ ಪೀಳಿಗೆಯೊಂದು ಇಲ್ಲಿ ತಳ ಊರುತ್ತಿರುವ ಬಗ್ಗೆ ಇದ್ದ ಆತಂಕದಿಂದಲೇ ಅವರು ಮಾತಾಡಿದ್ದರು. ಆದ್ದರಿಂದಲೇ ಕೆಲವು ಸಂಗತಿಗಳನ್ನು ಅವರು ವೈಭವೀಕರಿಸಿರುವ ಸಾಧ್ಯತೆಯೂ ಇದೆ. ಆದರೂ ಅವರು ಹೇಳಿದ ಧಾಟಿಯಲ್ಲಿಯೇ ಘಟನೆ ದಾಖಲಿಸುವ ಯತ್ನ ಇಲ್ಲಿದೆ :

ಕೆಂಪು ಮೂತಿಯವರ ಕಾಲ. ಮೈಸೂರು ದೊರೆಗಳಿಗೇ ಬೆಂಗಳೂರು ಸೇರಿದ್ದರೂ ದಂಡಿನದೇ ಇಲ್ಲಿ ಆಡಳಿತ. ಕಂಪನಿ ಸರ್ಕಾರ ಮಾಡಿದ್ದು ಕಾನೂನು. ಅದು ಬೇಡ ಅಂದರೆ ಕೇಳೋದು ಯಾರು? ಹಿಂಗಾಗಿ ಇಲ್ಲಿನ ಆಫೀಸರುಗಳು ಆಡಿದ್ದು ಆಟ. ಇವರ ಮ್ಯಾಲೆ ದೂರು ಕೊಡೋಕ್ಕೆ ದಿಲ್ಲಿತನಕ ಹೋಗಬೇಕು. ಹೋದರೆ, ಅವರೂ ಇವರನ್ನೇ ಸರಿಗಟ್ಟಿ ಛೀ! ಥೂ ಅಂದು ನಮ್ಮೋರನ್ನ ಅಟ್ಟಬಿಡತಾ ಇದ್ದ ಕಾಲ.

ಆಗ ಬೆಂಗ್ಳೂರು ಶ್ಯಾನೆ ಚಿಕ್ಕದು. ಕೋಟೆಯಿಂದ ಹಿಡಿದು ಇತ್ತಲಾಗಿ ಬಂದರೆ ಉಪ್ಪಾರ ಪೇಟೇನೆ ಕೊನೆ. ಕಾಟನ್‌ಪೇಟೆಯಿಂದ ಪೂರ್ವಕೆ ನಡೆದರೆ ಅಲಸೂರು ಗೇಟು ಗಡಿ. ಬಳೆಪೇಟೆ, ಚಿಕ್ಕಪೇಟೆ, ತರಗುಪೇಟೆ ಆಗಿನ ಕಾಲಕ್ಕೆ ದೊಡ್ಡ ವ್ಯಾಪಾರದ ಬೀದಿಗಳು. ಉಳಿದಂತೆ ಜನರ ಬೀಡು. ಅದರಲ್ಲಿ ನಗರ್ತಪೇಟೆ, ಕಾಟನ್‌ಪೇಟೆಗಳಲ್ಲಿ ನೇಕಾರರು ಜಾಸ್ತಿ. ವಸ್ತ್ರ ನೇಯೋದು, ನೂಲಿಗೆ ಬಣ್ಣ ಹಾಕೋದು ಅವರ ಕಸುಬು.

ಆದೇನಾಯತೋ ಆ ಕೆಂಪು ಮೂತಿಯೋರಿಗೆ! ಕಂಡ ಕಂಡಿದ್ದರ ಮೇಲೆಲ್ಲ ತೆರಿಗೆ. ಹಂಗೆ ಉಪ್ಪಿನ ಮೇಲೆ ತೆರಿಗೆ ಹಕಿದ್ದಕಲ್ಲವಾ ಗಾಂಧೀಜೀ ದಾಂಡೀಗೋಗಿ ಸತ್ಯಾಗ್ರಹ ಮಾಡಿದ್ದು. ಹಂಗೆ ಹಾಕಿದ ತೆರಿಗೇಲಿ ಬಟ್ಟೆ, ನೂಲಿಗೆ ಹಾಕೋ ಬಣ್ಣದ ಮ್ಯಾಲೂ ತೆರಿಗೆ ಹಾಕಿದರು. ಆಗೆಲ್ಲ ನಮ್ಮಲ್ಲಿ ತಯಾರು ಮಾಡತಾ ಇದ್ದ ಕೈಬಣ್ಣ ಬಿಟ್ಟು, ಕಂಪನಿಯವರು ಪರದೇಶದಿಂದ ತರತಾ ಇದ್ದ ಬಣ್ಣಕ್ಕೆ ಡಿಮ್ಯಾಂಡು. ಅದರ ಮ್ಯಾಲೆ ಇವರು ಯದ್ವಾತದ್ವ ಟ್ಯಾಕ್ಸು ಹಾಕಿದರು. ಬಣ್ಣ ಬ್ಯಾರೆ ದೇಶದಿಂದ ಬರಬೇಕು. ಅದು ಬರತಾ ಇದ್ದುದು ಬೊಂಬಾಯಿ ಪಟ್ಟಣಕೆ. ಅವರು ಬ್ಯಾರೆ; ಬಣ್ಣ ಸ್ಟಾಕು ಮಾಡಿ, ಜನಕ್ಕೆ ಸಿಗದೆ ಪರದಾಡೋ ಹಾಗೆ ಮಾಡಿದರು. ಇದ್ದ ಬಣ್ಣ ಕೊಳ್ಳಾಕೆ ಹೋದರೆ ಸಿಕ್ಕಾಪಟ್ಟೆ ಬೆಲೆ. ಆಫೀಸರುಗಳನ್ನು ಕೇಳೋಕ್ಕೆ ಉಂಟೆ!

ಇದರಿಂದ ನೇಕಾರರ ಕಸುಬೇ ನಿಂತು ಹೋಗೋ ಮಟ್ಟಕ್ಕೆ ಬಂದೋಯಿತು. ದುಡಿಮೇನೇ ಇಲ್ಲದೆ ಮನೆ ಒಲೆ ಹತ್ತೋದು ಹೆಂಗೆ! ಕೊನೆಗೆ ಯಾರೋ ಒಂದು ಉಪಾಯ ಮಾಡಿದರು. 'ನಿಜ ಹಿಂಗೆ ಅದೆ ಅಂತ ಮಾರಾಣಿಗೆ ತಿಳಿಸಬೇಕು. ಆಕೆ ಮಹಾತಾಯಿ. ಅರಿತುಕೊಂಡು ಜನಕ್ಕೆ ಏನಾರಾ ಒಳ್ಳೇದು ಮಾಡತಾಳೆ.'

ಉಪಾಯ ಒಳ್ಳೇದೇ! ಇಂಗ್ಲೆಂಡಲ್ಲಿ ಇರೋ ರಾಣಿ ತನಕ ಹೋಗಿ ದೂರು ಹೇಳೋದು ಯಾರು? ಇದು ದೊಡ್ಡ ಚಿಂತೆ ಆಯಿತು. ಆಗ ಅವರ ಜನಾಂಗದ ಹೆಂಗಸೊಬ್ಬಳು, ಆಕೆ ಹೆಸರು ಜಾನಕಿ ಅಂತ, ಮುಂದೆ ಬಂದಳು. 'ಅದೇನು ದೂರು ಬರೀಬೇಕೋ ಬರೆದು ಕೊಡಿರಿ ಅದನ್ನ ರಾಣೀಗೆ ತಲುಪಿಸೋ ಉಪಾಯ ನನಗೆ ಬಿಡಿ' ಅಂದಳು.

ಆಕೆ ಚಂದವಾಗಿ ಕಾಣೋ ಶಾಲು ಒಂದು ನೇಯ್ದು ರಾಣಿಗೆ ಉಡುಗೊರೆ ಆಗಿ ಕಳಿಸಿಕೊಟ್ಟಳು. ವಸ್ತ್ರ ಚೆನ್ನಾಗಿತ್ತು. ಇದನ್ನ ರಾಣೀಗೆ ತಲುಪಿಸಿದರೆ ತನ್ನ ಮೆಚ್ಚತಾಳೆ, ಒಳ್ಳೇ ಇನಾಮು ಸಿಗತದೆ ಅಂತ ಆಫೀಸರುಗಳು ಏನು ಮಾಡಿದರು, ಖುದ್ದಾಗಿ ಅದ ರಾಣೀಗೆ ಮುಟ್ಟಿಸಿದರು. ನೋಡಿದೇಟಿಗೆ ರಾಣೀಗೆ ಆ ವಸ್ತ್ರದ ಮೇಲೆ ಮನಸಾಗಿಬಿಡತು. ಎಂಥ ಕಾಲಕೂ ಅದನ್ನ ತನ್ನ ಹತ್ತಿರಾನೇ ಇಟ್ಟುಕೊಂಡಿರೋಳು.

ಒಂದು ದಪ ಏನಾಯ್ತು ಅಂದರೆ, ರಾಣಿ ಆ ವಸ್ತ್ರ ಮರೆತು ಅರಮನೇಲಿ ಎಲ್ಲೋ ಬಿಟ್ಟು ಹೋಗಿದ್ದಳು. ಕೆಲಸದೋನು ನೋಡದಲೇ, ಅದರ ಮೇಲೆ ವಸಿ ನೀರು ಚೆಲ್ಲಿಬಿಟ್ಟ. ನೋಡತಾನೆ ನೀರು ಬಿದ್ದ ಜಾಗದಲ್ಲಿ ವಸ್ತ್ರ ಬಣ್ಣಗೆಟ್ಟ ಹಂಗ ಆಗೇದೆ. ಅದು ರಾಣೀಗೆ ತುಂಬಾ ನೆಚ್ಚಿನ ವಸ್ತ್ರ. ಅದನ್ನು ನಾನು ಹಾಳು ಮಾಡಿದೆ ಅಂತಾದರೆ, ನನ್ನೇ ಅವಳು ನೇಣಿಗೆತ್ತಿಸಿಬಿಡತಾಳೆ. ಇದೊಳ್ಳೆ ಗ್ರಾಚಾರ. ವಸ್ತ್ರ ತೊಳೆದು ಒಣಗಿಸಿ ಹಾಕಿ ಬಿಡತೀನಿ ಅಂದುಕೊಂಡ. ನೀರಿಗದ್ದಿದ. ನೀರಿಗೆ ಬಿದ್ದಿದ್ದೇ ತಡ ವಸ್ತ್ರದ ಬಣ್ಣ ಪೂರ್ತಿ ಬದಲಾಗಿ ಬಿಟ್ಟಿತು. ಅದೇ ಸಮಯಕ್ಕೆ ಅಲ್ಲಿ ಬಿಟ್ಟಿದ್ದ ವಸ್ತ್ರದ ನೆನಪಾಗಿ ರಾಣಿ ಇನ್ನೊಬ್ಬ ಆಳನ ಕಳಿಸಿದಳು. ಅವಳು ಬಂದು ನೋಡತಾಳೆ ವಸ್ತ್ರ ಅದೇ, ಬಣ್ಣ ಬ್ಯಾರೆ ಆಗೇದೆ. ಮೊದಲಿಂಗಿಂತ ಅಂದವಾಗೇನೋ ಅದೆ. ಆದರೆ ರಾಣಿ 'ಇದ್ಯಾವುದೋ ಬ್ಯಾರೆ ವಸ್ತ್ರ, ಆ ವಸ್ತ್ರ ಎಲ್ಲಿ?' ಅಂತ ಕೇಳಿದರೆ. ಅವಳಿಗೆ ಗಾಬರಿ ಆಯಿತು. ಬಂದು ರಾಣಿಗೆ ವಿಷಯ ಹೇಳಿದಳು.

ಆಕೆ ರೇಗಾಡಿದಳು. 'ನೀರಿಗೆ ಹಾಕತಾ ಇದ್ದ ಹಂಗೆ ವಸ್ತ್ರದ ಬಣ್ಣ ಬದಲಾಗೋದು ಅಂದರೇನು? ಆಳಾದೋನು ಆ ವಸ್ತ್ರ ಲಪಟಾಯಿಸಿ, ಬೇರೆ ತೋರಿಸ್ತಾ ಅವನೆ. ಕರೆಸು ಅವನ್ನ' ಅಂದಳು.

ಅವನು ಬಂದು ಕಾಲಿಗೆ ಬಿದ್ದು ಇದ್ದ ಸಮಾಚಾರ ಹೇಳಿದ. ಆದರೂ ರಾಣಿ ನಂಬದೇ ಹೋದಳು.

''ನೀನು ಹೇಳೋದೇ ನಿಜ ಆದರೆ ಮತ್ತೆ ನೀರಿಗಾಕು. ತೋರಿಸು'' ಅಂದಳು. ಭುಜದ ಮ್ಯಾಲೆ ಇನ್ನು ಕುತ್ತಿಗೆ ಉಳಿಯಲ್ಲ ಅಂತ ಅವನಿಗೆ ನಿಶ್ಚಯ ಆಯಿತು. ದೇವರ ಮೇಲೆ ಭಾರ ಹಾಕಿ ಬಟ್ಟೆ ನೀರಿಗ್ಹಾಕಿದ. ಏನು ಆಶ್ಚರ್ಯ! ರಾಣಿ ನೋಡ ನೋಡತಾ ಇದ್ದಂಗೆ ಬಟ್ಟೆ ಬಣ್ಣ ಮತ್ತೆ ಬದಲಾಯಿಸಿತು. ಈಗ ಮೊದಲಿಗಿಂತ ಅದ್ಭುತವಾದ ಬಣ್ಣ.

ವಸ್ತ್ರ ಒಣಗಿಸಿ, ಮತ್ತೊಂದು ಸಲ ನೀರಿಗೆ ಹಾಕಿಸಿ ನೋಡಿದಳು. ಅರೇ! ಈಗ ಬ್ಯಾರೇ ಇನ್ನೊಂದು ಬಣ್ಣ. ಇದೊಂದು ಆಟಾನೇ ಆಗಿ ಹೋಯಿತು ತಗೋ!


ಆದರೆ ನಿಜವಾದ ಆಟ ತಿಳಿದಿದ್ದು ಏಳನೇ ಸಲ ನೀರಿಗೆ ಹಾಕಿದಾಗ. ಅಲ್ಲಿ ಬೆಂಗಳೂರಿನ ನೇಕಾರರ ಬವಣೆ ಏನು ಅಂತ ವಕ್ಕಣೆ ಬರೆದಿದ್ದ ಕಾಗದ ಕಾಣಿಸಿತು. ಅದೆಲ್ಲ ಓದಿಕೊಂಡು ರಾಣಿಗೆ ಮನಸ್ಸು ಕರಗಿತು. ಇಂಥ ಸೋಜಿಗದ ವಸ್ತ್ರ ತಯಾರಿಸೋ ನೇಕಾರರು ಬವಣೆಪಡಬಾರದು ಅಂತ ಕೂಡಲೇ ಫರ್ಮಾನು ಮಾಡಿ ತೆರಿಗೆ ತೆಗೆಸಿ ಹಾಕಿದಳು.

ಹಿಂಗೆ ದೊರೆ ತನಕ ದೂರು ಕೊಂಡೊಯ್ದು ತೆರಿಗೆ ತೆಗಿಸಿ ಹಾಕಿದ ಹೆಣ್ಣು ಮಗಳು ಜಾನಕಿ ಅಂತ. ಆಗ ಊರಿನೋರೆಲ್ಲ ಅವಳನ್ನ ಕೊಂಡಾಡಿ, ಅವಳ ಮನೆ ಇದ್ದ ಬೀದಿಗೆ (ತಾಪೆ ಜಾನಕಿ ಗಲ್ಲಿ) ಅಂತಲೇ ಹೆಸರಿಟ್ಟರು. ಅದು ಇವತ್ತಿಗೂ ಹಂಗೇ ಅದೆ. ಆದರೆ ತಾಪೆ ಜಾನಕಿ ಯಾರು? ಅವಳೇನು ಅದ್ಭುತ ಮಾಡಿದಳು ಅನ್ನೋದು ಇವತ್ತಿನ ಜನಕ್ಕೆ ತಿಳೀದು ಅಷ್ಟೇ

■ ನಿರೂಪಣೆ : ಜಿ. ಪುರುಷೋತ್ತಮ

ಮರೆಯಲಾಗದ ಖಳನಾಯಕ

ಕ್ಲೂಸ್ನರ್



ಅಬ್ಬಾ! ಅದೆಂತಹ ಆಟ. ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ನಡುವಿನ ವಿಶ್ವಕಪ್ ಸೆಮಿಫೈನಲ್‌ನ ಆ ಪಂದ್ಯ. ಅಂತಿಮ ಓವರ್ ಅದೆಷ್ಟು ರೋಚಕ! ಗೆಲ್ಲಲು ದ.ಆಫ್ರಿಕಾಕ್ಕೆ ಬೇಕಿರುವುದು ಒಂಬತ್ತು ರನ್. ಆದರೆ ಧೃತಿಗೆಡದೆ ಫ್ಲೆಮಿಂಗ್‌ರ ಮೊದಲೆರಡು ಎಸೆತಗಳನ್ನು ಮಿಂಚಿನಂತೆ ಬೌಂಡರಿಗೆ ಅಟ್ಟಿ ಕುರ್ಚಿಯ ತುದಿಗೆ ಎಳೆದು ತಂದಿದ್ದ ಪ್ರೇಕ್ಷಕರ ಕುತೂಹಲವನ್ನು ಕಡಿಮೆಗೊಳಿಸಿ ಹೀರೋ ಆದವರು ದ. ಆಫ್ರಿಕಾದ ಲ್ಯಾನ್ಸ್‌ಕ್ಲೂಸ್ನರ್. ಇದೇ ಹೀರೋ ನಾಲ್ಕನೇ ಎಸೆತದಲ್ಲಿ ಡೊನಾಲ್ಡ್‌ರೊಂದಿಗೆ ಬೇಕು ಬೇಡ ಎನ್ನುವಂತಹ ಪರಿಸ್ಥಿತಿ ನಿರ್ಮಿಸಿ ಪಂದ್ಯ 'ಟೈ' ಆಗುವ ಮೂಲಕ ತಾವೇ ತೆರೆದಿದ್ದ ಫೈನಲ್‌ನ ಬಾಗಿಲನ್ನು ತಾವೇ ಮುಚ್ಚಿದರು. ಕೊನೆಗೆ ಕ್ಲೂಸ್ನರ್ ಎಂದೂ ಮರೆಯಲಾಗದ ಖಳನಾಯಕನೂ ಆದರು.

ಲ್ಯಾನ್ಸ್ ಕ್ಲೂಸ್ನರ್ ಈ ಬಾರಿಯ ವಿಶ್ವಕಪ್‌ನಲ್ಲಿ ಅಷ್ಟೊಂದು ಮಿನುಗುವರೆಂದು ಲೆಕ್ಕಾಚಾರ ಹಾಕಿದವರು ಬೆರಳಣಿಕೆಯಷ್ಟು ಜನ. ಪಕ್ಕಾ ವೃತ್ತಿಪರರಂತೆ ಯೋಜನಾಬದ್ಧವಾಗಿ ಆಡುವ ದ. ಆಫ್ರಿಕಾಕ್ಕೆ ಕೊನೆಯ ಸರದಿಯ ಆಟಗಾರನ ಮೇಲೆ ಅವಲಂಬನೆ ಬಹು ಕಡಿಮೆ ಎಂದೇ ಹೇಳಬಹುದು. ಆದರೆ ಏಳನೇ ವಿಶ್ವಕಪ್‌ನಲ್ಲಿ ದ.ಆಫ್ರಿಕಾದ ಘನತೆಯನ್ನು ಎತ್ತಿ ಹಿಡಿದವರೇ ಕ್ಲೂಸ್ನರ್.

1996ರಲ್ಲಿ ದ.ಆಫ್ರಿಕಾ ಕ್ರಿಕೆಟ್ ತಂಡ ಭಾರತಕ್ಕೆ ಪ್ರವಾಸ ಬಂದಾಗ ಕಲ್ಕತ್ತಾದಲ್ಲಿ ನಡೆದ ದ್ವಿತೀಯ ಟೆಸ್ಟ್‌ನಲ್ಲಿ ಕ್ಲೂಸ್ನರ್ ಟೆಸ್ಟ್‌ರಂಗ ಪ್ರವೇಶಿಸಿದರು. ಮೊದಲ ಇನ್ನಿಂಗ್ಸ್‌ನಲ್ಲಿ ಕ್ಲೂಸ್ನರ್‌ರನ್ನು ಅಜರುದ್ದೀನ್ ಚೆನ್ನಾಗಿಯೇ ದಂಡಿಸಿದರು. ಭಾರತ ತೀವ್ರ ಸಂಕಷ್ಟದಲ್ಲಿದ್ದ ವೇಳೆ ಅಜರುದ್ದೀನ್ ಆಕ್ರಮಣಕ್ಕೆ ಕ್ಲೂಸ್ನರ್ ಸಿಲುಕಿದರೂ ನಿರಾಶೆಗೊಳಗಾಗಲಿಲ್ಲ. ದ್ವಿತೀಯ ಇನ್ನಿಂಗ್ಸ್‌ನಲ್ಲಿ ಭಾರತದ ಕುಸಿತಕ್ಕೆ ನಾಂದಿ ಹಾಡಿದ ಕ್ಲೂಸ್ನರ್ ಎಂಟು ವಿಕೆಟ್ ಕಿತ್ತರು. ಇದುವೇ ನಿಜವಾದ ಕ್ರಿಕೆಟಿಗನ ಆತ್ಮವಿಶ್ವಾಸ.

ಏಳನೇ ವಿಶ್ವಕಪ್‌ಗೆ ಫೇವರಿಟ್ ತಂಡವಾಗಿ ಬಂದಿದ್ದ ದ.ಆಫ್ರಿಕ ಮತ್ತೊಮ್ಮೆ ಅಂತಿಮ ಸುತ್ತಿಗೆ ಬರಲಾಗದೆ ಹೋಯಿತು. ಬಲಿಷ್ಠ ತಂಡವಾಗಿದ್ದ ದ. ಆಫ್ರಿಕಾ ಪೂರ್ಣ ಪ್ರಮಾಣದಲ್ಲಿ ಸಾಂಘಿಕ ಹೋರಾಟ ತೋರಿದೆ ಎಂದು ಹೇಳಲಾಗದು. ಲೀಗ್ ಹಂತದಲ್ಲಿ ಶ್ರೀಲಂಕಾ ವಿರುದ್ಧ ದ.ಆಫ್ರಿಕಾ ಇನ್ನೇನು ಆಲೌಟ್ ಆಗುತ್ತದೆ ಎನ್ನುವಾಗ ಕೊನೆಯವರೆಗೂ ವಿಕೆಟ್ ಕಾಯ್ದುಕೊಂಡ ಕ್ಲೂಸ್ನರ್ ಭರ್ಜರಿಯಾಗಿ ಆಡಿದರು. ಸೂಪರ್ ಸಿಕ್ಸ್‌ನಲ್ಲಿ ಪಾಕ್ ವಿರುದ್ಧದ ಪಂದ್ಯದಲ್ಲಿ ದ. ಆಫ್ರಿಕಾದ ಕೈಯಿಂದ ಬಹುತೇಕ ತಪ್ಪಿದ್ದನ್ನು ಪ್ರಚಂಡವಾಗಿ ಆಡಿ ಜಯಗಳಿಸಿ ಕೊಟ್ಟರು. ಆಸ್ಟ್ರೇಲಿಯಾ ವಿರುದ್ಧದ ಸೆಮಿಫೈನಲ್ಸ್‌ನಲ್ಲಿ ಮಾತ್ರ ಕ್ಲೂಸ್ನರ್ ಅವಸರ ತೋರಿದರು. ಡೊನಾಲ್ಡ್ ಚುರುಕಾಗಿ ಓಡದಿದ್ದುದು ತಪ್ಪು ಎಂದು ಹೇಳಬಹುದಾದರೂ ಪಂದ್ಯವನ್ನು ತಮ್ಮ ಕಡೆಗೆ ವಾಲಿಸಿದ ಕ್ಲೂಸ್ನರ್ ಎಚ್ಚರಿಕೆ ವಹಿಸಲೇಬೇಕಾಗಿತ್ತು. ಅಂತಿಮ ಜೋಡಿಯ ಹೊಂದಾಣಿಕೆಯಿಲ್ಲದ ಆಟ ಒಂದು ತಂಡವನ್ನು ಮಹತ್ವದ ಟೂರ್ನಿಯಿಂದ ಹೊರತಳ್ಳುವಂಥಾದದ್ದು ವಿಷಾದಕರ.

ವಿಶ್ವದ ಯಾವ ತಂಡವೇ ಆಗಲಿ ಅಂತಿಮ ಸರದಿಯಲ್ಲಿ ಇಂತಹ ಅಮೂಲ್ಯ ಆಟಗಾರನನ್ನು ಹೊಂದಿರುವ ನಿದರ್ಶನಗಳು ಕಡಿಮೆ. ಅದು ತೀರಾ ಹದಗೆಟ್ಟ ಸ್ಥಿತಿಯನ್ನು ಜಯಕ್ಕೆ ಪರಿವರ್ತಿಸುವ ಸಾಮರ್ಥ್ಯ ಹೊಂದಿದ ಆಟಗಾರನನ್ನು ಹೊಂದಿರುವುದು ಇಲ್ಲವೇ ಇಲ್ಲವೆನ್ನಬಹುದು. ಅಲ್ಲದೆ ಕೆಳ ಕ್ರಮಾಂಕದಲ್ಲಿ ಬ್ಯಾಟ್ ಮಾಡುತ್ತಿದ್ದ ಕ್ಲೂಸ್ನರ್ ಧೈರ್ಯ, ಆತ್ಮವಿಶ್ವಾಸ, ಕಳೆದುಕೊಂಡವರಲ್ಲ.

ದ.ಆಫ್ರಿಕಾಕ್ಕೆ ಇಂತಹ ದುರ್ಗತಿ ಬರಬಾರದಾಗಿತ್ತು. ಆದರೆ ಕ್ರಿಕೆಟ್‌ನ ಅನಿಶ್ಚಯತೆ ಯಾರನ್ನು ತಾನೆ ಬಿಟ್ಟಿದೆ? 1999ರ ವಿಶ್ವಕಪ್‌ನ ಪಂದ್ಯಾವಳಿಯ ಆಟಗಾರ ಎಂಬ ಬಿರುದು ಕ್ಲೂಸ್ನರ್‌ಗೇ ಲಭಿಸಿತು. ಇದು ಸಾಧಕ ನೋರ್ವನಿಗೆ ಸಂದ ಗೌರವ. ಈ ಪ್ರಶಸ್ತಿ ಬಂದ ಮಾತ್ರಕ್ಕೆ ಕ್ಲೂಸ್ನರ್‌ಗೆ ನೆಮ್ಮದಿ ದೊರಕಿದೆ ಎಂದು ಹೇಳಲಾಗದು. ಎಜ್‌ಬಾಸ್ಟನ್‌ನಲ್ಲಿ ನಡೆದ ದುರಂತದ ಅಂತ್ಯ, ಕ್ಲೂಸ್ನರ್‌ರ ಜೀವನ ಪರ್ಯಂತ ಮನದಾಳದಿಂದ ಮರೆಯಾಗಲಿಕ್ಕಿಲ್ಲ.

■ ಗರ್ತಿಕೆರೆ ವಿ. ಪ್ರಕಾಶ್

ಉಳಿತಾಯಕ್ಕೆ ಹತ್ತು ಉಪಾಯಗಳು



ಉಳಿತಾಯದ ವಿಚಾರ ಕೊಂಚ ಎಡವಟ್ಟಿನದು. ಆಯತಪ್ಪಿದರೆ ಅದು ಜಿಪುಣ ತನ. ಧಾರಾಳವಾಗಿ ಯತ್ನಿಸಿದರೆ, ಆದಾಯ ಮೀರುವ ವೆಚ್ಚ. ಅದರಿಂದ ಸಾಲದ ಹೊರೆ. ಉಳಿತಾಯದ ವಿಚಾರ ಬಂದಾಗೆಲ್ಲ, ಮಾಡುವ ಅಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುವ, ಮನೆಯ ಪ್ರತಿಯೊಂದು ವೆಚ್ಚದ ಬಾಬತ್ತಿನಲ್ಲಿಯೂ ಕತ್ತರಿಯಾಡಿಸಿ, ಏನೋ ಸಾಧಿಸಿದ ಹೆಮ್ಮೆ. ಇದರಿಂದ ಅನಗತ್ಯ ಕಿರಿಕಿರಿ. ಇದರ ಬದಲು ನಾವು ಅನಗತ್ಯ ಮಾಡುವ ವೆಚ್ಚಗಳಿಗೆ ಕಡಿವಾಣ ಹಾಕಿದರೆ ಸಾಕಷ್ಟು ಉಳಿತಾಯ ಸಾಧ್ಯ. ಅದಕ್ಕೆ ಸಾಕಷ್ಟು ವಿವೇಚನೆ ಕೂಡ ಬೇಕು. ಹಾಗೆ ಅನುಸರಿಸಬಹುದಾದ ಹತ್ತು ಉಪಾಯ ಇಲ್ಲಿ ಪಟ್ಟಿ ಮಾಡಲಾಗಿದೆ.

ಮನೆ ಮಂದಿಯೆಲ್ಲ ಒಟ್ಟಾಗಿ ಹೊರಗೆ ಹೋಗಿ, ಮನೆಯ ಜಂಜಡ ಮರೆತು ಹಾಯಾಗಿ ಕಾಲ ಕಳೆಯುವುದು ಎಷ್ಟು ಚಂದ ಅಲ್ಲವೇ! ವಾರಕ್ಕೆ ಒಂದು ಸಲ ಆದರೂ ಹೀಗೆ ಹೊರಗೆ ಹೋಗಿ, ಕುಟುಂಬವೆಲ್ಲ ಯಾವುದಾದರೂ ರಿಸಾರ್ಟಿನಲ್ಲೋ, ಪ್ರಖ್ಯಾತ ಹೋಟೆಲಲ್ಲೋ ಊಟ ಮುಗಿಸಿ ಬರುವುದು ಈಗ ಸಾಮಾನ್ಯ ಆಗುತ್ತಿದೆ.

ಪ್ರತಿ ವಾರವೂ ಇಂಥ ವಿಹಾರಕ್ಕೆ ಹೋಗುವ ಅಭ್ಯಾಸ ಇದ್ದವರು ಅದನ್ನು ಎರಡು ವಾರಕ್ಕೊಮ್ಮೆ ಕೈಗೊಂಡರೆ ಸಾಕಷ್ಟು ಉಳಿತಾಯ ಸಾಧ್ಯವಿದೆ.

ಸಂಬಳ ಪಡೆಯುವ ಜನಕ್ಕೆ ವೇತನ ಹೆಚ್ಚಳ, ಬೋನಸ್, ಉದ್ಯಮದ ಜನಕ್ಕೆ ಲಾಭಾಂಶ ಪ್ರತಿ ವರ್ಷ ದೊರೆಯುತ್ತವೆ. ಅದು ಕೈ ಸೇರುವ ಮುನ್ನವೇ, ಅದನ್ನು ಹೇಗೆಲ್ಲ ಖರ್ಚು ಮಾಡಬೇಕೆಂಬ ಯೋಜನೆ ತಯಾರಾಗಿರುತ್ತದೆ. ಹೆಚ್ಚುವರಿಯಾಗಿ ಬಂದ ಹಣದ ಶೇಕಡಾ ಹತ್ತರಷ್ಟಾದರೂ ಉಳಿಸಿ, ಒಂದೆಡೆ ಇರಿಸುವ ರೀತಿಯಲ್ಲಿ ಯೋಜನೆ ಹಾಕಿ.

ಬೇಕಿರಲಿ, ಬೇಡದೆ ಇರಲಿ ಕೆಲಸಕ್ಕೆ ಜನರನ್ನು ನೇಮಿಸಿಕೊಳ್ಳುವುದು ಅಭ್ಯಾಸ. ಮನೆಗೆಲಸಕ್ಕೆ, ಅಡುಗೆಗೆ, ಮಕ್ಕಳ ನಿರ್ವಹಣೆಗೆ, ಕಾರು ಚಲಾಯಿಸಲು ಜನ ಬೇಕೆನಿಸುತ್ತದೆ. ಬಹಳಷ್ಟು ಸಂದರ್ಭದಲ್ಲಿ ಇದು ಕೇವಲ ಪ್ರತಿಷ್ಠೆಯ ವಿಚಾರ ಆಗಿರುತ್ತದೆ. ಮನೆಗೆಲಸಗಳನ್ನು ಮನೆಯ ಜನರೇ ನಿರ್ವಹಿಸುವುದರಿಂದ ಸ್ವಾವಲಂಬನೆ, ಪರಸ್ಪರ ಆತ್ಮೀಯತೆ ಹೆಚ್ಚುತ್ತದೆ. ಜೊತೆಗೆ ಉಳಿತಾಯವೂ ಖಂಡಿತ.

ಮನುಷ್ಯನಿಗೆ ಆಹಾರ, ನಿದ್ರೆಯ ಹಾಗೆ ಬಟ್ಟೆಯೂ ಅಗತ್ಯ. ಆದರೆ ಒಬ್ಬರಿಗೆ ಎಷ್ಟು ಬಟ್ಟೆ ಬೇಕು ಎಂದು ನಿಖರವಾಗಿ ಹೇಳುವಂತಿಲ್ಲ. ಕೆಲವು ಸಲ ಅಗತ್ಯವೇ ಇಲ್ಲದಿದ್ದರೂ, ಖಯಾಲಿಗಾಗಿ ಬಟ್ಟೆ ಕೊಳ್ಳುವುದಿದೆ, ನೆರೆಯವರ, ಸಹೋದ್ಯೋಗಿಗಳ ಅನುಕರಣೆಯಿಂದ, ಅವರಿಗಿಂತ ತಾವೇನೂ ಕಮ್ಮಿ ಅಲ್ಲ ಎಂದು ತೋರಿಸಲೆಂದೇ ಬಟ್ಟೆಗಳ ಖರೀದಿ ಆಗುತ್ತದೆ.

ಮನೆಯಲ್ಲಿ ಉಪಯೋಗಿಸುವ, ನಿತ್ಯ ಕೆಲಸ ಅಥವಾ ಶಾಲೆಗೆ ಹೋಗುವಾಗ ಮತ್ತು ವಿಶೇಷ ಸಂದರ್ಭಗಳಲ್ಲಿ ಬಳಸುವ ಬಟ್ಟೆಗಳಿರುತ್ತವೆ. ಮೊದಲಿನ ಎರಡು ಅನಿವಾರ್ಯ. ವಿಶೇಷ ಸಂದರ್ಭದ ಉಡುಗೆ, ತೊಡುಗೆಗೆ ಕಾಳಜಿ ಅಗತ್ಯ. ಇಂಥ ವಸ್ತ್ರಗಳ ಖರೀದಿಯಲ್ಲಿ ಪ್ರಚಲಿತ ಫ್ಯಾಷನ್, ಜಾಹೀರಾತಿನ ಪ್ರಭಾವ, ಇನ್ನೊಬ್ಬರ ಅನುಕರಣೆ ಮುಖ್ಯ ಪ್ರೇರಣೆ ಆಗಿರುತ್ತದೆ. ಇದನ್ನೇ ಬಂಡವಾಳ ಮಾಡಿಕೊಂಡ ವಸ್ತ್ರ ಮತ್ತು ಉಡುಗೆಗಳ ತಯಾರಕರು ದುಬಾರಿ ದರ ನಿಗದಿ ಮಾಡುತ್ತಾರೆ.

ವಸ್ತ್ರಗಳ ಆಯ್ಕೆಯಲ್ಲಿ ಅನುಕರಣೆಗಿಂತ ವ್ಯಕ್ತಿತ್ವವೇ ಮುಖ್ಯ. ಮದುವೆ ಮನೆಯಲ್ಲಿ ಅಬ್ಬರದ ರೇಷ್ಮೆ ಸೀರೆಗಳನ್ನು ತೊಟ್ಟವರ ನಡುವೆ ಸರಳ, ಆದರೆ ಗಂಭೀರ ರೀತಿಯ ಹತ್ತಿವಸ್ತ್ರ ತೊಟ್ಟ ಮಹಿಳೆಯೇ ಎಲ್ಲರ ಕಣ್ಣು ಸೆಳೆಯಬಹುದು. ಆದ್ದರಿಂದಲೇ ಉಡುಗೆ, ತೊಡುಗೆ ಆಯ್ಕೆಯಲ್ಲಿ ದುಬಾರಿಯಾದ ಎಲ್ಲವೂ ಚೆಂದ ಎಂಬ ವಿಚಾರ ಕೈಬಿಟ್ಟು ಆಯ್ಕೆ ಮಾಡಿದರೆ ಸಾಕಷ್ಟು ಹಣದ ಉಳಿತಾಯ ಸಾಧ್ಯ.

ಪುಸ್ತಕ ಮತ್ತು ಶೋಕೇಸ್‌ನಲ್ಲಿ ಇರುವ ಬೊಂಬೆಗಳಿಗೆಂದೇ ಹಣ ಸುರಿಯುವ ಖಯಾಲಿ ಹಲವರದ್ದಾಗಿರುತ್ತದೆ. ಪುಸ್ತಕ ಖರೀದಿಯಲ್ಲಿ ಆಯ್ಕೆ ಮುಖ್ಯ. ಹೊಸ ಪುಸ್ತಕಗಳನ್ನೆಲ್ಲ ಖರೀದಿಸುವ ಬದಲು, ಉತ್ತಮ ಹಾಗೂ ಸಂಗ್ರಹ ಯೋಗ್ಯ ಪುಸ್ತಕ ಖರೀದಿಸಬಹುದು. ಗ್ರಂಥಾಲಯದ ಸದಸ್ಯರಾಗಿದ್ದರೆ ಎಲ್ಲ ಪುಸ್ತಕ ಓದಬಹುದು. ಅಗತ್ಯವಾದ ಪುಸ್ತಕ ಮಾತ್ರ ಆಯ್ಕೆ ಮಾಡಲೂ ಇದರಿಂದ ಅನುಕೂಲ. ಉಳಿತಾಯವಂತೂ ಆಗಿಯೇ ಆಗುತ್ತದೆ.

ಇದು ಟಿವಿ ಯುಗ. ದಿನಕ್ಕೊಂದರಂತೆ ಹೊಸ ಮಾಡೆಲ್ ಟಿವಿಗಳು ಬರುತ್ತವೆ. ಅವುಗಳ ಜಾಹೀರಾತು, ಹಲವು ಬಗೆಯ ರಿಯಾಯಿತಿ, ಅನುಕೂಲಗಳ ಬಣ್ಣನೆಯಿಂದ ಮರುಳಾಗುವವರೇ ಹೆಚ್ಚು. ಹೊಸ ಮಾಡೆಲ್ ಬಂದಾಗಲೆಲ್ಲ ಇದ್ದ ಟಿವಿ ಕೊಟ್ಟು ಬೇರೊಂದು ಖರೀದಿಸುವುದು ಸರಿಯೇ! ಟಿವಿ ಪದೇ ಪದೇ ಬದಲಿಸುವುದರಿಂದ ದುಡ್ಡು ಖರ್ಚು, ಮತ್ತೇನೂ ಇಲ್ಲ.

ತಿಂಗಳ ಅಗತ್ಯ ದಿನಸಿ ಖರೀದಿಸುವಾಗ ಕೊಂಚ ಎಚ್ಚರ ಇರಲಿ. ಸಾಸುವೆ, ಜೀರಿಗೆಯಂಥ ವಸ್ತುಗಳು ಪಟ್ಟಿಯಲ್ಲಿ ಸಾಕಷ್ಟು ಇರುತ್ತವೆ. ಇಂಥವು ಬೇಕೇ ಬೇಕು. ಆದರೆ ಅವುಗಳ ಬಳಕೆಯ ಪ್ರಮಾಣಕ್ಕೆ ಮಿತಿ ಇದೆ. ಇರಲಿ, ಹೇಗೂ ಮುಂದೆಯೂ ಬೇಕಾಗುತ್ತದಲ್ಲ ಎಂದು ಖರೀದಿಸುವುದೇ ಹೆಚ್ಚು. ಅದರ ಬದಲು ನಮಗೆ ಎಷ್ಟು ಅಗತ್ಯವೋ ಅಷ್ಟೇ ಖರೀದಿಸಲು ಸಾಧ್ಯವಿದೆ. ಮನೆಗೆ ಅಗತ್ಯ ಇರುವಷ್ಟೇ ಪ್ರಮಾಣದ ವಸ್ತುಗಳ ಖರೀದಿಯಿಂದ ಬಹುದೊಡ್ಡ ಉಳಿತಾಯ ಏನೂ ಆಗಲಿಕ್ಕಿಲ್ಲ. ಆದರೂ ಉಳಿತಾಯ ಉಳಿತಾಯವೇ.

ಇನ್ನೊಂದು ವಾಹನ ಖರೀದಿ ಇವತ್ತಿನ ಅಗತ್ಯವಾಗುತ್ತಿದೆ. ದುಡಿಯುವ ಗಂಡು, ಹೆಣ್ಣು, ಶಾಲೆ ಕಾಲೇಜುಗಳಿಗೆ ಹೋಗುವ ಮಕ್ಕಳು ಇರುವ ಮನೆಯಲ್ಲಿ ಇನ್ನೊಂದು ವಾಹನದ ಖರೀದಿ ಅಗತ್ಯ, ಸಹಜ. ಇಂತಹ ಖರೀದಿಗೆ ಮುಂದಾಗುವಾಗ ಹೊಸ ಹಾಗೂ ಅತ್ಯಾಧುನಿಕ ಮಾಡೆಲಿನ ವಾಹನವನ್ನೇ ಕೊಳ್ಳಬೇಕೆ? ತೀರಾ ಕನಿಷ್ಠ ಅಗತ್ಯಗಳಿಗೆ ಬಳಸುವ ಹೆಚ್ಚುವರಿ ವಾಹನ ಹೊಸದು ಹಾಗು ಅತ್ಯಾಧುನಿಕ ಏನೂ ಆಗಿರಬೇಕಿಲ್ಲ. ಅಂಥ ಸಂದರ್ಭಗಳಲ್ಲಿ ಸೆಕೆಂಡ್ ಹ್ಯಾಂಡ್ ಕಾರು, ಸ್ಕೂಟರ್ ಅಥವಾ ಮೊಪೆಡ್ ಖರೀದಿಗೆ ಮುಂದಾಗುವುದೇ ಜಾಣತನ.

ಚಿನ್ನದ ಖರೀದಿ ನಮ್ಮ ಬದುಕಿನ ಅವಿಭಾಜ್ಯ ಅಂಗ. ಪ್ರತಿ ವರ್ಷದ ದೀಪಾವಳಿಯಲ್ಲಿ ಗುಲಗಂಜಿ ತೂಕದಷ್ಟಾದರು ಚಿನ್ನ ಖರೀದಿಸಬೇಕು ಎಂಬ ಸಂಪ್ರದಾಯವೇ ಇದೆ. ಚಿನ್ನದ ಮೇಲೆ ಹಣ ತೊಡಗಿಸುವುದು ಲಾಭದಾಯಕ ಎಂಬ ನಂಬಿಕೆಯೂ ಇದೆ. ಮೇಲು ನೋಟಕ್ಕೆ ಇದೆಲ್ಲ ಸರಿ ಎಂದೇ ತೋರುತ್ತದೆ. ಆದರೆ, ನಾವು ತಿಳಿದಂತೆ ಚಿನ್ನದ ಮೇಲೆ ತೊಡಗಿಸುವ ಹಣ ಬೇರೆ ಇತರ ಬಂಡವಾಳ ಹೂಡಿಕೆಗಳಂತೆ ವೃದ್ಧಿಯಾಗುವುದಿಲ್ಲ. ಜೊತೆಗೆ, ಖರೀದಿಸಿದ ಚಿನ್ನ ಕಾಪಾಡಿಕೊಂಡು ಬರುವುದು ಕೂಡ ಕಷ್ಟ. ಕಳ್ಳರ ಭಯದ ಹಾಗೇ, ಚಿನ್ನಾಭರಣಗಳು ಜೀವಕ್ಕೂ ಕುತ್ತು ತರುತ್ತವೆ. ಆದ್ದರಿಂದಲೇ ಜಾಣರಾದವರು ಚಿನ್ನ ಖರೀದಿ ತಪ್ಪಿಸಿ, ಉಳಿತಾಯದ ಹಣ ಬೇರೆಯ ಲಾಭದಾಯಕ ರಂಗಗಳಲ್ಲಿ ತೊಡಗಿಸುತ್ತಾರೆ.

ಇವತ್ತು ಮನೆ, ಆಫೀಸುಗಳಲ್ಲಿ, ಕಂಪ್ಯೂಟರ್‌ನದ್ದೇ ಕಾರುಬಾರು. ಕಂಪ್ಯೂಟರ್ ಖರೀದಿ, ಅದರ ವಿವಿಧ ಆಧುನೀಕರಣ ಸವಲತ್ತುಗಳು ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇರುತ್ತವೆ. ಪ್ರತಿ ಹೊಸ ಉಪಯುಕ್ತತೆ ಲಭ್ಯವಾದಾಗಲೂ ಅದನ್ನ ತಮ್ಮ ಕಂಪ್ಯೂಟರ್‌ಗೆ ಲಗತ್ತಿಸಲು ಜನ ಮುಂದಾಗುತ್ತಾರೆ. ನಮ್ಮ ಅಗತ್ಯವೇನು? ಹೊಸ ಉಪಯುಕ್ತತೆ ತೀರಾ ಅಗತ್ಯವೇ ಎಂದು ವಿವೇಚಿಸಿ ಕಂಪ್ಯೂಟರ್ ಆಧುನೀಕರಣಕ್ಕೆ ಮುಂದಾಗುವುದೇ ಒಳ್ಳೆಯದು. ಇದರಿಂದಲೂ ಸಾಕಷ್ಟು ಹಣದ ಉಳಿತಾಯ ಸಾಧ್ಯ.

■ ತುಷಾರ್

ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ.....

ಹಳ್ಳಿ-ದಿಳ್ಳಿಯ ನಡುವೆ

ಬೆಟ್ಟದ ನೆಲ್ಲಿಗೂ ಸಮುದ್ರದ ಉಪ್ಪಿಗೂ ಎತ್ತಣಿಂದೆತ್ತಣ ಸಂಬಂಧವಯ್ಯ ಎನ್ನುವಂತೆ ತೀರಾ ಹಳ್ಳಿಯ ಪರಿಸರದಲ್ಲೆ ಬೆಳೆದ ನನ್ನ ವಿವಾಹ ನೆರವೇರಿದ್ದು ಹೈದ್ರಾಬಾದಿನ ಇಂಜಿನಿಯರ ವರನೊಂದಿಗೆ. ನನ್ನನ್ನು ಮೆಚ್ಚಿ ಮದುವೆಯಾಗ ಬಯಸಿದ ಅವರೊಂದಿಗೆ ನಾನು ವೈವಾಹಿಕ ಜೀವನಕ್ಕೆ ಕಾಲಿಟ್ಟೆ. ಹೈದ್ರಾಬಾದ ನನ್ನವರ ವಾಸಸ್ಥಾನವಾಗಿದ್ದರೂ ನಾಗಪೂರದಲ್ಲವರು ಪ್ರೈವೆಟ್ ಕಂಪನಿಯೊಂದರಲ್ಲಿ ಜನರಲ್ ಮ್ಯಾನೆಜರ್ ಆಗಿ ಕಾರ್ಯನಿರ್ವಹಿಸುತ್ತಿದುದು. ನಾನೋ ಹಳ್ಳಿಯ ಜನರೊಡನಾಟದೊಂದಿಗೆ ಬೆಳೆದವಳು. ಅವರೋ ನವನಾಗರಿಕತೆಯ ನೆರಳಲ್ಲೆ ಬಾಳುತ್ತಿರುವವರು. ಅವರೆಲ್ಲ ಕನ್ನಡ ಮಾತನಾಡುತ್ತಿದ್ದರಾದರೂ ತೆಲುಗು ಅವರ ಮಾತೃಭಾಷೆಯಂತಿದ್ದು ಎಲ್ಲರೂ ಹೆಣ್ಣು ಮಕ್ಕಳೂ ಸಹ ಉದ್ಯೋಗದಲ್ಲಿದ್ದು ದೊಡ್ಡ ದೊಡ್ಡ ಊರುಗಳಲ್ಲೆ ನೆಲೆ ನಿಂತವರು. ನನಗೋ ದಿಗಿಲೊ ದಿಗಿಲು. ಹೇಗಪ್ಪಾ ಇವರೆಲ್ಲರೊಂದಿಗಿನ ನನ್ನ ಬಾಳು ಎಂದು. ನಾನೋ ನಯವಿಲ್ಲದ ಜೋರು ನುಡಿಯವಳು. ಅವರು ಪಕ್ಕದಲ್ಲಿದ್ದವರೊಂದಿಗೆ ಮಾತನಾಡುತ್ತಿದ್ದರೆ ಅವರು ಏನೊ ಪಿಸುಗುಟ್ಟುತ್ತಿರುವ ಅನುಭವ. ನನ್ನ ಮಾತು ಅವರಿಗೆ ಕಿವಿ ಮುಚ್ಚಿಕೊಳ್ಳುವಷ್ಟು ಜೋರು ಅನಿಸಿರಬೇಕು.



ಮದುವೆಗೂ ಮುನ್ನ ನಾನು ಬರೆದ ಕನ್ನಡ ಪತ್ರಗಳನ್ನು ಅವರಿಗೆ ಓದಲು ಸಾಧ್ಯವಾಗುತ್ತಿರಲಿಲ್ಲವಂತೆ (ಅಲ್ಲೇ ಹುಟ್ಟಿ ಬೆಳೆದವರಾಗಿದ್ದರಿಂದ ತೆಲುಗು ಭಾಷೆ ಪ್ರಭಾವವೇ ಹೆಚ್ಚಾಗಿದ್ದುದು ಅವರು ತೆಲುಗಿನಲ್ಲೆ ವಿದ್ಯಾಭ್ಯಾಸ ಮಾಡಿದ್ದು). ಅವರು ಬರೆದ ತೆಲುಗು ಪತ್ರ ನನಗರ್ಥವಾಗುತ್ತಿರಲಿಲ್ಲ. ಈ ಗುಟ್ಟು ಮದುವೆ ನಂತರ ಹೊರಬಿದ್ದುದು. ಅವರೆಲ್ಲಾ ನಮ್ಮೂರನ್ನು ಪ್ರಕೃತಿ ಸೌಂದರ್ಯವನ್ನು ಗಟ್ಟಿ ಹಾಲು-ಮೊಸರನ್ನು ಮೆಚ್ಚಿಕೊಳ್ಳುತ್ತಿದ್ದರು. ನಾನು ಇದರಲ್ಲೇನಿದೆ ವಿಶೇಷ ಎಂದುಕೊಳ್ಳುತ್ತಿದ್ದೆ. ಹೈದ್ರಾಬಾದ, ನಾಗಪೂರದಲ್ಲೆಲ್ಲಾ ಅವರು ಜನರೊಡನೆ ಕನ್ನಡ, ಹಿಂದಿ, ತೆಲುಗು, ಇಂಗ್ಲೀಷನಲ್ಲಿ ವ್ಯವಹರಿಸುತ್ತಿದ್ದರೆ ಆಗೆಲ್ಲಾ ನಾನು ಸಂಕೋಚದ ಮುದ್ದೆಯಾಗಿರುತ್ತಿದ್ದೆ.

ಭಾಷೆ ನನಗೀಗ ತೊಡಕಾಗಿಲ್ಲ. ಬದಲಾಗಿ ಬೇರೆ ಭಾಷೆ ಕಲಿಯಲು ಅನುಕೂಲವಾಗಿದೆ. ನನ್ನ ಗಂಡನ ಮನೆಯವರ ಸ್ನೇಹಪೂರ್ಣ ನಡವಳಿಕೆ, ತಪ್ಪಿದಲ್ಲಿ ತಿಳಿಹೇಳಿ ತಿದ್ದುವ ನನ್ನವರ ಪ್ರೇಮದಿಂದಾಗಿ ನಾನೂ ಈಗ ಅವರಲ್ಲೊಬ್ಬಳಾಗಿದ್ದೇನೆ. ನನ್ನ ಮಗನೀಗ ಹಳ್ಳಿಗೂ ಪೇಟೆಗೂ ಸೇತುವೆಯಂತೆ ಹೋಗಿ ಬಂದು ಬೆಳೆಯುತ್ತಿದ್ದಾನೆ. ಒಂದು ದಿನವೂ ಹಳ್ಳಿಯಲ್ಲಿ ಒಂದಿರುಳು ಕಳೆಯದಿದ್ದ ನನ್ನವರೀಗ ಆಗಾಗ ನನ್ನೊಡನೆ ನನ್ನೂರಿಗೆ (ನನ್ನ ಹಳ್ಳಿಗೆ) ಬಂದು ನಾಲ್ಕು ದಿನವಿದ್ದು ನನ್ನನ್ನು ಕರೆದುಕೊಂಡು ಹೋಗುತ್ತಾರೆ. ಈಗ ಹಳ್ಳಿಯಲ್ಲಿರಲು ನನ್ನನ್ನವರು ಬಿಡುವುದಿಲ್ಲ.

- ಮಾಧುರಿ ನಾಗೇಶಮೂರ್ತಿ, ಹೈದರಾಬಾದ

ಭಾಷೆಯ ಗೊಂದಲ

ನಾನು ಬೆಂಗಳೂರಿನವನು. 1967ರಲ್ಲಿ ಸರ್ಕಾರಿ ನೌಕರಿಯ ವರ್ಗಾವಣೆಯಿಂದ ಬೆಂಗಳೂರಿನಿಂದ ಗುಲ್ಬರ್ಗಾಕ್ಕೆ ಹೋಗಿದ್ದೆನು. ಅಲ್ಲಿ ಮೂರು ವರ್ಷ ಕೆಲಸ ಮಾಡಿ ನಂತರ ಮುಂದೆ ಮೂರು ವರ್ಷ ಬಿದರ್‌ನಲ್ಲಿ ಕೆಲಸ ಮಾಡಿದೆನು. ನಿಜವಾಗಿಯೂ ಅಲ್ಲಿಯ ಅನುಭವವೇ ಬೇರೆ. ಇಲ್ಲಿಯ ಅನುಭವವೇ ಬೇರೆ.


ನಾನು ಗುಲ್ಬರ್ಗಾದಲ್ಲಿದ್ದಾಗ ಗಾಜಿಪುರದ ಮನೆ ತಿರಂಡಾಸ್ ಕೂರೇಸ್ ಹತ್ತಿರ ಇತ್ತು. ಆಗ ಏಪ್ರಿಲ್, ಮೇ, ತಿಂಗಳು ಬಹಳ ಬಿಸಿಲು. ಕಛೇರಿವೇಳೆ ಬೆಳಿಗ್ಗೆ 8.00ರಿಂದ 1.30ರವರೆಗೆ. ಮಧ್ಯಾಹ್ನ 2.00 ಗಂಟೆಗೆ ಮನೆಗೆ ಬಂದು ಊಟಮಾಡಿ ನೆಲದ ಮೇಲೆ ಮಲಗಿದರೆ ನಿದ್ದೆ ಬರುತ್ತಿತ್ತು. ಅಂತಹ ಒಂದು ದಿನ ನಾನು ಮಲಗಿದ್ದೆ. ನನ್ನ ತಾಯಿ ಬತ್ತಿ ಹೊಸೆಯುತ್ತಿದ್ದರು ದೇವರಿಗೆ. ಆಗ ನಮ್ಮ ಕಛೇರಿಯಿಂದ ಸುಮಾರು 3.30ಕ್ಕೆ ಒಬ್ಬ ಬಂದು ''ಸಾಹೇಬರು ಇದಾರ!'' ಎಂದು ಕೇಳಿದ. ಅಂದರ ಅವರ ಭಾಷೆಯಲ್ಲಿ ''ಸಾಬರು ಅರ''. ನಮ್ಮ ತಾಯಿಗೆ ಅರ್ಥ ಆಗಲಿಲ್ಲ. ಕಾರಣ ನಮ್ಮ ಕಡೆ ಮುಸಲ್ಮಾನರಿಗೆ ಸಾಬರು ಎಂದು ಕರೆಯುತ್ತಾರೆ. ಮತ್ತೆ ಆ ಮನುಷ್ಯ ಕಿಟಕಿಯಲ್ಲಿ ''ಸಾಬರು ಅರ!'' ಎಂತಿದ್ದಾನೆ. ನಮ್ಮ ತಾಯಿ ಜೋರಾಗಿ ''ಯಾರೂ ಈ ಮನೆಯಲ್ಲಿ ಸಾಬರು ಇಲ್ಲ ಹೋಗು'' ಎಂದರು. ನನಗೆ ಎಚ್ಚರ ಆಯಿತು. ಆಗ ನನಗೆ ಅರ್ಥ ಆಯಿತು. ಎದ್ದು ಬಾಗಿಲು ತೆಗೆದು ಅವರನ್ನು ಒಳಗೆ ಕರೆದು ಕೇಳಿದೆ. ಕಛೇರಿಯಲ್ಲಿ ಅರ್ಜೆಂಟ್ ಕೆಲಸ ಇತ್ತು ಅದಕ್ಕಾಗಿ ಆತನು ಬಂದಿದ್ದನಂತೆ. ಇದು ಭಾಷೆಯ ಗೊಂದಲ!

ಪಿ. ಬಸವರಾಜು, ಬೆಂಗಳೂರು

ಬಯಲುಸೀಮೆ ಹುಡುಗನ ಮಲೆನಾಡು ಯಾತ್ರೆ

ಬಯಲು ಸೀಮೆಯವನಾದ ನನಗೆ ಸುಂದರ ಮಲೆನಾಡಿನಲ್ಲಿ ಕೆಲಸ ಮಾಡುವ ಅದೃಷ್ಟ ದೊರೆಯಿತು. ಕೊಪ್ಪದ ಅಂಚೆ-ಕಛೇರಿಯಲ್ಲಿ ಕಳೆದ ಐದು ವರ್ಷಗಳು ನನ್ನ ಪಾಲಿಗೆ ಚಿರಹಸಿರು. ಅಲ್ಲಿಯ ಸುಂದರ ಪ್ರಕೃತಿ ಮೃದು ಸ್ವಭಾವದ ಮಲೆನಾಡಿಗರನ್ನು ಮರೆಯಲು ಸಾಧ್ಯವಿಲ್ಲ.

ಅಲ್ಲಿದ್ದಾಗಿನ ಒಂದು ಸಿಹಿ ಘಟನೆ ಮರೆಯಲಾರೆ. ಅಲ್ಲಿಯ ಪ್ರತಿಯೊಂದು ಎಸ್ಟೇಟ್‌ನವರು ತಮ್ಮ ಕೆಲಸ ಮಾಡುವವರಿಂದ ಆರ್.ಡಿ. ಖಾತೆಗಳನ್ನು ಮಾಡಿಸಿ ಹಣವನ್ನು ಉಳಿತಾಯ ಮಾಡುವಂತೆ ಮಾಡುತ್ತಾರೆ. ಅದೇ ತರಹ ಅಲ್ಲಿಯ 'ಅಲಗೇಶ್ವರ್ ಎಸ್ಟೇಟ್'ನಲ್ಲಿ 600 ರಿಂದ 700ರವರೆಗೆ ಇದ್ದ ಕೆಲಸಗಾರರ ಆರ್.ಡಿ. ಖಾತೆಗಳು ಐದುವರ್ಷ ತುಂಬಿದ್ದವು. ಅದರ ಹಣವನ್ನು ಅವರವರೇ ಬಂದು ತೆಗೆದುಕೊಂಡು ಹೋಗಬೇಕು. ಆದರೆ ಎಸ್ಟೇಟ್‌ನವರ ಬೇಡಿಕೆ ಮೇರೆಗೆ ನಮ್ಮ ಆಫೀಸರ್ ಅನುಮತಿ ನೀಡಿದ್ದರು. ಆದ್ದರಿಂದ ನಾವೇ ನಾಲ್ಕೈದು ಜನ ಹೋಗಿ ಹಣ ಪಾವತಿ ಮಾಡಿ ಬಂದೆವು. ಎಸ್ಟೇಟ್‌ನವರು ಜೀಪು ಕಳಿಸಿದ್ದರು. ಅದರಲ್ಲಿಯೇ ಹೋಗಿ ಕಾಫಿ-ಟೀ ಎಸ್ಟೇಟನ್ನು, ಕಾಡನ್ನು ನೋಡಿ ಆನಂದಿಸಿದೆವು. ಎಂಥಹ ಸುಂದರ ಸ್ಥಳ. ಬರೀ ಮರ ನೋಡಿದರೆ ರೋಮಾಂಚನವಾಗುವ ನಾವು ಸುಂದರ ಪ್ರಕೃತಿ ನೋಡಿ ಬಹಳಷ್ಟು ಖುಷಿಪಟ್ಟೆವು. ಎಸ್ಟೇಟ್‌ನವರು ನೀಡಿದ ಆತಿಥ್ಯ ಇಂದಿಗೂ ಮರೆಯಲಾಗುತ್ತಿಲ್ಲ. ಪರ್ವತದ ತುದಿಯ ರಮ್ಯತಾಣದಲ್ಲಿ ಇರುವ ಭಾಗ್ಯ ನಮ್ಮಲ್ಲಿ ಇಲ್ಲವಲ್ಲಾ, ಒಂದು ದಿನವಾದರೂ ಅಂತಹ ಭಾಗ್ಯ ಸಿಕ್ಕಿತಲ್ಲಾ ಅಂತ ಖುಷಿಯಾಗಿ ವಾಪಾಸಾದೆವು.




■ ಎನ್.ರವಿಂದ್ರನಾಥರೆಡ್ಡಿ, ಹಂಪಿ

ಈ ಅಂಕಣಕ್ಕೆ ನೀವು ನಿಮ್ಮ ಅನುಭವಗಳನ್ನು ಬರೆದು ಕಳಿಹಿಸಬಹುದು.
ನಿಮ್ಮ ಲೇಖನ ಸೇರಬೇಕಾದ ವಿಳಾಸ:

ಸಂಪಾದಕ
ಉತ್ತರ ಧ್ರುವದಿಂ.... ಅಂಕಣ ವಿಭಾಗ
'ಬಿಸಿಲ ಬದುಕು', 473, 1ನೇ ಕ್ರಾಸ್
1ನೇ ಬ್ಲಾಕ್, 3ನೇ ಸ್ಟೇಜ್, ಬಸವೇಶ್ವರನಗರ
ಬೆಂಗಳೂರು - 560 079

ಹೀಗೇ ಈ ಬದುಕು....



ನಮ್ಮ ಮಗು ಕಿರಣ ಹುಟ್ಟಿದಾಗ ಇದು ನಡೆದಿದ್ದು. ಮೊದಲ ದಿನವೇ ನರ್ಸಿಂಗ್ ಹೋಂನಲ್ಲಿ ದಂಡಿನ ದಾಳಿ. ನನಗೋ ಮಾಂಸದ ಮುದ್ದೆಯಂತಿರುವ ಮಗು ಮುಟ್ಟಲೂ ಹೆದರಿಕೆ. ಬಂದ ಹಿರಿಯ ಹೆಂಗಸರೆಲ್ಲ ಅವನ್ನ ಸಲೀಸಾಗಿ ಎತ್ತಿ, ಆಡಿಸಿ, ಮಾತಾಡಿಸೋವಾಗ ಆತಂಕ.

ಕೊನೇಲಿ ಅವರದ್ದೆಲ್ಲ ಒಂದು ಕಾಮೆಂಟ್ 'ಮೂಗು, ಕಣ್ಣು, ಕಿವಿ ಎಲ್ಲ ಥೇಟು ಅವರಪ್ಪನ ಹಾಗೆ.' ಇದು ನನ್ನ ಮನೆಯವರ ಬಳಗದ ಮಾತು. ನನ್ನ ಬಳಗದವರಿಗೆ ಮಾತ್ರ ಅದೇಕೋ 'ಥೇಟು ನನ್ನ ಹಾಗೆ' ಅನ್ನಿಸುತ್ತಿತ್ತು.

ದಂಡಿನ ದಾಳಿ ಕಡಿಮೆ ಆದ ಮೇಲೆ, ಹತ್ತಿರವೇ ಇದ್ದ ವಯಸ್ಸಾದ ಅತ್ತೇನ ಕೇಳಿದೆ. ''ನಿಜ ಹೇಳಿ, ಮಗು ಯಾರ ಹಾಗೆ ಇದೇ? ನಂಗಂತೂ ಏನೂ ಗೊತ್ತಾಗ್ತಾ ಇಲ್ಲ....'' ಅದಕ್ಕೆ ಅವರು ನಕ್ಕು ಹೇಳಿದರು.

''ಮಕ್ಕಳು ಒಂಥರಾ ದೇವರ ಹಾಗೆ. ಅವರವರ ಕಣ್ಣಿಗೆ ಅವರವರ ಇಷ್ಟದ ಹಾಗೆ ಮಗು ಕಾಣುತ್ತಪ್ಪ. ಹೀಗೆ, ಹಾಗೆ ಅಂತ ಯಾಕೆ ಯೋಚಿಸ್ತೀಯ!''

- ಎಂ.ಪಿ.ಮಂಗಳಾ, ಬೆಂಗಳೂರು.

ನನ್ನ ಹೆಂಡತಿ ಸಾಕಷ್ಟು ಚೆನ್ನಾಗೇನೋ ಇದ್ದಾಳೆ. ಆದರೆ, ಮನೇಲಿರುವಾಗ ಹ್ಯಾಗಿದ್ದರೇನು ಅನ್ನೋ ಉಡಾಫೆ. ಅದಕ್ಕೆ ತಕ್ಕ ಹಾಗೆ ನಾಲ್ಕೈದು ನೈಟಿ. ಸದಾ ಮಾಸಿದ, ಅಲ್ಲಲ್ಲಿ ಹಳತಾಗಿ ಹಿಂಜಿದ ಅದನ್ನು ನೋಡಿ, ನೋಡಿ ನನಗೇ ಬೇಸರ.

''ಮನೇಲಿ ಸ್ವಲ್ಪ ನೀಟಾಗಿರಬಾರದಾ?'' ಅಂದರೆ

''ಸುಮ್ನಿರಿ, ಎಲ್ಲಿಗೆ ಹೋಗಬೇಕಾಗಿದೆ. ಇದು ಎಲ್ಲ ರೀತೀಲಿ ಅನುಕೂಲ. ಒಳ್ಳೊಳ್ಳೆ ಬಟ್ಟೆ ಮನೇಲಿ ಹಾಕ್ಕೊಂಡರೆ ಹಾಳಾಗುತ್ತೆ'' ಎಂಬ ವಿವರಣೆ.

ಮೊನ್ನೆ ನೆಂಟರ ಮದುವೆ. ಇವಳೂ ಬರಲೇ ಬೇಕಿತ್ತು. ರೇಷ್ಮೆ ಸೀರೆಯುಟ್ಟು, ಒಡವೆ, ಮೇಕಪ್‌ನಲ್ಲಿ ಚಂದವಾಗಿ ಕಾಣುತ್ತಿದ್ದಳು. ಹೊರಗೆ ಬಂದಾಗ, ಹತ್ತಿರದಲ್ಲಿಯೇ ಶಾಲೆಯ ವ್ಯಾನಿಗೆ ಕಾಯುತ್ತಿದ್ದ ಪಕ್ಕದ ಮನೆಯ ಗುಡ್ಡಿ, ಪಿಳಿಪಿಳಿ ಇವಳತ್ತ ನೋಡಿದಳು. ಅನುಮಾನದಿಂದ ಹತ್ತಿರ ಬಂದು ''ಓ! ನೀವಾ ಆಂಟಿ? ನಾನು ಬೇರೆ ಯಾರೋ ಆಂಟಿ ಅಂದುಕೊಂಡಿದ್ದೆ'' ಎಂಬ ಉದ್ಗಾರ ತೆಗೆದಳು. ಅದು ಎಷ್ಟು ಪರಿಣಾಮಕಾರಿ ಆಗಿತ್ತೆಂದರೆ, ಮದುವೆ ಮನೆಯಿಂದ ಬಂದವಳು ನೈಟಿಗಳನ್ನು ಮುದುರಿ ಇಟ್ಟಿದ್ದಾಳೆ. ಈಗ ದಿನಾ ನಾನಾ ತರಹ ಸೀರೆ, ಚೂಡಿದಾರ್‌ಗಳಲ್ಲಿ ಕಾಣಿಸುತ್ತಾಳೆ. ಆದರೆ, ಈ ಬದಲಾವಣೆಗೆ ಕಾರಣವಾದ ಗುಡ್ಡಿಗೆ ಹ್ಯಾಗೆ ಥ್ಯಾಂಕ್ಸ್ ಹೇಳಬೇಕೋ ತಿಳಿಯುತ್ತಿಲ್ಲ.

- ಪ್ರಸನ್ನರಾಜೇ ಅರಸ್, ಮೈಸೂರು.

ನಾವಿರುವುದು ರಾಂಚಿಯಲ್ಲಿ. ಇಲ್ಲಿ ನಮ್ಮ ಪ್ರಿಯ ತರಕಾರಿ ನುಗ್ಗೇಕಾಯಿ ಸಿಗುವುದು ಅಪರೂಪ. ಊರಿಗೆ ಬಂದಾಗ ಮರೆಯದೇ ಒಂದೆರಡು ಕಟ್ಟು ಕೊಂಡೂಯ್ಯುತ್ತೇವೆ. ಮೊದಲ ಸಲ ಹಾಗೆ ತಂದ ನುಗ್ಗೇಕಾಯಿ ಹುಳಿ ಮಾಡಿದ್ದೆವು. ನಮ್ಮ ಮನೆಗೆ ಕಂಪೆನಿ ಒದಗಿಸಿದ ಆಳು ರಾಂಬಾಬು. ಅವನಿಗೆ ನಮ್ಮ ಮನೇಲೇ ಊಟ.

ಊಟದ ಸಮಯದಲ್ಲಿ ಏನೇ ಆದರೂ ಅವನು ಮಾತು ಆಡೋದಿಲ್ಲ. ಬಡಿಸಿದ್ದ ಯಾವುದೂ ಉಳಿಸೋದಿಲ್ಲ. ಅವತ್ತು ನುಗ್ಗೇಕಾಯಿ ಹುಳಿ ಬಡಿಸಿದಾಗ ಅವನು ಸಿಪ್ಪೆ ಸಮೇತ ಎಲ್ಲ ತಿಂದು ಮುಗಿಸಿಬಿಟ್ಟ. ತುಂಬಾ ಇಷ್ಟವಾಗಿರಬೇಕು ಅಂತ ಮತ್ತಿಷ್ಟು ಹೋಳು ಬಡಿಸಿದೆ. ಅದನ್ನೂ ಹಾಗೇ ತಿಂದು ಮುಗಿಸಿ ಎದ್ದ. ಅವನ ಮುಖದಲ್ಲಿ ಅಶಾಂತಿ, ಸಿಟ್ಟು. ಕೈತೊಳೆದು, ಹೊರಗೆ ಎಲೆ ಅಡಿಕೆ ಹಾಕಿಕೊಳ್ತಾ ಇದ್ದವನನ್ನು ಕಂಡು ಕೇಳಿದೆ ''ನುಗ್ಗೆಕಾಯಿ ತುಂಬಾ ಇಷ್ಟ ಅಂತ ಕಾಣುತ್ತೆ. ಇನ್ನಿಷ್ಟು ಬಡಿಸೋಣ ಅಂದುಕೊಂಡೆ. ಹೋಳೆಲ್ಲ ಮುಗಿದೇ ಹೋಗಿತ್ತು''. ''ಅಮ್ಮಾ, ನಿಮಗೆ ನನ್ನ ಮೇಲೆ ಕರುಣೆ ಅಂತೇನಾದರೂ ಇದ್ದರೆ ದಯವಿಟ್ಟು ಆ ನುಗ್ಗೇಕಾಯಿ ಮಾತ್ರ ತರಬೇಡಿ. ನನ್ನ ಕಷ್ಟ ನನಗೆ. ಮಾತಾಡೋ ಹಾಗಿಲ್ಲ. ತಿನ್ನೋ ಹಾಗಿಲ್ಲ.... ನಿಮ್ಮ ದಮ್ಮಯ್ಯ ಅಂತೀನಿ ಆ ಹಾಳು ನುಗ್ಗೇಕಾಯಿ ಮಾತ್ರ ಯಾವ ಕಾರಣಕ್ಕೂ ತರಬೇಡಿ. ತಂದರೂ ನನಗೆ ಬಡಿಸಬೇಡಿ''

. - ವಿಜಯಲಕ್ಷ್ಮಿ ಸುಬ್ಬರಾವ್, ರಾಂಚಿ.

ಹಬ್ಬದ ಸೀಸನ್ನು. ಬಸ್‌ನಲ್ಲಿ ಜನರ ನೂಕು ನುಗ್ಗಲು. ರಿಸರ್ವ್ ಮಾಡಿಸಿದ್ದರಿಂದ ಸೀಟು ಭದ್ರವಾಗಿತ್ತು. ಇಬ್ಬರು ಕೂರುವ ಆ ಸೀಟಿನಲ್ಲಿ, ಮಗ್ಗುಲಿಗೆ ಬಂದು ಕುಳಿತಿದ್ದು ತಾಯಿ ಮತ್ತು ಎರಡು ವರ್ಷವೂ ತುಂಬಿರದ ಮಗು.

ಬಸ್ ಹೊರಡುತ್ತಿದ್ದ ಹಾಗೆ ಮಗುವಿನ ತಂಟೆ ಶುರು. ತಾಯಿ ಸುಧಾರಿಸುವಷ್ಟು ಸುಧಾರಿಸಿದರು. ಕೊನೆಗೊಂದು ಏಟು ಬಿಗಿದರು. ಮಗುವಿನ ಅಳು ತಾರಕಕ್ಕೇರಿತು. ಹೋಗಲಿ ಎಂದು ಮಗೂನ್ನ ಎತ್ತಿಕೊಂಡು ಸಮಾಧಾನ ಮಾಡಿದೆ. ಆಡಿಸಿದೆ. ಪ್ರಯಾಣದ ಉದ್ದಕ್ಕೂ ಮಗುವನ್ನು ಲಾಲಿಸುವ ಹೊಣೆ ನನ್ನದಾಯಿತು. ಮಗುವಿನ ತಾಯಿ ಆಯಾಸದಿಂದಲೋ, ಅನಾರೋಗ್ಯದಿಂದಲೋ ನಿದ್ದೆ ಮಾಡಿಬಿಟ್ಟರು. ಶಿವಮೊಗ್ಗ ಬರುವಾಗ ಎಚ್ಚರವಾಯಿತು.

'ಇವನು ಮಹಾ ಪುಂಡ. ನೋಡಿಕೊಳ್ಳೋದರಲ್ಲೇ ನನ್ನ ಮೈ ಹಣ್ಣಾಗುತ್ತೆ. ನಿಮಗೆ ತುಂಬಾ ಥ್ಯಾಂಕ್ಸ್'' ಅಂದರು. ಅದಾದ ಮೇಲೆ ಒಂದೆರಡು ಮಾತು. ಪರಿಚಯ. ಮತ್ತೆ ಹಿಂದೆ ಹೊರಡುವ ದಿನದ ಪ್ರಸ್ತಾಪ. ನಾನು ಮರುಳುವ ದಿನಾಂಕ ಹೇಳಿದ್ದೆ ''ಓ! ಅವತ್ತೇ ನಾನೂ ಹೊರಡೋದು ಎಷ್ಟು ಗಂಟೆಗೆ?'' ಎಂದೆಲ್ಲ ಕಾತರದಿಂದ ವಿಚಾರಿಸಿದರು.

''ಯಾಕೆ? ನೀವೂ ಅದೇ ಬಸ್ಸಿಗೆ ಬರ್ತೀರಾ?'' ಕುತೂಹಲದಿಂದ ವಿಚಾರಿಸಿದೆ.

''ನೀವಿದ್ದರೆ ಈ ಪುಂಡನ ಚಿಂತೆ ಇಲ್ಲದೆ ಪ್ರಯಾಣ ಮಾಡಬಹುದು....'' ಆಕೆ ಉತ್ಸಾಹದಿಂದ ಹೇಳಿದಾಗ ಪೆಚ್ಚಾಗುವ ಸರದಿ ನನ್ನದಾಯಿತು.

- ಪ್ರಕಾಶ್ ಕುಲಕರ್ಣಿ, ಹುಬ್ಬಳ್ಳಿ.

ನಾವು ಚಿಕ್ಕವರಿದ್ದಾಗ ತಂದೆಯವರು ಮೂರು ದಿನ ಅಡುಗೆಗೆ ನಿಲ್ಲುತ್ತಿದ್ದರು. ಆಫೀಸಿಗೆ ಹೊರಡುವ ಆತುರ. ಯಾವುದು ಎಲ್ಲಿ ಎಂದು ತಿಳಿಯದ ಪೇಚಾಟ. ತಂದೆಯವರು ಅಡುಗೆ ಮನೆಯಿಂದ ಕೂಗು ಹಾಕುತ್ತಿದ್ದರು.

''ಸಕ್ಕರೆ ಎಲ್ಲಿ ಬಡಿದಿದೀಯ?''

''ಅಲ್ಲೇ ಮುಂದೇನೇ ಇದೆ....''

''ಮುಂದೇನೇ ಅಂತೆ ಮುಂದೆ! ಯಾವ ಹಾಳು ಡಬ್ಬದಲ್ಲಿ ಹಾಕಿ ಬಡಿದಿದೀಯೇ!''


''ಅದೇರೀ, ಮೇಲೇನೇ ಕಾಣೋದಿಲ್ಲವಾ? ಜೀರಿಗೆ ಅಂತ ಬರೆದಿರೋದು...''

ಜೀರಿಗೆ ಡಬ್ಬದಲ್ಲಿ ಸಕ್ಕರೆ ಹ್ಯಾಗಿರುತ್ತೆ? ಇದು ನನ್ನ ಪುಟಾಣಿ ಮೆದುಳಿಗೆ ಹೊಳೆಯುತ್ತಾ ಇರಲಿಲ್ಲ. ತೀರಾ ಸಮಸ್ಯೆಯಾದಾಗ ಅಕ್ಕನ್ನ ಕೇಳಿದ್ದೆ.

''ಸಕ್ಕರೆ ಡಬ್ಬದಲ್ಲೇ ಸಕ್ಕರೆ ಹಾಕಿದರೆ ಇರುವೆಗಳಿಗೆ ಗೊತ್ತಾಗಲ್ಲ! ಅದಕ್ಕೇ''

ಅಕ್ಕ ಅವತ್ತು ಹೇಳಿದ್ದು ನಿಜ ಅಂತ ತುಂಬಾ ದಿನದವರೆಗೆ ನಾನು ನಂಬಿಕೊಂಡಿದ್ದೆ.

■ ಕೆ.ಸಿ.ಅನಿತಾ, ದಾವಣಗೆರೆ.



ಆಧುನಿಕ ಜೀವನದಲ್ಲಿ ಬೊಜ್ಜು ಅಥವಾ ಅತಿ ತೂಕ ದೊಡ್ಡ ಸಮಸ್ಯೆಯಾಗಿದೆ. ದೇಹಕ್ಕೆ ಸಾಕಷ್ಟು ವ್ಯಾಯಾಮವಿಲ್ಲದೆ ಯಂತ್ರಗಳನ್ನೇ ಅವಲಂಬಿಸಿ ಬದುಕುವ ಜನರಿಗೆ ಬಹುಬೇಗ ದೇಹದಲ್ಲಿ ಕೊಬ್ಬು ಹೆಚ್ಚಾಗಿ ಸ್ಥೂಲದೇಹವುಳ್ಳವರಾಗಿ ಅನೇಕ ಕಾಯಿಲೆಗಳಿಗೆ ಗುರಿಯಾಗುತ್ತಾರೆ. ಅತಿಯಾದ ಚಹಾ, ಕಾಫಿ ಸೇವನೆ, ಸಿಗರೇಟು, ಮದ್ಯ ಸೇವನೆಯಿಂದಲೂ ತೂಕ ಹೆಚ್ಚಾಗಿ ಸ್ಥೂಲದೇಹಿಗಳಾಗುತ್ತಾರೆ.

ಬೊಜ್ಜು ಕರಗಲು ಸುಲಭ ಉಪಾಯ

'ತಿನ್ನುವುದಕ್ಕಾಗಿಯೇ ಜೀವನವಲ್ಲ, ಜೀವಧಾರಣೆಗಾಗಿ ಆಹಾರ' ಎಂಬ ಮೂಲತತ್ವವನ್ನು ಚಾಚೂ ತಪ್ಪದೆ ಪಾಲಿಸಬೇಕು. ಬಹುತೇಕವಾಗಿ ಆಹಾರದ ಸೇವನೆಯೂ ತೂಕ ಹೆಚ್ಚಾಗುವುದಕ್ಕೆ ಒಂದು ಕಾರಣವೆಂಬುದನ್ನು ಮರೆಯಬಾರದು. ಆದುದರಿಂದಲೇ ಸುಖ ಜೀವನದ ಶ್ರೀಮಂತರಲ್ಲೇ ಬೊಜ್ಜು ಹೆಚ್ಚಾಗಿ ಕಂಡು ಬರುವುದು. ಬಡವರಲ್ಲಿ ಹುಡುಕಿದರೂ ಅಂತಹವರು ಸಿಗುವುದು ವಿರಳ.

ಬೆಳಿಗ್ಗೆ ಕೇವಲ ಯಾವುದಾದರೊಂದು ಹಣ್ಣಿನರಸ, ಮಧ್ಯಾಹ್ನ ಸ್ವಲ್ಪ ತರಕಾರಿ, ಒಂದು ರೊಟ್ಟಿ ಅಥವಾ ಎಣ್ಣೆ ಹಾಕಿದ ಚಪಾತಿ, ರಾತ್ರಿಯ ಸಮಯದಲ್ಲಿ ಯಾವುದಾದರೊಂದು ತರಕಾರಿಯಿಂದ ತಯಾರಿಸಿದ ಪಲ್ಯ ಅಥವಾ ಸೊಪ್ಪನ್ನು ಮಾತ್ರ ತಿನ್ನುತ್ತಿರಬೇಕು. ವ್ಯಾಯಾಮ, ಓಟ, ಬಿರುಸಿನ ನಡಿಗೆ, ಯೋಗಸಾಧನೆಗಳಲ್ಲಿ ಯಾವುದಾದರೊಂದನ್ನು ಪ್ರತಿದಿನ ಮಾಡುತ್ತಿದ್ದರೆ ಬೊಜ್ಜನ್ನು ಕರಗಿಸಲು ಖಂಡಿತ ಸಾಧ್ಯವಿದೆ.

ಪ್ರತಿದಿನ ಬೆಳಿಗ್ಗೆ ಎರಡೂವರೆ ಚಮಚ ಜೇನುತುಪ್ಪ ಹಾಗೂ ಒಂದು ದೊಡ್ಡ ನಿಂಬೆಹಣ್ಣಿನ ರಸವನ್ನು ಒಂದು ಲೋಟ ಬಿಸಿನೀರಿಗೆ ಹಾಕಿ ಕುಡಿಯಬೇಕು. ವಾರಕ್ಕೊಮ್ಮೆ ಉಪವಾಸ ಮಾಡಬೇಕು. ಇದನ್ನು ಎರಡು ಮೂರು ತಿಂಗಳು ಮಾಡಬೇಕು. ಇದರ ಜೊತೆಗೆ ಕರಿದ ಪದಾರ್ಥ, ಅತಿಯಾಗಿ ಸಿಹಿ ತಿನಿಸುಗಳ ಸೇವನೆ ನಿಲ್ಲಿಸಬೇಕು.

ನೀರನ್ನು ಹೆಚ್ಚಾಗಿ ಕುಡಿಯಬೇಕು. ಗಟ್ಟಿ ಆಹಾರಕ್ಕಿಂತ ತಿಳಿನೀರು, ಮಜ್ಜಿಗೆ, ಹಣ್ಣಿನ ರಸ, ನಿಂಬೆಹಣ್ಣಿನ ಪಾನಕ ಸೇವಿಸುತ್ತಾ ನಿಯಮಿತವಾಗಿ ವ್ಯಾಯಾಮವನ್ನು ಮಾಡುತ್ತಿದ್ದರೆ ಬೇಗನೇ ಕೊಬ್ಬನ್ನು ಕರಗಿಸಬಹುದು.

ಒಂದು ಲೋಟ ನೀರಿಗೆ 3 ಚಮಚ ತ್ರಿಫಲಾ ಪುಡಿಯನ್ನು ರಾತ್ರಿಯೇ ಹಾಕಿ ಮುಚ್ಚಿಟ್ಟು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಅದನ್ನು ಕುಡಿಯಬೇಕು.

ಅಮೃತಬಳ್ಳಿ 10 ಗ್ರಾಂ, ಅಳಲೆಕಾಯಿ ಸಿಪ್ಪೆ 10 ಗ್ರಾಂ, ತಾರೇಕಾಯಿ 10 ಗ್ರಾಂ, ನೆಲ್ಲಿಕಾಯಿ 10 ಗ್ರಾಂ ಇವುಗಳನ್ನೆಲ್ಲ ಕುಟ್ಟಿ ಒಂದು ಲೋಟ ನೀರಿನಲ್ಲಿ ಕಷಾಯಕ್ಕಿಟ್ಟು ಸಣ್ಣಗೆ ಉರಿಯಲ್ಲಿ ಕಾಯಿಸಿ ನೀರು ಅರ್ಧಕ್ಕಿಳಿದಾಗ ಅದರಲ್ಲಿ ಒಂದರಿಂದ ಎರಡು ಗುಂಜಿ ಲೋಹ ಭಸ್ಮ ಸೇರಿಸಿ ದಿನಕ್ಕೆ ಎರಡು ಹೊತ್ತು ತೆಗೆದುಕೊಳ್ಳುತ್ತಿದ್ದರೆ ಕಡಿಮೆಯಾಗುತ್ತದೆ. ದೀರ್ಘಕಾಲ ಇದರ ಸೇವನೆ ಮಾಡಬೇಕು.

ಬೆಣ್ಣೆತೆಗೆದ ಮಜ್ಜಿಗೆಯನ್ನು ಸಾಧ್ಯವಾದಷ್ಟು ಹೆಚ್ಚು ದಿನ ಸೇವಿಸುತ್ತಿದ್ದರೆ ಕೊಬ್ಬು ಕರಗುತ್ತದೆ.


ಉಪವಾಸದಿಂದಿದ್ದು ಯಾವುದಾದರೊಂದು ಹಣ್ಣಿನ ರಸದ ಸೇವನೆಯನ್ನೇ ಮಾಡುತ್ತಿದ್ದರೆ ಮೈಯ ತೂಕ ಇಳಿಸಬಹುದು. ಬಾಷ್ಪ ಸ್ನಾನ (ಉಗಿಸ್ನಾನ)ವೂ ಕೊಬ್ಬು ಇಳಿಸುವುದಕ್ಕೆ ಸಹಾಯಕಾರಿಯಾಗುತ್ತದೆ.

■ ಡಾ. ವಸುಂಧರಾ ಭೂಪತಿ

ಯೋಧನ ಪುನರಾಗಮನ

ಮೂಲ : ಕಾನ್ಸ್ಟಂಟೈನ್ ಟ್ರೆನಿಯಾವ್
ಅನುವಾದ : ಎ.ಎನ್. ಮೂರ್ತಿರಾವ್

ಯುದ್ಧ ಮನುಷ್ಯನ ಎಲ್ಲ ಭಾವನೆಗಳ ತಾಕಲಾಟದ ರಂಗ. ಅಲ್ಲಿ ಕ್ರೌರ್ಯವಿದೆ, ಹಿಂಸೆ ಇದೆ, ಅಮಾನುಷತೆ ಇದೆ, ಭೀಕರತೆ ಇದೆ. ಇದೆಲ್ಲ ಮೀರಿ ಮಾನವೀಯತೆಯೂ ಇದೆ. ಅದರ ಯಥಾರ್ಥ ಚಿತ್ರಣ ಬಿಂಬಿಸುವ ಕತೆ ಇದು.



ವಸಂತ ಕಾಲದ ಹೊಲಗಳು ಮಂಜಿನ ಹೊದಿಕೆಯನ್ನು ಕಳೆದು ಎಲ್ಲ ಕಡೆಯಲ್ಲಿಯೂ ತುದಿ ಮೊದಲಿಲ್ಲದಂತೆ ಹರಡಿದ್ದವು. ಕಣಿವೆಯ ಆಚೆ ಇದ್ದ ಪೊದೆಗಳಲ್ಲಿ ಇನ್ನೂ ಅಲ್ಪಸ್ವಲ್ಪ ಮಂಜು ನೀಲಿಯ ಬಣ್ಣ ತಳೆದು ಎಲೆಗಳ ನಡುವೆ ಹೊಳೆಯುತ್ತಿತ್ತು. ಅಂತರಿಕ್ಷದಲ್ಲಿ ಬಾನಾಡಿಯೊಂದು ಹಾಡುತ್ತಿತ್ತು.

ಟ್ಯಾಂಕ್ ಸಾರ್ಜೆಂಟ್ ಅಲೆಕ್ಸಿ ಸ್ಕ್ವಾರ್ಟ್‌ಸಾವ್ ನಡೆದು ಹೋಗುತ್ತಿದ್ದ ರಸ್ತೆ ಆಗಲೇ ಚೆನ್ನಾಗಿ ಒಣಗಿತ್ತು. ಪಕ್ಕದ ಚರಂಡಿಗಳಲ್ಲಿ ಹಳೆಯ ವರ್ಷದ ಒಣ ಹುಲ್ಲಿನ ನಡುವೆ ಹಸುರು ಬೆಳೆದು ಇಣಿಕಿ ನೋಡುತ್ತಿತ್ತು. ದಾರಿಯಲ್ಲಿ ಅಲ್ಲಲ್ಲಿಯೇ ಯುದ್ಧಕಾಲದ ಕಂದಕಗಳು, ನಾಶವಾದ ಮೋಟಾರ್ ಗಾಡಿಗಳ ಅಸ್ಥಿಪಂಜರಗಳು. ಸ್ವಲ್ಪ ಮುಂದೆ ತಾನು ಹುಟ್ಟಿ ಬೆಳೆದ ಹಳ್ಳಿ,

ಅಲೆಕ್ಸಿಗೆ ಒಂದು ಕ್ಷಣ ಉಸಿರು ಹಿಡಿದಂತಾಯಿತು. ತನಗೆ ಉಳಿದಿದ್ದ ಒಂಟಿಗಣ್ಣಿನಿಂದ ಹಳ್ಳಿಯನ್ನು ನೋಡುತ್ತ ಬಹಳ ಹೊತ್ತು ನಿಂತನು. ಯುದ್ಧದ ವಿಪತ್ತಿಗೆ ಸಿಕ್ಕಿ ಹಳ್ಳಿ ನಾಶವಾಗಿರಬೇಕೆಂದು ಅವನು ಬಲ್ಲ. ತಾನು ಬಂದ ದಾರಿಯಲ್ಲಿ ಅಂಥ ಹಳ್ಳಿಗಳೂ ಪಟ್ಟಣಗಳೂ ಎಷ್ಟೋ ಕಣ್ಣಿಗೆ ಬೀಳಲಿಲ್ಲವೆ! ಅವುಗಳಂತೆಯೇ ತನ್ನ ಹಳ್ಳಿ - ಕುಸಿದು ಬೀಳುತ್ತಿರುವ ಮನೆಗಳು, ಸುಟ್ಟು ಕಪ್ಪಾಗಿ ಕಾಣುವ ಚಿಮಣಿಗಳು, ಅವುಗಳ ಮಗ್ಗುಲಲ್ಲಿಯೇ ಹೊಸದಾಗಿ ಕಟ್ಟಿದ ಮನೆ, ಬೆಳಗಿನ ಬಿಸಿಲಿನಲ್ಲಿ ಚಿನ್ನದಂತೆ ಹೊಳೆಯುವ ಹೊಸ ಹುಲ್ಲಿನ ಚಾವಣಿ. ಅವನ ಕಣ್ಣು ತನ್ನ ಮನೆಯನ್ನು ಹುಡುಕಿ ಅಲೆದಾಡಿತು.... ಹೃದಯದ ತುಡಿತ ಬಲವಾಯಿತು - ಅಲ್ಲಿ ಹಳ್ಳಿಯ ಚೌಕದ ಹತ್ತಿರ, ಆ ವಿಲ್ಲೋ ಗಿಡದ ಬಳಿ ಕಾಣುವ ಹಳದಿ ಹುಲ್ಲಿನ ಚಾವಣಿ, ಬೆಳ್ಳಗೆ ಮೇಲಕ್ಕೆದ್ದ ಚಿಮಣಿ! ತನ್ನ ವಿಕಾರವಾದ ಮುಖದಿಂದ ಕಣ್ಣೀರನ್ನೊರಸಿಕೊಂಡನು. ಶತ್ರುಗಳು ತನ್ನ ಹಳ್ಳಿಯನ್ನು ನಾಶಮಾಡಿದ್ದರು - ತನ್ನ ಮುಖವನ್ನು ನಾಶ ಮಾಡಿದಂತೆಯೇ, ಹಳ್ಳಿಯೇನೋ ಮತ್ತೆ ಏಳುತ್ತದೆ, ಬಹುಕಾಲ ಪಾಳಾಗಿರುವುದಿಲ್ಲ. ಈಗ ಕಾಣುವ ಸುಟ್ಟ ಮರಮುಟ್ಟುಗಳಿಗೂ ಅರ್ಧ ಕುಸಿದಿರುವ ಮನೆಗಳಿಗೂ ಹೊಸ ಜೀವ ಬಂದು ಯುದ್ಧದ ನೆನಪು ಅಳಿದು ಹೋಗುತ್ತದೆ. ಆದರೆ ತನ್ನ ಮುಖ ಮಾತ್ರ ಎಂದೆಂದಿಗೂ ಬದಲಾಯಿಸುವಂತಿಲ್ಲ.

ಆಸ್ಪತ್ರೆಯಿಂದ ಬಿಡುಗಡೆಯಾದ ಕೂಡಲೇ ಅಲೆಕ್ಸಿ ನೆಟ್ಟಗೆ ತನ್ನ ಹಳ್ಳಿಯ ಕಡೆಗೆ ಹೊರಟಿದ್ದನು. ಆಸ್ಪತ್ರೆಗೆ ಯಾವಾಗ ಹೋದನೋ ಯಾರು ಅಲ್ಲಿಗೆ ತಂದು ಹಾಕಿದರೋ ಅವನಿಗೆ ತಿಳಿಯದು. ಅವನಿಗೆ ನೆನಪಿದ್ದದ್ದು ಇಷ್ಟೆ - ನದಿಯ ಆಚೆ ಜರ್ಮನ್ ಪಾನ್ಸರ್‌ಗಳು ಜೇನು ಹುಳುಗಳಂತೆ ನೆರೆದು ನಿಂತಿದ್ದರು. ಅವರ ಇದಿರಿನಲ್ಲಿಯೇ ನದಿಯನ್ನು ದಾಟಿ ಟ್ಯಾಂಕನ್ನು ಅವರ ವ್ಯೂಹದೊಳಕ್ಕೆ ನುಗ್ಗಿಸಿದವರಲ್ಲಿ ತಾನೇ ಮೊದಲಿಗ. ಇದ್ದಕ್ಕಿದ್ದ ಹಾಗೆಯೇ ಟ್ಯಾಂಕಿನಲ್ಲಿ ಕಣ್ಣು ಕೋರೈಸುವಂಥ ಉರಿಯೆದ್ದಿತು - ಮತ್ತೇನೂ ತಿಳಿಯದು. ಅಲ್ಲಿಂದಾಚೆಗೆ ಯುದ್ಧ ಹೇಗೆ ನಡೆಯಿತೋ, ಅದೆಲ್ಲಾ ತಿಳಿದದ್ದು ತನಗೆ ಶಸ್ತ್ರಚಿಕಿತ್ಸೆಯಾಗಿ ಚೇತರಿಸಿಕೊಂಡ ಮೇಲೆ. ಅವನ ಮುಖವೆಲ್ಲಾ ಸುಟ್ಟುಹೋಗಿ ಮಾಂಸ ಖಂಡಗಳು ಎದ್ದು ಕಾಣುತ್ತಿದ್ದವು. ಇತರರ ಶರೀರದಿಂದಲೂ ತನ್ನ ಶರೀರದ ಇತರ ಭಾಗಗಳಿಂದಲೂ ಚರ್ಮವನ್ನು ತೆಗೆದು ಮುಖಕ್ಕೆ ಹಚ್ಚಿದರು; ಲೋಹದ ಗಂಟಲೊಂದನ್ನು ಮಾಡಿ ಹಾಕಿದರು; ನಾಶವಾದ ಒಂದು ಕಣ್ಣಿಗೆ ಬದಲಾಗಿ ಗಾಜಿನ ಕಣ್ಣನ್ನು ಕಟ್ಟಿದರು. ಸ್ವಲ್ಪ ಸುಧಾರಿಸಿದ ಮೇಲೆ ಆಸ್ಪತ್ರೆಯಲ್ಲೇ ಅವನಿಗೆ ಲೆನಿನ್ ವರ್ಗದ ಪ್ರಶಸ್ತಿಯನ್ನೂ (Order of Lenin) ಚಿನ್ನದ ನಕ್ಷತ್ರವನ್ನೂ ತಂದುಕೊಟ್ಟು ಗೌರವಿಸಿದರು. ಆದರೇನು, ತನ್ನ ಮುಖ ತಾನೇ ಗುರುತಿಸಲಾಗದಂತಿತ್ತು. ಕನ್ನಡಿ ಹಿಡಿದು ಪರೀಕ್ಷಿಸಿದರೆ ಮುಖದ ಯಾವುದೊಂದು ಭಾಗವೂ ಮೊದಲಿನಂತಿರಲಿಲ್ಲ. ಅವನ ಕಂಠದ ಧ್ವನಿ ಸಹಿತ ವ್ಯತ್ಯಾಸವಾಗಿ ಹೋಗಿತ್ತು.

ಹಳ್ಳಿಯ ಹತ್ತಿರ ಹರಿಯುವ ಸಣ್ಣ ತೊರೆಯ ಬಳಿಗೆ ಬಂದು ಸೇತುವೆಯ ಮೇಲೆ ಕಾಲಿಟ್ಟನು. ಎರಡು ದಡಗಳಲ್ಲಿಯೂ ಹೊಸ ಗರಿಕೆಯ ಹುಲ್ಲು ಆಗಲೇ ಕಾಣುತ್ತಿತ್ತು. ಪೊದೆಗಳಲ್ಲಿ ಹಕ್ಕಿಗಳು ಸಿಳ್ಳುಹಾಕಿ ಚಿಲಿಪಿಲಿಗುಟ್ಟುತ್ತಿದ್ದವು. ಸ್ವಲ್ಪ ಮುಂದೆ ಕೆಲವು ಹೆಂಗಸರು ಜರ್ಮನ್ ಸಿಪಾಯಿಗಳ ಟೋಪಿಗಳಲ್ಲಿ ಸುಣ್ಣ ಬಣ್ಣ ತುಂಬಿಕೊಂಡು ಕಲೆಕ್ಟಿವ್ ಫಾರಂ ಗುಡಿಸಲಿನ ಗೋಡೆಗಳನ್ನು ನಯಮಾಡುತ್ತಿದ್ದರು. ಅಲೆಕ್ಸಿ ಅವರನ್ನು ದಿಟ್ಟಿಸಿ ನೋಡಿದನು. ಅವರು ಯಾರೂ ತನ್ನ ಜೊತೆಯವರಲ್ಲ. ತೀರ ವಯಸ್ಸಾದವರು, ಇಲ್ಲವೆ ಎಳೆಯ ವಯಸ್ಸಿನವರು. ಆ ಗುಡಿಸಲಿನಿಂದ ಮುಂದೆ ರಸ್ತೆ ತಿರುಗುವ ಮೂಲೆಯಲ್ಲಿ ಗಡ್ಡದ ಮುದುಕನೊಬ್ಬ ರೈತರೊಡನೆ ಬಹಳ ಉತ್ಸಾಹದಿಂದ ಏನೋ ಮಾತಾಡುತ್ತಿದ್ದನು. ಆತನ ಗುರುತಾಯಿತು - ಕ್ರಯಾಷ್ಕ.

''ಅದು ಹೇಗಾಯಿತು ಅಂತೀರಿ? ಅವರು ಆ ಹಸುವನ್ನು ನಮಗೆ ಮಾರಿದಾಗ, ಸೆಂಟ್ ಅಲೆಕ್ಸಿ ದಿನದ ಹೊತ್ತಿಗೆ ಕರು ಹಾಕುತ್ತೆ ಅಂತ ಹೇಳಿದ್ದರು. ನಾನೇನೂ ಅದನ್ನು ನಂಬಿರಲಿಲ್ಲ. ಆದರೂ ನೋಡಿ, ಹಸು ಇವೊತ್ತು ಕರುಹಾಕಿದೆ - ಇವೊತ್ತೇ ಸೆಂಟ್ ಅಲೆಕ್ಸಿ ದಿನ! ಈಗಲಾದರೂ ನಂಬುತ್ತೀರೋ ಇಲ್ಲವೋ?''

ಅಲೆಕ್ಸಿ ಹತ್ತಿರ ಬಂದಾಗ ಅವರೆಲ್ಲರೂ ಅವನ ಕಡೆ ತಿರುಗಿದರು. ಅವರ ದೃಷ್ಟಿಯಲ್ಲಿ ಸ್ವಲ್ಪ ಅಸಹ್ಯಮಿಶ್ರವಾದ ಕನಿಕರ. ಅಲೆಕ್ಸಿ ಮೌನವಾಗಿ ಅವರನ್ನು ವಂದಿಸಿ ಮುಂದೆ ನಡೆದನು. ಇನ್ನೊಂದು ಗುಂಪಿನವರ ಮಾತಿನಲ್ಲಿ ನಾಸ್ತ್ಯಳ ಹೆಸರು ಕಿವಿಗೆ ಬಿತ್ತು. ಅಲೆಕ್ಸಿಗೆ ಗಂಟಲು ಬಿಗಿದುಕೊಂಡು ಬಂದು ಕಾಲು ಅಲ್ಲಿಯೇ ನಿಂತಿತು. ಅವರ ಮಾತಿನಿಂದ ನಾಸ್ತ್ಯ ಆ ಹಳ್ಳಿಯ ಸಾಮೂಹಿಕ ಬೇಸಾಯದ ಅಧ್ಯಕ್ಷೆಯೆಂದು ತಿಳಿಯಿತು... ಸ್ವಲ್ಪ ಮುಂದೆ, ರಸ್ತೆಯು ತೊರೆಯ ಕಡೆಗೆ ತಿರುಗುವ ಬಳಿಯಲ್ಲಿ ತನ್ನ ಮನೆಯಿದೆ. ಅಲೆಕ್ಸಿಗೆ ಉಸಿರಾಡುವುದು ಕಷ್ಟವಾಯಿತು. ಎರಡು ಹೆಜ್ಜೆ ಮುಂದೆ ಬಂದ ಮೇಲೆ, ಆ ಹಳೆಯ ಕೊಂಬೆ ಮುರಿದ ವಿಲ್ಲೋ ಮರದ ಕೆಳಗೆ ಮನೆ ಕಾಣಿಸಿತು. ಶುಭ್ರವಾಗಿ ಸುಣ್ಣ ತೊಡೆದು ಹೊಸ ಚಾವಣಿ ಹೊದಿಸಿದ್ದು.... ನಿದ್ರೆಯಲ್ಲಿ, ಎಚ್ಚರದಲ್ಲಿ, ಕಾಳಗದ ನಡುವೆ, ವಿಶ್ರಾಂತಿ ಸಮಯದಲ್ಲಿ - ಎಷ್ಟುಸಲ ಆ ಮನೆಯ ಚಿತ್ರ ಅವನ ಕಣ್ಣಮುಂದೆ ನಿಲ್ಲುವುದು! ಅದೇ ಹಳೆಯ ಹೆಬ್ಬಾಗಿಲನ್ನು ತೆಗೆದು ಅಂಗಳದೊಳಗೆ ಬಂದರೆ ನೇಗಿಲು, ಗಾಡಿ ಮೊದಲಾದುವೆಲ್ಲ ಎಂದಿನಂತೆ ತಮ್ಮ ತಮ್ಮ ಸ್ಥಾನದಲ್ಲಿದ್ದುವು - ಅವನನ್ನು ಸ್ವಾಗತಿಸುವುದಕ್ಕೆ ವೃದ್ಧೆಯೊಬ್ಬಳು ಮುಂದೆ ಬಂದಳು. ಆಕೆಯ ಕಣ್ಣುಗಳಿಂದಲೇ ತಾಯಿಯೆಂದು ಗುರುತಿಸಿದೆನು. ಮುಖದಲ್ಲಿ ವಯಸ್ಸು ಹೆಚ್ಚಾಗಿ ಕಾಣುತ್ತದೆ; ಮೊದಲಿಗಿಂತಲೂ ಕೃಶವಾಗಿದ್ದಾಳೆ; ಹೊದ್ದಿರುವ ಶಾಲಿನಿಂದ ಹೊರಬಿದ್ದಿರುವ ಕೂದಲೆಲ್ಲ ನರೆತಿದೆ. ಆದರೆ ಆ ಕಣ್ಣುಗಳು - ಅಗಲುವ ಸಮಯದಲ್ಲಿ ಹೇಳಲಾರದ ದುಃಖದಿಂದ ತನ್ನನ್ನೇ ಹಿಂಬಾಲಿಸಿ ಬರುವಂತಿದ್ದ ಆ ಕಣ್ಣುಗಳನ್ನು ಅಲೆಕ್ಸಿ ಒಂದು ನಿಮಿಷವೂ ಮರೆತಿರಲಿಲ್ಲ. ಈಗ ಆಕೆಯ ದೃಷ್ಟಿಯಲ್ಲಿ ದುಃಖ ಬೆರೆತ ಆಶ್ಚರ್ಯ.

''ನಮಸ್ಕಾರ''. ತನ್ನ ಗಡುಸು ಧ್ವನಿಯಲ್ಲಿ ಅಲೆಕ್ಸಿಯೇ ಮೊದಲು ಮಾತಾಡಿದ.

''ನಮಸ್ಕಾರ, ನಾಸ್ತ್ಯಳನ್ನು ನೋಡುವುದಕ್ಕೆ ಬಂದಿರಾ?''

''ಹೌದು, ನಾಸ್ತ್ಯಳನ್ನು ಮತ್ತು ನಿಮ್ಮನ್ನು. ನಾನು.... ನಿಮ್ಮ ಅಲೆಕ್ಸಿಯಿಂದ ವರ್ತಮಾನ ತಂದಿದ್ದೇನೆ.''

ತಾಯಿಯ ಕಣ್ಣಿನಲ್ಲಿ ಸಂತೋಷ ಮಿಂಚಿತು; ಮರುಕ್ಷಣದಲ್ಲಿಯೇ ಕಣ್ಣೀರೂ ಮಿನುಗಿತು.

''ನನ್ನ ಮಗುವಿನಿಂದಲೇ? ಎಲ್ಲಿದ್ದಾನೆ ಈಗ? ನೀವು ಅವನನ್ನು ಎಲ್ಲಿ ನೋಡಿದಿರಿ? ಆಸ್ಪತ್ರೆಯಲ್ಲೇ? ಎಲ್ಲಿ?''

''ಹೌದು, ಆಸ್ಪತ್ರೆಯಲ್ಲಿ ನೋಡಿದೆ, ಅಲ್ಲ.... ನಾವು ಯುದ್ಧದಲ್ಲಿ ಜೊತೆಯಾಗಿಯೇ ಇದ್ದೆವು. ಅಕ್ಕಪಕ್ಕದಲ್ಲಿಯೇ ಹೋರಾಡಿದೆವು.... ಆತನ ಸಂಸಾರವೆಲ್ಲ ಕ್ಷೇಮವೆ?''

''ಎಲ್ಲರೂ ಚೆನ್ನಾಗಿದ್ದಾರಪ್ಪ, ದೇವರ ದಯೆ.'' ಮುದುಕಿ ಇದ್ದಕ್ಕಿದ್ದ ಹಾಗೆಯೇ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

''ತಡೆದುಕೊಳ್ಳಿ, ತಾಯಿ, ಮನಸ್ಸಿಗೆ ಸಮಾಧಾನ ತಂದುಕೊಳ್ಳಿ, ನಿಮ್ಮ ಮಗ ಅಷ್ಟೇನೂ ದುಃಸ್ಥಿತಿಯಲ್ಲಿಲ್ಲ.... ಸ್ವಲ್ಪ ಗಾಯವಾಗಿದೆ. ಬೇಗ ಆಸ್ಪತ್ರೆಯಿಂದ ಬಿಟ್ಟುಬಿಡುತ್ತಾರೆ. ಆತನ ಹೆಂಡತಿ ಮನೆಯಲ್ಲಿಲ್ಲವೆ?.... ಮಕ್ಕಳು?''

''ನಾಸ್ತ್ಯ ದಿನವೆಲ್ಲಾ ಕಲೆಕ್ಟಿವ್ ಫಾರಂನಲ್ಲಿಯೇ ಇರುತ್ತಾಳೆ. ಅಲ್ಲಿ ಕಟ್ಟಡದ ಕೆಲಸ ನಡೆಯುತ್ತಿದೆ. ಇನ್ನು ಎರಡು ಮೂರು ದಿನಗಳಲ್ಲೆ ಬಿತ್ತನೆಯ ಕೆಲಸವೂ ಪ್ರಾರಂಭವಾಗಬೇಕು. ಸ್ಟೋಪ - ನನ್ನ ಮೊಮ್ಮಗ - ಯಾವಾಗಲೂ ಅವಳ ಜೊತೆ ಇರುತ್ತಾನೆ. ನಟಾಷ ಮಾತ್ರ ಮನೆಯಲ್ಲೇ ಇದ್ದಾಳೆ.... ನಿಂತೇ ಇದ್ದೀರಲ್ಲ, ಒಳಗೆ ಬನ್ನಿ ಸ್ವಲ್ಪ ವಿಶ್ರಮಿಸಿಕೊಳ್ಳುವಿರಂತೆ.''

ಆಕೆ ಬಾಗಿಲನ್ನು ತೆರೆದಳು. ಎಳೆತನದಿಂದಲೂ ಪರಚಿತವಾದ ಹೊಸಲು ದಾಟಿ, ಯುದ್ಧಕಾಲದಲ್ಲಿ ಸಹ ತಾನು ನೆನೆಯುತ್ತಿದ್ದ ಆ ಮನೆಯ ಗಂಧವನ್ನು ಆತುರದಿಂದ ಹೀರಿಕೊಂಡನು. ಕಿಟಕಿಯ ಬಳಿಯಲ್ಲಿ ಕೆಂಪು ಬಟ್ಟೆಯ ಚೂರುಗಳನ್ನಿಟ್ಟುಕೊಂಡು ಚಿಕ್ಕ ಹುಡುಗಿಯೊಂದು ಆಡುತ್ತಾ ಕುಳಿತಿತ್ತು. ನಟಾಷ ಗುರುತು ಸಿಕ್ಕುವುದೇ ಕಷ್ಟವಾಗುವಷ್ಟು ಬೆಳೆದು ಬಿಟ್ಟಿದ್ದಳು. ಮೊದಲಿಗಿಂತಲೂ ಎತ್ತರವಾಗಿದ್ದಳು; ದೇಹ ಸ್ವಲ್ಪ ಕೃಶ. ಆದರೂ ಅವಳ ಕಣ್ಣುಗಳಿಂದ - ನಾಸ್ತ್ಯಳ ಕಣ್ಣುಗಳೇ - ಸುಲಭವಾಗಿ ಗುರುತಿಸಿ, ತನ್ನ ಸದ್ಯ ಸ್ಥಿತಿಯನ್ನು ಸಂಪೂರ್ಣವಾಗಿ ಮರೆತು ಥಟ್ಟನೆ ಮಗುವಿನ ಕಡೆಗೆ ಹೆಜ್ಜೆಯಿಟ್ಟನು. ಮಗು ಭಯದಿಂದ ಮೂಲೆಯಲ್ಲಿ ಹುದುಗಿಕೊಂಡು ಅರಳಿದ ಕಣ್ಣುಗಳಿಂದ ಅವನನ್ನು ದಿಟ್ಟಿಸಿತು.

''ಹೆದರಿಕೆ ಯಾಕೆ ಮಗು? ಈ ಮಾವ ಒಳ್ಳೆಯವರು. ಅಣ್ಣ ಅವರನ್ನು ಇಲ್ಲಿಗೆ ಕಳಿಸಿದಾನೆ.''

''ನಿನಗೆ ಏನೇನೊ ತಮಾಷೆ ಸಾಮಾನು ತಂದಿದ್ದೇನಮ್ಮ, ಇಲ್ಲಿ ನೋಡು.'' ಅಲೆಕ್ಸಿ ಹೆಗಲಮೇಲಿನ ಚೀಲವನ್ನು ತೆಗೆದು, ಮಕ್ಕಳಿಗಾಗಿಯೇ ಆಸ್ಪತ್ರೆಯವರು ಕೊಟ್ಟಿದ್ದ ಕೆಲವು ಪದಾರ್ಥಗಳನ್ನು ನೀಡಿದನು. ಆದರೆ ಮಗು ಮುಂದೆ ಬರಲಿಲ್ಲ.

''ತಗೊ ಚಿನ್ನ, ನಿಮ್ಮಣ್ಣ ಕಳಿಸಿದ್ದು ಇದೆಲ್ಲಾ.''

ನಟಾಷ ಅಲುಗಾಡದೆ ಹಾಗೆಯೇ ನಿಂತಿದ್ದಳು.

''ತಗೋ ಮಗು, ಅಣ್ಣನಿಗೆ ನಿನ್ನ ಕಂಡರೆ ಎಷ್ಟು ಪ್ರೀತಿ, ನೋಡಿದೆಯಾ? ದಿನಾ ಅಣ್ಣನ ಮಾತೇ ಆಡುತ್ತಿದ್ದವಳು ಈಗ ಹೆದರಿಕೊಂಡು ನಿಂತುಬಿಟ್ಟೆಯಲ್ಲ!'' ಎಂದಳು ಅಜ್ಜಿ. ಅನಂತರ ಅಲೆಕ್ಸಿಯ ಕಡೆ ತಿರುಗಿ ''ನೋಡಿ, ರೇಡಿಯೋದಲ್ಲಿ ಅವರ ಅಣ್ಣನ ಮಾತು ಬಂದಾಗಲೆಲ್ಲಾ ಕೂತು ಕೇಳುತ್ತಾಳೆ. ಪತ್ರಿಕೆಯಲ್ಲಿ ಅವನ ಚಿತ್ರ ಬಂದಾಗಲೆಲ್ಲಾ ''ಅಣ್ಣನ ಫೋಟೊ, ಅಲ್ಲಿ ನೋಡು' ಎಂದು ಎಷ್ಟು ಜನಕ್ಕೆ ತೋರಿಸಿದರೂ ತೃಪ್ತಿಯಿಲ್ಲ. ಕಲೆಕ್ಟಿವ್ ಫಾರಂನ ಕಚೇರಿಯಲ್ಲಿ ಅವನ ಫೋಟೊ ಇಟ್ಟ ದಿನವಂತೂ ಜಂಬದ ಕೋಳಿಯ ಹಾಗೆ ಕುಣಿದದ್ದೂ ಕುಣಿದದ್ದೇ. ಅವಳ ಹೆಮ್ಮೆ ಹೇಳತೀರದು.''

ಅಲೆಕ್ಸಿ ಗೋಡೆಯ ಮೇಲಿದ್ದ ತನ್ನ ಫೋಟೋ ಕಡೆ ನೋಡಿದ. ಅದಕ್ಕೆ ಕಾಗದದ ಹೂವುಗಳನ್ನೂ ರಿಬ್ಬನ್‌ಗಳನ್ನೂ ಹಾಕಿ ಅಲಂಕರಿಸಿದ್ದರು.

''ಕಚೇರಿಯಲ್ಲಿ ಹಾಕಿರುವ ಫೋಟೋ ಕೂಡ ಇದರ ಹಾಗೇ ಇದೆ. ತದ್ವತ್ತು ಅವನೇ ಎದ್ದು ಬಂದಹಾಗಿದೆ. ಏನಪ್ಪಾ, ನನ್ನ ಮಗ ಈಗಲೂ ಹಾಗೇ ಕಾಣುತ್ತಾನೆಯೆ?''

''.... ಕಚೇರಿ ಮೊದಲಿದ್ದ ಸ್ಥಳದಲ್ಲೇ ಇದೆಯೋ?''

''ಇಲ್ಲವಪ್ಪ, ಕಚೇರಿ, ಶಾಲೆ, ಓದುವಮನೆ - ಎಲ್ಲವನ್ನೂ ಜರ್ಮನರು ಸುಟ್ಟುಬಿಟ್ಟರು. ಆದರೇನು, ಈಗ ಮತ್ತೆ ಕಟ್ಟುತ್ತಾ ಇದ್ದೇವೆ. ನಾಸ್ತ್ಯ ಬೆಳಗಿನಿಂದ ಸಂಜೆಯವರೆಗೂ ಅದನ್ನೇ ನೋಡಿಕೊಳ್ಳುತ್ತಾ ಇದಾಳೆ. ಈಗ ಕಚೇರಿ ಬಾಟ್ರಾಕನ ಮನೆಯಲ್ಲಿ ನಡೆಯುತ್ತಾ ಇದೆ. ಅವನ ಮಕ್ಕಳಿಬ್ಬರೂ ಯುದ್ಧಕ್ಕೆ ಹೋಗಿದ್ದಾರೆ - ಸತ್ತೇಹೋದರು ಅಂತ ವರ್ತಮಾನ. ಬಾಟ್ರಾಕ್ ಪಾರ್ಟಿಗೆ ಸೇರಿಬಿಟ್ಟಿದ್ದಾನೆ. ಅದು ಜರ್ಮನರಿಗೆ ಗೊತ್ತಾಗಿ ಅವನ ಮನೆಯನ್ನೂ ಸುಡುವುದರಲ್ಲಿದ್ದರು. ಅಷ್ಟರಲ್ಲೇ ನಮ್ಮ ಸೈನ್ಯ ಬಂದು ಕಾಪಾಡಿತು.''

ಅಲೆಕ್ಸಿ ಮೇಲಕ್ಕೆದ್ದ.

''ಏನು, ಆಗಲೇ ಹೊರಟುಬಿಟ್ಟಿರಾ?''

''ಹೋಗಿ ನಾಸ್.... ನಾಸ್ಟಾಸ್ಯ ಮಿಖೆಲೋವ್ನಳಿಗೆ ಪತಿಯ ವರ್ತಮಾನ ತಿಳಿಸಬೇಕು.''

''ಅವಳು ಸಿಕ್ಕುವುದೇ ದೊಡ್ಡ ಕಷ್ಟ. ವಿಪರೀತ ಕೆಲಸ. ಕತ್ತು ಮುರಿದ ಕೋಳಿಯ ಹಾಗೆ ತಿರುಗುತ್ತಾ ಇರಬೇಕು. ಈಗ ಹೊಲ, ಇನ್ನೊಂದು ಕ್ಷಣಕ್ಕೆ ಫಾರಂ, ಅಲ್ಲಿಂದ ಸೋವಿಯಟ್ - ಒಂದು ಘಳಿಗೆ ಒಂದು ಕಡೆ ನಿಲ್ಲುವುದಿಲ್ಲ. ಬೆಳಗಿಂದ ಸಂಜೆಯವರೆಗೂ ಹಾಗೇ. ಒಂದೊಂದು ದಿನ ಮಲಗುವುದಕ್ಕೂ ಮನೆಗೆ ಬರುವುದಿಲ್ಲ. ಮಕ್ಕಳ ಯೋಗಕ್ಷೇಮ ನೋಡುವುದಕ್ಕೆ ಒಂದು ಸಲ ತಲೆಹಾಕಿ ಮತ್ತೆ ಹೊರಟುಹೋಗುತ್ತಾಳೆ.''

ಆಕೆ ಹೇಳಿದ ಮಾತು ನಿಜವಾಯಿತು. ಅಧ್ಯಕ್ಷೆ ಎಲ್ಲಿದ್ದಾಳೆ ಎಂದು ಯಾರನ್ನು ಕೇಳಿದರೂ ಇಲ್ಲಿರಬಹುದು ಎನ್ನುವರೇ ಹೊರತು ಇಂಥ ಕಡೆಯಲ್ಲೇ ಸಿಕ್ಕುತ್ತಾಳೆಂದು ಯಾರೂ ಹೇಳಲಾರರು. ಆಕೆಯನ್ನು ಹುಡುಕುತ್ತಿರುವಾಗ ಮತ್ತೆ ಕ್ರಯಾಷ್ಕ ಸಿಕ್ಕಲು ಅಲೆಕ್ಸಿ ಅವನನ್ನೇ ಕೇಳಿದನು.

''ಬಹುಶಃ ಕುಲುಮೆಯ ಬಳಿ ಸಿಕ್ಕಬಹುದು. ಅಲ್ಲಿಲ್ಲದಿದ್ದರೆ ಕಣಜದ ಬಳಿ ಇರಬೇಕು. ಏತಕ್ಕೆ?''

''ಅವರೊಡನೆ ಸ್ವಲ್ಪ ಕೆಲಸವಿತ್ತು.''

''ಏನು ಕೆಲಸ? ಆಕೆಗೆ ಈಗಾಗಲೇ ಸಾಕಾದಷ್ಟು ಕೆಲಸವಿದೆ.''

ಅಲೆಕ್ಸಿ ಮುಂದೆ ನಡೆದನು. ಅಲ್ಲಿಂದ ಸ್ವಲ್ಪ ದೂರದಲ್ಲಿ ಒಂದು ಮನೆಯ ಹತ್ತಿರ ಹೋಗುತ್ತಿದ್ದಾಗ ಅಂಗಳದಿಂದ ಯಾರೋ ಹೆಂಗಸಿನ ನಗು ಕೇಳಿ ಬಂತು ಅಲ್ಲಿಯೇ ನಿಂತನು. ವಿಮಾನಗಳ ಘರ್ಜನೆ, ಬಾಂಬುಗಳ ಆಸ್ಫೋಟನೆ, ಸಿಡಿ ಗುಂಡುಗಳ ಶಬ್ದ - ಇವುಗಳ ನಡೆವೆಯೂ ಅವನ ಕಿವಿಗೆ ಆ ನಗೆ ದೂರವಾಗಿರಲಿಲ್ಲ. ಆ ಮನೆಯ ಗುರುತಾಯಿತು. - ತನ್ನ ಮಿತ್ರ ಪಾವೆಲನಿಗೆ ಸೇರಿದ್ದು ಬಾಗಿಲಿನ ಬಳಿಯಲ್ಲೇ ಎಂದಿನಂತೆ ಹಸನ್ಮುಖಿಯಾಗಿ ನಿಂತಿದ್ದ ಪಾವೆಲನೊಡನೆ ನಾಸ್ತ್ಯ ಮಾತಾಡುತ್ತಿದ್ದಳು. ಅವನು ಏನೋ ನಗು ಬರುವಂಥ ವಿಷಯ ಹೇಳುತ್ತಿದ್ದಿರಬೇಕು. ಅಲೆಕ್ಸಿ ಬಂದದ್ದನ್ನು ಕಾಣದೆ ಆಕೆ ಇನ್ನೂ ನಗುತ್ತಿದ್ದಳು. ಅವನನ್ನು ನೋಡಿದ ಮೇಲೆ ಅವರ ನಗು ಬಾಡಿ ಹೋಗಿ ಕನಿಕರಕ್ಕೆ ಎಡೆಗೊಟ್ಟಿತು. ಆ ಬಗೆಯ ಕನಿಕರದ ಅನುಭವ ಅಲೆಕ್ಸಿಗೆ ಈಗಾಗಲೇ ಎಷ್ಟೋ ಸಲ ಆಗಿತ್ತು. ಆದರೆ ತನ್ನ ಹೃದಯದ ದೇವಿಯ ಮುಖದಲ್ಲಿ ಅದು ಮೂಡಿ ಬಂದರೆ! ಅವನು ತನ್ನ ಕಡೆಗೇ ಬಂದದ್ದನ್ನು ನೋಡಿ ಆಶ್ಚರ್ಯದಿಂದ ಆಕೆಯ ಹುಬ್ಬು ಏರಿತು. ಅವಳೊಡನೆ ಏನಾದರೂ ಮಾತಾಡಬೇಕು; ಆದರೆ ನಾಲಿಗೆ ಕಟ್ಟಿಹೋಗಿತ್ತು. ಹೇಗೋ ಮನಸ್ಸನ್ನು ಬಿಗಿಹಿಡಿದನು.



''ನಾಸ್ತಾಸ್ಯ ಮಿಖೆಲೋವ್ನ, ಅಲ್ಲವೆ?''

''ಏನು ವಿಷಯ?'' ಒಂದೆರಡು ಕ್ಷಣ ಅವನ ಮುಖವನ್ನು ದಿಟ್ಟಿಸಿ ನೋಡಿದಳು. ಅಲೆಕ್ಸಿಗೆ ಅದು ಭಯಂಕರವಾದ ಕಾಲ, ತನ್ನ ಜೀವನದ ಭವಿಷ್ಯವನ್ನು ನಿರ್ಧರಿಸುವ ಕಾಲ.

''ನಾನು.... ನಿಮಗೆ ಒಂದು ಕಾಗದ ತಂದಿದ್ದೇನೆ.''

''ಯಾರಿಂದ?''

''ಅಲೆಕ್ಸಿಯಿಂದ. ಅವನು ಆಸ್ಪತ್ರೆಯಲ್ಲಿದ್ದಾನೆ.'' ಆಕೆಯ ಮುಖ ಥಟ್ಟನೆ ಬಿಳಿಚಿಕೊಂಡು ಕಾಂತಿಹೀನವಾಯಿತು.

''ಅವರಿಗೆ ಏನಾಗಿದೆ?''

''ಏನೂ ಇಲ್ಲ, ಈಗ ಹುಷಾರಾಗಿದ್ದಾನೆ. ನಿಮಗೆ ಒಂದು ಕಾಗದ ಬರೆದಿದ್ದಾನೆ.''

''ಹೌದು, ಆ ಕಾಗದ ಬಂತು....''

''ಅದಲ್ಲ, ಈಗ ನನ್ನೊಡನೆ ಇನ್ನೊಂದು ಕಾಗದ ಕಳಿಸಿದ್ದಾನೆ.'' ಬರೆದು ಸಿದ್ಧವಾಗಿಟ್ಟುಕೊಂಡಿದ್ದ ಕಾಗದವನ್ನು ಅವಳಿಗೆ ಕೊಟ್ಟನು. ಅವಳು ಅದನ್ನು ಜೇಬಿಗೆ ಹಾಕಿಕೊಂಡಳು.

''ಹಿಂದಿನ ಕಾಗದದಲ್ಲಿ ರಜ ಪಡೆದು ಮನೆಗೆ ಬರುತ್ತೇನೆಂದು ಬರೆದಿದ್ದರು. ಇದರಲ್ಲಿ ಪುನಃ ಯುದ್ಧರಂಗಕ್ಕೆ ಹೋಗುತ್ತೇನೆಂದು ಬರೆದಿದ್ದಾರಲ್ಲ! ನೀವು ಆಸ್ಪತ್ರೆಯಲ್ಲಿ ಅವರ ಜೊತೆ ಇದ್ದಿರಾ? ನೀವು ಯಾರು?''

''ಹೌದು, ಜೊತೆಯಲ್ಲೇ ಇದ್ದೆ. ಜೊತೆಯಾಗಿಯೇ ಹೋರಾಡಿದೆವು; ಆಸ್ಪತ್ರೆಯಲ್ಲೂ ಜೊತೆಯಾಗಿಯೇ ಮಲಗಿದ್ದೆವು.

''ಯುದ್ಧದಲ್ಲೂ ಅವರ ಜೊತೆ ಇದ್ದಿರಾ?''

''ಹೌದು. ಅಂದರೆ... .ಒಂದೇ ಟ್ಯಾಂಕ್ ಪಡೆಯಲ್ಲಿ. ಅವನಿಗೆ ಸ್ವಲ್ಪ ಗಾಯವಾಯಿತು.''

''ನೀವು?''

''ನಿಮಗೇ ಕಾಣುತ್ತದಲ್ಲ! ನನ್ನ ಮುಖವೆಲ್ಲಾ ಸುಟ್ಟು ಹೋಯಿತು. ಹೇಗೊ ಗುಣಮಾಡಿದರು.''

ಆ ವೇಳೆಗೆ ಕಲೆಕ್ಟಿವ್ ಫಾರಮಿನ ವಿಷಯಗಳಲ್ಲಿ ಆಕೆಯ ಅಪ್ಪಣೆ ಪಡೆಯಲು ಕೆಲವರು ರೈತರು ಬಂದರು. ಅವರಿಗೆ ಹೇಳಬೇಕಾದ್ದನ್ನು ಹೇಳಿ ಮತ್ತೆ ಅಲೆಕ್ಸಿಯ ಕಡೆ ತಿರುಗಿದಳು.

''ಈಗ ಎಲ್ಲಿಗೆ ಹೊರಟಿದ್ದೀರಿ, ಕಾಮ್ರೇಡ್?''

''ಮನೆಗೆ.... ಡೋನ್ ಬಾಸ್‌ಗೆ. ನಿಮಗೆ ಅಲೆಕ್ಸಿಯ ವರ್ತಮಾನವನ್ನೂ ಕಾಗದವನ್ನೂ ತಲುಪಿಸಿ, ಹೋಗೋಣವೆಂದು ಇಲ್ಲಿ ನಿಂತೆ.''

''ಕ್ಷಮಿಸಬೇಕು, ಈಗಿನ ಕಾಲದಲ್ಲಿ ಕೆಲಸಕಾರ್ಯ ಎಷ್ಟಿದೆಯೆನ್ನುವುದು ನಿಮಗೆ ತಿಳಿದೇ ಇದೆ. ಆದರೆ ನಿಮ್ಮೊಡನೆ ಇನ್ನೂ ಮಾತಾಡಬೇಕು. ನಮ್ಮ ಮನೆಗೆ ಬಂದು ಸ್ವಲ್ಪ ವಿಶ್ರಮಿಸಿಕೊಳ್ಳಬಾರದೆ?

''ಆಗಬಹುದಾಗಿತ್ತು. ಆದರೆ ಇಂದು ಸಂಜೆಯ ರೈಲು ಹತ್ತಬೇಕು. ಈಗಲೇ ಇಲ್ಲಿಂದ ಹೊರಟರೆ ರೈಲಿನ ಹೊತ್ತಿಗೆ ಸ್ಟೇಷನ್ನಿಗೆ ಹೋಗಬಹುದು.''

''ಮುಂದಿನ ರೈಲಿಗೆ ಹೊರಡಬಹುದಲ್ಲ? ನಮ್ಮ ಮನೆ ಹತ್ತಿರದಲ್ಲೇ ಇದೆ.''

''ಮನೆಗೆ ಆಗಲೇ ಹೋಗಿದ್ದೆ.''

''ಬಹಳ ಸಂತೋಷ. ಈಗ ನಾನು ಸ್ವಲ್ಪ ಜರೂರಾಗಿ ಕಚೇರಿಗೆ ಹೋಗಬೇಕಾಗಿದೆ. ನೀವೂ ಆ ಕಡೆ ಬರುವುದಾದರೆ ಮಾತಾಡುತ್ತ

ಹೋಗಬಹುದು.''

ಆದರೆ ದಾರಿಯುದ್ದಕ್ಕೂ ಜನರು ಆಕೆಯ ಸಲಹೆಗಾಗಿ ಬರುತ್ತಲೇ ಇದ್ದುದರಿಂದ ಅಲೆಕ್ಸಿಗೆ ಮಾತಾಡಲು ಅವಕಾಶ ಸಿಕ್ಕಲಿಲ್ಲ. ಆಕೆಯನ್ನು ಮಾತಾಡಿಸಿದವರೆಲ್ಲ ಅವನಿಗೆ ಹಿಂದಿನಿಂದ ಪರಿಚಿತರಾದವರೇ. ಆದರೂ ಈಗ ಅವರ ನಡುವೆ ಅಲೆಕ್ಸಿ ಒಂಟಿಯಾಗಿ ಅಪರಿಚಿತ ವ್ಯಕ್ತಿಯಾದನು. ನಾಸ್ತ್ಯಳ ಮುಖದ ಮೇಲೆ ಎಂದಿನಂತೆ ಮೃದುವಾದ ಮೆಲುನಗೆ, ಚುರುಕುವಟಿಕೆ, ಕೆಲಸದ ಶ್ರದ್ಧೆ, ದೃಢಮನಸ್ಕರಿಗಿರುವ ಕಳೆ. ಅದನ್ನು ನೋಡಿದಾಗ ಅವನ ಮನಸ್ಸಿನಲ್ಲಿ ಆನಂದದ ತರಂಗವೆದ್ದು ಹೃದಯದ ದುಃಖವನ್ನು ಕೊಚ್ಚಿಕೊಂಡು ಹೋಯಿತು.

ಕಚೇರಿಯಲ್ಲಿ ತೂಗು ಹಾಕಿದ್ದ ತನ್ನ ಫೋಟೋ ಕಣ್ಣಿಗೆ ಬಿತ್ತು; ಬಣ್ಣ ಹಾಕಿ ರಿಬ್ಬನ್‌ಗಳಿಂದ ಅಲಂಕೃತವಾದ ಫೋಟೋ. ಗಿಲೀಟಿನ ಚೌಕಟ್ಟಿನೊಳಗಿಂದ ತನ್ನ ಕಡೆ ಮೆಲುನಗೆ ಬೀರುತ್ತಿದ್ದ ಆ ಮುಖದಲ್ಲಿ ಯೌವನದ ಕಳೆಯಿತ್ತು; ಚಿಂತೆಯ ಸುಳಿವೂ ಇಲ್ಲ; ಸುಂದರವಾದ ಮುಂಗುರುಳು, ಕೆಂಪಗೆ ಕಾಂತಿಯುಕ್ತವಾದ ಕೆನ್ನೆಗಳು.

ನಾಸ್ತ್ಯ ಅಲ್ಲಿದ್ದವರನ್ನೆಲ್ಲಾ ಕೂಗಿ ''ಇವರು ನಮ್ಮ ಆಲ್ಯೋಷನ ಸ್ನೇಹಿತರು. ಯುದ್ಧರಂಗದಲ್ಲಿ ಅವರ ಜೊತೆಯಲ್ಲೇ ಇದ್ದರು'' ಎಂದು ಪರಿಚಯ ಮಾಡಿಕೊಟ್ಟಳು.

ಎಲ್ಲರೂ ಅವನನ್ನು ಮುತ್ತಿಕೊಂಡು ಅವನ ಕೈ ಕುಲುಕಿದರು. ಬಹು ಮಟ್ಟಿಗೆ ಎಲ್ಲರೂ ಪರಿಚಿತರೇ. ಅವರ ಜೊತೆಯಲ್ಲಿದ್ದ ಕ್ರಯಾಷ್ಕ ''ಇದೇನು ಕಾಮ್ರೇಡ್, ನಿನ್ನ ಮುಖ ಒಂದೊಂದು ಭಾಗ ಒಂದೊಂದು ತರಹ ಕಾಣುತ್ತದಲ್ಲ?'' ಎಂದನು. ಅಲೆಕ್ಸಿ ಉತ್ತರ ಕೊಡುವುದಕ್ಕೆ ಮುಂಚೆಯೇ ಉಳಿದವರೆಲ್ಲಾ ಪ್ರಶ್ನೆಗಳ ಸುರಿಮಳೆ ಕರೆದರು. ಅವರಿಗೆ ತಮ್ಮ ಆಲ್ಯೋಷ ಶೌರ್ಯಪ್ರದರ್ಶನಮಾಡಿ ಪ್ರಶಸ್ತಿ ಪಡೆದ ಕದನದ ಕಥೆಯನ್ನು ಕೇಳುವ ಆತುರ. ಅಲೆಕ್ಸಿ ತನಗೆ ತಿಳಿದಷ್ಟನ್ನು ಹೇಳಿದನು, ಅದಕ್ಕಿಂತ ಹೆಚ್ಚಿನ ವಿಷಯ ಅವರಿಗೆ ಮೊದಲೇ ಗೊತ್ತಿತ್ತು. ಅಲೆಕ್ಸಿ ಹೇಳದೆ ಬಿಟ್ಟ ಅಂಶಗಳನ್ನೆಲ್ಲಾ ಅವರೇ ಹೇಳಿದರು. ಅವನು ಹೇಳಿದ ಕಥೆ ತೀರ ಅಲ್ಪವಾಗಿಯೂ ಅಸಂಬದ್ಧವಾಗಿಯೂ ಕಂಡು ಅವರಿಗೆ ಅದರಿಂದ ತೃಪ್ತಿಯಾಗಲಿಲ್ಲ.

''ಅಲೆಕ್ಸಿ ತನ್ನ ಟ್ಯಾಂಕನ್ನು ಕಮರಿಯ ಮೇಲೆ ನಡೆಸಿ ನುಗ್ಗಲಿಲ್ಲವೆ? ಜರ್ಮನ್ ಟ್ಯಾಂಕುಗಳು ನೀವು ಹೇಳಿದ್ದಕ್ಕಿಂತ ಹೆಚ್ಚಾಗಿದ್ದವು, ನಮಗೆ ಗೊತ್ತು. ನಮ್ಮ ಆಲ್ಯೋಷ ಮಾಡಿದ ಕೆಲಸ ಏನೋ ಸಾಧಾರಣವಾದದ್ದು ಎನ್ನುವ ಹಾಗೆ ಹೇಳಿಬಿಟ್ಟರಲ್ಲ!'' ಎಂದು ಅವರೆಲ್ಲಾ ಆಕ್ಷೇಪಿಸಿದರು. ಆಮೇಲೆ ಪಾವೆಲ್ ಆ ಕಥೆಯನ್ನು ತಾನೇ ಹೇಳಿದನು. ಅವನಿಗೆ ಅಲೆಕ್ಸಿಯ ಶೌರ್ಯವನ್ನು ಬಣ್ಣಿಸುವುದೆಂದರೆ ಹೆಮ್ಮೆ. ಅವನ ವರ್ಣನೆಯ ವೈಖರಿಯಿಂದ ಕದನದ ಚಿತ್ರ ಎಲ್ಲರ ಕಣ್ಣಿಗೂ ಕಟ್ಟಿದಂತಾಯಿತು. ಎಲ್ಲರೂ ಸ್ತಬ್ಧರಾಗಿ ಕೇಳುತ್ತ ನಿಂತರು. ನಾಸ್ತ್ಯ ಹೊಳೆಯುವ ಕಣ್ಣುಗಳಿಂದ ಕಥೆಗಾರನನ್ನೇ ನೋಡುತ್ತಿದ್ದಳು.

''ಕದನ ನಡೆದದ್ದು ಹೀಗೆ, ನೀವು ಹೇಳಿದ ಹಾಗಲ್ಲ'' ಎಂದು ಪಾವೆಲ್ ಅಸಮಾಧಾನದ ಧ್ವನಿಯಿಂದ ಅಲೆಕ್ಸಿಗೆ ಹೇಳಿದನು.

ಅಲೆಕ್ಸಿಗೆ ಹಿಂದಿನ ದಿನಗಳ ನೆನಪಾಯಿತು. ಅವನೂ ಪಾವೆಲನೂ ನಾಸ್ತ್ಯಳ ಪ್ರೇಮಕ್ಕೆ ಸ್ಪರ್ಧಿಗಳಾಗಿದ್ದರು. ಅವಳು ಅಲೆಕ್ಸಿಯನ್ನು ಮದುವೆಯಾದಳು. ಪಾವೆಲ್ ಬ್ರಹ್ಮಚಾರಿಯಾಗಿಯೇ ನಿಂತನು. ಆದರೆ ಅವನ ಮನಸ್ಸಿನಲ್ಲಿ ವೈಷಮ್ಯವೇನೂ ಇರಲಿಲ್ಲ. ಮದುವೆಯಾದ ಮೇಲೆ ಅಲೆಕ್ಸಿಯ ಮತ್ತು ಪಾವೆಲನ ಸ್ನೇಹ ಮೊದಲಿಗಿಂತಲೂ ಗಾಢವಾಗಿಯೇ ಬೆಳೆದಿತ್ತು.

ಅಲೆಕ್ಸಿಯ ವಿಕಾರವಾದ ಮುಖದ ಮೇಲೆ ಒಂದು ಬಗೆಯ ನಗು ಮೂಡಿತು. ''ಯುದ್ಧದಲ್ಲಿ ಕಾದಿದವರಿಗಿಂತ ಪ್ರೇಕ್ಷಕರಿಗೇ ಹೆಚ್ಚು ವಿಷಯ ತಿಳಿದಿರುವಂತೆ ತೋರುತ್ತದೆ'' ಎಂದನು. ಅವನ ಮುಖವನ್ನು ನೋಡಿದಾಗ ಅಲ್ಲಿ ನೆರೆದವರ ಮನಸ್ಸು ಸ್ವಲ್ಪ ನೊಂದಹಾಗಾಯಿತು. ಪಾವೆಲ್ ಮತ್ತೆ ಮೃದುವಾದ ಧ್ವನಿಯಿಂದ ''ನನ್ನ ಮಾತಿನಿಂದ ನಿಮಗೆ ಅಸಮಾಧಾನವಾಯಿತೋ ಏನೊ. ನಿಮ್ಮ ಶೌರ್ಯವನ್ನೂ ದೇಶಕ್ಕಾಗಿ ನೀವು ಗಾಯಹೊಂದಿರುವುದನ್ನೂ ನೆನೆದಾಗಲೆಲ್ಲ ನಿಮ್ಮ ವಿಷಯದಲ್ಲಿ ಗೌರವ ಉಕ್ಕುತ್ತದೆ. ಆದರೆ ಅಲೆಕ್ಸಿ ನಮ್ಮ ಊರಿನ ವೀರ, ನಾವೆಲ್ಲ ಅವನೊಡನೆ ಬೆಳೆದವರು. ನನಗಂತೂ ಅವನು ಆಪ್ತಮಿತ್ರ. ಅವನ ಸೇವೆ ನಮಗೆಲ್ಲಾ ಹೆಮ್ಮೆ ತರುವಂಥಾದ್ದು. ಅವನ ಶೌರ್ಯಕ್ಕೆ ನೀವು ಸಾಕಾದಷ್ಟು ಗೌರವ ಕೊಡಲಿಲ್ಲವೆಂದು ನಮ್ಮ ಮನಸ್ಸು ಸ್ವಲ್ಪ ಚಿಕ್ಕದಾಯಿತು, ಅಷ್ಟೆ'' ಎಂದನು.

ನಾಸ್ತ್ಯ ಮಧ್ಯೆ ಬಾಯಿ ಹಾಕಿದಳು. ''ಅವರೇನೂ ಗೌರವವಿಲ್ಲದೆ ಮಾತಾಡಲಿಲ್ಲ. ತಮ್ಮ ಟ್ಯಾಂಕಿನಿಂದ ಕಂಡದ್ದನ್ನು ಮಾತ್ರ ಅವರು ಹೇಳಿದರು. ಅಲ್ಲದೆ ಅವರೂ ಆ ಕಾಳಗದಲ್ಲಿ ಹೋರಾಡಿದವರು, ತಮ್ಮನ್ನು ತಾವೇ ಹೊಗಳಿಕೊಳ್ಳುವುದಕ್ಕೆ ನಾಚಿಕೆಯಾಗುವುದಿಲ್ಲವೆ?''

''ಅದೇನೋ ನಿಜ, ನಾಚಿಕೆಯಾಗುವುದು ಸಹಜ. ಆದರೂ ಅಷ್ಟು ಶೌರ್ಯದಿಂದ ಕಾದಿದ ಮೇಲೆ ಹೆಮ್ಮೆಪಟ್ಟರೇನೂ ತಪ್ಪಲ್ಲ'' ಎಂದು ಪಾವೆಲ್ ಅಲೆಕ್ಸಿಯ ಫೋಟೋ ಕಡೆ ನೋಡಿದನು.

ಅಷ್ಟು ಹೊತ್ತಿಗೆ ಕಲೆಕ್ಟಿವ್ ಫಾರಮಿನ ರೈತರು ನಾಸ್ತ್ಯಳನ್ನು ಸುತ್ತಿಕೊಂಡು ಒಂದು ಸಾವಿರ ಪ್ರಶ್ನೆ ಕೇಳಲಾರಂಭಿಸಿದರು.

ಯಾರ ಗಮನಕ್ಕೂ ಬೀಳದಂತೆ ಕಚೇರಿಯಿಂದ ಹೊರಟು ಅಲೆಕ್ಸಿ ಮತ್ತೆ ಬೀದಿಗೆ ಬಂದನು. ಮನಸ್ಸೂ ಹೃದಯವೂ ಭಾರವಾಗಿದ್ದವು. ಸುತ್ತಲಿನ ವಿಷಯವೊಂದರ ಕಡೆಗೂ ಗಮನವಿಲ್ಲದೆ ಕಣ್ಣು ಕಿವಿ ಇಲ್ಲದವನಂತೆ ಮುಂದೆ ನಡೆದನು. ಎಷ್ಟೋ ದಿನ ತಾನು ಉತ್ಸುಕತೆಯಿಂದ, ಭಯದಿಂದ, ಹಂಬಲಿಸಿ ನಿರೀಕ್ಷಿಸುತ್ತಿದ್ದ ಪುನರ್‌ದರ್ಶನ ಈಗ ಆದಂತಾಯಿತು. ತಾಯಿಯನ್ನೂ ಹೆಂಡತಿ ಮಕ್ಕಳನ್ನೂ ಮತ್ತೆ ನೋಡುವ ಆ ದೃಶ್ಯ.... ಅದನ್ನು ತಾನು ಕಲ್ಪಿಸಿಕೊಂಡದ್ದು ಹೇಗೆ? ತಾಯಿಯೂ ಹೆಂಡತಿಯೂ ತನ್ನನ್ನು ನೋಡಿದೊಡನೆಯೇ ಗುರುತಿಸುವರು; ಮರುಕ್ಷಣವೇ ಅಸಹ್ಯಮಿಶ್ರವಾದ ಭಯದಿಂದ ಹಿಮ್ಮೆಟ್ಟುವರು. ನಾಸ್ತ್ಯ ಇನ್ನೂ ಚಿಕ್ಕವಳು, ಯುವತಿ, ಸೌಂದರ್ಯಪ್ರೇಮಿ. ಅಂಥವಳು ಜೀವಮಾನವೆಲ್ಲಾ ಅಸಹ್ಯರೂಪಿಯಾದ ತನ್ನಂಥ ವಿಲಕ್ಷಣ ಮೃಗಕ್ಕೆ ಗಂಟುಬಿದ್ದಿರಬೇಕು! ಅಂಥ ಜೀವನವನ್ನು ಸಹಿಸಲಾರೆನೆಂದು ಸ್ಪಷ್ಟವಾಗಿ ಹೇಳಿಬಿಡುವಳೆ, ಅಥವಾ ಬಲಾತ್ಕಾರದಿಂದ ಮನಸ್ಸನ್ನು ಹದಕ್ಕೆ ತಂದುಕೊಳ್ಳುವಳೆ? ಆ ಧರ್ಮಸಂಕಟಕ್ಕೆ ಅವಳನ್ನು ಖಂಡಿತ ಸಿಕ್ಕಿಸಬಾರದು.

''ನಾನು ಹೊರಟು ಹೋಗುತ್ತೇನೆ. ಅವರ ಮನಸ್ಸು ಹೇಗೇ ಇರಲಿ, ನಾನಾಗಿಯೇ ಹೊರಟು ಹೋಗುತ್ತೇನೆ.... ಹೊರಟು ಹೋಗುವುದಾದರೆ ನಾನು ಮನೆಗೆ ತಾನೆ ಏತಕ್ಕೆ ಹೋಗಬೇಕು?''

ಅಲೆಕ್ಸಿ ಆಸ್ಪತ್ರೆಯಿಂದ ಮನೆಗೆ ಹೋಗುವುದೇ ಇಲ್ಲವೆಂದು ನಿರ್ಧರಿಸಿದ್ದನು. ಆದರೆ ಆ ನಿರ್ಧಾರದ ಹಿಂದೆ ಜೀವವೆಲ್ಲಾ ಒಂದೇ ಒಂದು ಹಂಬಲವಾಗಿ ಗಂಟಲಿಗೆ ಒತ್ತಿಕೊಂಡು ಬಂದು ನಿಂತಿತು-ತಾಯಿಯನ್ನೂ ಹೆಂಡತಿ ಮಕ್ಕಳನ್ನೂ ಮತ್ತೊಮ್ಮೆ ನೋಡಬೇಕೆಂಬ ಉತ್ಕಟವಾದ ಹಂಬಲ. ಅದನ್ನು ತಡೆಯಲಾರದೆ ಆಸ್ಪತ್ರೆಯಿಂದ ನೇರವಾಗಿ ಮನೆಗೆ ಹೋಗಲು ಏರ್ಪಾಡು ಮಾಡಿಕೊಂಡನು. ಆದರೆ ತಾಯಿಯ ಮತ್ತು ಹೆಂಡತಿಯ ದುಃಖ, ಮಕ್ಕಳ ಕಣ್ಣಿನಲ್ಲಿ ಕಾಣುವ ಅಸಹ್ಯ, ಮತ್ತು ಭಯ - ಈ ದೃಶ್ಯ ಮತ್ತೆ ಮೂಡಿತು. ''ನಾನು ಹೋಗುವುದಿಲ್ಲ'' ಎಂದುಕೊಂಡನು. ಹೀಗೆ ಹೊಯ್ದಾಡುವ ಸ್ಥಿತಿಯಲ್ಲೇ ಮಾರನೆಯ ದಿನ ತನ್ನ ಹಳ್ಳಿಯ ಕಡೆ ಹೋಗುವ ರೈಲನ್ನು ಹತ್ತಿದ್ದಾಯಿತು.

ಆ ದಿನ ಹಳ್ಳಿಯಲ್ಲಿ ನಡೆದು ಬರುತ್ತಿದ್ದಾಗ ಮನೆ ಹತ್ತಿರ ಬಂದ ಹಾಗೆಲ್ಲಾ ಹೆಜ್ಜೆ ಹಿಂಜರಿಯಿತು; ತನ್ನವರನ್ನು ಸಂಧಿಸುವ ಕಾಲ ಆದಷ್ಟು ಮುಂದೆ ಹೋಗಲಿ ಎನ್ನಿಸಿತು. ರಣಕ್ಷೇತ್ರಕ್ಕೆ ಇಳಿಯುವಾಗ ಸಹ ಅವನ ಮನಸ್ಸಿನಲ್ಲಿ ಅಷ್ಟು ದಿಗಿಲಿರಲಿಲ್ಲ.

ಕೊನೆಗೆ ಅವನು ಕನಸಿನಲ್ಲಿ ಸಹ ಎಣಿಸದೇ ಇದ್ದುದೇ ನಡೆಯಿತು. ಮನೆಯವರು ಯಾರಿಗೂ ಅವನನ್ನು ಗುರುತಿಸಲಾಗಲಿಲ್ಲ. ಮನೆಯವರಿಗೆ ತಿಳಿಯದಂತೆಯೇ ಅವರನ್ನು ನೋಡಿದ್ದಾಯಿತು. ವಿಧಿ ತನ್ನ ಸಮಸ್ಯೆಗೆ ಬಹಳ ಸುಲಭವಾದ, ಆದರೂ ಹೃದಯವಿದ್ರಾವಕವಾದ ಉತ್ತರ ಕೊಟ್ಟಂತಾಯಿತು. ಹೆಂಡತಿಯನ್ನು ಪರೀಕ್ಷಿಸಬೇಕಾದ ಸಂದರ್ಭವೇ ಒದಗಲಿಲ್ಲ. ಹಾಗಾದದ್ದೇ ಎಲ್ಲರಿಗೂ ಲೇಸು; ಎಲ್ಲರಿಗೂ ಅನಾವಶ್ಯಕವಾದ ಸಂಕಟ ತಪ್ಪಿದಂತಾಯಿತು. ತಾಯಿಯೇನೊ 'ಮಗ ಇಂದು ಬರುತ್ತಾನೆ. ನಾಳೆ ಬರುತ್ತಾನೆ' ಎಂದು ಸಾಯುವವರೆಗೂ ನಿರೀಕ್ಷೆಯಲ್ಲೇ ಕಾಲ ಕಳೆಯಬೇಕಾಗುತ್ತದೆ, ಕಷ್ಟ.... ಆದರೂ ಅದೇ ವಾಸಿ. ಮಕ್ಕಳು ಹೇಗೋ ಬೆಳೆದು ದೊಡ್ಡವರಾಗುತ್ತಾರೆ. ಹೆಂಡತಿ ಮತ್ತೆ ಯಾರನ್ನಾದರೂ - ಬಹುಶಃ ಪಾವೆಲನನ್ನು - ಒಲಿಯಬಹುದು.

ಅವಳಿಗೆ ಅದೇ ಲೇಸು.

ಹೀಗೇ ಯೋಚನೆಮಾಡುತ್ತಾ ಬಾವಿಯ ಬಳಿಗೆ ಬಂದಾಗ ಒಬ್ಬ ಹುಡುಗ ಅವನನ್ನು ಕೂಗಿದನು.

''ಓ, ಸಿಪಾಯಿ, ನಮ್ಮ ಅಣ್ಣ ಕಳಿಸಿದ್ದು ನಿನ್ನನ್ನೇ ಅಲ್ಲವೆ?'

ಸ್ಟ್ಯೋಪ! ಇವನೇ ತನ್ನ ಆರು ವರ್ಷದ ಮಗ. ಚಳಿಗಾಳಿಗಳ ಹೊಡೆತಕ್ಕೆ ಸಿಕ್ಕಿ ಮಗುವಿನ ಮುಖ ತೆಳ್ಳಗಾಗಿತ್ತು. ಅಲೆಕ್ಸಿ ಯುದ್ಧಕ್ಕೆ ಹೊರಟಾಗ ಸ್ಟ್ಯೋಪ ತಂದೆಯನ್ನು ಅಪ್ಪಿಕೊಂಡು ಕಣ್ಣೀರು ಸುರಿಸಿ ''ಅಣ್ಣ, ಯುದ್ಧದಿಂದ ಬೇಗ ಬಂದುಬಿಡುತ್ತೀಯಾ?'' ಎಂದು ಅತ್ತಿದ್ದನು. ಆಗ ಬಿರುಕಿಸಿದ್ದ ತುಟಿ ಇನ್ನೂ ಹಾಗೆಯೇ ಇದ್ದಂತೆ ತೋರಿತು.

ಮಗುವಿನೊಡನೆ ಮಾತಾಡುತ್ತ ಅಲೆಕ್ಸಿ ಮನೆಯ ಕಡೆಗೇ ತಿರುಗಿದನು.

''ನಿಮ್ಮ ಅಣ್ಣನ ಕಡೆಯಿಂದ ಬಂದವನು ನಾನೇ ಅಂತ ಹೇಗೆ ಪತ್ತೆ ಮಾಡಿದೆ, ಮಗು?''

''ಅಜ್ಜಿ ಹೇಳಿದಳು, ಮುಖ ಭಯಂಕರವಾಗಿದೆ ಅಂತ.''

''ಹಾಗಾದರೆ ನಾನು ಭಯಂಕರವಾಗಿದೇನೆಯೇ?''

''ಅಲ್ಲ, ನೀನಲ್ಲ. ಭಯಂಕರವಾದವರು ಅಂದರೆ ಜರ್ಮನರು. ಅವರೇ ಅಲ್ಲವೆ ನಿನ್ನ ಹೀಗೆ ಮಾಡಿದವರು?''

''ಹೌದು ಮಗು, ನಾಜಿಗಳು.''

''ಅಣ್ಣನನ್ನ ನೀನು ನೋಡಿದೆಯಾ?''

''ಹೂ, ನೋಡಿದೆ''

''ಅಣ್ಣನಿಗೆ ಬಂದ ಪ್ರಶಸ್ತಿ, ಆ ಚಿನ್ನದ ನಕ್ಷತ್ರ, ಅದೆಲ್ಲಾ ನೋಡಿದೆಯಾ?''

''ಹೂ, ಅದನ್ನೂ ನೋಡಿದೆ.''

''ನಿನಗೂ ಬಂದಿದೆಯೆ, ಅದೆಲ್ಲಾ?''

''ಹೂ, ಬಂದಿದೆ.''

''ಅಣ್ಣ ಬೇಗ ಬಂದುಬಿಡುತ್ತಾನೆ ಅಲ್ಲವೆ?''

''ಬರುತ್ತಾನೆ.... ಅಣ್ಣ ಇಲ್ಲದೆ ಇದ್ದರೆ ನಿನಗೆ ಬೇಜಾರು, ಅಲ್ಲವೆ ಮಗು?''

''ಹೌದು ತುಂಬ ಬೇಜಾರು.''

''ನಿಮ್ಮ ಅಣ್ಣನನ್ನ ಯುದ್ಧಕ್ಕೆ ಸಾಗಕಳಿಸಿದ್ದು ಜ್ಞಾಪಕವಿದೆಯೇ, ನಿನಗೆ?''

''ಓಹೋ. ನಾನು ಆಗ ತುಂಬ ಅತ್ತುಬಿಟ್ಟೆ. ನನ್ನ ಎತ್ತಿಕೊಂಡು ಜೋಕಾಲಿ ಮಾಡಿದರೂ ಇನ್ನೂ ಅಳುತಾಲೇ ಇದ್ದೆ. ಅಣ್ಣ ಶೂರನಾಗಿ ಚಿನ್ನದ ನಕ್ಷತ್ರ ತಗೊಂಡು ಬರುತ್ತಾನೆ ಅಂತ ನನಗೆ ಗೊತ್ತಿರಲಿಲ್ಲ. ಅಲ್ಲದೆ ಎಲ್ಲರೂ ಅಳುತ್ತಾ ಇದ್ದರು, ನಾನೂ ಅತ್ತುಬಿಟ್ಟೆ ನಟಾಷ ಮಾತ್ರ ಅಳಲೇ ಇಲ್ಲ. ಯುದ್ಧ ಅಂದರೆ ಅವಳಿಗೆ ಏನೂ ತಿಳಿಯದು. ಜರ್ಮನರು ಇಲ್ಲಿಗೆ ಬಂದಾಗಲೂ ಅವಳಿಗೆ ಏನೂ ತಿಳಿಯದು. ಒಬ್ಬ ಜರ್ಮನ್ ಅಮ್ಮನ್ನ ಕೇಳಿದ, ನಮ್ಮ ಜನ ಎಲ್ಲಾ ಎಲ್ಲಿದ್ದಾರೆ ಅಂತ. ಅಮ್ಮ ಮಾತಾಡದೆ ಇದ್ದದ್ದಕ್ಕೆ ಅವನು ಬಂದೂಕ ತೆಗೆದು ನಟಾಷಳ ಕಡೆಗೆ ಗುರಿಯಿಟ್ಟ. ಅಮ್ಮ ಅವನ ಬಂದೂಕ ನೂಕಿಬಿಟ್ಟಳು. ನಟಾಷ ಹೆಬ್ಬೆಟ್ಟು ಚೀಪುತ್ತಾ ಸುಮ್ಮನೆ ನಿಂತಿದ್ದಳು. ಶುದ್ಧ ಪೆದ್ದು, ಅಲ್ಲವೆ? ಅಷ್ಟು ಹೊತ್ತಿಗೆ ಸರಿಯಾಗಿ ಕ್ರಯಾಷ್ಕ ಬಂದ. ಅಮ್ಮ, ಕ್ರಯಾಷ್ಕ, ಇಬ್ಬರೂ ಸೇರಿ ಅವನನ್ನ ಕಟ್ಟಿಹಾಕಿ ಬಾಯಿಗೆ ಒಂದು ಶಾಲು ತುರುಕಿ ನೆಲಮಾಳಿಗೆಯಲ್ಲಿ ಕೂಡಿಹಾಕಿದರು. ಆಮೇಲೆ ನಾವೆಲ್ಲಾ ಕಾಡಿಗೆ ಓಡಿಬಿಟ್ಟೆವು. ನಮ್ಮ ಸೈನ್ಯ ಬಂದು ಜರ್ಮನರನ್ನು ಓಡಿಸುವ ತನಕ ಅಲ್ಲೇ ಇದ್ದೆವು.''

ಕಥೆ ಮುಗಿಯುವ ಹೊತ್ತಿಗೆ ಇಬ್ಬರೂ ಮನೆಗೆ ಬಂದರು. ಅಲೆಕ್ಸಿ ಸ್ಟ್ಯೋಪನಿಗಾಗಿ ತಂದಿದ್ದ ಕೆಲವು ಸಾಮಾನುಗಳನ್ನು ಕೊಟ್ಟು ಅವನ ಜೊತೆಯಲ್ಲಿ ಕೈತೋಟಕ್ಕೆ ಹೋದನು. ಚಳಿಗಾಲದ ಮಂಜು ಕರಗಿ ಕೆಸರಾಗಿದ್ದ ನೆಲ ಈಗ ಒಣಗುತ್ತ ಬಂದಿತ್ತು. ಕಲೆಕ್ಟಿವ್ ಫಾರಮಿನ ಹಣ್ಣಿನ ತೋಟದಲ್ಲಿ ಆಗಲೇ ಮೊಗ್ಗುಗಳು ಅರಳಿದ್ದುವು. ಮಕ್ಕಳು ಸಣ್ಣ ಸಣ್ಣ ಗುಂಡಿಗಳನ್ನು ತೋಡಿ ಕಡ್ಡಿಗಳನ್ನು ನೆಡುತ್ತಿದ್ದರು. ತೋಟದಿಂದಾಚೆ ದಿಗಂತದವರೆಗೂ ಹೊಲಗಳು ಹರಡಿದ್ದವು. ಒಂದು ಕಡೆ ಸಣ್ಣ ಕಾಡು. ಹೊಲದ ಮೇಲೆಲ್ಲಾ ವಸಂತಕಾಲದ ಗಾಳಿ ಅಲೆಯಲೆಯಾಗಿ ಬೀಸುತ್ತಿತ್ತು. ಅಲ್ಲಲ್ಲಿಯೇ ಬಿಸಿಲಿನಲ್ಲಿ ಚಲಿಸುತ್ತಿದ್ದ ನೇಗಿಲುಗಳ ಹೊಳಪು ಕಾಣುತ್ತಿತ್ತು. ಎರಡು ವರ್ಷಗಳ ಹಿಂದೆ ತಾನು ಆ ಹೊಲಗಳನ್ನು ಬಿಟ್ಟು ದೂರದ ರಣರಂಗಕ್ಕೆ ಪ್ರಯಾಣ ಮಾಡಿದಾಗ ಎಲ್ಲೆಲ್ಲಿಯೂ ಚಿನ್ನದಂತೆ ಹೊಳೆಯುವ ಧಾನ್ಯದ ತೆನೆಗಳು ತುಂಬಿ, ಭಾರದಿಂದ ಬಾಗಿ ಗಾಳಿಯಲ್ಲಿ ತೂಗುತ್ತಿದ್ದುವು. ಈಗ ಮತ್ತೆ ಹೊಲಗಳೆಲ್ಲಾ ತಮ್ಮ ಯಜಮಾನನಿಗಾಗಿ ಕಾದಿದ್ದಂತೆ ತೋರಿತು. ಅವುಗಳೆದುರಿಗೆ ನಿಂತರೆ ಪೂರ್ವಸ್ನೇಹಿತರನ್ನು ಮತ್ತೆ ಭೇಟಿಮಾಡಿದಂತಾಯಿತು.

ಉದ್ದಕ್ಕೂ ಸ್ಟ್ಯೋಪ ತನ್ನ ಅಣ್ಣನ ಕಥೆಯನ್ನು ಕೇಳುತ್ತಲೇ ಇದ್ದನು. ಅಲೆಕ್ಸಿ ಹೆಚ್ಚು ಮಾತಾಡದಿದ್ದರೂ ಮಗನ ಕೆಂಪೇರಿದ ಕೆನ್ನೆಗಳನ್ನೂ ಹೊಳೆಯುವ ಕಣ್ಣುಗಳನ್ನೂ ಮತ್ತೆ ಮತ್ತೆ ನೋಡುವನು.

ಅಲೆಕ್ಸಿ ಹೊಲಗಳ ಬಳಿ ನಿಂತಾಗ ಸ್ಟ್ಯೋಪ ಅವನ ತೊಡೆಗೆ ಮುಖವನ್ನೊತ್ತಿ ''ನಮ್ಮ ಅಣ್ಣನಿಗಾಗಿ ನಾನು ಸೇಡು ತೀರಿಸಿಕೊಳ್ಳುತ್ತೇನೆ'' ಎಂದನು.

ಊರನ್ನು ಬಿಟ್ಟು ಹೊರಟು ಹೋಗೋಣವೆಂದರೆ ಕಾಲು ಕದಲುವುದು ಅದೆಷ್ಟು ದುಸ್ತರ! ಅಲೆಕ್ಸಿ ಒಂದು ಗುದ್ದಲಿಯನ್ನೆತ್ತಿಕೊಂಡು ತಾನೂ ಒಂದು ಗುಂಡಿ ತೆಗೆಯಲಾರಂಭಿಸಿದನು. ಮಣ್ಣು ತೆಗೆದಾಗ ಎದ್ದ ವಸಂತದ ಗಂಧ ಅವನನ್ನು ಮುತ್ತಿಕ್ಕಿ ತಲೆ ತಿರುಗುವಂತೆ ಮಾಡಿತು. ಅಲೆಕ್ಸಿಯ ಸಂಕಟವೆಲ್ಲಾ ಮರೆತುಹೋಗಿ ಹರ್ಷವುಕ್ಕಿತು. ತಾನು ಸಂಕಟಪಟ್ಟದ್ದೂ ಹೃದಯದ ರಕ್ತವನ್ನು ಚೆಲ್ಲಿದ್ದೂ ವ್ಯರ್ಥವಲ್ಲ. ತನ್ನನ್ನು ಯಾರು ಮರೆತರೂ ಆ ನೆಲ ಮರೆತಿಲ್ಲ; ಅದು ಎಂದಿಗೂ ತನ್ನನ್ನು ನಿರಾಕರಿಸಿ ಹೊರದೂಡುವುದಿಲ್ಲ. ಆ ಮಣ್ಣು ತನ್ನ ಅಪ್ಪಿದರೆ ಅದೊಂದು ಬಹುಮಾನವೇ ಸಾಕು. ಅಪರಿಚಿತನಂತಾದರೂ ಹಳ್ಳಿಯಲ್ಲೇ ಏಕಿದ್ದುಬಿಡಬಾರದು? ದುಂಬಿಯಂತೆ ಅಲ್ಲಿಯ ಗಾಳಿಯನ್ನು ಸೇವಿಸಿ, ಶಬ್ದಗಳನ್ನು ಆಲಿಸಿ, ತೋಟದ ಹೂವುಗಳನ್ನು ಕಣ್ಣಿಂದ ನೋಡುತ್ತಿದ್ದರೆ ಸಾಕು! ಇಲ್ಲ, ಸಾಲದು, ನೋಡುವುದರ ಜೊತೆಗೆ ದುಡಿಯಬೇಕು. ತಾನು ಗಂಡಸಲ್ಲವೆ? ತನ್ನ ಹರ್ಷದ ದುಡಿಮೆಗಾಗಿ ಆ ನೆಲವೂ ಹಳ್ಳಿಯ ಜನರೂ ಕಾದಿದ್ದಾರೆ.

ಅಲೆಕ್ಸಿಯ ತಾಯಿ ಅಲ್ಲಿಗೆ ಬಂದಳು.

''ಹಿಂದಿನಿಂದ ನಿನ್ನನ್ನೇ ನೋಡುತ್ತಿದ್ದೆ - ನನ್ನ ಆಲ್ಯೋಷನೇ ಬಂದು ನಿಂತ ಹಾಗಿದೆ. ನಿನ್ನ ಬೆನ್ನು, ನೀನು ಅಗೆಯುವ ರೀತಿ, ಎಲ್ಲಾ ಅವನಂತೆಯೇ. ನಿನಗೂ ಹೆಂಡತಿ ಮಕ್ಕಳಿದ್ದಾರೆಯೇ, ಮಗು?''

''ಹೌದಮ್ಮ, ತಾಯಿಯೂ ಇದ್ದಾಳೆ.''

''ನಿನ್ನನ್ನು ಮತ್ತೆ ಕಂಡ ದಿನ ಆಕೆ ಎಷ್ಟು ಸಂತೋಷಪಡುವಳೋ... ಜೊತೆಗೆ ಎಷ್ಟು ಕಣ್ಣೀರು ಸುರಿಸುವಳೋ, ಪಾಪ!''

''ನಾನು ಆಕೆಯನ್ನು ನೋಡುವುದಿಲ್ಲ ಮನಸ್ಸು ಮತ್ತೆ ಕದಡದೆ ಸುಖವಾಗಿರಲಿ.''

''ಸುಖವೆಲ್ಲಿ ಬಂತು, ಮಗು, ಹೃದಯ ದುಃಖದಿಂದ ಒಣಗಿ ಹೋಗಿರುವಾಗ?''

''ಅದೇ ಲೇಸು, ತಾಯಿ. ಹೃದಯ ಒಡೆಯುವುದಕ್ಕಿಂತ ಒಣಗುವುದೇ ಲೇಸು.''

''ಹಾಗೆ ಹೇಳುವುದಕ್ಕಾಗುವುದಿಲ್ಲವಪ್ಪ. ನಿನಗೇನು ಗೊತ್ತು! ನಿಮ್ಮನ್ನು ಇಂಥ ಸಂಕಟಕ್ಕೆ ಗುರಿಮಾಡುವುದಕ್ಕಿಂತ ನಾವು ಮಕ್ಕಳನ್ನು ಹೆರದಿರುವುದೇ ಲೇಸು'' ಎಂದು ಆಕೆ ಬಿಸಿಯುಸಿರು ಬಿಟ್ಟಳು.

''ತಾಯಿ, ನಮ್ಮ ಮಾತೃಭೂಮಿ ನಮ್ಮನ್ನು ಪಡೆಯಿತು - ದೇಶದ ಹಿರಿಮೆಗಾಗಿ, ರಕ್ಷಣೆಗಾಗಿ.'' ಮುದುಕಿ ತನ್ನ ವಸ್ತ್ರದ ಸೆರಗಿನಿಂದ ಕಣ್ಣೊರಸಿಕೊಂಡಳು.

''ಮನೆಯೊಳಕ್ಕೆ ಬಾ ಮಗು. ಊಟಮಾಡುವೆಯಂತೆ.''

''ನಾಸ್ತಾಸ್ಯ ಮಿಖೆಲೋವ್ನ ಬರಲಿಲ್ಲವೆ?''

''ಅವಳು ಬರಬೇಕಾದರೆ ಸಂಜೆಯಾಗುತ್ತದೆ. ಎಷ್ಟೋ ದಿನ ಅವಳಿಗೆ ಊಟಕ್ಕೆ ಸಮಯವೇ ಇರುವುದಿಲ್ಲ.''

''ಒಳ್ಳೆಯದಮ್ಮ, ಇಲ್ಲೊಂದು ಸೇಬಿನಗಿಡ ಹುಟ್ಟುಹಾಕಿ ಬರುತ್ತೇನೆ. ನನ್ನ ನೆನಪಿಗಾಗಿ ಅದೊಂದಿರಲಿ.''

ತಾಯಿ ಹೊರಟುಹೋದ ಮೇಲೆ ಅಲೆಕ್ಸಿ ಗುಂಡಿ ತೋಡಿ, ಚರಂಡಿ ಹೊಡೆದು ತನ್ನ ಕೆಲಸವನ್ನು ಮುಗಿಸಿದನು. ಸಂಜೆಯ ಹೊತ್ತಿಗೆ ಪಾವೆಲನೊಡಗೂಡಿ ನಾಸ್ತಾಸ್ಯ ಬಂದಳು. ಅವರಿಬ್ಬರೂ ಅಲೆಕ್ಸಿ ಇದ್ದುದನ್ನು ಕಾಣದೆ ಅಂಗಳದಲ್ಲಿ ಮಗುಚಿಬಿದ್ದಿದ್ದ ಸ್ಲೇಜ್ ಗಾಡಿಯ ಮೇಲೆ ಕುಳಿತು

ಮಾತಾಡುತ್ತಿದ್ದರು ಆಗಿಂದಾಗ ನಾಸ್ತ್ಯಾಳ ನಗು ಕೇಳುತ್ತಿತ್ತು. ಸ್ವಲ್ಪ ಹೊತ್ತಾದ ಮೇಲೆ ಪಾವೆಲ್ ಹೊರಟು ಹೋದನು. ನಾಸ್ತ್ಯ ಮನೆಯೊಳಕ್ಕೆ ಹೋದಳು. ಸ್ಟ್ಯೋಪ ಅಲೆಕ್ಸಿಯನ್ನು ಊಟಕ್ಕೆ ಕರೆದನು. ಒಳಗೆ ನಾಸ್ತ್ಯ ಆತುರದಿಂದ ಊಟ ಮಾಡುತ್ತಿದ್ದಳು. ಅಲೆಕ್ಸಿ ಕಿಟಕಿಯ ಬಳಿ ನಿಂತು, ಹೊರಗೆ ಇಟ್ಟಿಗೆ ಸಾಗಿಸುತ್ತಿದ್ದುದನ್ನು ನೋಡಿ ಅವು ಎಲ್ಲಿಂದ ತಂದವೆಂದು ವಿಚಾರಿಸಿದನು.

''ಎಲ್ಲಿಂದಲೇನು, ನಮ್ಮ ಸ್ವಂತ ಕಾರ್ಖಾನೆಯಿಂದ. ಅದು ಮತ್ತೆ ಕೆಲಸಮಾಡುವಂತೆ ಸರಿಪಡಿಸಿದ್ದೇವೆ.'' ನಾಸ್ತ್ಯ ಉತ್ತರ ಕೊಟ್ಟಳು.

''ಓಹೋ, ಅದರಿಂದಲೇ ಕಟ್ಟಡದ ಕೆಲಸ ಅಷ್ಟು ಭರದಿಂದ ಸಾಗುತ್ತಿದೆ.'' ನಾಸ್ತ್ಯ ಕಲಕಿದ ಮನಸ್ಸಿನಿಂದ, ಏನೋ ಸಂದೇಹದಿಂದ ಅವನ ಕಡೆ ನೋಡಿದಂತೆ ತೋರಿತು. ಅಲೆಕ್ಸಿಯ ಸಮಾಚಾರ, ಅವನ ಆರೋಗ್ಯ ಮುಂತಾದ ವಿಷಯವಾಗಿ ಮತ್ತೆ ಪ್ರಶ್ನೆ ಮಾಡಿದಳು.

''ನೀವು ಅಲೆಕ್ಸಿಗೆ ಕಾಗದ ಬರೆಯುವುದಿಲ್ಲವಲ್ಲ, ಅದೇಕೆ?''

''ಸಾಧ್ಯವಾದಾಗಲೆಲ್ಲ ಬರೆಯುತ್ತೇನೆ.''

''ಹೆಚ್ಚು ಬರೆದಂತೆ ಕಾಣುವುದಿಲ್ಲ?''

''ನಮ್ಮ ಕೆಲಸ ಎಷ್ಟಿದೆ, ನೀವೇ ನೋಡಿದಿರಲ್ಲ. ದಿನಕ್ಕೆ ಇಪ್ಪತ್ತುನಾಲ್ಕು ಘಂಟೆ ಸಾಲದು.''

ಅಲೆಕ್ಸಿಯ ಮನಸ್ಸಿನಲ್ಲಿ ಒಂದು ಬಗೆಯ ಉರಿಯೆದ್ದಿತು. 'ಸ್ಲೆಜ್ ಗಾಡಿಯ ಮೇಲೆ ಕುಳಿತು ಪಾವೆಲನೊಡನೆ ಮಾತಾಡುವುದಕ್ಕೆ ಮಾತ್ರ ಸಮಯವಿದೆಯೋನೊ' ಎಂದುಕೊಂಡು ಮತ್ತೆ ಗಡುಸು ಧ್ವನಿಯಿಂದ ''ನಿಮ್ಮಿಂದ ಬಹಳ ಉಪಚಾರವಾಯಿತು. ನಾನು ಇನ್ನು ಸ್ಟೇಷನ್ನಿಗೆ ಹೊರಡಬೇಕು'' ಎಂದನು.

ನಾಸ್ತ್ಯ ಮೊದಲಿಂಗಿತಂಲೂ ಮೃದುವಾದ ಧ್ವನಿಯಲ್ಲಿ ''ಇಷ್ಟು ಹೊತ್ತಾದ ಮೇಲೆ ಹೊರಡುವುದೆ? ಹೊರಗೆ ನೋಡಿ, ಇನ್ನೇನು ಕತ್ತಲಾಗುವ ಸಮಯ. ರಾತ್ರಿ ಇಲ್ಲಿಯೇ ಇದ್ದುಬಿಡಿ'' ಎಂದಳು.

ನಿಜವಾಗಿಯೂ ಸೂರ್ಯ ಮುಳುಗುವ ಹೊತ್ತಾಗಿ ಹುಲ್ಲುಗಾವಲಿನ ಬೆಳಸೆಲ್ಲ ಹೊಂಬಣ್ಣವನ್ನು ತಳೆದಿತ್ತು. ಮರದ ಕೊಂಬೆಗಳಲ್ಲಿ ಕಾಗೆಗಳು ತಮ್ಮ ಸಂಜೆಯ ಚರ್ಚೆಯನ್ನು ನಡೆಸುತ್ತಿದ್ದವು. ಆದರೂ ಅಲೆಕ್ಸಿ ಚೀಲವನ್ನು ಕಟ್ಟಿ ಹೆಗಲಿಗೇರಿಸುತ್ತಿದ್ದಾಗ ಸ್ಟ್ಯೋಪ ಬಂದು ಅದನ್ನು ಕಿತ್ತುಕೊಂಡನು.

''ನೀನು ಹೋಗಬೇಡ. ರಾತ್ರಿ ಇಲ್ಲೇ ಇದ್ದು ನನಗೆ ಅಣ್ಣನ ಕಥೆ ಎಲ್ಲಾ ಹೇಳಬೇಕು.''

''ನೋಡಿದಿರಾ, ಮಗು ನಿಮ್ಮನ್ನು ಹೋಗಗೊಡುವುದಿಲ್ಲ. ದಯೆ ಮಾಡಿ ರಾತ್ರಿ ನಮ್ಮೊಡನೆಯೇ ನಿಂತುಬಿಡಿ. ಮಾತಾಡುವುದು ಬಹಳವಿದೆ. ನಾನು ನಿಮಗೆ 'ಗುಡ್ ಬೈ' ಹೇಳುವುದಿಲ್ಲ.'' ನಾಸ್ತ್ಯಳ ಧ್ವನಿ ಮತ್ತಷ್ಟು ಮೆದುವಾಯಿತು.

ನಾಸ್ತ್ಯ ಮತ್ತೆ ತನ್ನ ಕೆಲಸಕ್ಕೆ ಹೊರಟಮೇಲೆ ಸ್ಟ್ಯೋಪ ಬಂದು ಅಲೆಕ್ಸಿಯನ್ನು ಅಪ್ಪಿಕೊಂಡು ಕುಳಿತನು. ಸ್ವಲ್ಪ ಹೊತ್ತು ಕಥೆ ಹೇಳಿದ ಮೇಲೆ ಅವರಿಬ್ಬರೂ ತೋಟಕ್ಕೆ ಹೋದರು. ನಸುಗತ್ತಲಿನಲ್ಲಿ ತೋಟವೆಲ್ಲಾ ಹಕ್ಕಿಗಳ ಹಾಡಿನಿಂದಲೂ ಕಾಗೆಗಳ ಕೂಗಿನಿಂದಲೂ ತುಂಬಿತ್ತು. ದೂರದಿಂದ ಎಲ್ಲೋ ಗಿಡಗಳ ಕೆಳಗೆ ಹರಿಯುತ್ತಿದ್ದ ತೊರೆಯ ಶಬ್ದ ಕೇಳಿತು. ಚಂದ್ರೋದಯದ ಸಮಯ. ತಂದೆಮಕ್ಕಳಿಬ್ಬರೂ ಸ್ವಲ್ಪಕಾಲ ಮಾತಿಲ್ಲದೆ ನಿಂತರು. ಅನಂತರ ಮಲಗುವ ಹೊತ್ತಾಯಿತೆಂದು ಒಳಗೆ ಬಂದರು. ನಡುಮನೆಯಲ್ಲಿಯೇ ಪರದೆಯ ಹಿಂದೆ ಅವನಿಗಾಗಿ ಹಾಸಿಗೆ ಹಾಸಿತ್ತು. ಅಲೆಕ್ಸಿಗೆ ಮಲಗಿದ ಕೂಡಲೆ ನಿದ್ದೆ ಬರಬೇಕು. ಆದರೆ ನಾಸ್ತ್ಯ ಆಗತಾನೆ ಬಂದು ತನ್ನ ಕೋಣೆಗೆ ಹೋಗಿ ಮಲಗಿದ್ದು ಕೇಳಿಸಿತು. ಒಂದೆರಡು ನಿಮಿಷಗಳ ಮೇಲೆ ಯಾರೋ ಕಿಟಕಿಯನ್ನು ತಟ್ಟಿದ ಸದ್ದಾಯಿತು. ನಾಸ್ತ್ಯ ಕಿಟಕಿಯನ್ನು ತೆರೆದಳು. ಪಾವೆಲನ ಧ್ವನಿ. ಅವರಿಬ್ಬರೂ ಸ್ವಲ್ಪಕಾಲ ಸಣ್ಣ ಧ್ವನಿಯಲ್ಲಿ ಮಾತಾಡಿದರು. ಅನಂತರ ನಾಸ್ತ್ಯ ಕಿಟಕಿಯನ್ನು ಮುಚ್ಚಿದಳು. ಪಾವೆಲ್ ಹೊರಟು ಹೋದನು. ಅಲೆಕ್ಸಿಗೆ ಬರುತ್ತಿದ್ದ ನಿದ್ದೆ ಹಾರಿಹೋಯಿತು. ಹೃದಯವೆಲ್ಲಾ ಸೀಳಿದಂತಾಗಿ ಸುಮ್ಮನೆ ಕತ್ತಲು ಚಾವಣಿಯನ್ನು ದಿಟ್ಟಿಸಿ ನೋಡುತ್ತ ಮಲಗಿದ್ದನು. ಮನೆಯಲ್ಲಿ ಇಷ್ಟು ಭಯಂಕರವಾದ ನೋವು ಕಾದಿದ್ದರೆ ತಾನೇಕೆ ಬರಬೇಕಾಗಿತ್ತು! ಯುದ್ಧರಂಗದಲ್ಲಿ ಆ ಟ್ಯಾಂಕಿನ ಬೆಂಕಿ ತನ್ನನ್ನು ಪೂರ್ತಿಯಾಗಿ ಸುಟ್ಟು ಬೂದಿಮಾಡಬಾರದಾಗಿತ್ತೆ! ತನ್ನ ಹಿಂದಿನ ಸುಖ ಸಂತೋಷಗಳೆಲ್ಲ ಈ ಸ್ಥಿತಿಗೆ ಇಳಿದುವೆ? ಆ ಸುಖ ತನ್ನ ಪಾಲಿಗೆ ಬಂದಾಗ ಸಂದೇಹಕ್ಕೂ ಮತ್ಸರಕ್ಕೂ ಲೇಶವೂ ಅವಕಾಶವಿರಲಿಲ್ಲ. ನಾಸ್ತ್ಯಳನ್ನು ಪ್ರೀತಿಸುವವರು ಅನೇಕರಿದ್ದರು. ಈ ಪಾವೆಲನೂ ಅವರಲ್ಲೊಬ್ಬ. ಆದರೂ ನಾಸ್ತ್ಯ ತನ್ನನ್ನೇ ಒಲಿದು ಮದುವೆಯಾದಳು - ಅದು ಬಹುಕಾಲ ಬೆಳೆದು ಬಂದ ಒಲುಮೆ.... ಹೊರಟು ಹೋಗಬೇಕು, ಅಲ್ಲಿಂದ ಓಡಿಹೋಗಬೇಕು ಹಾಸಿಗೆಯಿಂದ ಎದ್ದು ನಿಂತನು. ನಾಸ್ತ್ಯ ಇನ್ನೂ ಎಚ್ಚರವಾಗಿದ್ದು ಹೊರಳಾಡುತ್ತ ನಿಟ್ಟುಸಿರು ಬಿಟ್ಟು ನರಳುವಂತೆ ಕೇಳಿತು. ಅವಳೂ ಬಹಳ ಸಂಕಟದಲ್ಲಿರಬೇಕು. ಅಲೆಕ್ಸಿ ಯಾರಿಗೂ ತಿಳಿಯದಂತೆ ಹೊರಟುಹೋಗುವುದಕ್ಕಾಗುತ್ತಿರಲಿಲ್ಲ. ಹತ್ತಿರದಲ್ಲೇ ತಾಯಿಯೂ ಮಕ್ಕಳೂ ಉಸಿರಾಡುವುದು ಕೇಳುತ್ತಿತ್ತು, ಮುಂದೆ ಅವರ ಜೀವನ ಹೇಗೆ ಸಾಗುವುದೊ! ರಾತ್ರಿಯೆಲ್ಲಾ ಅಲೆಕ್ಸಿಗೆ ಮಕ್ಕಳ ಚಿಂತೆ; ಎದೆಯಲ್ಲಿ ಒಂದು ಬಗೆಯ ಮೂಕನೋವು.

ಕೊನೆಗೆ ರಾತ್ರಿ ಕಳೆದು ಮುಂಜಾನೆಯ ಬೆಳಕು ಸ್ವಲ್ಪಸ್ವಲ್ಪವಾಗಿ ಹರಡಿತು. ಹಕ್ಕಿಗಳು ಅರೆನಿದ್ದೆಯಲ್ಲೇ ಒಂದೊಂದು ಕೂಗು ಹಾಕುತ್ತಿದ್ದವು. ಸ್ವಲ್ಪ ಹೊತ್ತಿನಲ್ಲಿಯೇ ದಿಗಂತದಲ್ಲಿ ಸೂರ್ಯನ ಸುವರ್ಣ ಬಿಂಬವೆದ್ದು ಕಿರಣಗಳು ಮನೆಯೊಳಗೆ ನುಗ್ಗಿ ಬಂದವು. ಅಲೆಕ್ಸಿ ಎದ್ದು ಕುಳಿತನು.

ಮೊದಲು ತಾಯಿ, ಅನಂತರ ನಾಸ್ತ್ಯ, ಎದ್ದು ಬಂದರು. ಅಲೆಕ್ಸಿ ಪರದೆಯಿಂದಾಚೆಗೆ ಬಂದು ಅವರಿಗೆ ಸುಪ್ರಭಾತ ಬಯಸಿದನು.

''ಇದೇನು ಇಷ್ಟು ಬೇಗ ಎದ್ದು ಬಿಟ್ಟಿರಿ? ಇನ್ನೂ ಸ್ವಲ್ಪ ಹೊತ್ತು ಮಲಗಿರಬಹುದಾಗಿತ್ತು'' ಎಂದಳು ನಾಸ್ತ್ಯ.

''ಪಾಪ, ತನ್ನ ಮನೆಯನ್ನು ಕಾಣದೆ ಇನ್ನೊಬ್ಬರ ಮನೆಯಲ್ಲಿ ಮಲಗಿದರೆ ನಿದ್ರೆ ಬರುತ್ತದೆಯೇ?'' ಎಂದು ತಾಯಿ ನಿಟ್ಟುಸಿರುಬಿಟ್ಟಳು.

''ಗಾಡಿಯಲ್ಲಿ ನಿಮ್ಮನ್ನು ಸ್ಟೇಷನ್ನಿಗೆ ಕಳಿಸುತ್ತೇನೆ.''

''ಏನೂ ಅವಶ್ಯಕವಿಲ್ಲ, ಈ ಕಷ್ಟಕಾಲದಲ್ಲಿ ಅದಕ್ಕೆಲ್ಲಾ ಸಮಯ ಕಳೆಯಬಾರದು.''

''ಆದರೇನು, ನೀವು ಸ್ಟೇಷನ್ನಿನಿಂದ ಇಲ್ಲಿಗೆ ಹನ್ನೆರಡು ಮೈಲಿ ನಮಗಾಗಿ ನಡೆದು ಬರಲಿಲ್ಲವೆ? ಅಲ್ಲದೆ ಗಾಡಿ ಸ್ಟೇಷನ್ನಿಗೆ ಹೋಗಬೇಕಾದ ಕೆಲಸವೂ ಇದೆ. ರಾತ್ರಿ ಪಾವೆಲ್ ಬಂದಿದ್ದ. ಅವನು ಜಿಲ್ಲೆಯ ಕೇಂದ್ರಕ್ಕೆ ಹೋಗಬೇಕಾಗಿದೆ. ತುರ್ತಾದ ವರ್ತಮಾನ ಬಂದಿದೆ. ಸ್ವಲ್ಪ ಉಪಹಾರ ತೆಗೆದುಕೊಳ್ಳಿ. ಅಷ್ಟರಲ್ಲೇ ಅವನು ಗಾಡಿಯನ್ನು ತರುತ್ತಾನೆ.''

ಇಬ್ಬರೂ ಮೌನವಾಗಿ ಕುಳಿತು ಬೇಗ ಬೇಗ ತಿಂಡಿ ತಿಂದರು. ತಾಯಿ ಅಲೆಕ್ಸಿಯ ಚೀಲಕ್ಕೆ ತಿಂಡಿಯ ಸಾಮಾನು ತಂಬುತ್ತಿದ್ದಳು.

ಸ್ಟ್ಯೋಪ ಎಚ್ಚತ್ತನು.

''ಸ್ಟ್ಯೋಪ, ನಾನು ಹೋಗಿ ಬರಲೆ? ನನ್ನನ್ನು ಮರೆತುಬಿಡಬೇಡ. ಮುಂದೆ ಯಾವಾಗಲಾದರೂ ನಿನ್ನನ್ನು ನೋಡುವುದಕ್ಕೆ ಬರುತ್ತೇನೆ.''


ಸ್ಟ್ಯೋಪನಿಗೆ ಬಹಳ ಬೇಜಾರಾಯಿತು. ''ನೀನು ಯಾತಕ್ಕೆ ಹೊರಟು ಹೋಗುತ್ತೀಯೆ? ಏನು ಕೆಲಸ?''

''ಅಲ್ಲ ಮಗು, ಅವರಿಗೆ ಬೇರೆ ಕೆಲಸವೇ ಇಲ್ಲವೆ? ಇಲ್ಲೇ ಇದ್ದು ಬಿಡುವುದಕ್ಕಾಗುತ್ತೆಯೆ?'' ಎಂದು ನಾಸ್ತ್ಯ ನಕ್ಕಳು.

''ಹೌದು, ಇಲ್ಲೇ ಇರಬೇಕು. ಅಣ್ಣ ಬರುವ ತನಕ ಇಲ್ಲೇ ಇರಬೇಕು.''

''ಮಗು, ಅಣ್ಣ ಬರುವ ತನಕ ನೀನು ದೊಡ್ಡವನಾಗಿ ಬೆಳೆಯಬೇಕು, ತಿಳಿಯಿತೊ?'' ಎಂದನು ಅಲೆಕ್ಸಿ.

''ನೀನೂ ಅಣ್ಣನ ಹಾಗೇ ಶೂರನಾಗಬೇಕು'' ಎಂದು ತಾಯಿ ಹೇಳಿದಳು.



ಮನೆಯಲ್ಲಿ ಮಕ್ಕಳಿರುವಾಗ ಎಂತಹ ಕಾರ್ಯಕ್ರಮ ಹಚ್ಚಬೇಕು ಅನ್ನೋ ತಿಳುವಳಿಕೆಯಾದ್ರು ಇದೆಯೇನ್ರೀ ನಿಮಗೆ.

''ಇನ್ನು ಹೊರಡಲೆ? ಹೋಗಿಬರುತ್ತೇನೆ, ನಾಸ್ತಾಸ್ಯ ಮಿಖೆಲೋವ್ನ, ನಿಮ್ಮಿಂದ ಬಹಳ ಉಪಚಾರವಾಯಿತು. ಆದರದಿಂದ ಕಂಡಿರಿ.''

''ನಮಗೆ ನೀವು ಶುಭವರ್ತಮಾನ ತಂದಿರಿ. ಇಲ್ಲಿಗೆ ಬಂದದ್ದು ನಿಮಗೆ ಬಹಳ ತೊಂದರೆಯಾಗಿರಬೇಕು.'' ನಾಸ್ತ್ಯಳ ವಿಶಾಲವಾದ ದೃಷ್ಟಿ ಪೂರ್ಣವಾಗಿ ಅವನ ಮೇಲೆ ಬಿತ್ತು. ಅವಳ ನೀಲವಾದ ಕಣ್ಣುಗಳಲ್ಲಿ ಈಗ ಮರುಕವಾಗಲಿ, ಅಪರಿಚಿತನೆಂಬ ಭಾವವಾಗಲಿ ಇರಲಿಲ್ಲ; ದುಃಖವೂ ವಿಶ್ವಾಸವೂ ಕಂಡುಬಂದವು.

ಮತ್ತೆ ಅಲೆಕ್ಸಿಯ ಹೃದಯದಲ್ಲಿ ಮಿತಿಯಿಲ್ಲದ ಆನಂದ, ಮಿತಿಯಿಲ್ಲದ ದುಃಖ - ಇವೆರಡರ ಹೋರಾಟದಲ್ಲಿ ಅವನ ತಲೆ ಸುತ್ತಿ ಬೀಳುವಂತಾಯಿತು. ನಟಾಷ ಮಲಗಿದ್ದ ಬಳಿಗೆ ಹೋಗಿ ನಿದ್ದೆಯಲ್ಲಿದ್ದ ಮಗುವಿಗೆ ನಿಧಾನವಾಗಿ ಮುತ್ತಿಟ್ಟು, ಒತ್ತಿ ಬಂದ ನೋವನ್ನು ತಡೆಯುತ್ತ ಸ್ಟ್ಯೋಪನ ಕಡೆ ನೋಡಿ ಬಿಗಿದ ಕಂಠದಿಂದ ಮಾತಾಡಿದನು.



''ಹೋಗಿ ಬರುತ್ತೇನೆ, ಸ್ಟ್ಯೋಪ'' ಎಂದು ಅವನನ್ನೆತ್ತಿಕೊಂಡು ಎರಡು ವರ್ಷಗಳ ಹಿಂದೆ ಮಾಡಿದ್ದಂತೆ ಜೋಕಾಲಿ ಮಾಡಿದನು.

''ಆಲ್ಯೋಷ!'' ನಾಸ್ತ್ಯ ನೋವಿನಿಂದ ಚೀರಿದಳು.

ಅಲೆಕ್ಸಿಗೆ ಕಾಲು ಕುಸಿಯುವಂತಾಗಿ ಸ್ಟ್ಯೋಪನನ್ನೆ ಅಪ್ಪಿಕೊಂಡು ತಲೆ ತಗ್ಗಿಸಿ ನಿಂತನು. ನಾಸ್ತ್ಯ ಅವನ ಬಳಿಗೆ ಹಾರಿ, ಅವನ ಅಂಗಿಯನ್ನೂ ಮೆಡಲುಗಳನ್ನು ಹಾಕಿದ್ದ ಷರಟನ್ನೂ ಕಿತ್ತು ಬೆತ್ತಲೆ ಎದೆಗೆ ತನ್ನ ಮುಖವನ್ನೊತ್ತಿ ಕಣ್ಣೀರಿನಿಂದ ಅವನನ್ನು ತೋಯಿಸಿದಳು. ಅಳು ಒಂದೇ ಸಮನೆ ಉಕ್ಕಿಬರುತ್ತಿತ್ತು.

''ಆಲ್ಯೋಷ, ಆಲ್ಯೋಷೆಂಕ! ನೀನು.... ನೀನು.... ಅಯ್ಯೋ ನನ್ನ ಮುದ್ದು ಆಲ್ಯೋಷೆಂಕ!'' ಅವನ ಮುಖ, ಕೈಗಳು, ಎದೆ, ಎಲ್ಲವನ್ನೂ ಎಡೆಬಿಡದೆ ಮುತ್ತಿಟ್ಟಳು.

ಸ್ಟ್ಯೋಪನೂ ಕಣ್ಣೀರು ಹಾಕುತ್ತ ನಿಂತನು. ಇವರು ಅಳುವ ಶಬ್ದವನ್ನು ಕೇಳಿ ತಾಯಿ ಎಡವುತ್ತ ಓಡಿಬಂದು ವಿಷಯವೇನೂ ತಿಳಿಯದೆ ಬಾಗಿಲಿನಲ್ಲಿಯೇ ಭಯದಿಂದ ನಡುಗುತ್ತ ನಿಂತಳು. ಒಂದು ನಿಮಿಷವಾದ ಮೇಲೆ ಅರ್ಥಮಾಡಿಕೊಂಡು ಆಲ್ಯೋಷನ ಕಾಲನ್ನೇ ಅಪ್ಪಿಕೊಂಡು ನೆಲಕ್ಕೆ ಕುಸಿದಳು.

''ಮಗು, ಅಯ್ಯೋ ನನ್ನ ಮಗು, ಎಷ್ಟು ಸಂಕಟಪಟ್ಟೆಯಪ್ಪ! ಎಷ್ಟು ನರಳಿದೆಯೋ!''

ನಾಸ್ತ್ಯ ಮೆಲ್ಲಗೆ ಹೇಳಿದಳು ''ಹೋಗಲಿ, ಈಗ ಒಳ್ಳೆಯದಾಯಿತು, ಒಳ್ಳೆಯದಾಯಿತು. ಆದರೂ ನೀನು.... ನೀನು ನಮಗೆ ಹೇಳಲೇ ಇಲ್ಲ ಹೊರಟುಹೋಗುತ್ತಿದ್ದೆ! ನಮ್ಮನ್ನು ಮತ್ತೆ ಬಿಟ್ಟು ಹೋಗುತ್ತಿದ್ದೆ....!''

''ನೀವು ಯಾರೂ ನನ್ನನ್ನು ಗುರುತಿಸದಿದ್ದರೇ ಒಳ್ಳೆಯದು ಎನ್ನಿಸಿತು.'' ಅಲೆಕ್ಸಿ ತಡೆದು ತಡೆದು ಹೇಳಿದನು.

ನಾಸ್ತ್ಯ ಅವನ ಮೈದಡವುತ್ತ ಮಿತಿಯಿಲ್ಲದ ಪ್ರೇಮದಿಂದ ಮೆಲುದನಿಯಲ್ಲಿ, ''ಮಕ್ಕಳನ್ನು ಹಾಗೆ ಆಡಿಸಬೇಕಾದರೆ ತಂದೆಗಲ್ಲದೆ ಇತರರಿಗೆ ಸಾಧ್ಯವೆ!'' ಎಂದಳು.

''ನಾನಿಲ್ಲದಿದ್ದರೂ ಮಕ್ಕಳು ಹೇಗೋ ಬೆಳೆಯುತ್ತವೆ. ನೀನು.... ಇನ್ನೂ ಪ್ರಾಯದವಳು. ನನ್ನಂಥ ವಿಕಾರರೂಪಿಯಿಂದ ನಿನ್ನ ಜೀವನದಲ್ಲಿ ಕತ್ತಲು ಕವಿಯಬೇಕೆ?''

ನಾಸ್ತ್ಯ ಅವನನ್ನು ಬಿಟ್ಟು ಒಂದು ಹೆಜ್ಜೆ ಸರಿದು ಕ್ಷಣಕಾಲ ಮೌನವಾಗಿ ನಿಂತು ಅವನನ್ನು ದಿಟ್ಟಿಸಿ ನೋಡಿ ಸ್ವಲ್ಪ ನಿಷ್ಠುರವಾಗಿಯೇ ಹೇಳಿದಳು;

''ನಿನ್ನ ಮಾತು ಕೇಳಿ ಸಂತೋಷ ಆಯಿತು, ಆಲ್ಯೋಷ. ಹಾಗಾದರೆ ನಾನು ಅಂಥ ಹೆಂಗಸೆಂದು ತಿಳಿದಿದ್ದೆ? ನಿನ್ನ ಮುಖದ ಸೌಂದರ್ಯಕ್ಕಾಗಿ ಮಾತ್ರ ನಿನ್ನನ್ನು ಪ್ರೀತಿಸಿದೆನೆಂದು ತಿಳಿದಿದ್ದೆ?''

''ಆ ಚಿತ್ರವನ್ನು ನೋಡು, ನಾಸ್ತ್ಯ. ನನ್ನ ಮುಖದ ಸೌಂದರ್ಯ ಅಲ್ಲಿ ಕಾಣುತ್ತದೆ''.

''ಹೌದು. ಎಲ್ಲರೂ ಅದನ್ನು ನೋಡಿ ಸಂತೋಷಪಡುತ್ತಾರೆ. ಆದರೂ ನಿನ್ನಲ್ಲಿರುವ ಚೆಲುವು ಯಾವ ಚಿತ್ರದಲ್ಲೂ ಬರಲಾರದು.'' ನಾಸ್ತ್ಯ ಮತ್ತೆ ಬಂದು ಅವನನ್ನಪ್ಪಿಕೊಂಡಳು. ''ಅಯ್ಯೋ, ನಿನ್ನ ಷರಟನ್ನು ಹರಿದುಬಿಟ್ಟೆನಲ್ಲ, ಆಲ್ಯೋಷ! ತಾಳು, ಈಗಲೇ ಎರಡು ಹೊಲಿಗೆ ಹಾಕಿ ಕೊಡುತ್ತೇನೆ.

ತಾಯಿಯ ದುಃಖ ಮತ್ತೆ ಹೊರಹೊಮ್ಮಿತು ''ಮಗು, ಮಗು, ಆ ಪಿಶಾಚಿಗಳು ನಿನ್ನ ಏನು ಮಾಡಿಬಿಟ್ಟರಪ್ಪ!.... ನಿನ್ನೆ ನೀನು ಬಂದಾಗ ಹಿಂದುಗಡೆಯಿಂದ ನೋಡಿ ಅಂದುಕೊಂಡೆ, ನನ್ನ ಆಲ್ಯೋಷ ಇದ್ದ ಹಾಗೇ ಇದ್ದೀ ಅಂತ. ಆದರೂ ಹೊಳೆಯಲಿಲ್ಲ....''


''ನಿನ್ನೆ ಊಟಮಾಡುತ್ತಿದ್ದಾಗ.... ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ. ಬೆಳಗಿನವರೆಗೂ ಕಣ್ಣು ಮುಚ್ಚುವುದಕ್ಕೇ ಆಗಲಿಲ್ಲ'' - ನಾಸ್ತ್ಯಳ ಧ್ವನಿಯಲ್ಲಿ ಆನಂದವೂ ಪ್ರೇಮವೂ ತುಂಬಿ ತುಳುಕುತ್ತಿದ್ದುವು.

ಸ್ಟ್ಯೋಪನಿಗೆ ಇದೆಲ್ಲಾ ಬೇಸರವಾಯಿತು. ''ಅಣ್ಣ, ಅಣ್ಣ ನೀನು ಎಷ್ಟು ಟ್ಯಾಂಕ್ ಬಲಿಹಾಕಿದೆ ಹೇಳಣ್ಣ.''

ಮೈದಾನದ ಮೇಲೆ ಆಗಲೇ ಬಿಸಿಲು ಹರಡಿತ್ತು. ಯಾರೋ ಬಂದು ಕಿಟಕಿಯನ್ನು ತಟ್ಟಿದರು. ನಾಸ್ತ್ಯ ಮತ್ತೆ ತನ್ನ ಕೆಲಸಕ್ಕೆ ಹೋಗಬೇಕು.

■

ಮಮತೆಯೊಡನೆ ಬೆರೆಯಲಿ ಎಚ್ಚರ



ಬುತ್ತಿ ಕಟ್ಟುವುದು ಇವತ್ತಿನ ವಿಚಾರವಷ್ಟೇ ಅಲ್ಲ. ದೂರ ಹೋಗುವಾಗ, ಹಲವು ದಿನಗಳ ಪ್ರಯಾಣಕ್ಕೆ ಸಜ್ಜಾದಾಗ ಹೊರಟವರ ಕೈಗೆ ಲಗತ್ತಾಗುತ್ತಿತ್ತು ಬುತ್ತಿ. ಮಡಿಯ ಜನಕ್ಕೆ ಹಿಡಿ ಅವಲಕ್ಕಿ, ಚೂರು ಬೆಲ್ಲವೇ ಬುತ್ತಿ. ಬಿಸಿಲಲ್ಲಿ ಕಷ್ಟದ ಕಾಯಕಕ್ಕೆ ತೆರಳುವ ವ್ಯಕ್ತಿಗೆ ಮೊಸರನ್ನ, ದಿನವೆಲ್ಲ ದುಡಿಯುವ ವಕ್ಕಲುತನದ ರೈತನಿಗೆ, ಸೂರ್ಯ ನಡುನೆತ್ತಿಗೇರುವಾಗ, ಮನೆಯಿಂದ ಪ್ರತ್ಯಕ್ಷ ಈ ಬುತ್ತಿ. ರೊಟ್ಟಿ, ಚಟ್ನಿ, ಮೊಸರು, ಥಳಥಳ ಹೊಳೆವ ತಂಬಿಗೆಯಲ್ಲಿ ಸಿಹಿಯಾದ ನೀರು. ಇದಿಷ್ಟೇ ಸಾಕು, ಆಯಾಸಗೊಂಡ ಜೀವಕ್ಕೆ ತಂಪೆನಿಸಲು. ಬಿದಿರಿನಲ್ಲಿ ಹೆಣೆದ ಬುಟ್ಟಿ, ಅದರೊಳಗೆ ಹಾಸಿದ ಮಡಿಯಾದ ಅರಿವೆ. ಅದರ ಮೇಲೆ ಒಂದೊಂದಾಗಿ ಜೋಡಿಸಿದ ತಿನಿಸು, ನೀರು, ಮಜ್ಜಿಗೆ ತುಂಬಿದ ಪಾತ್ರ ಇದನ್ನೆಲ್ಲ ಮರೆ ಮಾಡುವ ಇನ್ನೊಂದು ಅರಿವೆ.

ಹಳ್ಳಿಗರ ಪಾಡು ಇಂತಾದರೆ, ನಾಗರಿಕರು ಈ ವಿಚಾರದಲ್ಲಿ ತುಂಬಾ ನಾಜೂಕು. ಪ್ರಯಾಣದ ಕುರುಕುರು ತಿಂಡಿಗೆ ಬೆತ್ತದ ಬುಟ್ಟಿ, ನೀರು ಕುಡಿಯಲು ತಿರುಪಿನ ತಂಬಿಗೆ. ಈಗ ಪಟ್ಟಣವಾಸಿಯ ಬದುಕು ನಿತ್ಯ ಪ್ರಯಾಣ. ಮುಂಬಯಿ ಷಹರದಲ್ಲಿ ದಿನಕ್ಕೆ ಲಕ್ಷಗಟ್ಟಲೆ ಡಬ್ಬಾಗಳು ಮನೆಗಳಿಂದ ಸೈಕಲ್ಲೇರಿ, ರೈಲ್ವೇ ಸ್ಟೇಷನ್ನಿನ ಹಾದಿ ಹಿಡಿದು ದುಡಿಯುವ ವ್ಯಕ್ತಿಗಳ ಕೈ ಸೇರುತ್ತವೆ.

ಇಂಥ ಊಟ, ತಿಂಡಿ ಒಯ್ಯಲೆಂದೇ ಕ್ಯಾರಿಯರ್, ಟಿಫಿನ್ ಕ್ಯಾರಿಯರ್‌ಗಳು ಬಂದಿವೆ. ಹಾಟ್‌ಕೇಸುಗಳು ಜನಪ್ರಿಯ ಆಗುತ್ತಿವೆ. ಜೊತೆಗೆ ಮಿನರಲ್ ವಾಟರ್, ಇಲ್ಲವಾದಲ್ಲಿ ಮನೆಯಿಂದಲೇ ಬಾಟಲಿಯಲ್ಲಿ ತುಂಬಿಕೊಂಡು ತಂದ ಕುದಿಸಿ ಆರಿಸಿದ ನೀರು.

ನಿತ್ಯ ಬೆಳಗಾದರೆ ಗೃಹಿಣಿಯ ಉಸಿರು ಹುಯ್ಯಲೂ ಪುರುಸೊತ್ತು ಇರದಷ್ಟು ಕೆಲಸ. ಆಕೆಯೂ ದುಡಿಯುವ ಹೆಣ್ಣಾದರೆ ಮುಗಿದೇ ಹೋಯಿತು. ಒಂದು ಮಗು ಬಚ್ಚಲಿಗಿಳಿದಿದೆ. ಇನ್ನೊಂದು ಮಗು ತಯಾರಾಗಿ ನಿಂತುಬಿಟ್ಟು 'ಪೆನ್ಸಿಲ್ ಸಿಗುತ್ತಿಲ್ಲ' ಎಂದು ಬೊಬ್ಬೆ ಹಾಕುತ್ತಿದೆ. ಪತಿರಾಯರು ಶೇವಿಂಗ್ ಕ್ರೀಂ ಎಲ್ಲಿ ಹೋಯಿತು? ಎಂದು ಚೀರಾಡುತ್ತಿದ್ದಾರೆ. ಇದೆಲ್ಲ ಸರಿದೂಗಿಸಿಕೊಂಡು ಆಕೆ ಶಾಲೆಗೆ, ಆಫೀಸಿಗೆ ಹೊರಡುವ ಎಲ್ಲರಿಗೂ ನಾಷ್ಟಾ ಅಣಿ ಮಾಡಿ ಕೊಡಬೇಕು. ಬಾಗಿಲಲ್ಲಿ ನಿಂತು 'ಟಾಟಾ' ಹೇಳುವ ಮುನ್ನ ಅವರವರ ಕೈಗೊಂದು ಟಿಫನ್ ಬಾಕ್ಸ್ ಇಡಬೇಕು.

ತನ್ನ ಗಂಡ, ಮಕ್ಕಳು ತಿಂದು ಸುಖದಿಂದ ಇರಲಿ ಎಂಬುದೇ ಎಲ್ಲ ಗೃಹಿಣಿಯರ ಆಶಯ. ಆದರೆ.... ಆಕೆ ಪ್ರೀತಿಯಿಂದ ಕಟ್ಟಿಕೊಡುವ ಬುತ್ತಿಯೇ ಇಂದು ಹಲವು ಬಗೆಯ ಕಾಯಿಲೆಗಳಿಗೆ ಕಾರಣವಾಗುತ್ತಿದೆ ಎಂಬುದೇ ಸೋಜಿಗದ ಸಂಗತಿ. ಅದರಲ್ಲೂ ಎಳೆಯ ವಯಸ್ಸಿನ ಮಕ್ಕಳು ಇಂಥ ಕಾಯಿಲೆಗಳಿಗೆ ಹೆಚ್ಚು ಈಡಾಗುತ್ತಿದ್ದಾರೆ. ಹೊಟ್ಟೆನೋವು, ಜ್ವರ, ಸುಸ್ತು, ವಾಕರಿಕೆ ಇಂಥವು ಪದೇ ಪದೇ ಕಾಣಿಸಿಕೊಳ್ಳುವುದು ಸಾಮಾನ್ಯವಾಗುತ್ತಿದೆ.

ಶಾಲೆಗಳಿಗೆ ಹೋದ ಮಕ್ಕಳು ಬಿಡುವಿನ ವೇಳೆಯಲ್ಲಿಅಂಗಳದಲ್ಲಿ ಕುಳಿತು ತಿನ್ನುವುದು ಇದಕ್ಕೊಂದು ಕಾರಣ. ಕಟ್ಟಿಕೊಟ್ಟ ಬುತ್ತಿಯಲ್ಲಿ ರೋಗಾಣುಗಳು ಶೀಘ್ರಗತಿಯಲ್ಲಿ ಬೆಳೆಯುವ ವಾತಾವರಣ ಇರುತ್ತದೆ ಎಂಬುದೂ ಇದಕ್ಕೆ ಇನ್ನೊಂದು ಕಾರಣ. ಟಿಫಿನ್ ಬಾಕ್ಸ್ ತೊಳೆಯುವಾಗ ತೋರಿದ ಸಣ್ಣ ನಿರ್ಲಕ್ಷ್ಯ ಇದಕ್ಕೆ ಕಾರಣವಾಗಬಹುದು. ಅಥವಾ ತಿಂಡಿ, ಅಡುಗೆ ತಯಾರಿಸುವಾಗ ಆಗುವ ಅಜಾಗರೂಕತೆಯಿಂದಲೂ ಇಂಥದ್ದೆಲ್ಲ ಆಗಬಹುದು.



ತೇವ ಮತ್ತು ಶಾಖ ಇರುವೆಡೆಯಲ್ಲಿ ರೋಗಾಣುಗಳು ಶೀಘ್ರಗತಿಯಲ್ಲಿ ಬೆಳೆಯಬಲ್ಲವು. ಟಿಫಿನ್ ಬಾಕ್ಸ್‌ನ ತೇವ, ಅದನ್ನು ಶಾಲೆಯ ಬ್ಯಾಗಿನಲ್ಲಿ ಇಟ್ಟುಕೊಂಡಾಗ ಹುಟ್ಟುವ ಕಾವು ರೋಗಾಣುಗಳ ಅಡೆತಡೆ ಇಲ್ಲದ ಶೀಘ್ರ ಬೆಳವಣಿಗೆಗೆ ಸಹಕಾರಿ. ಇಂಥ ಕ್ಯಾರಿಯರ್‌ಗಳನ್ನು ಅತಿ ಎಚ್ಚರಿಕೆಯಿಂದ ತೊಳೆಯುವುದು ಮೊದಲಾಗಬೇಕು. ಹಾಗೆ ತಿಂಡಿಯ ಬಾಕ್ಸ್ ಇಟ್ಟುಕೊಂಡೊಯ್ಯುವ ಹಾಟ್‌ಕೇಸ್ ಕೂಡ ನಿತ್ಯ ಸ್ವಚ್ಛವಾಗಬೇಕು. ಶಾಲೆಗೆ ಬುತ್ತಿ ಕೊಂಡೊಯ್ಯುವ ಬ್ಯಾಗು, ಒಳ-ಹೊರಗೆ ಸ್ವಚ್ಛಗೊಳಿಸಲು ಸಾಧ್ಯವಾಗುವಂತಿರಬೇಕು.

ಅಡುಗೆ ಅಥವಾ ತಿಂಡಿಯ ತಯಾರಿ ನಡೆಸುವಾಗಲೂ ಎಚ್ಚರ ಅಗತ್ಯ. ಕೈಗಳಲ್ಲಿ ಕೊಳೆ ಇರಬಾರದು. ಗಾಯಗಳಾಗಿದ್ದರೆ ಬ್ಯಾಂಡೇಜು ಉತ್ತಮ. ಅಡುಗೆ ಮಾಡುವ ಸ್ಥಳ ಚೊಕ್ಕಟವಾಗಿರಬೇಕು. ಇಡೀ ಸ್ಥಳವನ್ನು ಕ್ರಿಮಿ ನಾಶಕದಿಂದ ತೊಳೆದಿದ್ದರೆ ಇನ್ನೂ ಒಳ್ಳೆಯದು.

ಹಸಿ ತರಕಾರಿ ಹೆಚ್ಚಿದ, ಮಾಂಸ ತುಂಡುಮಾಡಿದ ಮಣೆಯ ಮೇಲೆಯೇ ಬ್ರೆಡ್, ಚೀಸ್‌ನಂಥ ವಸ್ತುಗಳನ್ನು ಹೆಚ್ಚುವುದು ಅಪಾಯಕಾರಿ. ಬೇರೆ ಬೇರೆಯದೇ ಮಣೆಗಳಿದ್ದರೆ ವಾಸಿ.

ತರಕಾರಿ ಹೆಚ್ಚುವಾಗ ಬಳಸುವ ಮಣೆಗಳನ್ನು ಲ್ಯಾಮಿನೇಟ್ ಮಾಡಿಸುವುದು ಅಂದದ ದೃಷ್ಟಿಯಿಂದ ಸರಿ. ಆದರೆ ಇಂಥ ಶೀಟುಗಳು ರೋಗಾಣುಗಳ ಬೆಳವಣಿಗೆಗೆ ಪೂರಕ ಎಂದು ಕಂಡು ಬಂದಿದೆ. ಆದರೆ ಹಳೆಯ ಮರದ ಹಲಗೆಗಳಲ್ಲಿರುವ ಸೆಲ್ಯುಲೋಸ್ ಬ್ಯಾಕ್ಟೀರಿಯಾ ಮುಂತಾದ ರೋಗಾಣುಗಳನ್ನು ಬೆಳೆಯಲು ಬಿಡುವುದಿಲ್ಲ ಎಂದೂ ಗೊತ್ತಾಗಿದೆ.

ತೇವಾಂಶವಿರುವ ಹಾಲಿನ ಪದಾರ್ಥ, ಅನ್ನ, ಪಲ್ಯದಂಥ ವಸ್ತುಗಳು ಬೇಗ ಹಳಸುತ್ತವೆ. ಕೊಂಡೊಯ್ದ ಆಹಾರ ಹಳಸದೇ ಇದ್ದರೂ, ತೇವಾಂಶದಿಂದಾಗಿ ರೋಗಾಣುಗಳು ಸಾಕಷ್ಟು ಬೆಳೆದಿರುತ್ತವೆ. ಇದು ಗಮನದಲ್ಲಿದ್ದರೆ ಉತ್ತಮ.

ಚಪಾತಿ, ಪೂರಿ, ರೊಟ್ಟಿಯಂಥ ಆಹಾರ ಬೇಗ ಕೆಡುವುದಿಲ್ಲ. ಬ್ರೆಡ್, ಸ್ಯಾಂಡ್‌ವಿಚ್ ಕೂಡ ಇಂಥವೇ. ಚಪಾತಿ, ಪೂರಿ, ರೊಟ್ಟಿಗಳ ಜೊತೆಗೆ ಪುಡಿ ಪಲ್ಯ, ತುಪ್ಪ ಅಥವಾ ಎಣ್ಣೆ ಬೆರೆಸಿದ ಚಟ್ನಿ, ಚಟ್ನಿ ಪುಡಿಗಳು ಉತ್ತಮ.

ಮಾಂಸ, ಮೀನು, ಮೊಟ್ಟೆಯಂಥ ಪದಾರ್ಥಗಳನ್ನು ಪೂರ್ಣವಾಗಿ ಬೇಯಿಸುವುದು ಕಡ್ಡಾಯ. ಅರ್ಧ ಬೆಂದ ಈ ಪದಾರ್ಥಗಳಲ್ಲಿ ರೋಗಾಣುಗಳು ಬಹುಬೇಗ ಬೆಳೆದು ನಿಲ್ಲುತ್ತವೆ.

ಕೆಲವು ಶಾಲೆಗಳು ಬೇಗ ಆರಂಭವಾಗುತ್ತವೆ. ಮಗು ಬೇಗ ಎದ್ದು ತಿಂಡಿ ತಿನ್ನುವುದಿಲ್ಲ. ಅಂಥ ಮಕ್ಕಳಿಗೆ ಹೋದ ಕೂಡಲೇ ಸವಿಯಬಹುದಾದ ಬ್ರೆಡ್, ಬಿಸ್ಕತ್, ಕುರುಕಲು ತಿಂಡಿಯಂಥದ್ದು ಬೇರೆಯೇ ಸಿದ್ಧಗೊಳಿಸಬೇಕು. ಅದನ್ನು ಶಾಲಾ ಬ್ಯಾಗಿನ ಹೊರಗಿನ ಪಾಕೀಟಿನಲ್ಲಿಯೇ ಇಡಬೇಕು. ನಂತರದ ಬಿಡುವಿನ ವೇಳೆಯಲ್ಲಿ ಹಸಿವಾದಾಗ ತಿನ್ನುವಂಥ ತಿಂಡಿಯನ್ನು ಮತ್ತೊಂದು ಬಾಕ್ಸ್‌ನಲ್ಲಿ ಹಾಕಿ ಬ್ಯಾಗಿನ ಒಳಗೆ ಇರಿಸಬೇಕು.

ಮಮತೆಯಿಂದ ಕಟ್ಟಿಕೊಡುವ ತಿಂಡಿ ಕೂಡ ವಿಷಮಯ ಆಗಿಬಿಡುತ್ತದೆ ಎಂದು ಅನಗತ್ಯ ಆತಂಕ ಬೇಡ. ಹೃದಯದ ಮಮತೆಯ ಜೊತೆಗೆ ಒಂದಿಷ್ಟು ಎಚ್ಚರ ಬೆರೆತರೆ ಸಾಕು. ■

ಗ್ರಾಮೀಣ ಬ್ಯಾಂಕ್

ಬಾಂಗ್ಲಾದ ಯಶಸ್ವೀ ಪ್ರಯೋಗ

ಸಾಲ ತಿಂದಾದರೂ ತುಪ್ಪ ಕುಡಿಯಬೇಕೆಂಬುದು ಇಲ್ಲಿನವರ ರೀತಿ. ಇಲ್ಲಿ ಸಾಲಮೇಳ ನಡೆದರೂ ಸಿಕ್ಕಿದವರಿಗೆ ಸೀರುಂಡೆ ಎಂಬಂತಾಯಿತು. ಸಾಲ ತೆಗೆದುಕೊಂಡವರು ಸಾಲಗಾರರಾಗೇ ಉಳಿದರು. ಬ್ಯಾಂಕುಗಳು ಒಂದಷ್ಟು ಹಣ ಚೆಲ್ಲಿ ಸುಮ್ಮನಾದವು. ನೆರೆಯ ಬಾಂಗ್ಲಾದಲ್ಲಿ ಸಾಲದ ಕಲ್ಪನೆಗೇ ಹೊಸ ಮೆರುಗು ನೀಡಿದ ವ್ಯಕ್ತಿಯೊಬ್ಬರು ಇದ್ದಾರೆ. ಅವರೇ ಬಾಂಗ್ಲಾ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷ ಮುಹಮ್ಮದ್ ಯೂನಸ್.ಚಿತ್ತಗಾಂಗ್ ವಿಶ್ವವಿದ್ಯಾಲಯದ ಕ್ಯಾಂಪಸಿನಲ್ಲಿ ಜೇಬಲ್ಲಿದ್ದ ಹಣದಿಂದ ನೀಡಿದ ಸಾಲ, ಬದುಕಿನ ಸ್ವರೂಪವನ್ನೇ ಅಲ್ಲಿ ಬದಲಿಸಿದೆ. ಆ ಮನುಷ್ಯನ ಸ್ಪಷ್ಟತೆ, ಸಾಲ ಏಕೆ ಬೇಕು, ಯಾರಿಗೆ ಬೇಕು ಎಂಬ ಚಿಂತನೆಗಳನ್ನು ಕನ್ನಡದಲ್ಲಿ ಓದುಗರ ಮುಂದಿಟ್ಟಿದ್ದಾರೆ

ಅರುಣ್- ಮೋಹನ

ಸ್ವಾತಂತ್ರ್ಯ ಬಂದು ಐವತ್ತೆರಡು ವರ್ಷಗಳಾಗಿವೆ. ಇಲ್ಲಿನ ಬಡವರು ಇನ್ನಷ್ಟು ಬಡವರಾಗಿದ್ದಾರೆ. ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಿದ್ದಾರೆ. ಅಭಿವೃದ್ಧಿಗೆಂದು ಯೋಜನೆಗಳು ರೂಪಿತವಾಗಿವೆ. ಇದರ ಎಲ್ಲ ಲಾಭ ನಗರಗಳು ಬಾಚಿಕೊಂಡಿವೆ. ದುರಾಸೆ ಹೆಚ್ಚಿದೆ. ಪರಸ್ಪರ ಅವಿಶ್ವಾಸವೇ ತಾರಕ ಮಂತ್ರ ಆಗಿದೆ.

ಪ್ರಗತಿಗೆ ರಫ್ತು ಮತ್ತು ಬೃಹತ್ ಉದ್ದಿಮೆಗಳೇ ಮುಖ್ಯ ಎಂಬ ಕಲ್ಪನೆ ಹಲವು ಅನಾಹುತಗಳಿಗೆ ದಾರಿ ಮಾಡಿದೆ. ಸರ್ಕಾರದ ನೀತಿಯಿಂದಾಗಿ ಬ್ಯಾಂಕುಗಳು ಇಂಥ ಉದ್ದಿಮೆದಾರರ, ಕಾರ್ಖಾನೆಗಳವರ ಪರ. ಇದರಿಂದ ಸಣ್ಣ ಕೈಗಾರಿಕೆಗಳು ಮಲಗುತ್ತಿವೆ. ಕರಕುಶಲ ಕಲೆಗೆ ಬೆಲೆ ಇಲ್ಲವಾಗಿದೆ. ಹಳ್ಳಿಗಳಲ್ಲಿ ಇರುವ ಬಡಜನಕ್ಕೆ ಜೀವನ ನಿರ್ವಹಣೆ ಸಾಧ್ಯವಾಗದೇ, ವಲಸೆ, ಅತಿ ಹೀನಾಯ ವ್ಯವಸ್ಥೆಯಲ್ಲೆಲ್ಲಾ ತೊಳಲಿ ಉಸಿರೆಳೆಯುವ ಪಾಡು.

ನೆರೆಯ ಬಾಂಗ್ಲಾದೇಶ ಸ್ವಾತಂತ್ರ್ಯ ಪಡೆದು ಇಪ್ಪತ್ತೆಂಟು ವರ್ಷಗಳಾಗಿವೆ. ಅಲ್ಲಿ ಹೊಸದೊಂದು ಪವಾಡಕ್ಕೆ ನಾಂದಿಯಾಗಿದೆ. ಬಡವರಲ್ಲಿ ಬಡವರಾದವರು, ಅದರಲ್ಲೂ ಹೆಣ್ಣುಮಕ್ಕಳು ಭರವಸೆಯಿಂದ ತಲೆ ಎತ್ತಿ ನೋಡಲು ಇವತ್ತು ಸಾಧ್ಯವಾಗಿದೆ. ಅದಕ್ಕೆ ಕಾರಣ ಅಲ್ಲಿನ ಗ್ರಾಮೀಣ ಬ್ಯಾಂಕ್.

ಹಲವು ಹತ್ತು ರೂಪಾಯಿಗಳಿಂದ ಹಿಡಿದು, ಹಲವು ನೂರು ರೂಪಾಯಿ ಬಂಡವಾಳ ಒದಗಿಸುವ ಆ ಗ್ರಾಮೀಣ ಬ್ಯಾಂಕ್ ಬಡವರೆಲ್ಲರ ಆಸೆಯ ಕಿರಣ. ಮೂವತ್ತಾರು ಸಾವಿರ ಹಳ್ಳಿಗಳ ಇಪ್ಪತ್ತು ಲಕ್ಷ ಬಡವರು ಸಾಲ ಪಡೆದು, ಜೀವನ ರೂಪಿಸಿಕೊಂಡಿದ್ದಾರೆ. ಶೇಕಡಾ 98ರಷ್ಟು ಸಾಲ ಮರುಪಾವತಿ ಆಗುತ್ತಿದೆ. ವಿಶೇಷವೆಂದರೆ ಸಾಲ ಪಡೆದವರಲ್ಲಿ ಹದಿನೆಂಟು ಲಕ್ಷ ಎಂಬತ್ತು ಸಾವಿರ ಜನ ಮಹಿಳೆಯರು.

ಕೇವಲ ಇದು ಅಂಕಿ ಅಂಶಗಳ ಜಾದೂ ವ್ಯವಹಾರ ಒಂದರ ಯಶಸ್ಸಲ್ಲ. ಸಾಲ ಪಡೆದ ಈ ಬಡಜನ ತಮ್ಮ ಬದುಕು ಹಸನಾಗಿಸಿಕೊಂಡಿದ್ದಾರೆ. ದೇಶದ ಪ್ರಗತಿಯಲ್ಲಿ ಪಾಲುದಾರರಾಗಿದ್ದಾರೆ. ನಿಜವಾದ ಅರ್ಥದಲ್ಲಿ ಆ ದೇಶ ಪ್ರಗತಿಯ ಪಥದಲ್ಲಿದೆ.

ಪುಟ್ಟದೊಂದು ಚಿಲುಮೆ

ಬಾಂಗ್ಲಾ ಅಸ್ತಿತ್ವಕ್ಕೆ ಬಂದು ಐದು ವರ್ಷ ಆಗಿತ್ತು. ಹಳ್ಳಿಗಾಡಿನ ಚಿತ್ತಗಾಂಗ್ ವಿಶ್ವವಿದ್ಯಾಲಯದ ತರುಣ ಅಧ್ಯಾಪಕ ಮುಹಮ್ಮದ್ ಯೂನಸ್‌ಗೆ ಯಾಕೋ ಕಸಿವಿಸಿ. ತಾನು ಬೋಧಿಸುತ್ತಿರುವ ಅರ್ಥಶಾಸ್ತ್ರದ ವಿಚಾರಗಳೆಲ್ಲ ಕೇವಲ ಪುಸ್ತಕದ ಬದನೇಕಾಯಿ ಎಂಬ ಮನಸ್ಸಿನ ಕಿರಿಕಿರಿ. ಆತ ಸಾಮಾನ್ಯರೇನಲ್ಲ. ಅಮೇರಿಕಾದ ವ್ಯಾಂಡರ್‌ಬಿಲ್ಟ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪಿ.ಎಚ್.ಡಿ. ಪದವಿ ಪಡೆದವರು. ಮಿಡಲ್ ಟೆನಿಸೀ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ದುಡಿದು ಬಂದವರು. (ಚಿತ್ತಗಾಂಗ್ ವಿಶ್ವವಿದ್ಯಾಲಯದ) ತರಗತಿಗಳಲ್ಲಿ ಪಾಠ ಮಾಡುವಾಗ ಮನಸ್ಸು ತುಂಬಿ ಬರುತ್ತಿರಲಿಲ್ಲ. ಪಾಶ್ಚಿಮಾತ್ಯ ಅರ್ಥಶಾಸ್ತ್ರ ಚಿಂತನೆಯ ಮೂಲದಲ್ಲಿಯೇ ದೋಷವಿದೆ ಎನ್ನಿಸುತ್ತಿತ್ತು. ಅದಕ್ಕೆ ಕಾರಣ, ಚಿತ್ತಗಾಂಗ್‌ನ ಸುತ್ತಲ ಹಳ್ಳಿಗಳಲ್ಲಿ ತಿರುಗಾಡುವಾಗ ಕಣ್ಣಿಗೆ ರಾಚುತ್ತಿದ್ದ ಬಡತನ, ಜನರ ದಿಕ್ಕೆಟ್ಟ ಬದುಕು. ಹೊತ್ತಿನ ಊಟಕ್ಕೆ ಪರದಾಡಬೇಕಾದ ಸ್ಥಿತಿ.

ದುಡಿದದ್ದೆಲ್ಲ ಉದರ ಪೋಷಣೆಗೇ ಸಾಲುತ್ತಿರಲಿಲ್ಲ. ಮರುದಿನ ಮತ್ತೆ ಕೂಲಿ ಹುಡುಕಬೇಕಾಗುತ್ತಿತ್ತು. ತಾವು ತಯಾರಿಸಿದ ಉತ್ಪನ್ನ ದಲ್ಲಾಳಿ ಕೇಳಿದ ಬೆಲೆಗೇ ಕೊಟ್ಟು ಬರಬೇಕಾಗುತ್ತಿತ್ತು.

ಇವರಿಗೆ ದುಡಿಯುವ ಶಕ್ತಿ ಇದೆ. ಮನಸ್ಸು, ಕುಶಲತೆ ಎಲ್ಲ ಇದೆ. ನಾಲ್ಕು ಕಾಸು ಬಂಡವಾಳ ದೊರೆತರೆ ಇವರ ಬದುಕು ಹಸನಾಗುತ್ತದೆ. ಬಡತನ ಹೇಳ ಹೆಸರಿಲ್ಲದಂತೆ ಆಗುತ್ತದೆ. ಹೀಗೆ ಯೋಚಿಸಿದ ಯೂನಸ್ ರೂಪಿಸಿದ ಯೋಜನೆಯೇ ಬಾಂಗ್ಲಾದ ಗ್ರಾಮೀಣ ಬ್ಯಾಂಕ್. ಪುಟ್ಟ ತೊರೆಯಾಗಿ ಹುಟ್ಟಿದ ಕಲ್ಪನೆ ಇಂದು ಹೆದ್ದೊರೆಯಾಗಿದೆ. ಲಕ್ಷಾಂತರ ಬಾಂಗ್ಲಾದ ಬಡವರ ಬದುಕಿನಲ್ಲಿ ಹಸಿರು ಮೂಡಿಸಿದೆ.

ಜೋಬ್ರಾದಿಂದ ಆರಂಭ

ಚಿತ್ತಗಾಂಗ್ ಹತ್ತಿರದ ಸಣ್ಣ ಹಳ್ಳಿ ಜೋಬ್ರಾ. ಕೆಲವೇ ನೂರು ಮನೆಗಳ ಹಳ್ಳಿಯ ಪ್ರತಿ ಮನೆಯಲ್ಲೂ ಬಡತನದ ತಾಂಡವ. ಕಮ್ಮಾರನ ಕುಲುಮೆ ಮಂಡಕ್ಕಿ ಭಟ್ಟಿ, ಭತ್ತ ಕುಟ್ಟುವ ಏತಗಳು ಬಹಳಷ್ಟು ದಿನ ಕೆಲಸವಿಲ್ಲದೆ ಮೌನ ತಾಳುತ್ತಿದ್ದವು. ಅಂಥ ದಿನಗಳಲ್ಲಿ ಮನೆಯಲ್ಲಿ ಒಲೆ ಹೊತ್ತುತ್ತ ಇರಲಿಲ್ಲ.

ಇಂಥ ಬಾಳುವೆ ನೆಚ್ಚಿಕೊಂಡ ನಲವತ್ತೆರಡು ಜನರ ಪಟ್ಟಿ ಸಿದ್ಧವಾಯಿತು. ಅವರೆಲ್ಲರಿಗೆ ಬೇಕಿದ್ದುದು ಹಿಡಿಯಷ್ಟು ಬಂಡವಾಳ. ಅವರು ಬೇಡಿದ್ದು ಕೇವಲ 27 ಡಾಲರ್‌ಗಳಷ್ಟು ಮೊತ್ತ. ಅದೂ ಕೆಲವೇ ದಿನಗಳಲ್ಲಿ ಹಿಂದಿರುಗಿಸುವ ಷರತ್ತಿನ ಮೇಲೆ.

ಯೂನಸ್ ತಮ್ಮ ಜೇಬಿಂದ ದುಡ್ಡು ತೆಗೆದುಕೊಟ್ಟರು. ಆಗ ಆ ಬಡಜನತೆಯ ಮುಖಗಳಲ್ಲಿ ಕಂಡ ಸಂತಸದ ಮಿನುಗು, ವಿಶ್ವಾಸ ಅಪ್ರತಿಮ. ಕೇವಲ ಕೆಲವೇ ಡಾಲರ್‌ಗಳ ನೆರವಿನಿಂದ ಹೀಗೆ, ಇಷ್ಟೊಂದು ಜನರ ಬದುಕು ಅರಳಬಹುದಾದರೆ, ಇದಕ್ಕೆ ಶಾಶ್ವತ ಯೋಜನೆ ಒಂದು ಆಗಬೇಕು ಎಂದುಕೊಂಡರು.

ಮುಚ್ಚಿದ ಬ್ಯಾಂಕಿನ ಬಾಗಿಲು

ಇಲ್ಲಿನ ಹಾಗೆ ಬಾಂಗ್ಲಾದಲ್ಲಿಯೂ ಬ್ಯಾಂಕುಗಳಿವೆ. ಅಲ್ಲಿನ ಅಧಿಕಾರಿಗಳಿಗೂ ಇಲ್ಲಿನವರ ಹಾಗೆ ಬಡಜನರ ಮೇಲೆ ವಿಶ್ವಾಸ ಇಲ್ಲವೇ ಇಲ್ಲ. ಪ್ರೊ॥ ಯೂನಸ್ ಚಿತ್ತಗಾಂಗ್ ಯೂನಿವರ್ಸಿಟಿಯ ಬ್ಯಾಂಕ್‌ಶಾಖೆಗೆ ಅದಮ್ಯ ವಿಶ್ವಾಸದಿಂದ ಕಾಲಿರಿಸಿದರು. ಹಿಂದೆ ಬಂದಾಗ ಅವರ ಮುಖ ಬಾಡಿತ್ತು, 'ಬಡಜನ ಸಾಲಕ್ಕೆ ಅರ್ಹರಲ್ಲ ಹಣ ಹಿಂತಿರುಗಿಸುವ ವಿಶ್ವಾಸ ನಮಗಿಲ್ಲ' ಬ್ಯಾಂಕ್ ಅಧಿಕಾರಿಗಳು ಮುಖಕ್ಕೆ ಹೊಡೆದಂತೆ ಹೇಳಿದರು.

ಅವರು ತೋರಿಸಿದ ಒಂದೇ ರಿಯಾಯಿತಿ ಅಂದರೆ, ನೀವು ಬೇಕಾದರೆ ಖಾತರಿ ನಿಲ್ಲಿ, ನಾವು ಸಹಾಯ ಮಾಡುತ್ತೇವೆ. ಜೊತೆಗೆ ಒಂದು ಬುದ್ಧಿವಾದದ ಉಚಿತ ಮಾತು ಕೂಡ ಕೊಟ್ಟು ಕಳುಹಿಸಿದರು.

'ನೀವೆಲ್ಲೋ ಒಂದು ಹಳ್ಳೀಲಿ ಕೆಲಸ ಮಾಡಿದೀರ. ಎರಡನೇ ಹಳ್ಳಿಗೆ ಹೋಗಿ ಸಾಲ ಕೊಡಿ. ಅದು ಹಿಂದಕ್ಕೆ ಬಂದರೆ ಆಗ ಹೇಳಿ'

ಜೋಬ್ರಾದಿಂದ ಆರಂಭವಾದ ಯೂನಸ್‌ರ ಸಾಲದ ಕಾರ್ಯ ಎರಡನೇ ಹಳ್ಳಿಗೆ ವಿಸ್ತರಿಸಿತು. ಮೂರು, ನಾಲ್ಕು, ಐದು... ಹೀಗೆ ನೂರು .... ಐನೂರು ಹಳ್ಳಿಗೆ ವಿಸ್ತರಿಸಿತು. ಬಡ ಜನ ಪಡೆದುಕೊಂಡ ಸಾಲ ಬಡ್ಡಿ ಸಮೇತ ಹಿಂತಿರುಗಿಸಿದರು.

ಉಹುಂ. ಬ್ಯಾಂಕ್ ಮಾತ್ರ ನೇರವಾಗಿ ಸಾಲ ಕೊಡಲು ಒಪ್ಪಲೇ ಇಲ್ಲ. ಆಗ ಹುಟ್ಟಿಕೊಂಡಿತು ಗ್ರಾಮೀಣ ಬ್ಯಾಂಕ್.

ರಾತ್ರಿಯಲ್ಲಿ ಸೂರ್ಯನ ಬೆಳಕು ಸಂಪರ್ಕಕ್ಕೆ ಮೊಬೈಲ್ ಫೋನು

ಗ್ರಾಮೀಣ ಬ್ಯಾಂಕ್ ಬಾಂಗ್ಲಾದ ಅವಿಭಾಜ್ಯ ಅಂಗ. ದೇಶದ ಅರ್ಧದಷ್ಟು ಗ್ರಾಮಗಳಲ್ಲಿ ಬ್ಯಾಂಕ್ ಕಾರ್ಯ ನಿರ್ವಹಿಸುತ್ತಿದೆ.

ಈ ಹೊತ್ತು ಬಾಂಗ್ಲಾದ ಹಳ್ಳಿಗಳಲ್ಲಿ ಹೊಸ ಬೆಳಕಿದೆ. ಹಳ್ಳಿಯ ಜನ ಸೌರ ವಿದ್ಯುತ್ ಉತ್ಪಾದಿಸಿ ತಾವೇ ಹಂಚುತ್ತಾ ಇದ್ದಾರೆ. ಇದರಲ್ಲಿ ತೊಡಗಿರುವವರು ಹೆಚ್ಚಾಗಿ ಮಹಿಳೆಯರು.

ಸದ್ಯಕ್ಕೆ ಮೊಬೈಲ್ ಫೋನು ಇಲ್ಲಿನ ಹಳ್ಳಿಗಳಲ್ಲಿ ಪ್ರಮುಖ ಸಂಪರ್ಕ ಸಾಧನ. ಹಳ್ಳಿಗೊಂದು ಮೊಬೈಲ್ ಫೋನು. ಅದರ ನಿರ್ವಹಣೆ ನೋಡಿಕೊಳ್ಳಲು ಒಬ್ಬ ಮಹಿಳೆ ಇರುತ್ತಾಳೆ. ಇಲ್ಲೆಲ್ಲ ಇಂಟರ್‌ನೆಟ್ ಮನೆ ಬಾಗಿಲಿಗೆ ಬಂದಿದೆ. ಹುಡುಗರು, ಹುಡುಗಿಯರು ಮನೆ ಬಾಗಿಲಲ್ಲಿಯೇ ಇಂಟರ್‌ನೆಟ್ ಮೂಲಕ ಕೆಲಸ ಹುಡುಕಿಕೊಳ್ಳಬಹುದು. ಸಂದರ್ಶನಕ್ಕೆ ಉತ್ತರಿಸಬಹುದು. ಪರೀಕ್ಷೆಗಳನ್ನು ಬರೆಯಬಹುದು. ಬ್ಯಾಂಕ್ ಒಂದು ಇಡೀ ದೇಶದ ಬದುಕನ್ನು ಹೇಗೆ ಬದಲಿಸಬಹುದು ಎಂಬುದಕ್ಕೆ ಇದೊಂದು ಜೀವಂತ ಉದಾಹರಣೆ

ದಾಪುಗಾಲು

ಬಾಂಗ್ಲಾದಲ್ಲಿ ಅರವತ್ತೆಂಟು ಸಾವಿರ ಹಳ್ಳಿಗಳಿವೆ. ಮೂವತ್ತೇಳು ಸಾವಿರ ಹಳ್ಳಿಗಳಲ್ಲಿ ಈಗ ಗ್ರಾಮೀಣ ಬ್ಯಾಂಕ್ ಕೆಲಸ ಮಾಡುತ್ತಿದೆ. ಇಪ್ಪತ್ತೊಂದು ಲಕ್ಷ ಜನ ಸಾಲ ಪಡೆದಿದ್ದಾರೆ. ಇವರಲ್ಲಿ ಶೇಕಡಾ 94 ರಷ್ಟು ಜನ ಬಡ ಮಹಿಳೆಯರು.

ಬ್ಯಾಂಕ್ ಸ್ಥಾಪನೆಯಾದ ಹದಿನೆಂಟು ವರ್ಷಗಳಲ್ಲಿ ನೂರು ಕೋಟಿ ಅಮೆರಿಕನ್ ಡಾಲರ್‌ಗಳಷ್ಟು ಮೊತ್ತ ಸಾಲವಾಗಿ ನೀಡಿತು. ನಾಲ್ಕು ವರ್ಷದ ಹಿಂದೆ ಗ್ರಾಮೀಣ ಬ್ಯಾಂಕ್ ಒಟ್ಟಾರೆ ವಿತರಿಸಿದ ಸಾಲದ ಮೊತ್ತ ಎರಡು ನೂರು ಕೋಟಿ ಅಮೆರಿಕನ್ ಡಾಲರ್ ಗಡಿ ದಾಟಿತ್ತು.

ಅಭಿವೃದ್ಧಿಯ ಕಲ್ಪನೆ?

ಒಂದು ದೇಶದ ಅಭಿವೃದ್ಧಿಯನ್ನು ತಲಾ ಆದಾಯದ ಮೇಲೆ ಹೋಲಿಸಿ ನೋಡಲಾಗುತ್ತದೆ. ಈಚೆಗೆ ತಲಾ ಕೊಳ್ಳುವ ಶಕ್ತಿಯೇ ಇದಕ್ಕೆ ಅಳತೆ ಗೋಲು. ಇದರ ಪರಿಣಾಮವೆಂದರೆ, ಬೇಕಾದ್ದು ಬೇಡವಾದ್ದು ಎಲ್ಲ ಪಡೆಯಬಲ್ಲ ಹಲವೇ ಶ್ರೀಮಂತರ ದೇಶ ಅಭಿವೃದ್ಧಿ ಹೊಂದಿದ ದೇಶ ಎನಿಸಿಕೊಳ್ಳುತ್ತದೆ.

ಅಲ್ಲಿನ ಒಟ್ಟು ಸಾಮಾನ್ಯ ಮನುಷ್ಯ, ಬಡವ, ಹೇಗಿದ್ದಾನೆ ಎಂದು ಯಾರೂ ಚಿಂತಿಸಲು ಹೋಗುವುದಿಲ್ಲ. ದೇಶದ ಪ್ರಗತಿ ಆಗಬೇಕಾದರೆ ದೊಡ್ಡ ದೊಡ್ಡ ಕೈಗಾರಿಕೆ ಬರಬೇಕು. ಉದ್ದಿಮೆಗಳು ನಡೆಯಬೇಕು. ಅದಕ್ಕೆ ಸರ್ಕಾರ ನೆರವಾಗಬೇಕು. ಇದರಿಂದ ಬರುವ ಆದಾಯದಲ್ಲಿ ಒಂದು ಪಾಲು ಬಡವರ ಉದ್ಧಾರಕ್ಕೆ 'ದಾನ' ಎಂಬಂತೆ ಕೊಟ್ಟರೆ ಸಾಕು ಎಂಬುದು ಸಾಮಾನ್ಯ ವಾದ.

ಬಡವರು ಎಷ್ಟೇ ಉದ್ಧಾರವಾದರೂ, ಅದರಿಂದ ದೇಶದ ಪ್ರಗತಿ ಹೆಚ್ಚುವುದಿಲ್ಲ ಎಂಬ ಮೊಂಡು ವಾದವೂ ಇದೆ.

ಇದಕ್ಕೆ ಪ್ರತಿಯಾಗಿ ಮುಹಮ್ಮದ್ ಯೂನಸ್ ಹೇಳುತ್ತಾರೆ : ಪ್ರಗತಿಯ ವ್ಯಾಖ್ಯೆ ಬೇರೆಯೇ ಇದೆ. ದೇಶದ ಅರ್ಧದಷ್ಟಿರುವ ಬಡವರ ಬದುಕು ಗುಣಾತ್ಮಕವಾಗಿ ಬದಲಾಗುವುದೇ ನಿಜವಾದ ಪ್ರಗತಿ. ಇದಕ್ಕೂ ಕಠಿಣವಾಗಿ ಹೇಳಬೇಕೆಂದರೆ, ಕಾಲುಭಾಗದಷ್ಟಿರುವ ಅತಿ ಬಡವರ ಬದುಕು ಸುಧಾರಿಸಬೇಕು. ಆನಂತರವೇ ಒಂದು ದೇಶದ ಪ್ರಗತಿಗೆ ನಿಜವಾದ ಮಹತ್ವ ಬರುತ್ತದೆ.

ಹೀಗೆ ಅವರ ವಿಚಾರ ಭಿನ್ನ. ವಿಶಿಷ್ಟ. ಅಂಥ ಹಲವು ಅವರ ವಿಚಾರಗಳನ್ನು ಮುಂದೆ ದಾಖಲಿಸಲಾಗಿದೆ.

ಬಡವರ ಉದ್ಧಾರ

ಪ್ರತಿ ಸರ್ಕಾರ ಬಡವರ ಉದ್ಧಾರಕ್ಕೆ ಒಂದಲ್ಲ ಒಂದು ಯೋಜನೆ ಹಮ್ಮಿಕೊಳ್ಳುತ್ತದೆ. ಶ್ರೀಮಂತ ರಾಷ್ಟ್ರಗಳಲ್ಲಿ ಬಡವರನ್ನು ಸುಖದಿಂದ ಇರಿಸಲು ಮಾಸಾಶನ ಕೊಡುವ ವ್ಯವಸ್ಥೆ ಇದೆ. ಶ್ರೀಮಂತನೊಬ್ಬ ನಿರ್ಗತಿಕನಿಗೆ ಧಿಮಾಕಿಂದ ದಾನ ಮಾಡಿ ಕೈತೊಳೆದುಕೊಂಡಂತೆ ಇದು. ಉಳಿದೆಡೆ ಹಲವು ಯೋಜನೆ ತಯಾರಾಗುತ್ತವೆ. ಮೊದಲ ಹಂತದಲ್ಲಿ ಅಧಿಕಾರಿಗಳ ದಂಡು ತಯಾರಾಗುತ್ತದೆ. ಯೋಜನೆಯ ವೆಚ್ಚದ ಬಹುಪಾಲು ಇವರ ವೇತನ, ಕಟ್ಟಡ, ಕಡತಕ್ಕೆ ಮೀಸಲು. ಉಳಿದ ಹಣದಲ್ಲಿ ಹಲವರಿಗೆ ಟ್ರೈನಿಂಗ್ ಕೊಡುತ್ತಾರೆ. ಅಲ್ಲಿಗೆ ಅವರ ಕೆಲಸ ಮುಗಿಯಿತು. ಇದರಿಂದ ಬಡವರ ಉದ್ಧಾರವಂತೂ ಸಾಧ್ಯವಿಲ್ಲ. ಅಧಿಕಾರಿಗಳು ಉದ್ಧಾರವಾಗಿ ಹೋಗುತ್ತಾರೆ ಅಷ್ಟೆ.

ಉದ್ಯೋಗ

ಅರ್ಥಶಾಸ್ತ್ರದಲ್ಲಿ ಉದ್ಯೋಗಕ್ಕೆ ಬಂಡವಾಳದಷ್ಟೇ ಮಹತ್ವ, ಹಲವರ ಬಂಡವಾಳಕ್ಕೆ ಜೀವನ ವಿಡೀ ಜೀತಕ್ಕೆ ತೊಡಗುವ ದಂಡು ತಯಾರಿಸುವ ಕಾರ್ಯ ನಿರಂತರ ಸಾಗಿದೆ. ನಮ್ಮ ಶಾಲಾ, ಕಾಲೇಜುಗಳು ಇಂಥ ಉದ್ಯೋಗಾರ್ಥಿಗಳನ್ನು ತಯಾರಿಸುವ ಕಾರ್ಖಾನೆಗಳು. ಇನ್ನೊಬ್ಬನ, ಒಂದು ವ್ಯವಸ್ಥೆಯ ಭಾಗವಾಗಲು ಮನುಷ್ಯ ತನ್ನ ಅಮೂಲ್ಯ ಬಾಲ್ಯ, ಯೌವನದ ದಿನ ವ್ಯಯಿಸುತ್ತಾನೆ. ತಾನು ಗಳಿಸಿದ ಒಂದು ಉದ್ಯೋಗಕ್ಕೆ ಜೀವನವಿಡೀ ಜೋತು ಬೀಳುತ್ತಾನೆ. ಅವನ ಭವಿಷ್ಯ, ಬದುಕು ಅವನದಲ್ಲ.

ಯಾವತ್ತೂ ಮನುಷ್ಯ ತನ್ನ ಬದುಕು ತಾನೇ ರೂಪಿಸುವಂತಾಗಬೇಕು. ಇದು ಒಂದು ಉದ್ಯೋಗ ಒದಗಿಸುವುದರಿಂದ ಸಾಧ್ಯವಿಲ್ಲ. ಅವನಲ್ಲಿಯೇ ಅಂತರ್ಗತವಾಗಿರುವ ಕುಶಲತೆ ಬಳಸಿ ಅನ್ನ ಗಳಿಸುವಂತಾಗಲು, ಅವನೇ ಆರಿಸಿಕೊಳ್ಳುವ ದುಡಿಮೆಗೆ ಬಂಡವಾಳ ಪೂರೈಸಿದರೆ ಸಾಕು. ಇದು ಸಾಧ್ಯವಾದಾಗ ಬಡತನ ತಾನಾಗಿ ನಿವಾರಣೆ ಆಗುತ್ತದೆ.

ಇದು ಸತ್ಯ ಎಂಬುದನ್ನು ಬಾಂಗ್ಲಾದ ಗ್ರಾಮೀಣ ಬ್ಯಾಂಕ್ ಪ್ರಯೋಗ ಈಗಾಗಲೇ ಸಾಧಿಸಿ ತೋರಿಸಿದೆ. ಕೆಲವೆಡೆ ಬರೀ ಇಪ್ಪತ್ತು ಡಾಲರ್‌ನಷ್ಟು ಸಣ್ಣ ಮೊತ್ತದ ನೆರವು ಸಾಕಾಗಿದೆ. ಹಲವರು ಕುಲುಮೆ ಹಾಕಿಕೊಂಡಿದ್ದಾರೆ. ಮಂಡಕ್ಕಿ (ಪುರಿ) ಮಾಡುವ ಭಟ್ಟಿ ನಡೆಸುವವರಿದ್ದಾರೆ. ಮಣ್ಣಿನ ಮಡಕೆ, ಕುಡಿಕೆ ಮಾಡಿ ಬದುಕು ಹಸನು ಮಾಡಿಕೊಂಡವರೂ ಇದ್ದಾರೆ.

ಇಂಥವರಿಗೆ ವಿಶೇಷ ತರಬೇತಿಯ ಅಗತ್ಯವೂ ಇಲ್ಲ. ಅವರು ತೊಡಗಿದ್ದು

ನಿತ್ಯ ಮನೆಯಲ್ಲಿ ಪಡೆದ ಕೆಲಸದ ಅನುಭವದಿಂದ. ಇನ್ನು ಕೆಲವರು ಕೂಲಿಗಳಾಗಿ ದುಡಿದು ಇಂಥ ಕಸುಬುಗಳಲ್ಲಿ ತೊಡಗುವ ಅರ್ಹತೆ ಪಡೆದಿರುತ್ತಾರೆ. ಅವರಿಗೆ ಬೇಕಿದ್ದು ಹಣದ ನೆರವು ಅಷ್ಟೆ.

ಕುಶಲತೆಯೇ ಮುಖ್ಯವೇ?

ಬಡಜನ ಉದ್ಯೋಗದಲ್ಲಿ ತೊಡಗಲು ವಿಶೇಷ ತರಬೇತಿ ಬೇಕೆಂಬ ಸಾಂಪ್ರದಾಯಿಕ ವಿಚಾರಕ್ಕೆ ತಿಲಾಂಜಲಿ ಹಾಡಿದ್ದು ಬಾಂಗ್ಲಾದ ಗ್ರಾಮೀಣ ಬ್ಯಾಂಕ್. ಯಾವ ತರಬೇತಿಗೂ ಒಳಪಡಿಸದೇ, ಬ್ಯಾಂಕು ಜನಕ್ಕೆ ಹಣ ನೀಡಿತು.

ಪ್ರತಿ ಮನುಷ್ಯನಲ್ಲೂ ಕುಶಲತೆಯೊಂದು ಅಂತರ್ಗತವಾಗಿರುತ್ತದೆ. ಇದನ್ನೇ ಉಳಿವಿನ ಕುಶಲತೆ ಎನ್ನೋಣ. ಬಡವರು ಇನ್ನೂ ಬದುಕಿಯೇ ಇದ್ದಾರೆ. ಇದೊಂದೇ ಸಾಕಲ್ಲವೇ, ಅವರಲ್ಲಿ ಉಳಿವಿನ ಕುಶಲತೆ ಇದೆಯೆಂದು ಸಾಬೀತು ಮಾಡಲು, ಅವರಿಗೆ ನಾವ್ಯಾರೂ ಉಳಿದು, ಬೆಳೆಯಲು ತರಬೇತಿ ನೀಡಬೇಕಿಲ್ಲ. ಕುಶಲ ತರಬೇತಿಗೆಂದು ಸುಮ್ಮನೆ ಹಣ, ಸಮಯ ಹಾಳು ಮಾಡುವುದು ಬಿಟ್ಟು, ಅವರವರಲ್ಲಿ ಅಂತರ್ಗತವಾಗಿರುವ ಕುಶಲತೆ ಎಲ್ಲ ಬಳಸಿಕೊಂಡು ಬದುಕಿನ ಮಾರ್ಗ ರೂಪಿಸಿಕೊಳ್ಳಲು ಬ್ಯಾಂಕ್ ಅನುವಾಯಿತು. ಇದನ್ನು ಅರ್ಥ ಮಾಡಿಕೊಳ್ಳದೇ, ತರಬೇತಿ ಮಣ್ಣು ಮಸಿ ಎಂದು ಕೋಟ್ಯಂತರ ವಿದೇಶೀ ನೆರವಿನ ಹಣ ವ್ಯಯಿಸುವುದು ನಾವು ನೋಡುತ್ತಾ ಬಂದಿದ್ದೇವೆ. ಇದರಿಂದ ಬಡವರೇನೂ ಶ್ರೀಮಂತರಾದದ್ದು ಕಾಣುವುದಿಲ್ಲ.

ಬಡತನದ ಕಾರಣ

ಸುತ್ತಲ ಜಗತ್ತು ನೋಡಿ. ಬಡವರು ಬಡವರಾಗಿಯೇ ಇರಲು ಕಾರಣ ಅವರಿಗೆ ವಿಶೇಷ ತರಬೇತಿ ಇಲ್ಲ ಎಂಬುದಲ್ಲ. ಈ ಜನ ಯಾರದೋ ಬಂಡವಾಳ ಹೂಡಿಕೆಗೆ ದುಡಿಯುವ ಜೀತದಾಳುಗಳಾಗುತ್ತಾರೆ. ಇವರ ಶ್ರಮಕ್ಕೆ ತಕ್ಕ ಕೂಲಿಯೂ ಸಿಗುವುದಿಲ್ಲ. ಲಾಭದ ಎಲ್ಲಾ ಪಾಲೂ ಬಂಡವಾಳ ಹೂಡಿದವನ ಜೇಬು ಸೇರುತ್ತದೆ. ಕೆಲಸ ಮಾಡುವವರು ಇವರು. ಲಾಭ ಪಡೆಯುವವನು ಬಂಡವಾಳದಾರ.

ಬಡವ ಬಂಡವಾಳ ಹೂಡಬೇಕೆಂದರೆ ಅಪ್ಪ, ಅಮ್ಮ ಮಾಡಿಟ್ಟ ಆಸ್ತಿ ಇರುವುದಿಲ್ಲ. ಹಣ ಇದ್ದವರು ಇವರಿಗೆ ಬಂಡವಾಳ ಕೊಡುವುದಿಲ್ಲ. ಸಾಲ ಯಾರೂ ಕೊಡುವುದಿಲ್ಲ. ಬ್ಯಾಂಕುಗಳು ಬಡಜನ ಸಾಲಕ್ಕೆ, ವಿಶ್ವಾಸಕ್ಕೆ ಅರ್ಹರಲ್ಲ ಎನ್ನುತ್ತವೆ. ಯಾರೂ ಈ ಬ್ಯಾಂಕುಗಳು ಜನಾರ್ಹವೇ? ಎಂದು ಪ್ರಶ್ನಿಸಿಲ್ಲ. ಅದೇ ಸೋಜಿಗ.

ಇದೆಂಥ ತಯಾರಿ?

ತರುಣ, ತರುಣಿಯರು, ಬದುಕಿನ ಅಮೂಲ್ಯ ದಿನಗಳಲ್ಲಿ ಕಲಿಕೆಗೆ

ಇಲ್ಲೊಂದು ಆಶಾಕಿರಣ 'ಬಾಲರಶ್ಮಿ'

■



■

ರಾಜಾಸ್ಥಾನದ ಐದು ಜಿಲ್ಲೆಗಳ ಮುನ್ನೂರು ಹಳ್ಳಿಗಳಲ್ಲಿ ಕಡು ಬಡವರ, ಅದರಲ್ಲೂ, ಮಹಿಳೆಯರ ಬದುಕು ಬದಲಿಸಿದ್ದು 'ಬಾಲರಶ್ಮಿ'.

ಇದನ್ನು ಆರಂಭಿಸಿದ್ದು ಒಬ್ಬ ಮಹಿಳೆ. ಆಕೆಯ ಹೆಸರು ಅಲೀಸ್ ಗರ್ಗ್. 1997ರಲ್ಲಿ ಈಕೆಯನ್ನು 'ವೀಕ್' ಇಂಗ್ಲಿಷ್ ವಾರಪತ್ರಿಕೆ ವರ್ಷದ ವ್ಯಕ್ತಿ ಎಂದು ಸನ್ಮಾನಿಸಿತು.

ಈಗ ಆಕೆಗೆ 59 ವರ್ಷ. 'ಬಾಲರಶ್ಮಿ' ಯ ಕಾರ್ಯವ್ಯಾಪ್ತಿಯ ಹಳ್ಳಿಗಳಲ್ಲಿ ದಿನವೂ ದುಡಿಯುತ್ತಾರೆ. ಕೆಂಪಂಚಿನ ಬಿಳಿ ಸೀರೆಯ ಅಲೀಸ್ ಜನಕ್ಕೆ ಚಿರಪರಿಚಿತ. ಆಕೆ ಹಳ್ಳಿಯೊಂದರಲ್ಲಿ ಹೊರಟರೆ 'ನಮಸ್ತೆ ದೀದಿ' ಎಂಬ ಸ್ವಾಗತದ ದನಿ ಹೆಜ್ಜೆ ಹೆಜ್ಜೆಗೂ ಕೇಳುತ್ತದೆ.

ಹಣೆಯ ಕೆಂಪು ಕುಂಕುಮದ ಬೊಟ್ಟು, ತುರುಬು ಕಟ್ಟಿದ ಕೂದಲು. ಸ್ವಲ್ಪ ದೊಡ್ಡದೇ ಎನಿಸುವ ಹೆಗಲ ಚೀಲದ ತುಂಬಾ ನೂರೆಂಟು ವಸ್ತುಗಳು.

ನಿತ್ಯಯಾತ್ರೆಯಲ್ಲಿ ಎದುರಾಗುವ ಜನರ ಕುಶಲ ವಿಚಾರಿಸುವ ಹಾಗೆ, ಅವರ ಸಮಸ್ಯೆಗೂ ಕಿವಿಗೊಡುತ್ತಾರೆ ಅಲೀಸ್. ಅವರಲ್ಲಿ ಪ್ರತಿ ಸಮಸ್ಯೆಗೂ ಒಂದು ಪರಿಹಾರ ಇದ್ದೇ ಇರುತ್ತದೆ.

ಸಮಾಜಸೇವೆ ಎಂದರೆ ಸಂಸಾರ ಬಿಡಬೇಕು ಎಂದು ನಂಬಿಕೆ. ಅಲೀಸ್ ಅದಕ್ಕೊಂದು ಅಪವಾದ. ಗಂಡ ಕೃಷ್ಣ ಬಿಹಾರಿ ಗರ್ಗ್ ಹಾಗೂ ಎರಡು ಹೆಣ್ಣು ಮಕ್ಕಳ ಜೊತೆಗೇ ಹತ್ತಕ್ಕೂ ಹೆಚ್ಚು ಜನರಿದ್ದ ಬಂಧು ಬಳಗದ ನಿಗಾ ನೋಡಿಕೊಂಡೇ ಆಕೆ ಸಮಾಜದ ಸೇವೆ ಮಾಡಿದ್ದಾರೆ. ಅಲೀಸ್ ತಂದೆ ಪಾರ್ಸಿ. ಹೆಸರು ಖಾನ್‌ಬಹಾದುರ್ ರುಸ್ತುಂಜೀ. ತಾಯಿ ಕ್ಯಾಥೋಲಿಕ್. ತಂದೆಗೆ ಅಪಾರ ಆಸ್ತಿ ಇತ್ತು. ಎರಡು ಗಣಿಗಳ ಒಡೆಯ. ಸಿನಿಮಾ ಮಂದಿರವಿತ್ತು. ಪೆಟ್ರೋಲ್ ಬಂಕ್, ಮಿಲಿಟರಿ ಸರಬರಾಜು ಕಂಟ್ರಾಕ್ಟ್ ಹೊಂದಿದ್ದ ತಂದೆ, ಈಕೆ ನಾಲ್ಕು ವರ್ಷದವರಿದ್ದಾಗ ನಿಧನರಾದರು. ಹಿರಿಯರಾದ ಅಣ್ಣಂದಿರಿಬ್ಬರೂ ಆಸ್ತಿ ಲಪಟಾಯಿಸಿದರು.

ಅಂಥ ಸಮಯದಲ್ಲಿ ತನ್ನಲ್ಲಿದ್ದ ಒಡವೆಗಳಿಂದ, ಇಬ್ಬರು ಹೆಣ್ಣುಮಕ್ಕಳನ್ನು ಸಾಕಿದವರು ಆಕೆಯ ತಾಯಿ. ಶ್ರೀಮಂತ ತಂದೆಯ ಮಗಳಾದರೂ, ಬಾಲ್ಯದಲ್ಲಿ ಬಡತನದ ಸವಿಯುಂಡ ಅಲೀಸ್ ಬಡವರ ಬದುಕು ಹಸನಾಗಿಸಲು ಪಣತೊಟ್ಟಿದ್ದು ಆಶ್ಚರ್ಯವಿಲ್ಲ.

ರಾಜಾಸ್ಥಾನದ ರಾಜಧಾನಿ ಜೈಪುರದ ಪ್ರತಿಷ್ಠಿತ ಸೆಂಟ್‌ಪಾಲ್ಸ್ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ಅಲೀಸ್, ಬಡಮಕ್ಕಳಿಗೆ ನೆರವಾಗಲೆಂದೇ ಸರ್ಕಾರದ ಅನುದಾನಿತ ಶಾಲೆ ಸೇರಿದರು. ಮುಂದೊಂದು ದಿನ ಅಲ್ಲಿನ ಬಡ ಮಕ್ಕಳ ದುಸ್ಥಿತಿ ಕಂಡು, ತಾವೇ ಇಂಥ ಬಡಮಕ್ಕಳಿಗೆ ನೆರವಾಗಬೇಕೆಂದು ಅಲ್ಲಿಯೂ ರಾಜೀನಾಮೆ ನೀಡಿದರು.

1972ರ ಮಕ್ಕಳ ದಿನಾಚರಣೆಯಂದು 'ಬಾಲರಶ್ಮಿ' ಆರಂಭವಾಯಿತು. ಊರಿನ ಕೊಳೆಗೇರಿ ಪುರಾನಾ ಬಸ್ತಿಯ ಜಾಲಗಾರರ ಎರಡು ಗಂಡು, ಎರಡು ಹೆಣ್ಣು ಮಕ್ಕಳನ್ನೇ ಕರೆದು ತಂದು ಮನೆಯಲ್ಲಿ ಇಟ್ಟುಕೊಂಡು ಶಿಕ್ಷಣ, ಜೀವನದ ರೀತಿ ಕಲಿಸತೊಡಗಿದರು. ಅಲ್ಲಿಂದ ಆರಂಭವಾಯಿತು ಬಾಲರಶ್ಮಿ.

ತೊಡುಗುತ್ತಾರೆ. ಮುಂದೊಂದು ದಿನ ಸೂಕ್ತ ಮಾಲೀಕ, ಅವನು ಕೊಡುವ ಕೆಲಸಕ್ಕೆ ಕಾಯ್ದು ನಿಲ್ಲುತ್ತಾರೆ. ಇದನ್ನು ಕಲ್ಪಿಸಿಕೊಂಡರೇ ಅಸಹ್ಯ ಎನಿಸುತ್ತದೆ. ಹಿಂದೆಲ್ಲ ಹೆಣ್ಣುಮಕ್ಕಳನ್ನು ಬೆಳೆಸುತ್ತಿದ್ದ ರೀತಿ ನೆನಪಾಗುತ್ತದೆ. ಆಕೆಯನ್ನು ಮೆಚ್ಚಲೆಂದು ಶೃಂಗಾರ. ಅತ್ತೆಮನೆಯಲ್ಲಿ ಹೊಂದಿಕೊಂಡು ಬಾಳಲೆಂದು ಕಸ, ಮುಸುರೆಯಿಂದ ಹಿಡಿದು ಅಡಿಗೆ ಮಾಡುವವರೆಗೆ ಎಲ್ಲ ತಯಾರಿ ತವರು ಮನೆಯಲ್ಲಿ ಆಗುತ್ತಿತ್ತು.

ಒಂದು ಬಿಕನಾಸಿ ಉದ್ಯೋಗಕ್ಕಾಗಿ ಜೀವನವೆಲ್ಲ ಹೀಗೆ ವ್ಯರ್ಥ ಮಾಡಿಕೊಳ್ಳುವುದೇ? ಮೊದಲು ಯಾವತ್ತೂ ಹೀಗೆ ಇರಲಿಲ್ಲ. ನಮ್ಮ ಹಿಂದಿನವರು ಈ ಭೂಮಿಯ ಮೇಲೆ ಹುಟ್ಟಿದಾಗ ಉದ್ಯೋಗ ಹುಡುಕಿಕೊಂಡು ಅಲೆದರೇ? ಹಾಗೆ ಮಾಡಿದ್ದರೆ ಇಂದು ನಾವೇ ಇರುತ್ತಿರಲಿಲ್ಲ.

ಅವರು ತಮ್ಮ ಬದುಕು ತಾವೇ ರೂಪಿಸಿಕೊಂಡರು. ಶಿಕಾರಿ ಮಾಡಿದರು. ಕಾಡಲ್ಲಿ ಸಿಕ್ಕಿದ್ದು ಸಂಗ್ರಹಿಸಿದರು. ಆನಂತರ ಬೇಸಾಯ ಆರಂಭಿಸಿದರು. ಅವರೆಲ್ಲ ಸ್ವಯಂ ಉದ್ಯೋಗಿಗಳು. ವಿಚಿತ್ರ ಎನಿಸಬಹುದು. ಅರ್ಥಶಾಸ್ತ್ರದ ಯಾವುದೇ ಪುಸ್ತಕ ತೆಗೆದುನೋಡಿ. ಎಲ್ಲಿಯೂ ಸ್ವಯಂ ಉದ್ಯೋಗ ಎಂಬ ಮಾತಿಲ್ಲ. ಅಲ್ಲಿ ಇಲ್ಲದ ಕಾರಣ, ದೇಶದ ಭವಿಷ್ಯ ರೂಪಿಸುವ ನಾಯಕರೂ 'ಸ್ವಯಂ ಉದ್ಯೋಗ' ಎಂಬುದನ್ನು ಕೈಬಿಟ್ಟು ಕುಳಿತರು. ಸ್ವಯಂ ಉದ್ಯೋಗಕ್ಕೆ ನೆರವಾಗುವ ವ್ಯವಸ್ಥೆ, ಸಂಸ್ಥೆಗಳಿಂದಲೇ ನಿರುದ್ಯೋಗ ಮತ್ತು ಬಡತನ ನಿವಾರಣೆ ಆಗಲು ಸಾಧ್ಯ.

ನಮ್ಮ ಕಲ್ಪನೆಯಂತೆಯೇ ನಾವು

ಇವತ್ತಿನ ಆರ್ಥಿಕ ವ್ಯವಸ್ಥೆಗೆ ಆರ್ಥಿಕ ತಜ್ಞರು ಕಾರಣ. ನಾನಾ ಸಿದ್ಧಾಂತ ತರ್ಕಗಳಿಂದ ಇಂದಿನ ಈ ಜಗತ್ತಿನ ಸ್ಥಿತಿ ಮೂಡಿ ನಿಂತಿದೆ. ಇವರ್‍ಯಾರೂ ತಾವು ಸಮಾಜ ವಿಜ್ಞಾನಿಗಳು ಎಂದು ಭಾವಿಸಲೇ ಇಲ್ಲ. ಹಾಗೇನಾದರೂ ಭಾವಿಸಿದ್ದರೆ ಖಂಡಿತ ಅಲ್ಲಿ ಬಡತನದ ಪ್ರಸ್ತಾಪ, ಅದರ ನಿವಾರಣೆಯ ಕ್ರಮ ಇರುತ್ತಿತ್ತು.

ಇವರೆಲ್ಲರ ಕಾಳಜಿ ಇದ್ದುದು ರಾಷ್ಟ್ರಗಳ ಸಂಪತ್ತಿನ ಕಡೆಗೆ. ದೇಶದ ಶ್ರೀಮಂತಿಕೆ ವಿಚಾರ ಮಾಡುತ್ತ, ಮಾಡುತ್ತಾ ಬಡತನದ ವಿಚಾರವನ್ನೇ ಮರೆತರು. ಅಲ್ಪಸ್ವಲ್ಪ ಪ್ರಸ್ತಾಪ ಇದ್ದರೆ ಅದು ಅಭಿವೃದ್ಧಿ ಅರ್ಥಶಾಸ್ತ್ರದಲ್ಲಿ ಕಂಡು ಬರುತ್ತದೆ. ಇವರ ಮುಖ್ಯ ಕಾಳಜಿ ರಾಷ್ಟ್ರದ ಸಂಪತ್ತು. ಹೊಸದಾಗಿ ಕೆಲವು ಸ್ವತಂತ್ರ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದ ಕಾರಣ, ಮುಂದೊಂದು ದಿನ, ಇಂಥ ರಾಷ್ಟ್ರಗಳ ಅಭಿವೃದ್ಧಿ ಕೂಡ ಮುಖ್ಯ ಎಂದು ಭಾವಿಸಿ ನಡೆಸಿದ ಚಿಂತನೆಯ ಪರಿಣಾಮ ಇದು.

ಹೀಗೆ ಹುಟ್ಟಿದ ಮೈಕ್ರೋ ಅರ್ಥಶಾಸ್ತ್ರ ತಪ್ಪು ನಿಲುವುಗಳಿಂದ ತನ್ನ ವಾದಕ್ಕೆ ತೊಡಗಿತು. ಇವರ ಪಾಲಿಗೆ ವ್ಯಕ್ತಿಯೊಬ್ಬ ಗ್ರಾಹಕ, ಕಾರ್ಮಿಕ ಮಾತ್ರ. ಇನ್ನು ಉತ್ಪಾದನೆ ವಿಷಯಕ್ಕೆ ಬಂದರೆ, ಅಲ್ಲೊಂದು ತಂತ್ರಜ್ಞಾನ ಮುಖ್ಯ. ಉದ್ಯಮಿಯೊಬ್ಬ ಸೂಕ್ತ ಪ್ರಮಾಣದಲ್ಲಿ ಬಂಡವಾಳ, ದುಡಿಮೆ ತೊಡಗಿಸಿದರೆ ಉತ್ಕೃಷ್ಟ ಉತ್ಪಾದನೆ ಸಾಧ್ಯ ಎಂಬುದೇ ಅವರ ಸಿದ್ಧಾಂತ. ಇಲ್ಲಿಯೂ ವ್ಯಕ್ತಿಯೊಬ್ಬ ಹೆಚ್ಚಿನ ಮಾನ್ಯತೆ ಪಡೆಯುವುದು ಕಾರ್ಮಿಕನಾಗಿ ಮಾತ್ರ. ಇಂಥ ಪರಿಕಲ್ಪನೆಗಳಿಂದಾಗಿ 'ಸ್ವಯಂ ಉದ್ಯೋಗ' ಎಂಬುದೇ ಇಲ್ಲವಾಯಿತು. ಇವರ ಪಾಲಿಗೆ ಉದ್ದಿಮೆದಾರನೊಬ್ಬ ಹುಟ್ಟುವಾಗಲೇ ವರದಾನ ಪಡೆದು ಬಂದವನು. ಉಳಿದವರೆಲ್ಲ ಅವನ ಚಾಕರಿಗಾಗಿ ಕಾಯ್ದು ನಿಂತವರು.

ಇಂಥ ಪರಿಕಲ್ಪನೆಯಿಂದಾಗಿ ಪ್ರತಿ ಮನುಷ್ಯನ ಸೃಜನಶೀಲತೆ, ಅವಿಷ್ಕಾರ ಬುದ್ಧಿಗೆ ಬೆಲೆಯೇ ಇಲ್ಲವಾಯಿತು. ಕೂಲಿ ದೊರೆಯುವ ಉದ್ಯೋಗವೇ ನಿಜವಾದ ಉದ್ಯೋಗ ಎಂದಾಗಿಬಿಟ್ಟಿತು. ಸ್ವಯಂ ಉದ್ಯೋಗ ಎಂದರೆ, ಅಷ್ಟೇನೂ ಉತ್ತಮವಲ್ಲದ ಆರ್ಥಿಕ ವ್ಯವಸ್ಥೆಯ ಫಲ ಎಂದು ಬಿಂಬಿಸ

ತ್ಯಾಗದ ಬದುಕು



ಮಕ್ಕಳನ್ನು ಮನೆಗೆ ತಂದಿಟ್ಟುಕೊಂಡ ಮೇಲೆ ಗಂಡನ ಸಂಬಳ ನೆಚ್ಚಿ ಬದುಕು ಮಾಡಬೇಕು. ಕೃಷ್ಣ ಬಿಹಾರಿ ಗರ್ಗ್ ಫಿಸಿಕ್ಸ್ ಶಿಕ್ಷಕ. ಮನೆಯಲ್ಲಿ ಎರಡು ಹೆಣ್ಣು ಮಕ್ಕಳು. ತಾಯಿ, ಜೊತೆಗೆ ಹತ್ತು ಜನ ಬಂಧುಗಳು.

ಮಕ್ಕಳ ಶಿಕ್ಷಣದ ಜೊತೆಗೇ ಗೃಹಕೃತ್ಯದ ಪ್ರತಿ ಕೆಲಸ ಅಲೀಸ್ ನೋಡಿಕೊಂಡರು. ತೊಳೆಯುವುದು, ಬಳಿಯುವುದು, ಅಡುಗೆ ಮಾಡುವುದು ಪ್ರತಿಯೊಂದೂ ಅವರು ಮಾಡಿದರು.

ಕಟ್ಟಾ ಪಾರ್ಸಿ ಸಂಪ್ರದಾಯ ಕುಟುಂಬದ ಅಲೀಸ್ ಗರ್ಗ್ ಅವರನ್ನು ಮೆಚ್ಚಿ ಮದುವೆ ಆದಾಗಲೇ, ಇಬ್ಬರ ಕಡೆಯ ಬಂಧುಗಳೂ ದೂರವಾಗಿದ್ದರು. ಯಾರನ್ನೂ ನೆಚ್ಚುವಂತಿಲ್ಲ. ಕಷ್ಟ ಸುಖ ಹೇಳಿಕೊಳ್ಳುವಂತಿಲ್ಲ.

ಮನೆಯಲ್ಲಿ ಎರಡೇ ಹೊತ್ತು ಊಟ. ರೊಟ್ಟಿಯ ಜೊತೆ ನೆಂಜಿಕೊಳ್ಳಲು ಒಂದೇ ಬಗೆಯ ಪಲ್ಯ. ಆಗಲೇ ಆಲೀಸ್ ನೂರು ರೂಪಾಯಿ ಮೀರಿದ ಯಾವುದೇ ಗೃಹ ಬಳಕೆಯ ವಸ್ತು ಖರೀದಿಸುವುದಿಲ್ಲ ಎಂದು ನಿರ್ಧರಿಸಿದರು.

ಇವತ್ತಿಗೂ ಅವರ ಬಳಿ ಸೀರೆಯ ಬೆಲೆ ನೂರು ರೂಪಾಯಿ ಒಳಗೆ.

ಹಂಗಿನ ಬದುಕು

ಶಾಲೆಯಿಂದ ಹೊರಬಿದ್ದ ಅಸ್ಪೃಶ್ಯರ ಮಕ್ಕಳನ್ನು ಅಲೀಸ್‌ಗೆ ತಗಲಿ ಹಾಕಿ ಕೈತೊಳೆದುಕೊಳ್ಳಲು ರಾಜಾಸ್ಥಾನದ ಸಮಾಜಕಲ್ಯಾಣ ಇಲಾಖೆ ನಿರ್ಬಂಧ ಒಂದನ್ನು ವಿಧಿಸಿತು. ಬಾಲರಶ್ಮಿಯಲ್ಲಿ ಕನಿಷ್ಠ ಇಪ್ಪತ್ತು ಮಕ್ಕಳನ್ನು ಸೇರಿಸಿಕೊಳ್ಳಬೇಕು. ಸರ್ಕಾರ ಆಗಮಾತ್ರ ಪ್ರತಿ ತಿಂಗಳಿಗೆ ವಿದ್ಯಾರ್ಥಿಗೆ 36 ರೂಪಾಯಿಯಂತೆ ಕೊಡುವುದು.

ಇವರಿಗೆ ಬೇರೆ ದಾರಿ ಇಲ್ಲ. ಜೊತೆಗೆ ಸ್ವಲ್ಪ ಹಣ, ಇನ್ನಷ್ಟು ಮಕ್ಕಳು ಬರುವುದಾದರೆ ಏಕೆ ಬೇಡ ಎಂಬ ಉತ್ಸಾಹ. ದರಿದ್ರ ಸರ್ಕಾರ ಮನಸ್ಸಿಗೆ ಬಂದಾಗ ಹಣ ಕೊಡುತ್ತಿತ್ತು.

ಇವರು ಮಕ್ಕಳ ಹೊಟ್ಟೆ ತುಂಬಿಸಲು ಭಿಕ್ಷೆ ಬೇಡಬೇಕಾಗುತ್ತಿತ್ತು. ಸರ್ಕಾರದ ಭರವಸೆಯ ಪತ್ರ ತೋರಿಸಿ ಅಂಗಡಿಯಲ್ಲಿ ಗೋಧಿ ಹಿಟ್ಟು ಸಾಲ ತರುತ್ತಿದ್ದರು. ಹಿಟ್ಟು ಬೀಸಿಕೊಡುವ ಚಕ್ಕೀವಾಲ ಒಂದು ದಿನ ಪಟ್ಟು ಹಿಡಿದು ಕುಳಿತು ಬಿಟ್ಟ. ಹತ್ತು ದಿನದ ವಾಯಿದೆ ಮೀರಿದ ಮೇಲೂ ಸರ್ಕಾರದ ದುಡ್ಡು ಬರಲಿಲ್ಲ.

ಚಕ್ಕೀವಾಲಾನ ದುಡ್ಡು ತೀರಿಸಲು ಅಲೀಸ್ ಗಂಡನ ಸ್ಕೂಟರು, ಮನೆಯ ಕೆಲವು ಒಡವೆ ಮಾರಬೇಕಾಯಿತು.

ಲಾಯಿತು.

ಸ್ವಯಂ ಉದ್ಯೋಗ ಎಂಬ ಕಲ್ಪನೆಯನ್ನೇ ಅಳಿಸಿ ಹಾಕಿದ ಅರ್ಥಶಾಸ್ತ್ರ, ಆ ಲೆಕ್ಕದಲ್ಲಿ ಮಾನವ ಶಾಸ್ತ್ರ ಅಲ್ಲವೇ ಅಲ್ಲ. ಇಲ್ಲಿ, ಕುಟುಂಬ ವ್ಯವಸ್ಥೆಗೆ, ಗಂಡ, ಹೆಂಡತಿ, ಮಕ್ಕಳು, ಸಂಬಂಧ ಯಾವುದಕ್ಕೂ ಬೆಲೆ ಇಲ್ಲ, ಅಸ್ತಿತ್ವವೂ ಇಲ್ಲ. ತಮ್ಮ ಮೊಂಡುವಾದದ ಸಮರ್ಥನೆಗೆ, ಸ್ವಯಂ ಉದ್ಯೋಗ ಎಂಬುದು ಅನೌಪಚಾರಿಕ ಕ್ಷೇತ್ರ. ಆದಷ್ಟು ಬೇಗ ಅದನ್ನು ನಿವಾರಿಸುವುದು ಒಳ್ಳೆಯದು ಎಂದೂ ಇವರು ಹೇಳುತ್ತಾರೆ.

ಇವರ ಕೆಲಸ; ಇರುವ ವಸ್ತುಗಳನ್ನು ಇಡಲು ಸರಿಯಾದ ಪೆಟ್ಟಿಗೆ ಮಾಡಿದಂತೆ ಅಲ್ಲ. ತಾವು ಮಾಡಿದ ಪೆಟ್ಟಿಗೆಯೊಳಗೆ ಎಲ್ಲ ಕೂರುವಂತಾಗಬೇಕು. ಅಲ್ಲಿ ಹಿಡಿಸದೇ ಇದ್ದರೆ, ಆ ವಸ್ತುವೇ ಸರಿಯಲ್ಲ ಎಂಬ ವಾದ ಇವರದ್ದು.

ಸಾಲವೆಂಬ ಸವಾಲು

ಅರ್ಥಶಾಸ್ತ್ರ ಮಾನವಿಕ ವಿಷಯ. ಇಲ್ಲಿ ಎಲ್ಲ ಮಾನವರ ಅಗತ್ಯ, ಅವರವರ ಮಿತಿಗಳು ಮುಂತಾದವು ಇರಬೇಕಿತ್ತು. ಸಾಲದ ವಿಚಾರವನ್ನೇ ನೋಡಿ. 'ಸಾಲ' ಎಂದೊಡನೆ ಗುಮಾನಿ. ಅದರ ಸಾಮಾಜಿಕ ಚಲನೆಗೆ ವೇಗ ನೀಡುವ ಸಣ್ಣ ಸಾಧನ ಎಂಬ ಬಡಿವಾರ. ಇಷ್ಟೇ ಅಲ್ಲ ಇಂಥಿಂಥ ಮನೆ, ಇಂಥ ಗುಂಪುಗಳಿಗೆ ಸಾಲ ಎಂಬ ನಿಯಮ ಬೇರೆ. ಇಂಥ ಕಟ್ಟುಪಾಡುಗಳಿಂದಾಗಿ ಸಮಾಜದ ಒಂದು ವರ್ಗವೇ ಸಾಲದಿಂದ ವಂಚಿತವಾಗುವ ವಿಷಮತೆ ಇವರ ಸಿದ್ಧಾಂತದ ಕೊಡುಗೆ. ಇದು ನಿಜಕ್ಕೂ ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎಂದಂತೆ ಅಲ್ಲವೇ!

ಇದರ ಪರಿಣಾಮ ಎಷ್ಟೊಂದು ಭೀಕರ. ಬಡವರು ವಿಶ್ವಾಸಕ್ಕೆ ಅರ್ಹರಲ್ಲ. ಅವರಿಗೆ ಸಾಲ ಕೊಟ್ಟರೆ ಹಣ ವಾಪಸು ಬರುವುದಿಲ್ಲ ಎಂಬ ಅಲಿಖಿತ ಘೋಷಣೆಯೇ ಇದ್ದು ಬಿಟ್ಟಿದೆ. ಅದು ಹೇಗೆ ವಿವರಿಸಿ ಎಂದರೆ ಯಾರಲ್ಲೂ ಉತ್ತರ ಇಲ್ಲ. ಇದರಿಂದಾಗಿ ಬಡಜನತೆ ಎಂದರೆ ಬ್ಯಾಂಕುಗಳ ಪಾಲಿಗೆ ಅಸ್ಪೃಶ್ಯರು. ಇವರನ್ನು ಅನುಮಾನದಿಂದ, ಗುಮಾನಿಯಿಂದ ನೋಡುವ, ಬೆರಳು ತೋರಿಸುವ ಬ್ಯಾಂಕುಗಳನ್ನು ಯಾರೂ ಪ್ರಶ್ನಿಸುವುದೇ ಇಲ್ಲ. ಇದೇ ಬಹುದೊಡ್ಡ ದುರಂತ.

ಅರ್ಥಶಾಸ್ತ್ರಜ್ಞರಿಗೆ ನಿಜಕ್ಕೂ ಮನುಷ್ಯರ ಕಳಕಳಿ ಇದ್ದಿದ್ದರೆ ಸಾಲದ ಪರಿಕಲ್ಪನೆಯೇ ಬೇರೆಯಾಗುತ್ತಿತ್ತು. ಇವತ್ತು ನಾವು ಕಾಣುತ್ತಿರುವ ಬಡತನ ಎಂಬುದು ಖಂಡಿತ ಇರುತ್ತಿರಲಿಲ್ಲ.

ಮಾರುಕಟ್ಟೆಯ ದುರವಸ್ಥೆ

ಅದೇಕೋ ತಿಳಿಯದು. ಬಂಡವಾಳಶಾಹಿ ವ್ಯವಸ್ಥೆ ಎಂದರೆ ದುರಾಸೆಯ ಅಡಿಗಲ್ಲ ಮೇಲೆ ನಿಂತಿದ್ದು ಎಂದು ನಾವು ಭಾವಿಸಿದೆವು. ದುರಾಸೆಯ ಜನರೇ ಈ ವ್ಯವಸ್ಥೆಯ ಮುಖ್ಯಪಾಲುದಾರರಾದರು. ಇಂಥ ಆಸೆ ಇಲ್ಲದವರು ಸುಮ್ಮನೆ ಹಿಂದುಳಿದರು. ಕೆಲವರು ಇಡೀ ವ್ಯವಸ್ಥೆಯನ್ನು ಖಂಡಿಸುತ್ತಾ ಹೋದರು. ಇನ್ನೂ ಕೆಲವರು ಹತಾಶೆಯಿಂದ ಎಂಬಂತೆ ಸುಮ್ಮನೆ ಕೈಕಟ್ಟಿ ಕುಳಿತರು.

ಖಾಸಗಿ ಕ್ಷೇತ್ರ ಬೈಯುವುದು ಸುಲಭ. ಇದರ ಕೆಡುಕಿಗೆ ನಾವೂ ಕಾರಣ ಎಂಬುದು ಮರೆಯಬಾರದು. ಇಲ್ಲಿ ನಾವೆಲ್ಲ ತೊಡಗಿಕೊಂಡು ಉತ್ತಮ ವ್ಯವಸ್ಥೆ ತರಲು ಸಾಧ್ಯವಿದೆ. ಇದು ಸರ್ಕಾರಿ ಕ್ಷೇತ್ರದ ಹಾಗಲ್ಲ. ಎಲ್ಲರೂ ಪಾಲ್ಗೊಳ್ಳಲು ಸಾಧ್ಯವಿದೆ.

ಗ್ರಾಮೀಣ ಬ್ಯಾಂಕ್ ಇದನ್ನು ಸಾಧಿಸಿ ತೋರಿಸಿದೆ. ಲಾಭದ ದುರಾಸೆಯಿಂದಲೇ ಯಾಕೊಂದು ಉದ್ದಿಮೆ ಆರಂಭಿಸಬೇಕು? ಸಾಮಾಜಿಕ ಗುರಿ, ಒಳ್ಳೆಯದು ಸಾಧಿಸುವ ಗುರಿಯಿಂದಲೇ ಒಂದು ಉದ್ದಿಮೆ ಹುಟ್ಟುಹಾಕಬಹುದು.


ಸಾಮಾಜಿಕ ಪ್ರಜ್ಞೆಯಿಂದ ಸ್ಫೂರ್ತಿಗೊಂಡ ಮನುಷ್ಯ, ಲಾಭದ ಆಸೆಯಿಂದ ಹೊರಟವನಿಗಿಂತ ಹೆಚ್ಚು ಉದ್ವೇಗದಿಂದ ಕೆಲಸ ಮಾಡಬಲ್ಲ. ಇಂಥ ಜನ ಮಾರುಕಟ್ಟೆ ವ್ಯವಸ್ಥೆಯಲ್ಲಿ ಹೆಚ್ಚು ಹೆಚ್ಚಾಗಿ ಪಾಲುಗೊಂಡರೆ, ಮನುಷ್ಯ ಜೀವಿಗಳ ಬದುಕು ಎತ್ತರದ ಇನ್ನೊಂದು ಆಯಾಮಕ್ಕೆ, ಶಾಂತಿ, ಸಮಾನತೆ ಮತ್ತು ಸೃಜನಶೀಲತೆಗೆ ಎಡೆಮಾಡಿಕೊಡುತ್ತದೆ.

ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು ಸತ್ತಿವೆ. ಇಲ್ಲವೇ ಸಾವಿನ ಹಾದಿಯಲ್ಲಿ ಇವೆ. ಅಧಿಕಾರೀ ವ್ಯವಸ್ಥೆ, ಸಹಾಯಧನ, ಸರ್ಕಾರದ ಆಶ್ರಯದಿಂದಾಗಿ ಕುಸಿದ ಉದ್ದಿಮೆಗಳು ಭ್ರಷ್ಟಾಚಾರದ ರಂಗಶಾಲೆಯಾದವು. ಉತ್ತಮ ಉದ್ದೇಶದಿಂದ ಆರಂಭಿಸಿದ ಸಾರ್ವಜನಿಕ ಉದ್ದಿಮೆಗಳ ಹಾದಿ ವಿನಾಶದ ಅಂಚು ತಲುಪಿಸಿತು.

ಇದಕ್ಕೆ ಪರ್ಯಾಯವಾಗಿ ದುರಾಸೆಯಿಂದ ಪ್ರೇರಿತ ಖಾಸಗಿ ಉದ್ದಿಮೆಗಳು ತಲೆ ಎತ್ತುತ್ತಾ ಇವೆ. ಇದೇನು ಒಳ್ಳೆಯ ಬೆಳವಣಿಗೆ ಅಲ್ಲ. ಮುಕ್ತ ಮಾರುಕಟ್ಟೆಯ ತುರುಸಿನ ಸ್ಪರ್ಧೆ ಕೂಡ ಇವರ ದುರಾಸೆಗೆ ಕಡಿವಾಣ ಹಾಕುವುದು ಸಾಧ್ಯವಿಲ್ಲ. ಸಣ್ಣ ಅವಕಾಶ ದೊರೆತರೆ ಸಾಕು ದುರಾಸೆ, ಭ್ರಷ್ಟಾಚಾರಗಳು ಇಂಥ ವ್ಯವಸ್ಥೆಯಲ್ಲಿ ಗಟ್ಟಿಯಾಗಿ ಕೈಜೋಡಿಸಿ ನಿಂತುಬಿಡುತ್ತವೆ ಎಂಬುದು ನಾವ್ಯಾರೂ ಮರೆಯಬಾರದು.

ಇಂಥ ಸ್ಥಿತಿಯಲ್ಲಿ ಸಾಮಾಜಿಕ ಉದ್ದೇಶದಿಂದ ಪ್ರೇರಿತ ಉದ್ದಿಮೆಗಳು

ಗಾಂಧೀಜಿ ಸ್ಫೂರ್ತಿ



'ಬಡವರಿಗೆ ಸಲ್ಲಬೇಕಾದ್ದು ಕೊಟ್ಟುಬಿಡಿ. ಇಲ್ಲವಾದಲ್ಲಿ ಒಂದಲ್ಲ ಒಂದು ದಿನ ಅವರು ತಮಗೆ ಸಲ್ಲಬೇಕಾದ್ದು ತಾವೇ ಪಡೆಯುತ್ತಾರೆ' ಎಂದಿದ್ದರು ಗಾಂಧೀಜಿ.

ಪುರಾನಾ ಬಸ್ತಿಯ ಕೊಳೆಗೇರಿ ಜನಕ್ಕೆ ಕುಡಿಯುವ ನೀರು ಪಡೆಯಲು ದೊಡ್ಡ ಹೋರಾಟವನ್ನೇ ಅಲೀಸ್ ಆರಂಭಿಸಬೇಕಾಯಿತು. ನಗರದ ಛೀಫ್ ಎಂಜಿನಿಯರ್ ಕಚೇರಿಗೆ ಖಾಲಿ ಮಡಕೆ ಹೊತ್ತು ಮೆರವಣಿಗೆ. ಅಲ್ಲಿ ಮಡಕೆಗಳನ್ನು ಒಡೆದು ಗದ್ದಲ ಹಾಕಲಾಯಿತು. ಛೀಫ್ ಎಂಜಿನಿಯರ್‌ದು ಒಂದೇ ವಾದ ಅವರು ಅಕ್ರಮವಾಗಿ ಮನೆ ಕಟ್ಟಿಕೊಂಡಿದ್ದಾರೆ. ಅಲ್ಲಿಗೆ ನೀರು ಒದಗಿಸಲು ಸಾಧ್ಯವಿಲ್ಲ'.

ಅಲೀಸ್‌ವಾದದ ಎದುರು ಎಂಜಿನಿಯರ್ ಸೋಲಬೇಕಾಯಿತು. ಕೊಳೆಗೇರಿಗೆ ಎರಡು ನಳ ಬಂದವು. ಇದರಿಂದ ಸಮಸ್ಯೆ ಉಲ್ಬಣಗೊಂಡಿತು. ಬೆಳಿಗ್ಗೆ, ಸಂಜೆ, ಒಂದೂವರೆ ತಾಸು ಬರುವ ನಳದ ನೀರಿಗಾಗಿ ದೊಡ್ಡ ಜಗಳವೇ ನಡೆಯುತ್ತಿತ್ತು.

ಇದಕ್ಕೆ ಪರಿಹಾರ?

ಕೊಳೆಗೇರಿಯಲ್ಲಿ ಇದ್ದ ನುರಿತ ಕೆಲಸಗಾರರು ರಾತ್ರಿ ರಾತ್ರಿಯೇ ಮೇನ್ ಪೈಪ್‌ನಿಂದ ಸಂಪರ್ಕ ಪಡೆದರು. ಮೇನ್ ಪೈಪಿನಿಂದ ರಬ್ಬರ್ ಕೊಳವೆಯ ಮೂಲಕ ನೀರು ಹರಿಸಲಾಯಿತು. ಪ್ರತಿ ಮನೆಗೂ ನಳ ಬಂತು. ಯಾರಾದರೂ ಕೇಳಿದರೆ 'ಎಂಜಿನಿಯರ್ ಕೃಪೆ' ಎಂದು ನಕ್ಕು ಹೇಳಲಾಗುತ್ತಿತ್ತು. ಆದರೆ ಕೊಳಗೇರಿಯ ಹೆಂಗಸರು ರಾತ್ರಿ, ಹಗಲು, ಕದ್ದು ಹಾಕಿದ ರಬ್ಬರ್ ಕೊಳವೆಯ ಸಂಪರ್ಕ ಕಾಯುತ್ತಿದ್ದರು.

ಸೂಕ್ತ ಪರ್ಯಾಯ ಆಗಬಲ್ಲವು ಎಂಬ ವಿಚಾರ ಗಂಭೀರವಾಗಿ ಪರಿಗಣಿಸಬೇಕು.

ಬೇರೆಯದೇ ದಾರಿ

ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಲಾಭದ ದುರಾಸೆ, ವ್ಯಕ್ತಿತ್ವಕ್ಕೆ ಬೆಲೆಯೇ ಇಲ್ಲದ ದುಡಿಮೆಗಳನ್ನು ಬಿಟ್ಟರೆ ಅದೊಂದು ಉತ್ತಮ ವ್ಯವಸ್ಥೆಯಲ್ಲವೇ! ಲಾಭದ ದುರಾಸೆಗೆ ಬದಲು ಸಮಾಜದ ಕಳಕಳಿ, ದುಡಿಮೆಯಲ್ಲಿ ತೊಡಗಿದ ವ್ಯಕ್ತಿಗೊಂದು ತೃಪ್ತಿ ಎಲ್ಲ ಸಾಧ್ಯವಿದೆ. ಹಾಗಂತ ಲಾಭವಿಲ್ಲದೆ ಯಾರೂ ಕೆಲಸ ಮಾಡಬೇಕು ಎಂದೇನೂ ಅಲ್ಲ.

ಜನರ ಆರೋಗ್ಯದ ನಿಗಾ ನೋಡಿಕೊಳ್ಳುವ ಸಂಸ್ಥೆ, ವೃದ್ಧಾಶ್ರಮ, ಬಡವರಿಗೆಂದೇ ಕ್ಯಾಂಟೀನ್ ತೆರೆಯುವುದು ಇಂಥ ಉದ್ದಿಮೆಗಳಾಗಬಲ್ಲವು. ಉದ್ದಿಮೆಯಲ್ಲಿ ತೊಡಗಿದ ವ್ಯಕ್ತಿ ಅಥವಾ ವ್ಯಕ್ತಿಗಳ ಬದುಕಿನ ನಿರ್ವಹಣೆಗೆ ಸಾಕಾಗುವಷ್ಟು ಹಣ ಇದರಿಂದ ಗಳಿಸಬಹುದಾದರೆ ಯಾಕಾಗಬಾರದು? ಉದ್ಯೋಗಕ್ಕೆ ಉದ್ಯೋಗವೂ ಆಯಿತು. ಒಳ್ಳೆಯ ಕೆಲಸ ಮಾಡಿದ ತೃಪ್ತಿಯೂ ದೊರಕೀತು.

ಇದರಿಂದ ಸಮಾಜಕ್ಕೂ ಒಳಿತು. ದೇಶಕ್ಕೂ ಒಳಿತು. ಬಂಡವಾಳಶಾಹಿ ವ್ಯವಸ್ಥೆ ಎಂದರೆ ಇನ್ನೊಬ್ಬರ ರಕ್ತಕ್ಕಾಗಿ ಹಪಾಪಿಸುವವರ ನಾಟ್ಯರಂಗ ಎಂಬ ಕಳಂಕವೂ ತೊಡೆದೀತು.

ಬಡತನ ನಿವಾರಣೆ ಸಾಧ್ಯವೇ?

ಬಡತನ ಎಂಬುದು ಮುಂದಿನ ಶತಮಾನಕ್ಕಾದರೂ ಈ ಭುವಿಯಿಂದ ಇಲ್ಲವಾದೀತೇ? ಮುಂದಿನ ಶತಮಾನ ಎಂದರೆ, ಮುಂದಿನ ಇಪ್ಪತ್ನಾಲ್ಕುಗಂಟೆ ಎಂಬಂತೆ ಮಾತಾಡುತ್ತೇವೆ. ಈಗ ಜಗತ್ತು ಭಯಂಕರ ವೇಗದಲ್ಲಿ ಬದಲಾಗುತ್ತಿದೆ. ಇನ್ನು ಇಪ್ಪತ್ತು ವರ್ಷಗಳಲ್ಲಿ ಏನಾದೀತು ಎಂದು ಇವತ್ತು ಹೇಳುವುದು ಸಾಧ್ಯವಿಲ್ಲ.

ನಾವೀಗ ಚಾಲಕರೇ ಇಲ್ಲದ ಅಸಾಧ್ಯ ವೇಗದಿಂದ ಮುನ್ನುಗ್ಗುತ್ತಿರುವ ಅಂತರಿಕ್ಷ ವಾಹನ ಒಂದರ ಪ್ರಯಾಣಿಕರಂತೆ. ಒಂದು ಕ್ಷಣ ಯೋಚಿಸಿ. ನಾವೇ ಈ ವಾಹನದ ಚಾಲಕರು ಯಾಕಾಗಬಾರದು! ನಾವು ಇವತ್ತು ನಿರ್ಧರಿಸಿದರೆ, ಅದರಂತೆ ಭೂಗ್ರಹ ಎಂಬ ಈ ಅಂತರಿಕ್ಷ ವಾಹನ ಚಲಿಸುತ್ತದೆ. ಬಡತನ ಇಲ್ಲಿ ಇರಬಾರದೆಂಬ ನಿಶ್ಚಯ ನಮ್ಮದಾದರೆ, ನಮ್ಮ ನಿಲುವುಗಳು ತನ್ನಿಂದ ತಾನೇ



'ಬಾಲರಶ್ಮಿ' ಆರಂಭವಾಗಿದ್ದು ಅಸ್ಪೃಶ್ಯರು, ಬಡಮಕ್ಕಳ ಶಿಕ್ಷಣಕ್ಕೆಂದು. ಮುಂದೆ ಇಂಥ ಕುಟುಂಬಗಳ ಕಲ್ಯಾಣಕ್ಕೆ ಸಣ್ಣ ಪುಟ್ಟ ಸಾಲದಿಂದ ನೆರವಾಗಲಾರಂಭಿಸಿತು ಬಾಲರಶ್ಮಿ. ಆಗ ಕಣ್ಣು ಕೆಂಪಾಗಿಸಿಕೊಂಡವರು ಬಡ್ಡಿ ವ್ಯಾಪಾರಿಗಳು.

ಬೇಡಿ ಗ್ರಾಮದಿಂದ ಅಲೀಸ್ ಮತ್ತು ಆಕೆಯ ಐದು ಜನ ಆಪ್ತರು ಮನೆಯೊಂದರಿಂದ ಹೊರಬರುವಾಗ ಬಡ್ಡಿ ವ್ಯಾಪಾರಿಗಳ ಬಾಡಿಗೆ

ಬಡ್ಡಿ ವ್ಯಾಪಾರಿಗಳ ದಾಳಿ

ಬಂಟರಾದ ಒಂಬತ್ತು ಜನ ದಾಳಿ ನಡೆಸಿದರು. ಹೆಂಗಸರ ಚೀರಾಟ ಕೇಳಿ ಹಳ್ಳಿಯ ಗಂಡಸರು ಓಡಿ ಬಂದು ಅವರನ್ನು ರಕ್ಷಿಸಿದರು.

ರಾಜಾಸ್ಥಾನದ ಹಳ್ಳಿಗಳಲ್ಲಿ ಬಡ್ಡಿ ವ್ಯಾಪಾರಿಗಳದೇ ಕಾರುಬಾರು. ಬಡವರಿಗೆ ಅವರು ನೀಡುವ ಸಾಲಕ್ಕೆ ಅವರು ಹೇಳಿದ್ದೇ ಬಡ್ಡಿ. ಬಾಲರಶ್ಮಿ ಇಂಥ ಜನಕ್ಕೆ ಸಾಲ ನೀಡಲಾರಂಭಿಸಿದ್ದೇ, ವ್ಯಾಪಾರಿಗಳು ಕಂಗೆಟ್ಟರು.

ಬಾಲರಶ್ಮಿಯ ಮೂಲ ಪ್ರೇರಣೆಯಾದ ಅಲೀಸ್ ಅವರ ಮೇಲೆ ಹಲ್ಲೆ ನಡೆಸಲು ಪ್ರಯತ್ನಿಸಿದರು. ಇದರ ಪರಿಣಾಮ ಎಂದರೆ ಅವರು ಮಹಿಳೆಯರ ಮೇಲಿನ ಹಲ್ಲೆಗಾಗಿ ಪರಿಹಾರ ಕಟ್ಟಿಕೊಡಬೇಕಾಯಿತು.

ಬದಲಾಗುತ್ತವೆ. ಮುಂದಿನ ಶತಮಾನಕ್ಕಾದರೂ ಬಡತನ ಎಂಬುದು ಮ್ಯೂಸಿಯಂನ ವಸ್ತು ಆಗುತ್ತದೆ.

ಮನಸ್ಸು ಬೇಕು

ಬಡತನದ ಸಮಸ್ಯೆಯನ್ನು ನಾವು ನಮ್ಮೆಲ್ಲರ ಸಮಸ್ಯೆ ಎಂದು ನೋಡುವುದೇ ಇಲ್ಲ. ನಾವ್ಯಾರೂ ಬಡವರಲ್ಲ. ಹೀಗಾಗಿ ಅದರ ಕಾಳಜಿ ಇಲ್ಲ. ಬಡವರು ಕಷ್ಟಪಟ್ಟು ದುಡಿಯುವುದಿಲ್ಲ. ಅದಕ್ಕೇ ದರಿದ್ರ ಸುತ್ತಿಕೊಳ್ಳುತ್ತದೆ ಎಂದು ದೂರ ನಿಂತು ಹೇಳುತ್ತೇವೆ.

ಇನ್ನು ಕೆಲವು ಸಲ ದಾನದ ಮೂಲಕ ಈ ಬಡತನದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಯತ್ನಿಸುತ್ತೇವೆ. ನಿಜವಾದ ಸಮಸ್ಯೆ ಅರ್ಥಮಾಡಿ ಕೊಳ್ಳುವುದಿಲ್ಲ. ಒಂದಿಷ್ಟು ಹಣ ಚೆಲ್ಲಿ ಕೈತೊಳೆದುಕೊಳ್ಳುತ್ತೇವೆ. ಇದರಿಂದ ತಾವೇನೋ ಉಪಕಾರ ಮಾಡಿದೆವೆಂಬ ಹೆಮ್ಮೆ ಮೂಡಬಹುದು. ಆದರೆ, ಸಮಾಜದ ಇನ್ನೊಂದಿಷ್ಟು ಜನ ನಮ್ಮ ಹಾಗೇ ಮೇಲೆದ್ದು ನಿಲ್ಲಲ್ಲು, ಸಮಾನ ರಾಗಲು, ನಮ್ಮ ಹಾಗೆ ಅವಕಾಶಗಳನ್ನು ಪಡೆಯಲು ನೆರವಾಗುವುದಿಲ್ಲ ಇದು.

ಇಂಥವರ ಹೊಣೆ ಸರ್ಕಾರದ್ದು ಎಂದೂ ಭಾವಿಸುತ್ತೇವೆ. ಸರ್ಕಾರ ತನ್ನ ಅಧಿಕಾರಶಾಹಿಯ ಕಪಿಮುಷ್ಟಿಯಲ್ಲಿ ಹಣವಿತ್ತು ಸುಮ್ಮನಾಗುತ್ತದೆ. ಇಲ್ಲಿ ಅಧಿಕಾರಿಗಳ ದರ್ಪ, ದೌರ್ಜನ್ಯ, ವಿಳಂಬ, ಸ್ವಾರ್ಥಗಳೇ ಮುಖ್ಯವಾಗಿ ಸಮಸ್ಯೆ ಉಳಿದುಕೊಳ್ಳುತ್ತದೆ. ಬಡವರು ಕೈಯೊಡ್ಡಿ ನಿಂತೇ ಇರುತ್ತಾರೆ.

ಹೊಸ ಸವಾಲು, ಹೊಸ ಉತ್ತರ

ಬಡತನ ಒಂದು ದೇಶದ ಸಮಸ್ಯೆ ಅಲ್ಲ. ಇದರ ಪರಿಹಾರಕ್ಕೆ ಬೇರೆ ಬೇರೆಯದೇ ಸ್ವರೂಪದ ಸಂಸ್ಥೆಗಳು ಹುಟ್ಟಿಕೊಳ್ಳಬೇಕು. ಬಡವನಾದವನು ಎಲ್ಲಿ ಬೇಕಾದರೂ ಹೋಗಿ, ತನ್ನ ಇಷ್ಟದ ದುಡಿಮೆಯಲ್ಲಿ ತೊಡಗುವಂತೆ ಆಗಲು ದೇಶಗಳ ಗಡಿಗಳೆಂಬ ಭೇದಗಳು ಕೂಡ ಅಳಿಯಬೇಕು.

ಬಡವರು ಬಡತನಕ್ಕೆ ಕಾರಣರಲ್ಲ. ನಾವು ಹುಟ್ಟು ಹಾಕಿದ ಸಂಸ್ಥೆಗಳು, ನಮ್ಮ ಧೋರಣೆಗಳು ಇಂಥ ವ್ಯವಸ್ಥೆಗೆ ಕಾರಣ. ಇದೆಲ್ಲ ಬದಲಾಗದೇ ಬಡತನ ನಿವಾರಣೆ ಆಗುವುದಿಲ್ಲ.

ಮನುಷ್ಯನ ಘನತೆಗೆ ಧಕ್ಕೆ ತರುವ ಬಡತನ ನೀಗಿ, ಮತ್ತೆ ಆತ ತಲೆ ಎತ್ತಿ ನಿಲ್ಲುವಂತಾಗಲು ನಾವು ನಿರ್ಮಿಸಿರುವ ಅಡ್ಡಿಗಳನ್ನು ಮೊದಲು ನಿವಾರಿಸೋಣ. ಅದಕ್ಕೆ ಒಳಗೇ ಹೊತ್ತಿ ಉರಿಯುವಂಥ ನಿಶ್ಚಯ ಬೇಕಾಗುತ್ತದೆ. ಅಲ್ಲಿಂದ ಆರಂಭಗೊಳ್ಳುತ್ತದೆ ಬಡತನದ ನಿರ್ಮೂಲನೆ. ■

ಪಾಸ್‌ಬುಕ್ ಎಂಬ ಪಾಸ್‌ಪೋರ್ಟ್

ಪುರಾನರ ಬಸ್ತಿಯ ಜನದ್ದು ಅನಧಿಕೃತ ವಾಸ. ಅವರಿಗೆ ರೇಷನ್ ಕಾರ್ಡುಗಳನ್ನು ನಿರಾಕರಿಸಲಾಯಿತು. ಆಗ ಅಲೀಸ್ ಒಂದು ಉಪಾಯ ಮಾಡಿದರು. ಅಂಚೆ ಕಚೇರಿಯಲ್ಲಿ ಪ್ರತಿ ಮನೆಯ ಹೆಂಗಸರ ಉಳಿತಾಯ ಖಾತೆ ಆರಂಭಿಸುವಂತೆ ಮಾಡಿದರು. ಅವರ ಮನೆಯ ವಿಳಾಸಗಳು, ಮರಳ ಗುಡ್ಡೆ ಒಂದು, ಮರಳ ಗುಡ್ಡೆ ಎರಡು ಎಂದು ದಾಖಲಿಸಲಾಗಿತ್ತು. ಮುಂದೊಂದು ದಿನ ಪಾಸ್‌ಬುಕ್ ಅನ್ನೇ ದಾಖಲೆ ಎಂದು ಪ್ರತಿಪಾದಿಸಿ ರೇಷನ್ ಕಾರ್ಡ್ ಪಡೆಯಲಾಯಿತು.

1981ರಲ್ಲಿ ಭೀಕರ ಪ್ರವಾಹದಲ್ಲಿ ಗುಡಿಸಲುಗಳು ಕೊಚ್ಚಿಹೋದಾಗ, ಪುನರ್ವಸತಿ ಯೋಜನೆಯಡಿಯಲ್ಲಿನ ಮನೆ ಪಡೆಯಲು ಇದೇ ಪಾಸ್‌ಬುಕ್‌ಗಳನ್ನು ಬಳಸಲಾಯಿತು.

ಅಂಚೆ ಕಚೇರಿ ಉಳಿತಾಯ ಖಾತೆ ಆರಂಭಿಸಲು ನೆರವಾದುದಕ್ಕೆ ಅಲೀಸ್‌ಗೆ ಶೇಕಡಾ ನಾಲ್ಕರಷ್ಟು ದಲ್ಲಾಳಿ ದೊರೆಯಿತು. ಅದು ಬಾಲರಶ್ಮಿ ಖಾತೆಗೆ ಜಮೆ ಆಯಿತು.

ಅಷ್ಟು ಹೊತ್ತಿಗಾಗಲೇ ಕೊಳೆಗೇರಿಯ ಜನ ಉಳಿತಾಯದ ಗೀಳಿಗೆ ಸಿಕ್ಕಿದ್ದರು. ಅವರ ಖಾತೆಯಲ್ಲಿ ಹಣ ಸಾಕಷ್ಟು ಜಮೆ ಆಗುತ್ತಾ ಹೋಯಿತು.

ಕುಡುಕ ಗಂಡನಿಂದ ಪಾರು

ಹೇಮಾಳ ಗಂಡ ಕುಡುಕ. ಹನ್ನೆರಡು ವರ್ಷ ಕಾಲ ಪ್ರತಿ ರಾತ್ರಿ ಆಕೆ ಕುಡುಕ ಗಂಡನಿಂದ ಒದೆ ತಿನ್ನಬೇಕಾಗುತ್ತಿತ್ತು. ಆಕೆಯ ಇಬ್ಬರು ಮಕ್ಕಳು ಬಾಲರಶ್ಮಿಯಲ್ಲಿ ಕಲಿಯಲಾರಂಬಿಸಿದ ಮೇಲೆ ತಾಯಿಯ ದುಸ್ಥಿತಿ ಅರಿವಾಯಿತು.

ಅಲೀಸ್ ಆಕೆಗೆ ಎರಡೂವರೆ ಸಾವಿರ ರೂಪಾಯಿ ಸಾಲ ನೀಡಿದರು. ಅದರಿಂದ ಆಕೆ ತಳ್ಳುವ ತರಕಾರಿ ಗಾಡಿಯೊಂದನ್ನು ಖರೀದಿಸಿದಳು. ಹೇಮಾ ತಿಂಗಳಿಗೆ ಸಾವಿರ ರೂಪಾಯಿಗಳವರೆಗೆ ಸಂಪಾದಿಸುತ್ತಾ ಸ್ವತಂತ್ರಳಾದಳು. ಗಂಡ ಬದಲಾದ. ಹೆಂಡತಿಯ ಶಿಫಾರಸ್ಸಿನ ಮೇರೆಗೆ ಗಂಡನಿಗೂ ಹಣ್ಣಿನ ಗಾಡಿ ಖರೀದಿಸಲು ಸಾಲ ನೀಡಲಾಯಿತು.

ಈಗ ಇಬ್ಬರೂ ಹಣ ಗಳಿಸಿ ನಿವೇಶನ ಒಂದನ್ನು ಖರೀದಿಸಿದ್ದಾರೆ.

ಪೊಲೀಸರ ಪಡಿಪಾಟಲು

ಅಸ್ಪೃಶ್ಯರು, ಪೌರ ಕಾರ್ಮಿಕರಿಂದ ತುಂಬಿರುವ ಪುರಾನಾ ಬಸ್ತಿ ಪ್ರದೇಶಕ್ಕೆ ಬರಲು ಅಧಿಕಾರಿಗಳೇ ಹಿಂಜರಿಯುತ್ತಾರೆ. ಅಲ್ಲಿನ ಹೆಂಗಸರು ಮಹಾ ಘಾಟಿಗಳು ಎನ್ನುತ್ತಾರೆ.



ಇಂಥ ಪ್ರದೇಶಕ್ಕೆ, ವಿಧವೆ ತಾಯಿ - ಮಗಳೊಬ್ಬಳ ಬಸ್ತಿಗೆ ಕುಡಿದ ಮತ್ತಿನಲ್ಲಿ ಪೊಲೀಸರೇ ನುಗ್ಗಿದರೆ! ಆಗಬೇಕಾದ್ದು ಆಯಿತು. ಜನ ಇಬ್ಬರನ್ನೂ ಹಿಡಿದು ಮೈ ನುಗ್ಗಾಗಿಸಿದರು.

ಅವರ ಹೆಂಡತಿ, ಮಕ್ಕಳ ಸ್ಥಿತಿ ಹದಗೆಡಬಾರದು ಎಂದು, ಪೊಲೀಸರನ್ನು ಕೊನೆಗೆ ಸುಮ್ಮನೆ ಬಿಟ್ಟುಕೊಡಲಾಯಿತು. ■

ರಾಜ್‌ಹನ್ಸ್

ಆಗಸ್ಟ್ 1999, ರೂ. 10

ಗೃಹಿಣಿಯರ ಹೈಟೆಕ್‌ಜಾಲ



ಸೆಕ್ಸ್ ರಾಕೆಟ್

22 ವರ್ಷಗಳಲ್ಲಿ 13 ಸ್ಫೋಟ



ಜನತಾದಳ ನುಚ್ಚುನೂರು

ಮಹದೇಶ್ವರ ಬೆಟ್ಟದಲ್ಲಿ ಮತ್ತೊಬ್ಬ ವೀರಪ್ಪನ್

BISILA BADUKU Kannada Monthly AUGUST 1999 RNI No. 67406 / 97 Regd. BGW / 394

